ಗುರುವಾರ, ಸೆಪ್ಟೆಂಬರ್ 23, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 265 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಕರ್ನಾಟಕ ಲೋಕ ಸೇವಾ ಆಯೋಗವು 'ಗ್ರೂಪ್ ಸಿ'ಯ ವಿವಿಧ 523 ಹುದ್ದೆಗಳ ನೇಮಕಾತಿಗೆ ಡಿಸೆಂಬರ್‌ನಲ್ಲಿ ಪರೀಕ್ಷೆ ನಡೆಸಲಿದೆ. ಈ ಪರೀಕ್ಷೆಗೆ ತಯಾರಿ ಹೇಗಿರಬೇಕು?



ಅನುಭವ ಮಂಟಪ ವ್ಯಾಪ್ತಿ ವಿಸ್ತರಿಸಿದ ವಿಜ್ಞಾನ–ತಂತ್ರಜ್ಞಾನ
ಆಸ್ಟ್ರಾಜೆನೆಕಾ: ಲಸಿಕೆ ನಡುವಣ ಅಂತರ ಕಡಿಮೆ? 11
ಡೋಣಿ ಪ್ರವಾಹ: ಕೊಚ್ಚಿಹೋದ ವ್ಯಕ್ತಿ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,927 ▼	17,547 ▼	₹48,200 (ಬೆಂಗಳೂರು) ▲	₹62,600 (ಬೆಂಗಳೂರು) ▲	73.87 ▼

ಮೃತರ ಕುಟುಂಬಕ್ಕೆ ಹಣ ನೀಡಿಕೆ ಮಾರ್ಗಸೂಚಿ ಸಿದ್ಧ: 'ಸುಪ್ರೀಂ'ಗೆ ಕೇಂದ್ರದ ಮಾಹಿತಿ

ಕೋವಿಡ್: ₹50 ಸಾವಿರ ಪರಿಹಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಕ್ಕೆ ₹50 ಸಾವಿರ ಪರಿಹಾರ ನೀಡುವುದಕ್ಕಾಗಿ ರಾಜ್ಯಗಳು ಅನುಸರಿಸಬೇಕಾದ ಮಾರ್ಗಸೂಚಿಯನ್ನು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ಸಿದ್ಧಪಡಿಸಿದೆ. ಜೂನ್ 30ರಂದು ಸುಪ್ರೀಂ ಕೋರ್ಟ್ ನೀಡಿದ ತೀರ್ಪಿಗೆ ಅನುಗುಣವಾಗಿ ಈ ಮಾರ್ಗಸೂಚಿ ರೂಪಿಸಲಾಗಿದೆ ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಬುಧವಾರ ತಿಳಿಸಿದೆ.

ವ್ಯಕ್ತಿಯ ಸಾವಿಗೆ ಕೋವಿಡ್–19 ಕಾರಣ ಎಂಬ ಪ್ರಮಾಣಪತ್ರವನ್ನು ಸಲ್ಲಿಸಿ ಪರಿಹಾರ ಪಡೆಯಬಹುದಾಗಿದೆ. ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಹಾಗೂ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ (ಐಸಿಎಂಆರ್) ರೂಪಿಸಿರುವ ಮಾರ್ಗಸೂಚಿ ಅನುಸಾರವೇ ಈ ಪ್ರಮಾಣಪತ್ರ ಪಡೆದಿರಬೇಕು ಎಂದು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಹೇಳಲಾಗಿದೆ.

ರಾಜ್ಯ ಸರ್ಕಾರಗಳು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಈ ಮೊತ್ತವನ್ನು ಭರಿಸಬೇಕು ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ. ಮರಣ ಪ್ರಮಾಣ ಪತ್ರ ಮತ್ತು ಇತರ ದಾಖಲೆಗಳನ್ನು ಪಡೆದುಕೊಂಡ ಬಳಿಕ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವು (ಡಿಡಿಎಂಎ) ಹಣ ಬಿಡುಗಡೆ ಮಾಡಬೇಕು.

ಪರಿಹಾರಕ್ಕೆ ಕೋರಿಕೆ ಸಲ್ಲಿಕೆ, ದೃಢೀಕರಣ, ಮಂಜೂರು ಮತ್ತು ಅಂತಿಮವಾಗಿ ಪರಿಹಾರದ ಮೊತ್ತ ಬಿಡುಗಡೆಯ ಇಡೀ ಪ್ರಕ್ರಿಯೆಗೆ ಸರಳವಾದ, ಸಮರ್ಪಕವಾದ ಮತ್ತು ಜನಸ್ನೇಹಿಯಾದ ವ್ಯವಸ್ಥೆ ರೂಪಿಸುವುದು ಡಿಡಿಎಂಎಯ ಹೊಣೆಯಾಗಿದೆ. ಅಗತ್ಯ ದಾಖಲೆಪತ್ರಗಳು ಸಲ್ಲಿಕೆಯಾದ 30 ದಿನಗಳ ಒಳಗೆ ಪರಿಹಾರದ ಕೋರಿಕೆ ಅರ್ಜಿಯ ವಿಲೇವಾರಿ ಆಗಬೇಕು ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ. ಇದೇ 11ರಂದು ಮಾರ್ಗಸೂಚಿ ಪ್ರಕಟ ಆಗಿದೆ.

ಕೋವಿಡ್‌ನಿಂದ ಮೃತಪಟ್ಟ ವ್ಯಕ್ತಿಗಳ ಕುಟುಂಬಕ್ಕೆ ಪರಿಹಾರ ನೀಡುವುದಕ್ಕೆ ಬೇಕಾದ ಮಾರ್ಗಸೂಚಿಯನ್ನು ಸಿದ್ಧಪಡಿಸಬೇಕು ಎಂದು ಪ್ರಧಾನಿ ನೇತೃತ್ವದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರಕ್ಕೆ ಸುಪ್ರೀಂ ಕೋರ್ಟ್ ಜೂನ್ 30ರಂದು ಸೂಚನೆ ನೀಡಿತ್ತು. ಈ ಮಾರ್ಗಸೂಚಿ ಸಿದ್ಧಪಡಿಸಲು ಆರು ವಾರಗಳ ಸಮಯವನ್ನೂ ನೀಡಲಾಗಿತ್ತು. ಆಗಸ್ಟ್ 16ರಂದು ಕಾಲಾವಕಾಶವನ್ನು ಮತ್ತೆ ನಾಲ್ಕು ವಾರ ವಿಸ್ತರಿಸಲಾಗಿತ್ತು.

ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಕ್ಕೆ ಪರಿಹಾರ ನೀಡಬೇಕು ಎಂದು ಆಗ್ರಹಿಸಿ ವಕೀಲರಾದ ಗೌರವ್ ಕುಮಾರ್ ಬನ್ಸಲ್ ಮತ್ತು ರೀಪಕ್ ಕನ್ಸಲ್ ಅವರು ಅರ್ಜಿ ಸಲ್ಲಿಸಿದ್ದರು. ಮೃತಪಟ್ಟವರ ಕುಟುಂಬಕ್ಕೆ ಪರಿಹಾರ ನೀಡಿಕೆಗಾಗಿ ಕನಿಷ್ಠ ಮಾನದಂಡವನ್ನು ರೂಪಿಸುವಲ್ಲಿ ವಿಫಲವಾಗಿರುವ ಕೇಂದ್ರವು, ವಿಪತ್ತು ನಿರ್ವಹಣಾ ಕಾಯ್ದೆ ಅಡಿಯಲ್ಲಿನ ಸಾಂವಿಧಾನಿಕ ಕರ್ತವ್ಯ ನಿರ್ವಹಣೆಯಲ್ಲಿ ವಿಫಲವಾಗಿದೆ ಎಂದು ಸುಪ್ರೀಂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿತ್ತು.

ಮಾರ್ಗಸೂಚಿಯಲ್ಲಿ ಏನಿದೆ?

- ಆಧಾರ್ ಜೋಡಣೆಯಿರುವ ನೇರ ನಗದು ವರ್ಗಾವಣೆ ಮೂಲಕ ಮೊತ್ತ ಸಂದಾಯ ಆಗಬೇಕು
- ದೂರುಗಳ ಪರಿಹಾರಕ್ಕೆ ಜಿಲ್ಲಾ ಮಟ್ಟದ ಸಮಿತಿ ರಚಿಸಬೇಕು
- ಕೋರಿಕೆ ತಿರಸ್ಕರಿಸಿದ್ದರೆ ಅದರ ಕಾರಣಗಳನ್ನು ಸ್ಪಷ್ಟವಾಗಿ ನಮೂದಿಸಬೇಕು
- ಕೋರಿಕೆ ಸಲ್ಲಿಕೆಯಾಗಿ 30 ದಿನಗಳ ಒಳಗೆ ಅರ್ಜಿ ವಿಲೇವಾರಿ ಮಾಡಬೇಕು
- ಕೋವಿಡ್ ಸಾಂಕ್ರಾಮಿಕವು ವಿಪತ್ತು ಎಂದು 2020ರ ಮಾರ್ಚ್‌ನಲ್ಲಿಯೇ ಘೋಷಿಸಲಾಗಿದೆ. ಹಾಗಾಗಿ, ಪರಿಹಾರ ನೀಡುವುದು ಅನಿವಾರ್ಯ

ರಾಜ್ಯದಲ್ಲಿ ₹1 ಲಕ್ಷ

ಕೆಲವು ರಾಜ್ಯಗಳು ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳಿಗೆ ಪರಿಹಾರ ನೀಡುವ ಪ್ರಕ್ರಿಯೆಯನ್ನು ಈಗಾಗಲೇ ಆರಂಭಿಸಿವೆ. ಹೆಚ್ಚಿನ ಮೊತ್ತವನ್ನೂ ನೀಡುತ್ತಿವೆ. ಬಿಹಾರದಲ್ಲಿ ಪರಿಹಾರದ ಮೊತ್ತವನ್ನು ₹4 ಲಕ್ಷ ಎಂದು ನಿಗದಿ ಮಾಡಲಾಗಿದೆ. ಕರ್ನಾಟಕ ಮತ್ತು ಮಧ್ಯ ಪ್ರದೇಶದಲ್ಲಿ ₹1 ಲಕ್ಷ ನೀಡಲಾಗುತ್ತಿದೆ. ದೆಹಲಿಯಲ್ಲಿ ₹50 ಸಾವಿರ ನಿಗದಿ ಮಾಡಲಾಗಿದೆ. ಮುಖ್ಯಮಂತ್ರಿಯವರ ಪರಿಹಾರ ನಿಧಿ ಅಥವಾ ಇತರ ನಿಧಿಯಿಂದ ಈ ಮೊತ್ತವನ್ನು ಭರಿಸಲಾಗುತ್ತಿದೆ.

'ಅತ್ಯಾಚಾರ: ತ್ವರಿತ ನ್ಯಾಯಾಲಯ ಸ್ಥಾಪನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣದ ವಿಚಾರಣೆಗೆ ತ್ವರಿತ ನ್ಯಾಯಾಲಯ (ಫಾಸ್ಟ್ ಟ್ರ್ಯಾಕ್ ಕೋರ್ಟ್) ಸ್ಥಾಪನೆಗೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅವರಿಗೆ ಮನವಿ ಮಾಡಲಾಗುವುದು' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಮೈಸೂರು ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಯಮ 69ರಡಿ ವಿಧಾನಸಭೆಯಲ್ಲಿ ಬುಧವಾರ ನಡೆದ ಚರ್ಚೆಗೆ ಸರ್ಕಾರದ ಪರವಾಗಿ ಉತ್ತರ ನೀಡಿದ ಅವರು, 'ಈ ಬಗ್ಗೆ ಮುಖ್ಯ ನ್ಯಾಯಮೂರ್ತಿ ಅವರಿಗೆ ಮನವಿ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಆರೋಪಿಗಳಿಗೆ ಶೀಘ್ರ ಶಿಕ್ಷೆ ಕೊಡಿಸಲು ವಿಶೇಷ ವಕೀಲರ ನೇಮಕ ಮಾಡಲಾಗುವುದು' ಎಂದರು.

'ಅತ್ಯಾಚಾರಕ್ಕೆ ಒಳಗಾದ ಯುವತಿ ಮೈಸೂರಿಗೆ ಬಂದು ಮ್ಯಾಜಿಸ್ಟ್ರೇಟರ ಮುಂದೆ ಹೇಳಿಕೆ ನೀಡಿದ್ದಾರೆ. ಮುಂಬೈಗೆ ಹೋಗಿ ಯುವತಿಯನ್ನು ಕೌನ್ಸೆಲಿಂಗ್ ಮಾಡಿ ಮನವೊಲಿಸಿ ಕರೆ ತರುವಲ್ಲಿ ನಮ್ಮ ಪೊಲೀಸರು ಯಶಸ್ವಿಯಾಗಿದ್ದಾರೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.



ದೆಹಲಿಯ ನಿರ್ಭಯಾ ಪ್ರಕರಣದ ಮಾದರಿಯಲ್ಲೇ ಈ ಪ್ರಕರಣದಲ್ಲೂ ಆರೋಪಿಗಳಿಗೆ ಗಲ್ಲು ಶಿಕ್ಷೆಯಾಗುವಂತೆ ನೋಡಿಕೊಳ್ಳಲಾಗುವುದು
ಬಸವರಾಜ ಬೊಮ್ಮಾಯಿ
ಮುಖ್ಯಮಂತ್ರಿ

ನಿರ್ಭಯ ಮತ್ತು ತೆಲಂಗಾಣದಲ್ಲಿ ನಡೆದ ಅತ್ಯಾಚಾರ ಪ್ರಕರಣಕ್ಕಿಂತಲೂ ಮೈಸೂರಿನ ಅತ್ಯಾಚಾರ ಪ್ರಕರಣ ಗಂಭೀರ ಸ್ವರೂಪದ್ದು. ಪೊಲೀಸರು ಇದನ್ನು ಗಂಭೀರವಾಗಿ ತೆಗೆದುಕೊಂಡಿಲ್ಲ
ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ

6ನೇ ಪುಟ ನೋಡಿ

ಬ್ರಿಟನ್‌ನ ಅಂತರರಾಷ್ಟ್ರೀಯ ಪ್ರಯಾಣ ಮಾರ್ಗದರ್ಶಿಯಲ್ಲಿ ಗೊಂದಲ

ಭಾರತೀಯರಿಗೆ ಮುಕ್ತ ಪ್ರವೇಶ ಇಲ್ಲ

ಲಂಡನ್/ನವದೆಹಲಿ (ಪಿಟಿಐ): ಬ್ರಿಟನ್ ರೂಪಿಸಿರುವ ನೂತನ 'ಕೋವಿಡ್ ಅಂತರರಾಷ್ಟ್ರೀಯ ಪ್ರಯಾಣಮಾರ್ಗಸೂಚಿ'ಯಲ್ಲಿ ಭಾರತದಲ್ಲಿ ತಯಾರಾದ ಕೋವಿಶೀಲ್ಡ್ ಲಸಿಕೆಗೆ ಮಾನ್ಯತೆ ನೀಡಿದೆ. ಆದರೆ, ಕ್ವಾರಂಟೈನ್ ಇಲ್ಲದೆಯೇ ಬ್ರಿಟನ್ ಪ್ರವೇಶಕ್ಕೆ ಅವಕಾಶ ಪಡೆದ ದೇಶಗಳ ಪಟ್ಟಿಯಲ್ಲಿ ಭಾರತದ ಹೆಸರು ಇಲ್ಲ. ಹೀಗಾಗಿ ಕೋವಿಶೀಲ್ಡ್ ಲಸಿಕೆ ಹಾಕಿಸಿಕೊಂಡ ಭಾರತೀಯರೂ ಬ್ರಿಟನ್ ಪ್ರವೇಶದ ನಂತರ ಕ್ವಾರಂಟೈನ್‌ಗೆ ಒಳಗಾಗಬೇಕಾಗುತ್ತದೆ.

ಅಕ್ಟೋಬರ್ 4ರಿಂದ ಜಾರಿಯಾಗಲಿರುವ ನೂತನ ಮಾರ್ಗಸೂಚಿಯನ್ನು ಬ್ರಿಟನ್ ಈಚೆಗೆ ಪ್ರಕಟಿಸಿತ್ತು. ಮಾರ್ಗಸೂಚಿಯಲ್ಲಿ ಕೋವಿಶೀಲ್ಡ್ ಲಸಿಕೆ ಮತ್ತು ಭಾರತಕ್ಕೆ ಮಾನ್ಯತೆ ನೀಡಿರಲಿಲ್ಲ. ಇದಕ್ಕೆ ವಿದೇಶಾಂಗ ಸಚಿವಾಲಯವು ತೀವ್ರ ಅಸಮಾಧಾನ ವ್ಯಕ್ತಪಡಿಸಿತ್ತು. ಅಲ್ಲದೆ, ಬ್ರಿಟನ್‌ನ ಈ ಕ್ರಮಕ್ಕೆ ತಕ್ಕ ಪ್ರತ್ಯುತ್ತರದ ಕ್ರಮ ತೆಗೆದುಕೊಳ್ಳುವುದಾಗಿ ಹೇಳಿತ್ತು. ಬ್ರಿಟನ್‌ನ ಈ ಕ್ರಮಕ್ಕೆ ಪ್ರತಿಭಟನೆಯಾಗಿ, ಆ ದೇಶಕ್ಕೆ ಪೂರ್ವನಿಗದಿಯಾಗಿದ್ದ ಪ್ರವಾಸವನ್ನು ಸಂಸದ ಶಶಿ ತರೂರ್ ರದ್ದುಪಡಿಸಿದ್ದರು.

11ನೇ ಪುಟ ನೋಡಿ

ಅಕ್ಟೋಬರ್‌ನಿಂದ ಮಕ್ಕಳಿಗೂ ಲಸಿಕೆ

ನವದೆಹಲಿ (ರಾಯಿಟರ್ಸ್): ಝೈಡಸ್ ಕ್ಯಾಡಿಲಾ ಕಂಪನಿಯು ಅಕ್ಟೋಬರ್‌ನಲ್ಲಿ, 12 ವರ್ಷ ಮೇಲ್ಪಟ್ಟ ಮಕ್ಕಳಿಗೆ ನೀಡಬಹುದಾದ ಕೋವಿಡ್ ಲಸಿಕೆ ಝೈಕೋವ್-ಡಿ ಅನ್ನು ಬಿಡುಗಡೆ ಮಾಡಲಿದೆ. ಮುಂದಿನ ತಿಂಗಳಿನಿಂದ 12 ವರ್ಷ ಮೇಲ್ಪಟ್ಟ ಭಾರತದ ಎಲ್ಲಾ ಮಕ್ಕಳಿಗೆ ಈ ಲಸಿಕೆ ನೀಡಲಾಗುವುದು ಎಂದು ಮೂಲಗಳು ಹೇಳಿವೆ.

ಈ ಬಗ್ಗೆ ಮಾಹಿತಿಗಾಗಿ ಕೇಂದ್ರ ಆರೋಗ್ಯ ಸಚಿವಾಲಯವನ್ನು ಸಂಪರ್ಕಿಸಲಾಯಿತು. ಆದರೆ ಯಾವುದೇ ಪ್ರತಿಕ್ರಿಯೆ ದೊರೆತಿಲ್ಲ.

ಪ್ರಮಾಣಪತ್ರ ಗುರುತಿಸಿ: ಮೋದಿ

ವಾಷಿಂಗ್ಟನ್ (ಪಿಟಿಐ): ಕೋವಿಡ್ ಲಸಿಕೆಯ ಪ್ರಮಾಣಪತ್ರಗಳನ್ನು ಪರಸ್ಪರ ಗುರುತಿಸುವ ಮೂಲಕ ಅಂತರರಾಷ್ಟ್ರೀಯ ಪ್ರಯಾಣವನ್ನು ಸುಲಭಗೊಳಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಬುಧವಾರ ನಡೆದ ಜಾಗತಿಕ ಕೋವಿಡ್ ಶೃಂಗಸಭೆಯಲ್ಲಿ ಅವರು ಈ ಸಂದೇಶ ನೀಡಿದರು. ಬ್ರಿಟನ್ ಪ್ರಯಾಣ ಮಾರ್ಗಸೂಚಿ ಪ್ರಕಟಿಸಿದ ಬೆನ್ನಲ್ಲೇ ಈ ಹೇಳಿಕೆ ನೀಡಿರುವುದು ಮಹತ್ವ ಪಡೆದಿದೆ.

ತೆರಿಗೆ: ₹2,491 ಕೋಟಿ ನಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2019–20ನೇ ಆರ್ಥಿಕ ವರ್ಷದಲ್ಲಿ ವಿವಿಧ ಇಲಾಖೆಗಳಲ್ಲಿ ₹2,491.66 ಕೋಟಿಯಷ್ಟು ಕಡಿಮೆ ಪ್ರಮಾಣದಲ್ಲಿ ರಾಜಸ್ವ ಅಂದಾಜು ಮಾಡಿದ್ದರಿಂದ ವರಮಾನ ಸಂಗ್ರಹದಲ್ಲಿ ನಷ್ಟ ಉಂಟಾಗಿದೆ ಎಂದು ಮಹಾಲೇಖಪಾಲರ (ಸಿಎಜಿ)ವರದಿ ಹೇಳಿದೆ.

ವಾಣಿಜ್ಯ ತೆರಿಗೆ, ಮುದ್ರಾಂಕ ಮತ್ತು ನೋಂದಣಿ, ಅಬಕಾರಿ, ಗಣಿ ಮತ್ತು ಭೂ ವಿಜ್ಞಾನ ಹಾಗೂ ಸಾರಿಗೆ ಇಲಾಖೆಯ 254 ಘಟಕ/ ಕಚೇರಿಗಳಲ್ಲಿ ಲೆಕ್ಕಪರಿಶೋಧನೆ ನಡೆಸಲಾಗಿದೆ. ಈ ವ್ಯಾಪ್ತಿಯಲ್ಲಿ ತೆರಿಗೆ, ಶುಲ್ಕ ಮತ್ತು ರಾಜಸ್ವ ನಿರ್ಧರಿಸುವಲ್ಲಿ ಆಗಿರುವ ತಪ್ಪುಗಳಿಂದಾಗಿ ರಾಜ್ಯ ಸರ್ಕಾರಕ್ಕೆ ನಷ್ಟವಾಗಿದೆ ಎಂದು ಸಿಎಜಿ ತಿಳಿಸಿದೆ.

ಮಾರ್ಚ್–2020ಕ್ಕೆ ಕೊನೆಗೊಂಡ ಆರ್ಥಿಕ ವರ್ಷದ ಅನುಪಾಲನಾ ಲೆಕ್ಕಪರಿಶೋಧನೆ ವರದಿಯನ್ನು ವಿಧಾನಸಭೆಯಲ್ಲಿ ಬುಧವಾರ ಮಂಡಿಸಲಾಯಿತು. 2019–20ನೇ ಹಣಕಾಸು ವರ್ಷದಲ್ಲಿ ರಾಜ್ಯದ ವಿವಿಧ ಇಲಾಖೆಗಳಲ್ಲಿ ಆರ್ಥಿಕ ಚಟುವಟಿಕೆಗಳಲ್ಲಿ ಆಗಿರುವ ಹಲವು ಲೋಪಗಳನ್ನು ಈ ವರದಿ ಬಹಿರಂಗಪಡಿಸಿದೆ.

ಎರಡು ಉಪ ನೋಂದಣಿ ಅಧಿಕಾರಿಗಳ ಕಚೇರಿಗಳಲ್ಲಿ ಗುತ್ತಿಗೆ ದಸ್ತಾವೇಜು, ಮಾರಾಟ–ಒಡಂಬಡಿಕೆಗಳು ಮತ್ತು ವ್ಯವಹಾರಾಧಿಕಾರಗಳನ್ನು ತಪ್ಪಾಗಿ ವರ್ಗೀಕರಿಸಿದ್ದರಿಂದ ಆರು ಪ್ರಕರಣಗಳಲ್ಲಿ ₹22.83 ಕೋಟಿ ಮೊತ್ತದಷ್ಟು ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಲಾಗಿದೆ ಎಂದು ವರದಿ ಬೊಟ್ಟು ಮಾಡಿದೆ.

ಅಲ್ಲದೆ, ವ್ಯವಹಾರಾಧಿಕಾರ ಕಡೆಗಣಿಸಿರುವುದು, ಕಟ್ಟಡಗಳು, ಸ್ಥಾವರ ಮತ್ತು ಯಂತ್ರಗಳ ಇರುವಿಕೆ ಸ್ಪಷ್ಟಪಡಿಸದ ಕಾರಣ, 13 ಉಪನೋಂದಣಿ ಅಧಿಕಾರಿಗಳ ಕಚೇರಿಯಲ್ಲಿ 25 ಪ್ರಕರಣಗಳಲ್ಲಿ ₹10.14 ಕೋಟಿಯಷ್ಟು ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕವನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಲಾಗಿದೆ. 9 ಉಪನೋಂದಣಿ ಅಧಿಕಾರಿಗಳ ಕಚೇರಿಯಲ್ಲಿ 62 ಜಂಟಿ ಅಭಿವೃದ್ಧಿ ಒಡಂಬಡಿಕೆಗಳಲ್ಲಿ ಅಸಮರ್ಪಕ ಮಾಹಿತಿ ಆಧಾರದ ಮೇರೆಗೆ ತಪ್ಪು ದರಗಳನ್ನು ಅಳವಡಿಸಿಕೊಂಡಿದ್ದರಿಂದ ₹ 6.59 ಕೋಟಿಯಷ್ಟು ಮುದ್ರಾಂಕ ಸುಂಕ ಮತ್ತು ನೋಂದಣಿ ಶುಲ್ಕ ಸಂಗ್ರಹ ಕಡಿಮೆ ಆಗಿದೆ ಎಂದು ಹೇಳಿದೆ.

6ನೇ ಪುಟ ನೋಡಿ

ರಾಜ್ಯ ಕೋವಿಡ್ ಅಂಕಿ–ಅಂಶ

29,70,208 ▲ ಒಟ್ಟು ಸೋಂಕಿತರು (29,69,361 ನಿನ್ನೆಯ ವಿವರ)

13,621 ▼ ಸಕ್ರಿಯ ಪ್ರಕರಣಗಳು

29,18,890 ▲ ಗುಣಮುಖರಾದವರು

37,668 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	847	▲
ಗುಣಮುಖ	946	▼
ಸಾವು	20	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಒಳ ಪುಟಗಳು

ಮತ್ಸ್ಯಪ್ರಿಯರಿಗೆ 'ಮೀನು ಚಕ್ಕುಲಿ': ನಾಲ್ವರು ನಾರಿಯರ ಪ್ರಯತ್ನ 5
ಎನ್‌ಡಿಎಗೆ ಮಹಿಳೆ: ಈ ವರ್ಷವೇ ಅವಕಾಶ 3B
ನವೋದ್ಯಮ: ಬೆಂಗಳೂರಿಗೆ 23ನೇ ಸ್ಥಾನ 10
ಕ್ವಾಡ್ ಸಭೆ: ಅಮೆರಿಕಕ್ಕೆ ತೆರಳಿದ ಮೋದಿ 11
'ರಾಹುಲ್, ಪ್ರಿಯಾಂಕಾ ಅನನುಭವಿಗಳು' 11

ಚಿನಕುರಳಿ

ಪ್ರಕಾಶ್ ಶೆಟ್ಟಿ

ನಗರದಲ್ಲಿ ಇಂದು

ಸಾಹಿತ್ಯ ಸಂಚಲನ ವೆಬಿನಾರ್: 'ಪ್ರಾಚೀನ ಭಾರತದ ಲೇಖಕಿಯರು', ಉಪನ್ಯಾಸಕರು: ಶಾಂತಾ ನಾಗಮಂಗಲ, ಉಪಸ್ಥಿತಿ: ವನಮಾಲಾ ಸಂಪನ್ನಕುಮಾರ, ಆಶಾ ಹೆಗಡೆ, ಎಲ್. ಗಿರಿಜಾ ರಾವ್, ನಾಗರತ್ನಾ ಚಂದ್ರಶೇಖರ್, ಸರಸ್ವತಿ ನಟರಾಜ್, ರೇಣುಕಾ ದೇಸಾಯಿ, ಆಯೋಜನೆ: ಕರ್ನಾಟಕ ಲೇಖಕಿಯರ ಸಂಘ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)

ನಾಟಕ ಪ್ರದರ್ಶನ: 'ವಾರಸುದಾರ', ನಿರ್ದೇಶನ: ಎಂ.ಎಸ್. ಸತ್ಯು, ರಚನೆ: ಜಯರಾಮ್ ರಾಯಪುರ, ಸಹ ನಿರ್ದೇಶನ: ಎಂ.ಸಿ. ಆನಂದ್, ಸಂಗೀತ: ಸಮೀರ್ ಕುಲಕರ್ಣಿ, ನೃತ್ಯ ಸಂಯೋಜನೆ: ನಂದಿನಿ ಮೆಹ್ತಾ, ವಸ್ತ್ರ ವಿನ್ಯಾಸ: ಜಯಂತಿ ಮರುಳಸಿದ್ದಪ್ಪ, ಆಯೋಜನೆ: ಸಮುದಾಯ ಬೆಂಗಳೂರು, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 6

ಸಿಎಸ್‌ಐಆರ್-ಕೇಂದ್ರೀಯ ಔಷಧೀಯ ಮತ್ತು ಸುಗಂಧ ಸಸ್ಯಗಳ ಸಂಸ್ಥೆ
(ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಪರಿಷತ್ತು)
ಪಿಒ ಸಿಐಎಂಎಪಿ, ಲಕ್ನೋ–226 015

ಇ-ಟೆಂಡರ್‌ಗಳ ಆಹ್ವಾನ ಸೂಚನೆ

ಬೆಂಗಳೂರು, ಅಲ್ಲಾಳಸಂದ್ರ, ಸಿಎಸ್‌ಐಆರ್–ಸಿಐಎಂಎಪಿ ಸಂಶೋಧನಾ ಕೇಂದ್ರದಲ್ಲಿ ವಿವಿಧ ಕೃಷಿ/ತೋಟಗಾರಿಕಾ ಕಾರ್ಯಾಚರಣೆಗಳು, ಪ್ರಾಯೋಗಿಕ ಕ್ಷೇತ್ರಗಳ ನಿರ್ವಹಣೆ, ಸಸ್ಯ / ಸಾಮಗ್ರಿಗಳ ಎತ್ತುವಿಕೆ ಮತ್ತು ವರ್ಗಾವಣೆ, ಇತರ ಮಡಕೆ/ಸಸ್ಯ ಚಟುವಟಿಕೆಗಳು ಮತ್ತು ಬಟ್ಟಿ ಇಳಿಸುವ ಘಟಕಗಳು ಮತ್ತು ಜನರೇಟರ್ ಸೆಟ್ ನಿರ್ವಹಣೆಗಾಗಿ ವಿವರವಾದ ಎನ್‌ಐಟಿ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಎರಡು ಟೆಂಡರ್ ವ್ಯವಸ್ಥೆಯಲ್ಲಿ (ತಾಂತ್ರಿಕ ಮತ್ತು ದರ ಬಿಡ್) ಇ-ಟೆಂಡರ್‌ಗಳನ್ನು ಈ ಮೂಲಕ ಆಹ್ವಾನಿಸಲಾಗಿದೆ. ಕಾಮಗಾರಿಯ ಅಂದಾಜು ವೆಚ್ಚ ರೂ. 82,29,000/–.

ಟೆಂಡರ್‌ದಾರರು ತಮ್ಮ ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ 21.09.2021 ರಿಂದ 12.10.2021 ರವರೆಗೆ ಸಿಪಿಪಿ ಪೋರ್ಟಲ್ https://etenders.gov.in/eprocure/app ನಲ್ಲಿ ಸಲ್ಲಿಸಬಹುದು ಮತ್ತು ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 14.10.2021 ಆಗಿರುತ್ತದೆ. ವಿವರವಾದ ಎನ್‌ಐಟಿ ಸಿಎಸ್‌ಐಆರ್–ಸಿಐಎಂಎಪಿ ವೆಬ್‌ಸೈಟ್ www.cimap.res.in ನಲ್ಲಿ ಸಹ ಲಭ್ಯವಿದೆ.

ಉಸ್ತುವಾರಿ ವಿಜ್ಞಾನಿ

ಶ್ರೀರಾಮ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

SHRIRAM HOUSING FINANCE

ನೋಂದಾಯಿತ ಕಚೇರಿ: ಕಚೇರಿ ನಂ.123, ಅಂಗಪ್ಪ ನಾಯ್ಕನ್ ಬೀದಿ, ಚೆನ್ನೈ – 600 001. ಪ್ರಧಾನ ಕಚೇರಿ: ಲೆವೆಲ್–3, ವೊಕಾರ್ಟ್ ಟವರ್ಸ್, ಈಸ್ಟ್ ವಿಂಗ್ ಸಿ–2 ಬ್ಲಾಕ್, ಬಾಂದ್ರಾ-ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ (ಪೂರ್ವ), ಮುಂಬೈ – 400 051, ವೆಬ್‌ಸೈಟ್: www.shriramhousing.in

ಭೌತಿಕ ಸ್ವಾಧೀನ ಪ್ರಕಟಣೆ

ಆದಾಗ್ಯೂ, ಈ ಕೆಳಸಹಿದಾರರು 2002ರ ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್‌ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯಡಿ (ಮೇಲಿನ ಕಾಯ್ದೆ) ಇರುವ ಅವಕಾಶಗಳಡಿ ಶ್ರೀರಾಮ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (ಎಸ್‌ಎಚ್‌ಎಫ್‌ಎಲ್)ನ ಅಧಿಕೃತ ಅಧಿಕಾರಿಯಾಗಿರುತ್ತಾರೆ ಹಾಗೂ 2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ (ಮೇಲಿನ ನಿಯಮಗಳು) ಅಧಿನಿಯಮ 3 ರಲ್ಲಿ ಓದಿಕೊಂಡಂತೆ ಮೇಲಿನ ಕಾಯ್ದೆಯ ಸೆಕ್ಷನ್ 13(12) ರಡಿ ಅವರಿಗೆ ಪ್ರದತ್ತ ಮಾಡಿರುವ ಅಧಿಕಾರವನ್ನು ಚಲಾಯಿಸಿ ಸಾಲಗಾರರಿಗೆ ತಗಾದೆ ನೋಟಿಸನ್ನು ಜಾರಿಗೊಳಿಸಿ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತೆ ತಗಾದೆ ನೋಟಿಸಿನಲ್ಲಿ ವಿವರಿಸಿರುವ ಮೊತ್ತವನ್ನು ಮರು–ಪಾವತಿಸಲು ಸೂಚಿಸಿದ್ದಾರೆ.

ಸಾಲಗಾರರು ಸದರಿ ಮೊತ್ತವನ್ನು ಮರು–ಪಾವತಿಸಲು ವಿಫಲರಾದ ಕಾರಣ, ಈ ಮೂಲಕ ಸಾಲಗಾರರಿಗೆ ಮತ್ತ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಈ ಕೆಳಸಹಿದಾರರಾದ ಎಸ್‌ಎಚ್‌ಎಫ್‌ಎಲ್ ನ ಅಧಿಕೃತ ಅಧಿಕಾರಿಯವರು ಮೇಲಿನ ಕಾಯ್ದೆಯ ಸೆಕ್ಷನ್ 13 (4) ರಡಿ ಮೇಲಿನ ನಿಯಮಗಳ ಅಧಿನಿಯಮ 8 ರಲ್ಲಿ ಓದಿಕೊಂಡಂತೆ ಅವನಿಗೆ/ಅವಳಿಗೆ ಪ್ರದತ್ತ ಮಾಡಿರುವ ಅಧಿಕಾರವನ್ನು ಉಪಯೋಗಿಸಿಕೊಂಡು ಈ ಕೆಳಗೆ ವಿವರಿಸಲಾದ ಅಡಮಾನ ಮಾಡಲಾದ ಸ್ವತ್ತುಗಳನ್ನು **17ನೇ ಸೆಪ್ಟೆಂಬರ್ 2021ರಂದು** ಭೌತಿಕ ವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ.

ಸಾಲಗಾರರ ಹೆಸರು ಮತ್ತು ವಿಳಾಸ	ತಗಾದೆ ನೋಟಿಸ್ ಪ್ರಕಾರ ಇರುವ ಬಾಕಿ ಮೊತ್ತ:
ಮೇ. ಕೆಆರ್‌ಎಸ್‌ಎನ್‌ಎ ಪ್ರೋಜೆಕ್ಟ್ಸ್ (ಪ್ರತಿನಿಧಿ ಮತ್ತು ಮಾಲೀಕ ಕೆ ಬಲರಾಮನ್) **ಶ್ರೀ ಕೆ. ಬಲರಾಮನ್ ಶ್ರೀ ವಿಕ್ರಮ್ ಬಲರಾಮನ್** **ಮನೆ ವಿಳಾಸ: ಕೆಆರ್‌ಎಸ್‌ಎನ್‌ಎ ಗಾರ್ಡೇನಿಯಾ, 559, ಆರ್‌ಎಂವಿ, 2ನೇ ಸ್ಟೇಜ್, ಹೊಸ ಬಿಇಎಲ್ ರಸ್ತೆ, ಡಾಲರ್ಸ್ ಕಾಲೋನಿ, ಬೆಂಗಳೂರು– 560 094 ಹಾಗೂ: ಕೆಆರ್‌ಎಸ್‌ಎನ್‌ಎ ಲೇಬರ್‌ನಮ್, ಆರ್‌ಎಂವಿ, 2ನೇ ಸ್ಟೇಜ್, ಹೊಸ ಬಿಇಎಲ್ ಡಾಲರ್ಸ್ ಕಾಲೋನಿ, ಬೆಂಗಳೂರು– 560 094,**	ರೂ. 9,22,80,909/– (ರೂಪಾಯಿ ಒಂಬತ್ತು ಕೋಟಿ ಇಪ್ಪತ್ತೆರಡು ಲಕ್ಷ ಎಂಬತ್ತು ಸಾವಿರ ಒಂಬೈನೂರಾ ಒಂಬತ್ತು ಮಾತ್ರ) ದಿನಾಂಕ: 19.06.2019ರಂತೆ ಸಾಲ ಖಾತೆ ಸಂಖ್ಯೆ:ಎಸ್‌ಬಿಎಲ್‌ಹೆಚ್‌ಬಿಜಿಎಲ್‌ಆರ್ 0000453 ಜೊತೆಗೆ ಒಪ್ಪಂದದ ದರದಲ್ಲಿ ಹೆಚ್ಚಿನ ಬಡ್ಡಿ ಸೇರಿ ಈ ಸೂಚನೆಯನ್ನು ಸ್ವೀಕರಿಸಿದ 60 ದಿನಗಳಲ್ಲಿ ಪಾವತಿಸ ಬೇಕಾಗುತ್ತದೆ. ನೋಟಿಸ್ ದಿನಾಂಕ: 20.06.2019

ಸ್ಥಿರಾಸ್ತಿ ಸ್ವತ್ತಿನ ವಿವರಗಳು

ಸ್ವತ್ತಿನ ಎಲ್ಲ ಭಾಗ ವಿಭಾಗ ಸೇರಿ ಎಲ್ಲ ಪ್ರಸ್ತುತ ಮತ್ತು ಭವಿಷ್ಯದ ರಚನೆಗಳು, ಕಟ್ಟಡಗಳು, ಪಿಠೋಪಕರಣಗಳು, ನೆಲೆವಸ್ತುಗಳು, ಫಿಟ್ಟಿಂಗ್‌ಗಳು, ಸ್ಥಾಯಿ ಮತ್ತು ಸ್ಥಾವರ ಮತ್ತು ಯಂತ್ರೋಪಕರಣಗಳನ್ನು ಸ್ಥಾಪಿಸಲು ಮತ್ತು ನಿರ್ಮಿಸಲು ಎಲ್ಲ ಪ್ರಸ್ತುತ ಮತ್ತು ಭವಿಷ್ಯದ ಹಕ್ಕುಗಳು ಶೀರ್ಷಿಕೆ ಮತ್ತು ಹಿತಾಸಕ್ತಿಗಳು, ಮೇ. ಕೆಆರ್‌ಎಸ್‌ಎನ್‌ಎ ಪ್ರೊಜೆಕ್ಟ್ಸ್ (ಪ್ರೋ. ಶ್ರೀ.ಕೆ. ಬಲರಾಮ) ಅದರಲ್ಲಿ ಸರ್ವೇ ನಂ. 24/5, ಅಳತೆ 1 ಎಕರೆ 14 ಗುಂಟೆ, ಚಿಕ್ಕಮಾರನಹಳ್ಳಿ ಗ್ರಾಮ, ಕಸಬಾ ಹೋಬಳಿ, ಬೆಂಗಳೂರು ತಾಲೂಕು.

ಡೋರ್ ನಂ.		ವಿಧ	ಯುಡಿಎಸ್	ಫ್ಲಾಟ್ ಪ್ರದೇಶ	ಫ್ಲಾಟ್ ಬೇಕ್ ಅಪ್ ಪ್ರದೇಶ		
					ಸಾಮಾನ್ಯ ಪ್ರದೇಶ		ಕಾರ್ಪೆಟ್ ಪ್ರದೇಶ (ದೂರ ಒಳಗೊಂಡಿದೆ)
					ದೂರ (ಒಳಗೊಂಡಿದೆ)	ದೂರ (ಕಡಿತಗಳು)	
ಎ	1	ಫ್ಲಾಟ್	630	2947	117	355	2475
ಬಿ	1	ಫ್ಲಾಟ್	570	2631	117	304	2210
ಸಿ	1	ಫ್ಲಾಟ್	630	2858	117	340	2401
ಡಿ	1	ಫ್ಲಾಟ್	570	2561	117	293	2151
ಎ	2	ಫ್ಲಾಟ್	630	2947	117	355	2475
ಬಿ	2	ಫ್ಲಾಟ್	570	2631	117	304	2210
ಸಿ	2	ಫ್ಲಾಟ್	630	2858	117	340	2401
ಡಿ	2	ಫ್ಲಾಟ್	570	2561	117	293	2151
ಎ	3	ಫ್ಲಾಟ್	630	2947	117	355	2475
ಬಿ	3	ಫ್ಲಾಟ್	570	2631	117	304	2210
ಸಿ	3	ಫ್ಲಾಟ್	630	2858	117	340	2401
ಡಿ	3	ಫ್ಲಾಟ್	570	2561	117	293	2151
ಎ	4	ಫ್ಲಾಟ್	630	2947	117	355	2475
ಬಿ	4	ಫ್ಲಾಟ್	570	2631	117	304	2210
ಸಿ	4	ಫ್ಲಾಟ್	630	2858	117	340	2401
ಡಿ	4	ಫ್ಲಾಟ್	570	2561	117	293	2151
ಎ	5	ಫ್ಲಾಟ್	630	2947	117	355	2475
ಬಿ	5	ಫ್ಲಾಟ್	570	2631	117	304	2210
ಸಿ	5	ಫ್ಲಾಟ್	630	2858	117	340	2401
ಡಿ	5	ಫ್ಲಾಟ್	570	2561	117	293	2151
ಎ	6	ಫ್ಲಾಟ್	630	2947	117	355	2475
ಬಿ	6	ಫ್ಲಾಟ್	570	2631	117	304	2210
ಸಿ	6	ಫ್ಲಾಟ್	630	2858	117	340	2401
ಡಿ	6	ಫ್ಲಾಟ್	570	2561	117	293	2151
ಎ	7	ಫ್ಲಾಟ್	630	2947	117	355	2475
ಬಿ	7	ಫ್ಲಾಟ್	570	2631	117	304	2210
ಸಿ	7	ಫ್ಲಾಟ್	630	2858	117	340	2401
ಡಿ	7	ಫ್ಲಾಟ್	570	2561	117	293	2151
ಎ	8	ಫ್ಲಾಟ್	630	2947	117	355	2475
ಬಿ	8	ಫ್ಲಾಟ್	570	2631	117	304	2210
ಸಿ	8	ಫ್ಲಾಟ್	630	2858	117	340	2401
ಡಿ	8	ಫ್ಲಾಟ್	570	2561	117	293	2151
ಎ	9	ಫ್ಲಾಟ್	630	2947	117	355	2475
ಬಿ	9	ಫ್ಲಾಟ್	570	2631	117	304	2210
ಸಿ	9	ಫ್ಲಾಟ್	630	2858	117	340	2401
ಡಿ	9	ಫ್ಲಾಟ್	570	2561	117	293	2151
ಎ	10	ಫ್ಲಾಟ್	630	2947	117	355	2475
ಬಿ	10	ಫ್ಲಾಟ್	570	2631	117	304	2210
ಸಿ	10	ಫ್ಲಾಟ್	630	2858	117	340	2401
ಡಿ	10	ಫ್ಲಾಟ್	570	2561	117	293	2151
ಎ	11	ಫ್ಲಾಟ್	630	2947	117	355	2475
ಬಿ	11	ಫ್ಲಾಟ್	570	2631	117	304	2210
ಸಿ	11	ಫ್ಲಾಟ್	630	2858	117	340	2401
ಡಿ	11	ಫ್ಲಾಟ್	570	2561	117	293	2151
ಪಿ	1	ಫ್ಲಾಟ್	1841	2500	58	342	2158
ಪಿ	2	ಫ್ಲಾಟ್	1841	2500	58	342	2158

ಎಲ್ಲ ಸಾಮಾನ್ಯ ಸಾರ್ವಜನಿಕರಿಗೂ ಈ ನೋಟಿಸ್ ಜಾರಿಗೊಳಿಸುವುದರ ಮೂಲಕ ಎಚ್ಚರಿಸುವುದೇನೆಂದರೆ ಎಸ್‌ಎಚ್‌ಎಫ್‌ಎಲ್‌ನ ಅಧಿಕೃತ ಅಧಿಕಾರಿಯು ಕಾನೂನು ಪ್ರಕಾರ ಮೇಲ್ಕಾಣಿಸಿದ ಸ್ಥಿರಾಸ್ತಿಗಳನ್ನು ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಹಾಗೂ ಸಾಲಗಾರರು ಅಥವಾ ಇನ್ಯಾವುದೇ ವ್ಯಕ್ತಿಯಾಗಲೀ ಈ ನೋಟಿಸ್ ಸ್ವೀಕರಿಸಿದ ನಂತರ ಎಸ್‌ಎಚ್‌ಎಫ್‌ಎಲ್‌ನವರ ಲಿಖಿತ ಪೂರ್ವಾನುಮತಿ ಇಲ್ಲದೇ ಯಾವುದೇ ರೀತಿಯಿಂದ ಅಂದರೆ ಮಾರಾಟದ ಮೂಲಕವಾಗಲೀ, ಭೋಗ್ಯ ಅಥವಾ ಬೇರೆ ರೀತಿಯ ವ್ಯವಹಾರದ ಮೂಲಕವಾಗಲೀ ವರ್ಗಾಯಿಸುವಂತಿಲ್ಲ ಹಾಗೂ ಈ ನೋಟಿಸಿನಲ್ಲಿ ಉಲ್ಲೇಖಿಸಲಾದ ಮೇಲಿನ ಸ್ವತ್ತುಗಳನ್ನು ಬೇರ್ಪಡಿಸುವುದಾಗಲೀ ಮಾಡುವಂತಿಲ್ಲ.

ಸ್ಥಳ : ಬೆಂಗಳೂರು
ದಿನಾಂಕ: 17.09.2021

ಸಹಿ/–ಅಧಿಕೃತ ಅಧಿಕಾರಿ
ಶ್ರೀರಾಮ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

'ಇಂಡಿಯನ್ ಮನಿ'ಗೆ ಶಶಿ ರೆಡ್ಡಿ ಅಧ್ಯಕ್ಷ

ಡಾ. ಶಶಿ ರೆಡ್ಡಿ

ಬೆಂಗಳೂರು: ವೈಯಕ್ತಿಕ ಹಣಕಾಸು ನಿರ್ವಹಣೆಯ ಸಲಹೆ ನೀಡುವ ಕಂಪನಿ 'ಇಂಡಿಯನ್ ಮನಿ ಡಾಟ್ ಕಾಂ'ನ ಅಧ್ಯಕ್ಷರಾಗಿ ಡಾ. ಶಶಿ ರೆಡ್ಡಿ ಅವರು ಅಧಿಕಾರ ವಹಿಸಿಕೊಂಡಿದ್ದಾರೆ. ರೆಡ್ಡಿ ಅವರ ನೇತೃತ್ವದ ಎಸ್‌ಆರ್‌ಐ ಕ್ಯಾಪಿಟಲ್ ಕಂಪನಿಯು 'ಇಂಡಿಯನ್ ಮನಿ ಡಾಟ್ ಕಾಂ'ನಲ್ಲಿ ಹೂಡಿಕೆ ಮಾಡಿದೆ.

ಇಂಡಿಯನ್ ಮನಿ ಡಾಟ್ ಕಾಂ ಅಭಿವೃದ್ಧಿಪಡಿಸಿರುವ ಫೈನಾನ್ಶಿಯಲ್ ಫ್ರೀಡಂ ಆ್ಯಪ್‌ಅನ್ನು 30 ಲಕ್ಷ ಜನ ಸಕ್ರಿಯವಾಗಿ ಬಳಸುತ್ತಿದ್ದಾರೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಆನೇಕಲ್ ಯೋಜನಾ ಪ್ರಾಧಿಕಾರ
"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560099.
ದೂ.: 080–27835122 ಫ್ಯಾಕ್ಸ್ : 080–27836569 www.anekal.tpa.gov.in www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಸಾ.ಪ್ರ–2/2021–22 ದಿನಾಂಕ: 06.09.2021

ಸಾರ್ವಜನಿಕ ಪ್ರಕಟಣೆ

ವಿಷಯ: ಆನೇಕಲ್ ಯೋಜನಾ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ವಿನ್ಯಾಸಗಳಲ್ಲಿ ಬಿಡುಗಡೆಯಾಗದೇ ಇರುವ ನಿವೇಶನಗಳನ್ನು ಖರೀದಿ ಮಾಡದಿರಲು ಪ್ರಕಟಣೆ.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ವಿನ್ಯಾಸಗಳಲ್ಲಿ ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ ಸರ್ಕಾರವು ಕಾಲಕಾಲಕ್ಕೆ ತಕ್ಕಂತೆ ಸುತ್ತೋಲೆಗಳನ್ನು ಹೊರಡಿಸಲಾಗಿದೆ.

ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 112 ಬೆಂರೂಪ್ರಾ 2005, ದಿನಾಂಕ: 26.05.2005ರಲ್ಲಿ ಶೇಕಡ 60:40ರ ಅನುಪಾತದಲ್ಲಿ ನಿವೇಶನಗಳನ್ನು ಬಿಡುಗಡೆ ಮಾಡಲು ನಿರ್ದೇಶನ ನೀಡಲಾಗಿತ್ತು. ಅದರಂತೆ ವಿನ್ಯಾಸಕ್ಕೆ ಅನುಮೋದನೆ ನೀಡುವ ಸಂದರ್ಭದಲ್ಲಿ ಶೇಕಡ 60ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಲಾಗಿರುತ್ತದೆ. ವಿನ್ಯಾಸವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ಸಕ್ಷಮ ಪ್ರಾಧಿಕಾರಗಳಿಂದ ನಿರಾಕ್ಷೇಪಣಾ ಪತ್ರ ಪಡೆದು ಪ್ರಾಧಿಕಾರಕ್ಕೆ ಸಲ್ಲಿಸಿದ ನಂತರ ಉಳಿದ ಶೇಕಡ 40ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗುತ್ತದೆ.

ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 599 ಮೈಅಪ್ರಾ 2012, ದಿನಾಂಕ: 03.12.2012 ಮತ್ತು ನಅಇ 08 ಟಿಟಿಪಿ 2013, ದಿನಾಂಕ: 24.05.2014ರಲ್ಲಿ ಅನುಮೋದಿತ ವಿನ್ಯಾಸಗಳಲ್ಲಿ ಶೇಕಡ 40:30:30ರ ಅನುಪಾತದಲ್ಲಿ ನಿವೇಶನಗಳನ್ನು ಬಿಡುಗಡೆ ಮಾಡಲು ನಿರ್ದೇಶನ ನೀಡಲಾಗಿರುತ್ತದೆ. ಅದರಂತೆ, ವಿನ್ಯಾಸಕ್ಕೆ ಅನುಮೋದನೆ ನೀಡುವಾಗ ಮೊದಲನೇ ಹಂತದಲ್ಲಿ ಶೇಕಡ 40ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಉಳಿದಂತೆ ನಿಗದಿತ ಸಿವಿಲ್ ಕಾಮಗಾರಿಗಳು ಮತ್ತು ಇನ್ನಿತರೆ ಕೆಲಸಗಳು ಪೂರ್ಣಗೊಂಡ ನಂತರ 2ನೇ ಹಂತದ ಶೇಕಡ 30ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಲಾಗಿರುತ್ತದೆ. ವಿನ್ಯಾಸವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿದ ನಂತರ ಸಕ್ಷಮ ಪ್ರಾಧಿಕಾರಗಳಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಪ್ರಾಧಿಕಾರಕ್ಕೆ ಸಲ್ಲಿಸಿದ ನಂತರ ಅಂತಿಮವಾಗಿ 3ನೇ ಹಂತದ ನಿವೇಶನಗಳನ್ನು ಬಿಡುಗಡೆಗೊಳಿಸಲಾಗುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 24 ಶಾಸನ 2015, ದಿನಾಂಕ: 10.09.2015ರಲ್ಲಿ ವಿನ್ಯಾಸ ಅನುಮೋದನೆ ಸಂದರ್ಭದಲ್ಲಿ ಯಾವುದೇ ನಿವೇಶನಗಳನ್ನು ಬಿಡುಗಡೆಗೊಳಿಸದೇ ತಾತ್ಕಾಲಿಕ ವಿನ್ಯಾಸಕ್ಕೆ ಅನುಮೋದನೆ ನೀಡಲಾಗುತ್ತದೆ. ವಿನ್ಯಾಸದ ಅಭಿವೃದ್ಧಿ ಕಾಮಗಾರಿಗಳನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿದ ನಂತರ ಸಕ್ಷಮ ಪ್ರಾಧಿಕಾರಗಳಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಪ್ರಾಧಿಕಾರಕ್ಕೆ ಸಲ್ಲಿಸಿದ ನಂತರ ಶೇಕಡ 100ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಿ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಲಾಗುತ್ತದೆ.

ಸರ್ಕಾರದ ಸುತ್ತೋಲೆ ಸಂಖ್ಯೆ: ಡಿಪಿಎಎಲ್ 26 ಶಾಸನ 2021, ಬೆಂಗಳೂರು, ದಿನಾಂಕ: 05.07.2021ರಲ್ಲಿ ಕರಡು ವಿನ್ಯಾಸ ಅಭಿವೃದ್ಧಿಪಡಿಸಿದ ನಂತರ ಕಾರ್ನರ್ ನಿವೇಶನಗಳನ್ನು Mortgage ಮಾಡಿಸಿಕೊಂಡ ನಂತರ ಅರ್ಜಿದಾರರು ಇಚ್ಚಿಸಿದಲ್ಲಿ ಶೇಕಡ 40ರಷ್ಟು ನಿವೇಶನಗಳ ಬಿಡುಗಡೆಗೆ ಅವಕಾಶ ಕಲ್ಪಿಸಲಾಗಿದೆ.

ಆದ್ದರಿಂದ 2005 ರಿಂದ 2015ರ ವರೆಗಿನ ಅವಧಿಯಲ್ಲಿ ವಿನ್ಯಾಸಕ್ಕೆ ಅನುಮೋದನೆ ನೀಡಿ 1ನೇ ಹಂತ ಅಥವಾ 2ನೇ ಹಂತ ಮಾತ್ರ ನಿವೇಶನ ಬಿಡುಗಡೆ ಮಾಡಿಕೊಂಡು ವಿನ್ಯಾಸ ಅಭಿವೃದ್ಧಿಪಡಿಸದೇ ಅಂತಿಮವಾಗಿ ನಿವೇಶನ ಬಿಡುಗಡೆ ಪಡೆಯದೇ ಇರುವ ವಿನ್ಯಾಸಗಳಲ್ಲಿ ಅಂತಹ ನಿವೇಶನಗಳನ್ನು ಖರೀದಿ ಮಾಡಬಾರದಾಗಿ ತಿಳಿಸಲಾಗಿದೆ. ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ನೀಡಿ ನಿವೇಶನ ಬಿಡುಗಡೆ ಮಾಡಿದ್ದಲ್ಲಿ ಮಾತ್ರ ಪರಿಶೀಲಿಸಿಕೊಂಡು ನಿವೇಶನಗಳನ್ನು ಖರೀದಿಸಲು ತಿಳಿಸಲಾಗಿದೆ. ಒಂದು ಪಕ್ಷ ಪ್ರಾಧಿಕಾರದಿಂದ ಬಿಡುಗಡೆಯಾಗದ ನಿವೇಶನವನ್ನು ಖರೀದಿಸಿದಲ್ಲಿ ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗುವುದಿಲ್ಲ.

ವಿನ್ಯಾಸ ಮಾಲೀಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಭಾಗಶಃ ಶೇಕಡವಾರು ನಿವೇಶನಗಳನ್ನು ಮಾತ್ರ ಬಿಡುಗಡೆಗೊಳಿಸಿಕೊಂಡು ಅಂತಿಮವಾಗಿ ನಿವೇಶನಗಳನ್ನು ಬಿಡುಗಡೆಗೊಂಡಿಲ್ಲದ ಪಕ್ಷದಲ್ಲಿ ಕೂಡಲೇ ವಿನ್ಯಾಸವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ಸಕ್ಷಮ ಪ್ರಾಧಿಕಾರಗಳಿಂದ ನಿರಾಕ್ಷೇಪಣಾ ಪತ್ರ ಪಡೆದು ಪ್ರಾಧಿಕಾರಕ್ಕೆ ಸಲ್ಲಿಸಿ ಸರ್ಕಾರದ ಸುತ್ತೋಲೆಯಂತೆ, ನಿಗದಿತ ದಂಡ ಶುಲ್ಕ ಪಾವತಿಸಿ ನಿವೇಶನಗಳನ್ನು ಬಿಡುಗಡೆ ಮಾಡಿಸಿಕೊಳ್ಳಲು ತಿಳಿಸಲಾಗಿದೆ. ತಪ್ಪಿದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರಡಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಸಹಿ/–,
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

ವಾಸಾಸಂಇ/ಉನಿನ/ಎಲ್‌ಸಿ/1636/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೇಂದ್ರದ ಕೃಷಿ ಕಾಯ್ದೆಗಳಿಗೆ ವಿರೋಧ

ಭಾರತ್ ಬಂದ್‌ಗೆ ರಾಜ್ಯ ರೈತ ಸಂಘ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ಇದೇ 27ರಂದು ಕರೆ ನೀಡಿರುವ ಭಾರತ್ ಬಂದ್‌ಗೆ ಬೆಂಬಲ ನೀಡುವುದಾಗಿ ರೈತ ನಾಯಕ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಸ್ಥಾಪಿತ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ತಿಳಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಅಧಿಕಾರಕ್ಕೆ ಬರುವ ಮೊದಲು ಸ್ವಾಮಿನಾಥನ್ ವರದಿ ಜಾರಿಗೊಳಿಸುವುದಾಗಿ ಭರವಸೆ ನೀಡಿದ್ದರು. ಆದರೆ, ಪ್ರಧಾನಿಯಾದ ನಂತರ ರೈತರನ್ನು ಮರೆತಿದ್ದಾರೆ. ಮುಂದಿನ ಚುನಾವಣೆಯಲ್ಲಿ ರೈತರು ಸರಿಯಾದ ಪಾಠ ಕಲಿಸಲಿದ್ದಾರೆ ಎಂದು ರಾಜ್ಯ ಘಟಕದ ಅಧ್ಯಕ್ಷ ವಿ. ಆರ್. ನಾರಾಯಣರೆಡ್ಡಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಕೇಂದ್ರ ಸರ್ಕಾರದ ಅವೈಜ್ಞಾನಿಕ ನೀತಿಯಿಂದಾಗಿ ಎಪಿಎಂಸಿಗಳು ಮುಚ್ಚುತ್ತಿವೆ. ಕಾರ್ಪೊರೇಟ್ ಕಂಪನಿಗಳ ಹಿತಾಸಕ್ತಿ ಕಾಪಾಡಲು ಮಾತ್ರ ಸರ್ಕಾರ ಗಮನಹರಿಸು-ತ್ತಿದೆ. ಭೂಮಿಯನ್ನು ಖಾಸಗಿ ಕಂಪನಿಗಳಿಗೆ ನೀಡುವ ಮೂಲಕ ರೈತರನ್ನು ಬೀದಿ ಪಾಲು ಮಾಡಲಾಗುತ್ತಿದೆ ಎಂದು ಅವರು ದೂರಿದರು.

ಮುಖ್ಯಮಂತ್ರಿ ಹೇಳಿಕೆಗೆ ಆಕ್ಷೇಪ

ಕೃಷಿ ತಿದ್ದುಪಡಿ ಕಾಯ್ದೆ ವಿರೋಧಿಸಿ ದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತಿರು-ವವರು ರೈತರಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಹೇಳಿಕೆಯನ್ನು ನಾರಾಯಣರೆಡ್ಡಿ ಖಂಡಿಸಿದರು.

ವಿದೇಶಿ ಸಂಸ್ಥೆಗಳು ರೈತರಿಗೆ ಹಣ ನೀಡುತ್ತಿವೆ ಎನ್ನುವ ಆರೋಪ ಮಾಡಲಾಗುತ್ತಿದೆ. ಸರ್ಕಾರ ಇಂತಹ ಆರೋಪ ಮಾಡುವ ಬದಲು ರೈತರ ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಲಿ ಎಂದು ಒತ್ತಾಯಿಸಿದರು.

ಇದೇ 23ರಂದು ಮೇಕೆದಾಟು ಯೋಜನೆ ಜಾರಿಗೆ ಒತ್ತಾಯಿಸಿ ರೈತ ಸಂಘಟನೆಗಳು ಹಮ್ಮಿಕೊಂಡಿರುವ ಬೃಹತ್ ಪಾದಯಾತ್ರೆಯಲ್ಲಿ ನಮ್ಮ ಸಂಘಟನೆಯೂ ಭಾಗವಹಿಸಲಿದೆ ಎಂದು ತಿಳಿಸಿದರು.

ಶುಕ್ರವಾರ ಓಂ ಬಿರ್ಲಾ ಭಾಷಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಇದೇ ಶುಕ್ರವಾರ ಮಧ್ಯಾಹ್ನ ವಿಧಾನಮಂಡಲದ ಜಂಟಿ ಅಧಿವೇಶನ ನಡೆಯಲಿದ್ದು, ಲೋಕಸಭೆಯ ಅಧ್ಯಕ್ಷ ಓಂ ಬಿರ್ಲಾ ಅವರು, 'ಪ್ರಜಾಪ್ರಭುತ್ವ: ಸಂಸದೀಯ ಮೌಲ್ಯಗಳ ರಕ್ಷಣೆ' ಕುರಿತು ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ಮಾತನಾಡಲಿದ್ದಾರೆ.

ವಿಧಾನಸಭೆಯ ಸಭಾಂಗಣದಲ್ಲಿ ಶುಕ್ರವಾರ ಮಧ್ಯಾಹ್ನ 2.30ರಿಂದ ಜಂಟಿ ಅಧಿವೇಶನ ಆರಂಭವಾಗಲಿದೆ.

ಇದೇ ಸಂದರ್ಭದಲ್ಲಿ ವಿಧಾನ ಸಭೆಯ ಶಾಸಕರೊಬ್ಬರಿಗೆ 'ಅತ್ಯುತ್ತಮ ಶಾಸಕ' ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ನಂತರ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡುವರು. ಕೊನೆಯಲ್ಲಿ ಓಂ ಬಿರ್ಲಾ ಅವರು ಭಾಷಣ ಮಾಡುವರು ಎಂದು ವಿಧಾನಮಂಡಲದ ಪ್ರಕಟಣೆ ತಿಳಿಸಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಆರ್‌ಟಿ. ನಗರ ವೃತ್ತದಲ್ಲಿ ನಿರ್ಮಾಣಗೊಂಡಿರುವ ರವೀಂದ್ರನಾಥ ಟ್ಯಾಗೋರ್ ಅವರ ಪುತ್ಥಳಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬುಧವಾರ ಲೋಕಾರ್ಪಣೆ ಮಾಡಿದರು. ಕಾಂಗ್ರೆಸ್ ಮುಖಂಡ ಅಬ್ದುಲ್ ವಾಜೀದ್, ಶಾಸಕ ಬೈರತಿ ಸುರೇಶ್ ಹಾಗೂ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಇದ್ದರು

ಪರಸ್ಪರ ಅಂತರ ಕಾಯ್ದುಕೊಳ್ಳಿ

ಯಶವಂತಪುರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ.,
ಸ್ಥಾಪನೆ 1974
ಪ್ರಧಾನ ಕಛೇರಿ : ನಂ 61 7ನೇ ಮುಖ್ಯರಸ್ತೆ ಗೋಕುಲ 1ನೇ ಹಂತ ಯಶವಂತಪುರ, ಬೆಂಗಳೂರು – 560 022
E-Mail : manager@yccs.co.in ದೂರವಾಣಿ : 080–23372744 ಮೊಬೈಲ್ : 9449867653/4/5
ಶಾಖೆ: ಕೆ.ಇ.ಸಿ. ಬಡಾವಣೆ ಮೊ.: 9449867655, ಶಾಖೆ: ಅಟ್ಟೂರು ಬಡಾವಣೆ ದೂ.: 080–29522744 ಮೊ.: 9449867651

47ನೇ ವಾರ್ಷಿಕ ಸರ್ವಸದಸ್ಯರ ಸಭೆಯ ತಿಳುವಳಿಕೆ ಪತ್ರ 2020–21 ನೋಟೀಸು

ಕೋವಿಡ್–19 ಸಾಂಕ್ರಾಮಿಕ ರೋಗ ಹರಡುತ್ತಿರುವ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಸೂಚನೆಯನ್ನು ಅನುಸರಿಸಿ. 2020–21ನೇ ಸಾಲಿನ 47ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಸೊಸೈಟಿಯ ಅಧ್ಯಕ್ಷರಾದ ಶ್ರೀ **ಮುನಿಸ್ವಾಮಿ ಎನ್.**ರವರ ಘನ ಅಧ್ಯಕ್ಷತೆಯಲ್ಲಿ ದಿ. 26–09–2021ರ ಭಾನುವಾರ ಬೆಳಿಗ್ಗೆ 10 ಗಂಟೆಗೆ **VIRTUAL GENERAL BODY MEETING** ಮೂಲಕ ಹಮ್ಮಿಕೊಳ್ಳಲಾಗಿದೆ. ಸದಸ್ಯರ ವಿಳಾಸಗಳಿಗೆ ಸರ್ವಸದಸ್ಯರ ಸಭೆಯ ಪತ್ರವನ್ನು ಅಂಚೆ ಮೂಲಕ ಕಳುಹಿಸಲಾಗಿದೆ. ಒಂದು ವೇಳೆ ನೋಟೀಸ್ ತಲುಪದೇ ಇದ್ದಲ್ಲಿ ಇದನ್ನೇ ಸರ್ವಸದಸ್ಯರ ಸಭೆಯ ನೋಟೀಸ್ ಎಂದು ಪರಿಗಣಿಸಿ, ಸಭೆಗೆ **https://viewnow.in/yccs.in/** ಆನ್‌ಲೈನ್ ಮೂಲಕ ಭಾಗವಹಿಸಲು ಕೋರಲಾಗಿದೆ. ಆಡಳಿತ ಮಂಡಳಿ ಅಪ್ಪಣೆ ಮೇರೆಗೆ

ರಾಜೀವ್ ಎಸ್. ಎನ್. ವ್ಯವಸ್ಥಾಪಕರು

ದಿನಾಂಕ 1/04/2020 ರಿಂದ 31/03/2021 ರವರೆಗಿನ ಲಾಭ – ನಷ್ಟದ ತಃಖ್ತೆ

ನಷ್ಟಾಂಶ ವಿವರ	ಮೊಬಲಗು	ಲಾಭಾಂಶ ವಿವರ	ಮೊಬಲಗು
ಆಡಳಿತಾತ್ಮಕ ವೆಚ್ಚಗಳು	94,53,832–15	ಸದಸ್ಯರಿಂದ ಆದಾಯ ಬಡ್ಡಿ ಮತ್ತು ಇತರೆ	5,90,59,785–56
ಪುಸ್ತಕ ಫಾರಂ ದಾಸ್ತಾನು	39,570–20	ಸೊಸೈಟಿ ಹೂಡಿಕೆಗಳ ಬಡ್ಡಿ	25,90,186–00
ಠೇವಣಿಗಳ ಮೇಲೆ ಬಡ್ಡಿ ಪಾವತಿಸಿದ್ದು	5,62,36,994–24	ಬ್ಯಾಂಕು ಹೂಡಿಕೆಗಳ ಬಡ್ಡಿ	2,34,50,179–00
ಲೆಕ್ಕ ಪರಿಶೋಧನಾ ಶುಲ್ಕ	59,150–00		
ಜಿ.ಎಸ್.ಟಿ. ಮತ್ತು ಆದಾಯ ತೆರಿಗೆ ಪಾವತಿ	61,86,170–00		
ಸವಕಳಿಗಳು	15,88,479–00		
ನಿವ್ವಳ ಲಾಭ – 1,15,35,954–97	–		
ಸೊಸೈಟಿ ಮತ್ತು ಸದಸ್ಯರಿಂದ ಆದಾಯ	1,02,97,196–30		
ಬ್ಯಾಂಕು ಹೂಡಿಕೆಗಳ ಬಡ್ಡಿ	12,38,758–67		
ಒಟ್ಟು	8,51,00,150–56	ಒಟ್ಟು	8,51,00,150–56

ದಿನಾಂಕ 31/03/2021 ರಂದು ಇದ್ದಂತೆ ಸೊಸೈಟಿಯ ಆಸ್ತಿ – ಜವಾಬ್ದಾರಿ ತಃಖ್ತೆ

ಜವಾಬ್ದಾರಿಗಳ ವಿವರ	ಮೊಬಲಗು	ಆಸ್ತಿಗಳ ವಿವರ	ಮೊಬಲಗು
ಷೇರು ಧನ	4,81,54,700–00	ನಗದು ಶಿಲ್ಕು	37,27,705–24
ಆಪದ್ಧನ ನಿಧಿ	3,83,42,489–00	ಬ್ಯಾಂಕಿನ ಶಿಲ್ಕು	3,34,63,956–31
ಇತರೆ ನಿಧಿಗಳು	5,12,12,269–39	ಬ್ಯಾಂಕಿನಲ್ಲಿ ಹೂಡಿಕೆ	27,25,93,646–53
ಸವಕಳಿ ನಿಧಿಗಳು	1,28,74,323–18	ಸ್ಥಿರಾಸ್ತಿಗಳು	2,45,49,026–18
ಇತರೆ ಜವಾಬ್ದಾರಿಗಳು	1,47,50,654–34	ಚರಾಸ್ತಿಗಳು	1,37,33,671–50
ಠೇವಣಾತಿಗಳು	77,07,32,433–04	ಸಾಲಗಳು	58,94,55,028–66
ಠೇವಣಿಗಳ ಮೇಲೆ ಬಡ್ಡಿ ಕೊಡಬೇಕಾದದ್ದು	1,94,76,878–00	ಮುಂಗಡಗಳು	23,89,038–00
ಸಿಬ್ಬಂದಿ ಖಾತೆಗಳು	1,26,48,002–00	ಇತರೆ ನಿಧಿಗಳ ಠೇವಣಿ	2,64,46,064–00
ಸನ್ನದು ಲೆಕ್ಕ ಪರಿಶೋಧನಾ ಶುಲ್ಕ	65,000–00	ವಾಹನಗಳು	4,31,939–00
2020–21ನೇ ಸಾಲಿನ ನಿವ್ವಳ ಲಾಭ	1,15,35,954–97	ಇತರೆ ಆಸ್ತಿಗಳು	3,54,468–50
		ಸಿಬ್ಬಂದಿ ಹೂಡಿಕೆಗಳು	1,26,48,160–00
ಒಟ್ಟು	97,97,92,703–92	ಒಟ್ಟು	97,97,92,703–92

ಮುನಿಸ್ವಾಮಿ. ಎನ್. ಅಧ್ಯಕ್ಷರು | ಚನ್ನಕೇಶವ. ಕೆ. ಉಪಾಧ್ಯಕ್ಷರು | ರಾಜಣ್ಣ ಎಸ್. ಪ್ರ.ದ. ಸಹಾಯಕರು | ರಾಜೀವ್. ಎಸ್. ಎನ್. ವ್ಯವಸ್ಥಾಪಕರು

"ಲೆಕ್ಕ ಪರಿಶೋಧನಾ ದೃಢೀಕರಣ ಪತ್ರ"

ಈ ಮೇಲ್ಕಂಡ ಯಶವಂತಪುರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು–22 ಇದರ 2020–21ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇನೆ. ಲೆಕ್ಕಪರಿಶೋಧನೆಗೆ ಹಾಜರುಪಡಿಸಿ ಜಮಾ – ಖರ್ಚು ತಃಖ್ತೆ,ಲಾಭ – ನಷ್ಟ ತಃಖ್ತೆ ಮತ್ತು ಆಸ್ತಿ–ಜವಾಬ್ದಾರಿ ತಃಖ್ತೆಯನ್ನು ಸಂಘದ ಲೆಕ್ಕ ಪತ್ರಗಳೊಂದಿಗೆ ಪರಿಶೀಲಿಸಿರುತ್ತೇನೆ. ಸಂಬಂಧಿಸಿದ ಬಾಬ್ತುಗಳಿಗೆ ಸೂಕ್ತ ಸಮಜಾಯಿಷಿಗಳನ್ನು ಸಂಬಂದಿಸಿದವರಿಂದ ಪಡೆದಿರುತ್ತೇನೆ. ನನ್ನ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗೊಳಪಟ್ಟು ನನ್ನ ಅತ್ಯುತ್ತಮ ಜ್ಞಾನ ಮತ್ತು ತಿಳುವಳಿಕೆಯಂತೆ ದಿನಾಂಕ 31–03–2021ರ ಅಂತ್ಯಕ್ಕೆ ಸಂಘದ ನಿಜವಾದ ಆರ್ಥಿಕ ಸ್ಥಿತಿಯನ್ನು ತೋರಿಸುತ್ತದೆಂದು ಅಭಿಪ್ರಾಯಪಡುತ್ತೇನೆ.

ಗೀತಾ ಎ.ಬಿ.
ಸನ್ನದು ಲೆಕ್ಕ ಪರಿಶೋಧಕರು, ಗೀತಾ ಚಂದ್ರಕಾಂತ್ ಅಂಡ್ ಕೋ.

ಸಾಲಗಳ ಮೇಲಿನ ಬಡ್ಡಿ : ಮನೆ ಕಟ್ಟಲು, ವಿದ್ಯಾಭ್ಯಾಸ 8.50% | ಸ್ಥಿರಾಸ್ತಿ ಅಡಮಾನ ಸಾಲ 9.25% | ಬಿ–ಖಾತಾ ಸ್ಥಿರಾಸ್ತಿ ಸಾಲ 11%
ಚಿನ್ನಾಭರಣ ಸಾಲ 8.50% | ಸ್ಥಿರಾಸ್ತಿ ಜಾಮೀನು ಸಾಲ 12% | ವಿಶೇಷ ಜಾಮೀನು ಸಾಲ 12%
ಜಾಮೀನು ಸಾಲ 12% | ಸ್ಥಿರಾಸ್ತಿ ಸಾಲ ಗರಿಷ್ಠ ಮಿತಿ ರೂ. 1 ಕೋಟಿ

PUBLIC WORKS DEPARTMENT
Executive Engineer, No 1, Buildings Division, S.J.P. Campus
Bengaluru. Tel : 22255210 Fax: 22250755
e-mail: eebld1@kpwd.gov.in, eebld1@yahoo.com

IFT No.: EE/BID1/JE-3/30/2021-2022 Date: 20.09.2021

INVITATION FOR SHORT TERM TENDER (IFT)

1. The Executive Engineer No 1, Buildings Division, Bengaluru invites tenders from eligible tenderers, for the construction of works detailed in the Table below. The tenderers have to submit the tender for the work given in the Table through e-procurement Portal of the Government of Karnataka (viz **http://eproc.karnataka.gov.in**). The Tenderers are advised to note the minimum qualification criteria specified in Clause 3 of the Instructions to Tenderers to qualify for award of the contract. (Standard Tender Document KW2)
2. Tender documents may be downloaded from the e-procurement portal of the Government of Karnataka up to **27.09.2021**
3. Tenders must be accompanied by earnest money deposit specified for the work in the Table below. Earnest money deposit will have to be in any one of the forms as specified in the Tender document and shall have to be valid for 45 days beyond the validity of the tender.
4. Tenders must be submitted Online through e-procurement portal on or before **16.00 hours on 27.09.2021** and the opening of tenders will be as per the e-procurement portal guidelines
5. Other details can be seen in the tender documents.

Sl no.	Name of work	Approximate value of work (Rs.in Lakhs)	Earnest Money Deposit (in Rs.)	Cost of docu-ment (in Rs.)	Period of completion
1	Proposed Reception counter at Legislators Home, Old Block, Bengaluru KPWD/2021-22/BD/WORK_INDENT138343	46.16	EMD declaration certificate as per GO dated 22.12.2020	As per e-portal	3 Months including rainy season

DIPR/DDU/1623/ALAKNANDA/2021-22

Sd/-
Executive Engineer
No 1, Buildings Division, Bengaluru

COVID-19. DO NOT PANIC, BE AWARE
Wear Mask | 6 Feet Follow Physical Distancing | Maintain Hand Hygiene

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ರಾಮನಗರ ವಿಭಾಗ, ಸಂಚಾರ ಶಾಖೆ
ಮೊದಲನೇ ಮಹಡಿ, ವಾಹನ ನಿಲ್ದಾಣ, ಐಜೂರು ವೃತ್ತ ರಾಮನಗರ–562159.

ಸಂಖ್ಯೆ.ಕರಾಸಾ.ರಾನವಿ.ಸಂ.ವಾ/1958:1959:1960:1961/21–22 ದಿ.20.09.2021

"ಇ–ಟೆಂಡರ್ ಪ್ರಕಟಣೆ ಸಂಖ್ಯೆ: 07 & ಮ್ಯಾನ್ಯುಯಲ್ ಟೆಂಡರ್ ಪ್ರಕಟಣೆ ಸಂಖ್ಯೆ: 08–21–22" ಸಂಧಾನ ಪ್ರಕಟಣೆ ಸಂಖ್ಯೆ: 09 & 10–2021–22"

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ ಇವರು, ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಚನ್ನಪಟ್ಟಣ, ಆನೇಕಲ್ ಹಾಗೂ ಕನಕಪುರ, ಬಸ್ ನಿಲ್ದಾಣದಲ್ಲಿ ಖಾಲಿಯಿರುವ ವಾಣಿಜ್ಯ ಮಳಿಗೆಗೆ 5 ವರ್ಷಗಳವರೆಗೆ ತೆರೆದ ಸ್ಥಳದ ಮಳಿಗೆಗೆ 03ವರ್ಷಗಳವರೆಗೆ ಇ–ಟೆಂಡರ್ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡಲು **ದಿ:13.10.2021ರಂದು 14:00 ಗಂಟೆಗೆ** ಇ–ಟೆಂಡರ್ ನಡೆಸಲು/ತೆರೆಯಲು ಸಮಯವನ್ನು ನಿಗಧಿಪಡಿಸಲಾಗಿರುತ್ತದೆ. **ದಿ:21.09.2021** ರಿಂದ ಇ–ಟೆಂಡರ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://www.eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. **ದಿನಾಂಕ:11.10.2021ರ ಮಧ್ಯಾಹ್ನ 14:00** ಗಂಟೆಯವರೆಗೆ ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕವಾಗಿರುತ್ತದೆ. ಕೋಡಂಬಹಳ್ಳಿ ಮತ್ತು ಕನಕಪುರ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ/ಮುಂದೆ ಖಾಲಿಯಾಗುವ ವಾಣಿಜ್ಯ ಮಳಿಗೆಗಳಿಗೆ ಮ್ಯಾನ್ಯುಯಲ್–ಟೆಂಡರ್ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡಲು ಸಲುವಾಗಿ **ದಿ:13.10.2021ರಂದು 12:00 ಗಂಟೆಗೆ** ವಿಭಾಗೀಯ ಕಛೇರಿಯಲ್ಲಿ ಅರ್ಜಿದಾರರು/ಪ್ರತಿನಿಧಿಗಳ ಎದುರು ಮ್ಯಾನ್ಯುಯಲ್ ಟೆಂಡರ್‌ನ್ನು ನಡೆಸಲಾಗುವುದು. ಮ್ಯಾನ್ಯುಯಲ್ ಟೆಂಡರ್ ಅರ್ಜಿಗಳನ್ನು **ದಿನಾಂಕ:21.09.2021 ರಿಂದ ದಿನಾಂಕ:11.10.2021ರ 15:00 ಗಂಟೆಗಳವರೆಗೆ** ಪಡೆಯಬಹುದು.

ಹಾಗೂ ಚನ್ನಪಟ್ಟಣ, ಕೋಡಂಬಳ್ಳಿ, ಆನೇಕಲ್, ಕನಕಪುರ ಹಾಗೂ ಕೋಡಿಹಳ್ಳಿ ಬಸ್ ನಿಲ್ದಾಣದಲ್ಲಿ ಖಾಲಿಯಿರುವ ಕಟ್ಟಿದ ವಾಣಿಜ್ಯ ಮಳಿಗೆಗೆ 5 ವರ್ಷಗಳವರೆಗೆ/ತೆರೆದ ಸ್ಥಳದ ಮಳಿಗೆಗೆ 03ವರ್ಷಗಳವರೆಗೆ ಹಾಗೂ ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಖಾಲಿ ಇರುವ ಹೋರ್ಡಿಂಗ್ಸ್/ಗ್ಲೋಸೈನ್/ಪ್ಲಾಟ್ ಫಾರಂ ಫಲಕಗಳ ಜಾಹೀರಾತುಗಳಿಗೆ 05 ವರ್ಷಗಳವರೆಗೆ ಸಂಧಾನದ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ **ದಿ:13.10.2021ರಂದು 12:00 ಗಂಟೆಗೆ** ವಿಭಾಗೀಯ ಕಛೇರಿಯಲ್ಲಿ ಅರ್ಜಿದಾರರು/ಪ್ರತಿನಿಧಿಗಳ ಎದುರು ಸಂಧಾನ ಸಭೆಯನ್ನು ನಡೆಸಲಾಗುವುದು. ಸಂಧಾನ ಅರ್ಜಿಗಳನ್ನು **ದಿನಾಂಕ:21.09.2021 ರಿಂದ ದಿನಾಂಕ:13.10.2021ರ 11:00 ಗಂಟೆಗಳವರೆಗೆ** ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ **ವಿಭಾಗೀಯ ಕಛೇರಿ, ಕರಾರಸಾ ಸಂಸ್ಥೆ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ–562159**ರಲ್ಲಿ ಸಂಪರ್ಕಿಸಲು ಕೋರಲಾಗಿದೆ. ದೂ.ಸಂ:**080–27272308** ಹಾಗೂ ವಿಭಾಗ ಸಂಚಲನಾಧಿಕಾರಿಗಳ ಮೊಬೈಲ್ ಸಂ:**7760990852**.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ರಾಮನಗರ ವಿಭಾಗ : ರಾಮನಗರ

ವಾಸಾಸಂಇ/ಬೆಂನ/1645/ಅಲಕ್‌ನಂದ/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಚಿವರ ಸನ್ಮಾನ ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್

‘20 ಕಾಂಗ್ರೆಸ್ ಶಾಸಕರು ಬಿಜೆಪಿಗೆ ಬರಲು ಸಿದ್ಧ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಪಕ್ಷದ 20 ಶಾಸಕರು ಬಿಜೆಪಿ ಸೇರಲು ಸಿದ್ಧರಾಗಿದ್ದು, ಅವರನ್ನು ಬಲೆ ಹಾಕಿ ಸೆಳೆಯುವ ಕೆಲಸವನ್ನು ಸಚಿವ ಮುನಿರತ್ನ ಅವರಿಗೆ ವಹಿಸಲಾಗಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

ನಗರದ ಚೌಡಯ್ಯಸ್ಮಾರಕ ಭವನದಲ್ಲಿ ಬಿಜೆಪಿ ಒಬಿಸಿ ಮೋರ್ಚಾ ಏರ್ಪಡಿಸಿದ್ದ ಒಬಿಸಿ ಸಚಿವರ ಸನ್ಮಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಕಾಂಗ್ರೆಸ್ ಪಕ್ಷವನ್ನು ಹಿಂದುಳಿದ ವರ್ಗದವರು ದೂರ ಮಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಹಿಂದುಳಿದ ವರ್ಗಗಳ ಅನೇಕ ನಾಯಕರು ಬಿಜೆಪಿಗೆ ಸೇರಲಿದ್ದಾರೆ. ಹಿಂದುಳಿದ ವರ್ಗದ ಕಂಚಿನ ಕಂಠಕ್ಕೆ ಹಕ್ಕು ಧ್ವನಿಯನ್ನು ಪ್ರಧಾನಿ ಮೋದಿ ನೀಡಿದ್ದಾರೆ ಎಂದು ಅವರು ಹೇಳಿದರು.

ಸಿದ್ದರಾಮಯ್ಯ ಅವರ ಅಹಿಂದ ಹೋರಾಟ ಅಧಿಕಾರಕ್ಕೆ ಸೀಮಿತವಾಯಿತು. ಆದರೆ, ನಮ್ಮ ಸರ್ಕಾರವು ವಿದ್ಯಾರ್ಥಿಗಳಿಗೆ ಮೀಸಲಾತಿ, ಹೆಚ್ಚು ಶಿಷ್ಯವೇತನ ನೀಡಿದೆ. ಹಿಂದುಳಿದ ಜಾತಿ ಪಟ್ಟಿಗೆ ಜಾತಿ ಸೇರ್ಪಡೆಯ ಅವಕಾಶವನ್ನೂ ರಾಜ್ಯಗಳಿಗೆ ನೀಡಿದೆ. ಹಿಂದುಳಿದ ವರ್ಗಗಳ ಸಮುದಾಯದ ಜವಾಬ್ದಾರಿಯನ್ನು ಈಶ್ವರಪ್ಪ ಅವರಿಗೆ ನೀಡಿದ್ದೇವೆ. ನೆ.ಲ. ನರೇಂದ್ರ ಬಾಬು ಅವರ ಜತೆಗೂಡಿ ಒಬಿಸಿಯ ಎಲ್ಲ ಸಮುದಾಯದವರನ್ನು ಬಿಜೆಪಿ ತರಲಿದ್ದಾರೆ ಎಂದು ನಳಿನ್ ವಿವರಿಸಿದರು.

ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಮಾತನಾಡಿ ‘ಕಾಂಗ್ರೆಸ್ ಪಕ್ಷವು ಹಿಂದುಳಿದ ವರ್ಗದವರಿಗೆ ಮೋಸ ಮಾಡಿದೆ. ಅದನ್ನು ಒಬಿಸಿ ಸಮುದಾಯದವರೂ ಅರ್ಥ ಮಾಡಿಕೊಂಡಿದ್ದಾರೆ. ಈ ವರ್ಗದ ಜನರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿಗೊಳಿಸಿರುವ ಯೋಜನೆಗಳನ್ನು ತಿಳಿಸಬೇಕು’ ಎಂದು ಹೇಳಿದರು.

ಸಚಿವರಾದ ಕೆ.ಎಸ್.ಈಶ್ವರಪ್ಪ, ಕೋಟಶ್ರೀನಿವಾಸಪೂಜಾರಿ, ವಿ.ಸುನಿಲ್‌ಕುಮಾರ್, ಎಂ.ಟಿ.ಬಿ. ನಾಗರಾಜ್, ಬೈರತಿ ಬಸವರಾಜ್, ಮುನಿರತ್ನ, ಆನಂದಸಿಂಗ್, ಸಂಸದ ಪಿ.ಸಿ. ಮೋಹನ್ ಮತ್ತು ರಾಜ್ಯಸಭೆ ಸದಸ್ಯರಾದ ನಾರಾಯಣ ಅವರನ್ನು ಗೌರವಿಸಲಾಯಿತು.

ಬಿಜೆಪಿ ಒಬಿಸಿ ಮೋರ್ಚಾ ಬುಧವಾರ ಆಯೋಜಿಸಿದ್ದ ಹಿಂದುಳಿದ ಸಮುದಾಯಕ್ಕೆ ಸೇರಿದ ಸಚಿವರು, ಶಾಸಕರು ಮತ್ತು ಸಂಸದರ ಸನ್ಮಾನ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು. ಶಾಸಕ ಜಿ.ಎಚ್. ತಿಪ್ಪಾರೆಡ್ಡಿ, ನಳಿನ್‌ಕುಮಾರ್ ಕಟೀಲ್, ನೆ.ಲ.ನರೇಂದ್ರ ಬಾಬು, ಕೆ.ಎಸ್. ಈಶ್ವರಪ್ಪ ಮುಂತಾದವರು ಇದ್ದಾರೆ.

> **ಮುಂದಿನ ವಿಧಾನ ಸಭೆ ಚುನಾವಣೆಗೂ ಮೊದಲೇ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಎರಡು ಹೋಳಾಗಲಿದೆ**
> **ಕೆ.ಎಸ್.ಈಶ್ವರಪ್ಪ,** ಗ್ರಾಮೀಣಾಭಿವೃದ್ಧಿ ಸಚಿವ

‘ಸ್ವತಂತ್ರ ಚಿಂತನೆಯೊಂದಿಗೆ ಜಾಗೃತರಾಗಿ’

ಹಿಂದುಳಿದ ವರ್ಗ ದೇಶಕ್ಕೆ ಹಲವಾರು ದೊಡ್ಡ ಮತ್ತು ಉತ್ತಮ ನಾಯಕರನ್ನು ನೀಡಿದೆ. ಅಂಥ ನಾಯಕರ ಪೈಕಿ ಪ್ರಧಾನಿ ನರೇಂದ್ರ ಮೋದಿ ಮೇರು ಪಂಕ್ತಿಯಲ್ಲಿದ್ದು, ಮುಕುಟಪ್ರಾಯರ ಎನಿಸಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಒಬಿಸಿ ಮೋರ್ಚಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಹಿಂದುಳಿದ ವರ್ಗದವರನ್ನು ಗುತ್ತಿಗೆ ತೆಗೆದುಕೊಂಡ ರೀತಿಯಲ್ಲಿ ವರ್ತಿಸುತ್ತಿತ್ತು. ಆದರೆ ಪ್ರಧಾನಿ ಮೋದಿ ಬಂದ ಬಳಿಕ ಹಿಂದುಳಿದ ವರ್ಗದವರ ಕುರಿತಾಗಿದ್ದ ಸಾಮಾಜಿಕ ಹಾಗೂ ರಾಜಕೀಯ ಲೆಕ್ಕಾಚಾರವೇ ಬದಲಾಯಿತು ಎಂದರು.

‘ಹಿಂದುಳಿದ ವರ್ಗದವರು ಸ್ವತಂತ್ರವಾಗಿ ಚಿಂತನೆ ಮಾಡಬೇಕು ಮತ್ತು ಜಾಗೃತರಾಗಬೇಕು. ಸಾಮಾಜಿಕ ನ್ಯಾಯ ಮತ್ತು ಸಮನಾದ ಅವಕಾಶ ಕೊಡಿ ಎಂದು ಕೇಳಿ. ಆಗ ನಾವು ನಮ್ಮದೇ ಹಂತದಲ್ಲೇ ಬೆಳೆಯುತ್ತೇವೆ. ಆಕಾಶಕ್ಕೂ ಏಣಿ ಹಾಕುತ್ತೇವೆ ಎಂಬ ಭಾವನೆ ಬರಲಿ’ ಎಂದರು.

‘ಬಿಜೆಪಿ ನಿಮಗೆ ಅವಕಾಶ ಕೊಡುವುದರ ಮೂಲಕ ಹಿಂದುಳಿದ ವರ್ಗದವರಿಗೆ ನೈಜವಾಗಿ, ಸಾತ್ವಿಕವಾಗಿ, ಸಾರ್ಥಕತೆ ತುಂಬಿರುವ ಪ್ರಾಮಾಣಿಕ ಕೆಲಸ ಮಾಡುತ್ತಿದೆ. ಎಲ್ಲಾ ಹಿಂದುಳಿದ ನಾಯಕರ ಜತೆಗೆ ಚರ್ಚೆ ಮಾಡಿ ಹಿಂದುಳಿದ ವರ್ಗದವರ ಅಭಿವೃದ್ಧಿಗೆ ಏನೆಲ್ಲ ಕೆಲಸ ಮಾಡಬೇಕೆಂಬ ಚಿಂತನೆಯೊಂದಿಗೆ ಹಿಂದುಳಿದ ವರ್ಗದ ಅಭಿವೃದ್ಧಿಗೆ ಸಿದ್ಧರಿದ್ದೇವೆ’ ಎಂದರು.

10.06 ಲಕ್ಷ ಡೋಸ್ ಲಸಿಕೆ ವಿತರಣೆ

ಬೆಂಗಳೂರು: ರಾಜ್ಯದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ ಕೋವಿಡ್ ಲಸಿಕೆ ನೀಡಿಕೆಯ ಬೃಹತ್ ಮೇಳದಲ್ಲಿ 10.06 ಲಕ್ಷ ಡೋಸ್‌ಗಳಷ್ಟು ಲಸಿಕೆಯನ್ನು ವಿತರಿಸಲಾಗಿದೆ.

ಒಂದು ತಿಂಗಳಿನಿಂದ ಕೋವಿಡ್ ಲಸಿಕೆ ವಿತರಣೆ ಅಭಿಯಾನಕ್ಕೆ ವೇಗ ನೀಡಲಾಗಿದೆ. ಸೆ.1ರಿಂದ ಸೆ.21ರ ಅವಧಿಯಲ್ಲಿ ಒಂದು ಕೋಟಿ ಡೋಸ್‌ಗಳನ್ನು 18 ವರ್ಷ ಮೇಲ್ಪಟ್ಟವರಿಗೆ ಹಾಕಲಾಗಿದೆ. ಬುಧವಾರ 8,540 ಸರ್ಕಾರಿ ಕೇಂದ್ರಗಳು ಹಾಗೂ 384 ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ವಿತರಿಸಲಾಗಿದೆ. ಈವರೆಗೆ ನೀಡಲಾದ ಲಸಿಕೆಯ ಒಟ್ಟು ಡೋಸ್‌ಗಳ ಸಂಖ್ಯೆ 5.36 ಕೋಟಿ ದಾಟಿದೆ. 3.81 ಕೋಟಿ ಮಂದಿ ಮೊದಲ ಡೋಸ್ ಹಾಗೂ 1.55 ಕೋಟಿ ಮಂದಿ ಎರಡನೇ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ.

18ರಿಂದ 44 ವರ್ಷದವರಲ್ಲಿ 2.07 ಕೋಟಿ ಮಂದಿ ಮೊದಲ ಡೋಸ್ ಹಾಗೂ 51.54 ಲಕ್ಷ ಮಂದಿ ಎರಡನೇ ಡೋಸ್ ಲಸಿಕೆ ಪಡೆದಿದ್ದಾರೆ. 45 ವರ್ಷ ಮೇಲ್ಪಟ್ಟವರಲ್ಲಿ 1.56 ಕೋಟಿ ಮಂದಿ ಮೊದಲ ಡೋಸ್ ಹಾಕಿಸಿಕೊಂಡಿದ್ದಾರೆ. ಅವರಲ್ಲಿ 89.44 ಲಕ್ಷ ಮಂದಿ ಎರಡೂ ಡೋಸ್ ಪೂರ್ಣಗೊಳಿಸಿದ್ದಾರೆ.

ಆರೋಗ್ಯ ಕಾರ್ಯಕರ್ತರಲ್ಲಿ 7.63 ಲಕ್ಷ ಹಾಗೂ ಕೋವಿಡ್ ಮುಂಚೂಣಿ ಯೋಧರಲ್ಲಿ 9.39 ಲಕ್ಷ ಮಂದಿ ಮೊದಲ ಡೋಸ್ ಪಡೆದಿದ್ದಾರೆ. ಇವರಲ್ಲಿ ಕ್ರಮವಾಗಿ 6.41 ಲಕ್ಷ ಮಂದಿ ಹಾಗೂ 6.73 ಲಕ್ಷ ಮಂದಿ ಎರಡನೇ ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ.

ಈ ವರ್ಷದ ಅಂತ್ಯದೊಳಗೆ 18 ವರ್ಷ ಮೇಲ್ಪಟ್ಟ ಎಲ್ಲರಿಗೆ ಎರಡೂ ಡೋಸ್ ಲಸಿಕೆ ವಿತರಿಸುವ ಗುರಿ ಸರ್ಕಾರ ಹಾಕಿಕೊಂಡಿದೆ.

ನಗರದ ಕೋವಿಡ್ ಅಂಕಿ–ಅಂಶ

12,44,364 ▲	ಒಟ್ಟು ಪ್ರಕರಣಗಳು (12,44,052 ನಿನ್ನೆಯ ವಿವರ)
7,375 ▲	ಸಕ್ರಿಯ ಪ್ರಕರಣಗಳು
12,20,878 ▲	ಗುಣಮುಖರಾದವರು
16,110 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	312 ▼
ಗುಣಮುಖ	219 ▼
ಸಾವು	06 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ
ಆಧಾರ: ಕೋವಿಡ್19 ಇಂಡಿಯಾ, ಒರ್ಲ್‌ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	23.05 ಕೋಟಿ ▲	3.35 ಕೋಟಿ
ಸಕ್ರಿಯ ಪ್ರಕರಣ	1.85 ಕೋಟಿ	2.96 ಲಕ್ಷ ▲
ಗುಣಮುಖ	20.73 ಕೋಟಿ ▲	3.28 ಕೋಟಿ ▲
ಸಾವು	47.26 ಲಕ್ಷ ▲	4.46 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.72 ಲಕ್ಷ ▲	27,811 ▲
ಗುಣಮುಖ	5.27 ಲಕ್ಷ ▲	26,475 ▼
ಸಾವು	8,241 ▲	225 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	1.20 ಲಕ್ಷ ▲
ಬ್ರಿಟನ್	31,264 ▼
ಟರ್ಕಿ	29,338 ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	97.15 ▼
ಬ್ರಿಟನ್	13.16 ▼
ಇರಾನ್	5.22 ▼

(*ರಾತ್ರಿ 12 ಗಂಟೆಯವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.38 ಲಕ್ಷ
ತಮಿಳುನಾಡು	35,400 ▲
ದೆಹಲಿ	25,085

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	65.27
ಕೇರಳ	45.59 ▲
ತಮಿಳುನಾಡು	26.50 ▲

ಪ್ರಜಾವಾಣಿ ಗ್ರಾಫಿಕ್ಸ್

ಶಿಕ್ಷಕರ ವರ್ಗಾವಣೆ ನಿಯಂತ್ರಣ ಕಾಯ್ದೆ ತಿದ್ದುಪಡಿ: ಮಸೂದೆ ಅಂಗೀಕಾರ

ಬೆಂಗಳೂರು: ‘ಕಲ್ಯಾಣ ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ಈ ಮಸೂದೆಯ ಲಾಭ ಪಡೆದುಕೊಂಡು ಮೈಸೂರು, ತುಮಕೂರಿಗೆ ವರ್ಗಾವಣೆ ಮಾಡಿಕೊಂಡರೆ ಗತಿಯೇನು. ನಮ್ಮ ಭಾಗದಲ್ಲಿ ಈಗಾಗಲೇ ಶಿಕ್ಷಕರ ಕೊರತೆ ಇದೆ. ವರ್ಗಾವಣೆ ಮಾಡಿಸಿಕೊಂಡರೆ ಸಮಸ್ಯೆ ಮತ್ತಷ್ಟು ಬಿಗಡಾಯಿಸಲಿದೆ’ ಎಂದು ಆ ಭಾಗದ ಹಲವು ಶಾಸಕರು ಆತಂಕ ವ್ಯಕ್ತಪಡಿಸಿದರು.

2019–20ನೇ ಸಾಲಿನಲ್ಲಿ ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆಗೆ ಒಳಗಾದ ಶಿಕ್ಷಕರಿಗೆ ಮೊದಲು ಕೌನ್ಸೆಲಿಂಗ್ ನಡೆಸಿ ವರ್ಗಾವಣೆಯಲ್ಲಿ ಆದ್ಯತೆ ಕಲ್ಪಿಸಲು ‘ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಕಾಯ್ದೆ’ ತಿದ್ದುಪಡಿ ಮಸೂದೆಗೆ ವಿಧಾನಸಭೆಯಲ್ಲಿ ಬುಧವಾರ ಅಂಗೀಕಾರ ನೀಡಲಾಯಿತು. ಈ ವೇಳೆ ಚರ್ಚೆಯಲ್ಲಿ ಪಾಲ್ಗೊಂಡ ಹಲವು ಸದಸ್ಯರು ಈ ಆತಂಕ ಹೊರ ಹಾಕಿದರು.

ಜೆಡಿಎಸ್‌ನ ವೆಂಕಟರಾವ್ ನಾಡಗೌಡ, ‘ನಮ್ಮ ಭಾಗಕ್ಕೆ ಹಲವು ಶಿಕ್ಷಕರು ನೇಮಕಗೊಂಡಿದ್ದಾರೆ. ಈ ಮಸೂದೆ ಲಾಭ ಪಡೆದು ಬೆಂಗಳೂರಿನ ಸುತ್ತಮುತ್ತಲಿನ ಪ್ರದೇಶಕ್ಕೆ ಹಾಕಿಸಿಕೊಳ್ಳುತ್ತಾರೆ. ನಮ್ಮ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಉಂಟಾಗಲಿದೆ’ ಎಂದರು. ಬಿಜೆಪಿಯ ಎ.ಎಸ್.ಪಾಟೀಲ ನಡಹಳ್ಳಿ, ಸೋಮಶೇಖರ ರೆಡ್ಡಿ ಧ್ವನಿಗೂಡಿದರು.

ಕಾಂಗ್ರೆಸ್‌ನ ಅಮರೇಗೌಡ ಬಯ್ಯಾಪುರ, ‘ಇದೊಂದು ಅನಾಹುತಕಾರಿ ಮಸೂದೆ. ನಮ್ಮ ಶಾಲೆಗಳು ಖಾಲಿ ಆಗಲಿವೆ’ ಎಂದರು. ಕಾಂಗ್ರೆಸ್‌ನ ಮಹಾಂತೇಶ ಕೌಜಲಗಿ, ‘ಇದೊಂದು ಉತ್ತಮ ಮಸೂದೆ. ಮೂರು ವರ್ಷಗಳ ಹಿಂದೆ ವರ್ಗಾವಣೆಗೊಂಡು ಬೇರೆ ಕಡೆಗೆ ಹೋದವರಿಗೆ ಅನುಕೂಲ’ ಎಂದರು.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ‘ಈ ತಿದ್ದುಪಡಿ ಮೂಲಕ, 2019–20ನೇ ಸಾಲಿನಲ್ಲಿ ನಡೆದ ವರ್ಗಾವಣೆ ವೇಳೆ ಪ್ರಾಥಮಿಕ ಶಾಲಾ ಶಿಕ್ಷಕನ ಸಂದರ್ಭದಲ್ಲಿ ತಾಲ್ಲೂಕಿನ ಹೊರಗೆ ಅಥವಾ ಪ್ರೌಢಶಾಲಾ ಶಿಕ್ಷಕನ ಸಂದರ್ಭದಲ್ಲಿ ಜಿಲ್ಲೆಯ ಹೊರಗೆ ವರ್ಗಾವಣೆಗೊಂಡ ಶಿಕ್ಷಕರಿಗೆ ಮುಂದಿನ ವರ್ಗಾವಣೆಯ ವೇಳೆ, ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ತಾಲ್ಲೂಕು ಅಥವಾ ಜಿಲ್ಲೆಯ ಒಳಗೆ ಸ್ಥಳ ನಿಯುಕ್ತಿಗೆ ಅನುಕೂಲ ಕಲ್ಪಿಸಲಾಗಿದೆ. ಅಲ್ಲದೆ, ಇತರ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯ ಮೊದಲೇ ಖಾಲಿ ಹುದ್ದೆಗಳ ಲಭ್ಯತೆಗೆ ಅನುಗುಣವಾಗಿ ಅವರು ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕು ಅಥವಾ ಜಿಲ್ಲೆಯಲ್ಲಿ ಸ್ಥಳ ಆಯ್ಕೆಗೆ ಮಾಡಿಕೊಂಡು ಒಂದು ಬಾರಿ ವರ್ಗಾವಣೆಗೆ ಅವಕಾಶ ನೀಡಲಾಗುತ್ತದೆ’ ಎಂದರು.

ಖಾದಿ ಮಂಡಳಿ ನಿರ್ದೇಶಕರ ಸಂಖ್ಯೆ ಇಳಿಕೆ: ಕರ್ನಾಟಕ ಖಾದಿ ಹಾಗೂ ಗ್ರಾಮೋದ್ಯೋಗ ಮಂಡಳಿಯ ನಿರ್ದೇಶಕರ ಮಂಡಳಿಯಲ್ಲಿ ಸರ್ಕಾರೇತರ ಸದಸ್ಯರ ಸಂಖ್ಯೆಯನ್ನು 30ರಿಂದ 12ಕ್ಕೆ ಇಳಿಸುವ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ (ತಿದ್ದುಪಡಿ) ಮಸೂದೆಗೆ ಅಂಗೀಕಾರ ನೀಡಲಾಯಿತು.

ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ಮಸೂದೆಗೂ ಒಪ್ಪಿಗೆ ನೀಡಲಾಯಿತು.

Dayananda Sagar Institutions
Bengaluru
Good education and great careers start from here: DSI and Bengaluru.
BE/MTech, BDS/MDS, BArch/MArch, BCom/MCom, BBA/MBA, BCA/MCA, BSc-PCM
Call: 9916075170 / 8792909134
Email: admissions@dayanandasagar.edu
www.dayanandasagar.edu
ADMISSIONS NOW OPEN

SRINIVAS UNIVERSITY
Admission Centre: 651/51, 11th Cross, West of Kanakapura Road, 7th Block, Jayanagar Bengaluru - 560 032.
e-mail : admission@srinivasuniversity.edu.in
Call : 080-29902933/44/55, 98457 11561, 76761 80236
ADMISSION OPEN 2021-22
Applications are invited for admission to following Programmes
1. PG Diploma in Data Science and Statistics
Eligibility: B.Tech / BCA / B.Sc. / Any Graduation with Computer Science / Mathamatics
2. B.Sc. in Data Science & Cyber Security
Eligibility: Pass in PUC or Plus 2
3. B.C.A., B.B.A., B.Com.
Eligibility: Pass in PUC or Plus 2
For more details contact above address

ಸಮಾಜ ಕಲ್ಯಾಣ ಇಲಾಖೆ
ಡಾ|| ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಹೊಸತನ, ಹೊಸ ಸ್ಪರ್ಶ ಮತ್ತು ನೂತನ ಬ್ರ್ಯಾಂಡಿಂಗ್‌ನೊಂದಿಗೆ ಲಿಡ್‌ಕರ್ ಮಳಿಗೆ ಪ್ರಾರಂಭ
2 ನೇ ಮಹಡಿ, ಡಾ. ಬಾಬು ಜಗಜೀವನರಾಂ ಲಿಡ್‌ಕರ್ ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560052.
ಲಿಡ್‌ಕರ್
ನಂಬಿಕೆ. ನಿರಂತರ.
1976 ರಿಂದ
ದಿನಾಂಕ : 23-09-2021, ಗುರುವಾರ
ಸಮಯ : ಬೆಳಗ್ಗೆ 9 ಗಂಟೆಗೆ
ಮಳಿಗೆ ಪ್ರಾರಂಭ ಮತ್ತು ಲಿಡ್‌ಕರ್ ಹೊಸ ಉತ್ಪನ್ನಗಳ ಬಿಡುಗಡೆ :
ಶ್ರೀ ಕೋಟ ಶ್ರೀನಿವಾಸ ಪೂಜಾರಿ
ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ
ಘನ ಉಪಸ್ಥಿತಿ : ಪ್ರೊ.ಎನ್.ಲಿಂಗಣ್ಣ
ಅಧ್ಯಕ್ಷರು, ಲಿಡ್‌ಕರ್ ಹಾಗೂ ಶಾಸಕರು, ಮಾಯಕೊಂಡ ವಿಧಾನಸಭಾ ಕ್ಷೇತ್ರ

ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಅವರು ಇಲಾಖಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು.

▪ ಅತ್ಯುತ್ತಮ ಗುಣಮಟ್ಟದ ಪ್ರೀಮಿಯಂ ಉತ್ಪನ್ನಗಳು.
▪ ಅಪ್ಪಟ ಚರ್ಮದ ಬ್ರಾಂಡೆಡ್ ಉತ್ಪನ್ನಗಳು. ▪ ರಿಯಾಯಿತಿ ದರದಲ್ಲಿ.
ಪ್ರಾರಂಭಿಕ ಕೊಡುಗೆ:
20% ವಿಶೇಷ ರಿಯಾಯಿತಿ ಎಲ್ಲಾ ಉತ್ಪನ್ನಗಳ ಮೇಲೆ
ದಿನಾಂಕ : 23-09-2021 ರಿಂದ 13-10-2021 ರವರೆಗೆ
ರಾಜ್ಯಾದ್ಯಂತ ಲಿಡ್‌ಕರ್ ಮಳಿಗೆಗಳಿಗೆ - ಇಂದೇ ಭೇಟಿ ನೀಡಿ
ಡಾ. ಹೆಚ್. ನಟರಾಜು, ಕ.ಸಾ.ಸೇ., ವ್ಯವಸ್ಥಾಪಕ ನಿರ್ದೇಶಕರು, ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ
ಡಾ. ರವಿ ಕುಮಾರ್ ಸುರಪುರ, ಭಾ.ಆ.ಸೇ. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ
ಡಾ|| ಎನ್.ನಾಗಾಂಬಿಕಾ ದೇವಿ, ಭಾ.ಆ.ಸೇ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ
“ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು” –ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.
ಕೋವಿಡ್-19, ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ADVT

Growing Together !!
Mercedes-Benz & Sundaram Motors complete 20 Years
#20yrsofStardoM

Mercedes-Benz has been the pioneer of luxury automobiles globally & has always been synonymous with luxury, opulence and success. TVS Sundaram Motors is yet another brand in the automobile industry that has gained the reputation for trust, value and service par excellence in the minds of its customers over decades.

The association between these two renowned automotive brands started on 6th Sep, 2001 at Bangalore, Karnataka and has now reached its milestone 20th year. In the last two decades they have built a strong partnership and have set up 9 facilities across 6 cities in the 2 states of Tamilnadu and Karnataka, making TVS Sundaram Motors the densest network in the southern region.

Till date they have sold - 10,250 Mercedes-Benz cars, rendered 1,68,000 Star services, sold more then 2,000 Pre-owned Stars and employ a 800+ strong team to deliver the best Star Experience. The growth story is even more impressive when you look closer into the numbers. Sundaram Motors took 15 years to sell the first 5000 cars but they leap frogged to manage the next 5000 retails in just 5 years. In 2001 Sundaram Motors started with 4 new car display showroom & in 2021 the company boasts of a 41 new car display capacity. In 2001 Sundaram Motors began with 20 work bays & in 2021 the company has 181 work bays. In the first 15 years Sundaram Motors expanded to 4 branches & during last 6 years Sundaram Motors added 5 more and are future ready with few more projects in the pipeline.

Mr Martin Schwenk, MD & CEO, Mercedes-Benz India, Mr Sharath Vijayaraghavan, Executive Director, TVS Sundaram Motors, Mr Vikas Kumaria, Head, Network development, Mercedes-Benz India.

21 Mercedes-Benz Cars delivered - 8th September, 2021

As part of the 20 year celebrations Sundaram Motors delivered 21 Stars ushering in the 21st year of there partnership. They also launched 4 unique initiatives exclusively for Mercedes-Benz Patrons.

Sundaram Signature Services

- **Sundaram Hues Studio** - One stop-customized colouring solutions as per customers' requests. Under the umbrella of MB Studio.
- **SAFE - Sundaram Assured Future Value** - Customers can drive away with total peace of mind, knowing the Assured Future Repurchase value for his / her vehicle at end of the agreed tenure.
- **Dusk 2 Dawn** - 24x7 Service by Appointment - At customers' service always. Dusk to Dawn is available only at Bangalore whereas the rest of our signature services is available across our network.
- **Sundaram Secured Service** - Special Service Package with a great value proposition for cars that are more than 6 yrs old.

To know more, please connect with
Sundaram Motors @ +91-9148155175 or email us at panchajanya.c@sundarammotors.com

ಆಡಳಿತ– ವಿರೋಧ ಪಕ್ಷಗಳ ಸದಸ್ಯರ ನಡುವೆ ವಾಗ್ಯುದ್ಧ, ಗದ್ದಲ

‘ಚಾಣಕ್ಯ’ ವಿ.ವಿ ಮಸೂದೆ ಅಂಗೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಡಳಿತ– ವಿರೋಧ ಪಕ್ಷಗಳ ಸದಸ್ಯರ ನಡುವೆ ವಾಗ್ಯುದ್ಧ, ಗದ್ದಲ, ಆರೋಪ– ಪ್ರತ್ಯಾರೋಪ, ಕೊನೆಯಲ್ಲಿ ಕಾಂಗ್ರೆಸ್, ಜೆಡಿಎಸ್ ಸದಸ್ಯರ ಸಭಾತ್ಯಾಗದ ಬಳಿಕ ವಿಧಾನ ಪರಿಷತ್‌ನಲ್ಲಿ ಬುಧವಾರ ರಾತ್ರಿ ‘ಚಾಣಕ್ಯ’ ಖಾಸಗಿ ವಿಶ್ವವಿದ್ಯಾಲಯ ಮಸೂದೆ ಧ್ವನಿ ಮತದ ಮೂಲಕ ಅಂಗೀಕಾರಗೊಂಡಿತು.

ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರು ಮಸೂದೆ ಮಂಡಿಸುತ್ತಿದ್ದಂತೆ, ಕಾಂಗ್ರೆಸ್ ಮತ್ತು ಜೆಡಿಎಸ್ ಸದಸ್ಯರು ವಿರೋಧ ವ್ಯಕ್ತಪಡಿಸಿದರು.

‘ಮಸೂದೆಯಲ್ಲಿ ಏನಿದೆ ಎಂದು ಓದಲು ಅವಕಾಶ ನೀಡಿಲ್ಲ. ದಿನದ ಕಾರ್ಯಸೂಚಿಯಲ್ಲಿಯೂ ಮಸೂದೆ ಮಂಡಿಸುವ ಪ್ರಸ್ತಾವ ಇಲ್ಲ’ ಎಂದು ಆಕ್ಷೇಪಿಸಿದರು. ‘ಸಚಿವರು ಮಸೂದೆ ಮಂಡಿಸಿದ್ದಾರೆ, ಚರ್ಚೆ ಮಾಡಿ ಇವತ್ತೇ ಮುಗಿಸಬೇಕು’ ಎಂದು ಸಭಾಪತಿ ಪೀಠದಲ್ಲಿದ್ದ ಎಂ.ಕೆ. ಪ್ರಾಣೇಶ್ ಹೇಳುತ್ತಿದ್ದಂತೆ, ಪೀಠದ ಮುಂಭಾಗಕ್ಕೆ ಬಂದ ಜೆಡಿಎಸ್‌ನ ಮರಿತಿಬ್ಬೇಗೌಡ ತೀವ್ರ ವಿರೋಧ ವ್ಯಕ್ತಪಡಿಸಿದರು.

ಈ ವೇಳೆ ಆಡಳಿತ– ವಿರೋಧ ಪಕ್ಷಗಳ ಸದಸ್ಯರ ನಡುವೆ ವಾಗ್ವಾದ ನಡೆಯಿತು. ಸಮಾಧಾನಪಡಿಸಲು ಮುಂದಾದ ಪ್ರಾಣೇಶ್, ‘ಸದಸ್ಯರು ಪೀಠದ ಎದುರು ಬಂದು ಸಂತೆ ಮಾರುಕಟ್ಟೆ ಮಾಡಬೇಡಿ’ ಎಂದು ಗರಂ ಆದರು. ಸದಸ್ಯರ ಮಾತಿನ ಸಮರ ಕೆಲಹೊತ್ತು ಮುಂದುವರಿಯಿತು.

ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್, ‘ತರಾತುರಿಯಲ್ಲಿ ಈ ಮಸೂದೆ ತರುವ ಅವಕಾಶ ಇರಲಿಲ್ಲ. ಖಾಸಗಿ ವಿಶ್ವವಿದ್ಯಾ-ಲಯ ಸ್ಥಾಪನೆಗೆ ಆತುರ ಏಕೆ’ ಎಂದು ಪ್ರಶ್ನಿಸಿದರು. ‘ಪಾಯಿಂಟ್ ಆಫ್ ಆರ್ಡರ್’ ಪ್ರಸ್ತಾಪ ಮಾಡಿದ ಕಾಂಗ್ರೆಸ್‌ನ ಪಿ.ಆರ್. ರಮೇಶ್, ‘ಮೂರು ದಿನ ಮುಂಚಿತವಾಗಿ ಮಸೂದೆ ಪ್ರತಿ ನೀಡಬೇಕು. ತುರ್ತಾಗಿ ಮಂಡಿಸುವಂತಿಲ್ಲ’ ಎಂದು ಹೇಳಿದಾಗ, ನಿಯಮದ ಬಗ್ಗೆಯೇ ಸುದೀರ್ಘ ವಾದ–ವಿವಾದ ನಡೆಯಿತು.

ಈ ಮಧ್ಯೆ, ಸಚಿವ ಅಶ್ವತ್ಥನಾರಾಯಣ ಮಸೂದೆ ಕುರಿತು ವಿವರಿಸಿದರು. ವಿರೋಧ ಪಕ್ಷದ ಮುಖ್ಯ ಸಚೇತಕ ಎಂ. ನಾರಾಯಣಸ್ವಾಮಿ, ‘ಜೆಡಿಎಸ್ ಶಾಸಕಾಂಗ ಪಕ್ಷದ ಸಭೆ ಇದ್ದರೂ ವಿನಾಯಿತಿ ನೀಡದೆ ಮಸೂದೆಯನ್ನು ಚರ್ಚೆಗೆ ತೆಗೆದುಕೊಳ್ಳಲಾಗಿದೆ. 27 ಪುಟದ ವಿವರ ನೀಡಿ ಓದಲು ಅವಕಾಶ ನೀಡಿಲ್ಲ. ವಿಶ್ವವಿದ್ಯಾಲಯಕ್ಕೆ ಜಾಗ ಎಲ್ಲಿ ನೀಡಲಾಗಿದೆ, ಎಷ್ಟು ಮೊತ್ತಕ್ಕೆ ನೀಡಲಾಗಿದೆ, ಸಂಸ್ಥೆಗೆ ಅಪ್ಪ ಅಮ್ಮ ಯಾರು ಎಂದೂ ತಿಳಿಸಿಲ್ಲ’ ಎಂದರು.

‘ನಮ್ಮ ಮಾಹಿತಿ ಪ್ರಕಾರ ದೇವನಹಳ್ಳಿ ಸಮೀಪದ ಬಳಿ 116.16 ಎಕರೆ ಭೂಮಿ ನೀಡಲು ಮುಂದಾಗಿದೆ. ಕೆಐಎಡಿಬಿ ಕಾರ್ಖಾನೆಗಳ ಸ್ಥಾಪನೆಗೆ 3 ಸಾವಿರ ಎಕರೆ ಭೂಮಿ ವಶಪಡಿಸಿಕೊಂಡಿದ್ದು, ಈ ಜಾಗವನ್ನು ಅತ್ಯಂತ ಕಡಿಮೆ ಹಣಕ್ಕೆ ನೀಡಿ ವಿಶ್ವವಿದ್ಯಾಲಯ ಸ್ಥಾಪನೆಗೆ ಅವಕಾಶ ನೀಡಲಾಗಿದೆ ಎಂಬ ಮಾಹಿತಿ ಇದೆ’ ಎಂದರು.

ಮಧ್ಯಪ್ರವೇಶಿಸಿದ ಸಚಿವ ಅಶ್ವತ್ಥನಾ-ರಾಯಣ, ‘ಮಸೂದೆಯ ವಿಚಾರ ಚರ್ಚೆ ಮಾಡಿ. ಜಮೀನಿನ ಬಗ್ಗೆ ಈಗ ಚರ್ಚೆ ಯಾಕೆ’ ಎಂದರು. ಆಗ ಮತ್ತೆ ವಾಗ್ವಾದ ನಡೆಯಿತು. ಭೂಮಿ ವಿಚಾರವನ್ನು ಕಾಂಗ್ರೆಸ್ ಸದಸ್ಯರು ಪದೇ ಪದೇ ಪ್ರಸ್ತಾ-ಪಿಸುತ್ತಾರೆ ಎಂದು ಆರೋಪಿಸಿ ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು.

‘ಮಸೂದೆ ಬಗ್ಗೆ ಮಾತ್ರ ಮಾತನಾಡಿ. ಇಲ್ಲಿ ಏನು ನಡೆಯುತ್ತಿದೆ’ ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು. ‘ನೀವು ಹೇಳಿದ್ದನ್ನು ಕೇಳಲು ಸಾಧ್ಯವಿಲ್ಲ’ ಎಂದು ನಾರಾಯಣಸ್ವಾಮಿ, ಸಭಾಪತಿ ಪೀಠಕ್ಕೆ ತಿಳಿಸಿದಾಗ ಸಭಾನಾಯಕ, ಮಾಧುಸ್ವಾಮಿ, ಅಶ್ವತ್ಥನಾರಾಯಣ ಮತ್ತಿತರ ಸದಸ್ಯರು, ‘ನಾರಾಯಣಸ್ವಾಮಿ ಅವರನ್ನು ಸದನದಿಂದ ಹೊರಹಾಕಿ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಾತು ಮುಂದುವರಿಸಿದ ನಾರಾಯಣಸ್ವಾಮಿ, ‘ಈ ಸರ್ಕಾರದಲ್ಲಿ ಆಗಿರುವ ದೊಡ್ಡ ಹಗರಣವಿದು. ಈ ವಿಶ್ವವಿದ್ಯಾಲಯದ ಮುಖ್ಯಸ್ಥ ಎಂ.ಕೆ. ಶ್ರೀಧರ್ ಆರೆಸ್ಸೆಸ್ ಕಟ್ಟಾಳು’ ಎಂದಾಗ ಬಿಜೆಪಿ ಸದಸ್ಯರು ಏರು ಧ್ವನಿಯಲ್ಲಿ ವಿರೋಧಿಸಿದರು. ‘ಅವರು ದೇಶದ ನಾಗರಿಕ. ಇಟಲಿಯವರಲ್ಲ’ ಎಂದರು. ‘ಜನರ ಹಣ ಗುಳುಂ ಮಾಡಿದ ಬಿಜೆಪಿ ಸರ್ಕಾರಕ್ಕೆ ನನ್ನ ಧಿಕ್ಕಾರ’ ಎಂದು ಮಾತು ಮುಗಿಸಿದರು.

ವಿರೋಧ ಪಕ್ಷ ನಾಯಕ ಎಸ್.ಆರ್. ಪಾಟೀಲ, ‘ಕೈಗಾರಿಕೆಗೆ ಭೂಮಿ ಪಡೆದು, ಖಾಸಗಿ ವಿಶ್ವವಿದ್ಯಾಲಯಕ್ಕೆ ನೀಡುವುದು ಸರಿಯಲ್ಲ. ರೈತರಿಂದ ಏರೋಸ್ಪೇಸ್ ಅಭಿವೃದ್ಧಿಗೆ ಭೂಮಿ ಖರೀದಿಸಿ, ಅದನ್ನು ಖಾಸಗಿ ವಿಶ್ವವಿದ್ಯಾಲಯಕ್ಕೆ ನೀಡುವುದು ಸರ್ಕಾರದ ಜನವಿರೋಧಿ ನಿರ್ಧಾರ’ ಎಂದು ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಧಿಕ್ಕಾರ ಕೂಗುತ್ತಾ ಪಕ್ಷದ ಇತರ ಸದಸ್ಯರ ಜೊತೆ ಸಭಾತ್ಯಾಗ ಮಾಡಿದರು.

ಅದಕ್ಕೂ ಮೊದಲು ಮಸೂದೆಗೆ ಜೆಡಿಎಸ್‌ನ ಬೋಜೇಗೌಡ ಬೆಂಬಲ ವ್ಯಕ್ತಪಡಿಸಿದರೆ, ಶ್ರೀಕಂಠೇಗೌಡ ವಿರೋಧಿಸಿದರು. ಬಳಿಕ, ‘ಮಸೂದೆ ವಿರೋಧಿಸಿ ನಾವು ಸಭಾತ್ಯಾಗ ಮಾಡುತ್ತೇವೆ’ ಎಂದು ಘೋಷಿಸಿ ಜೆಡಿಎಸ್ ಸದಸ್ಯರು ಸದನದಿಂದ ಹೊರನಡೆದರು.

ಸಹಕಾರಿ ಮಸೂದೆ ಅಂಗೀಕಾರ

‘ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಮಸೂದೆ ವಿಧಾನ ಪರಿಷತ್‌ನಲ್ಲಿ ಅಂಗೀಕಾರಗೊಂಡಿತು. ಮಸೂದೆಯನ್ನು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಮಂಡಿಸಿದರು.

ಅರ್ಚಕರಿಂದ ಮುಜರಾಯಿ ಸಚಿವರಿಗೆ ಮನವಿ

ಧಾರ್ಮಿಕ ಪರಿಷತ್ ವಜಾಗೊಳಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಸಚಿವೆ ಶಶಿಕಲಾ ಜೊಲ್ಲೆ ಅವರಿಗೆ ಅರ್ಚಕರು ಮನವಿ ಸಲ್ಲಿಸಿದರು. ಒಕ್ಕೂಟದ ಮುಖ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಎನ್. ದೀಕ್ಷಿತ್, ಉಪಾಧ್ಯಕ್ಷ ಎಸ್.ಆರ್. ಶೇಷಾದ್ರಿ ಭಟ್ಟರ್, ಪಟ್ಟಾಭಿರಾಮ ಭಟ್ಟರ್, ಭಕ್ತವತ್ಸಲ, ಟಿ.ಕೆ. ಶ್ಯಾಮಸುಂದರ ದೀಕ್ಷಿತ್, ಮುರುಳಿ, ರಾಜನ್, ರಾಜ ದೀಕ್ಷಿತ್, ಗಣೇಶ್ ಇದ್ದರು

ಬೆಂಗಳೂರು: ರಾಜ್ಯ ಧಾರ್ಮಿಕ ಪರಿಷತ್ ಮತ್ತು ಜಿಲ್ಲಾ ಧಾರ್ಮಿಕ ಪರಿಷತ್‌ಗಳನ್ನು ವಜಾ ಮಾಡಬೇಕು ಎಂದು ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ಅವರಿಗೆ ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ–ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟ ಮನವಿ ಸಲ್ಲಿಸಿದೆ.

‘ಈ ಎರಡು ಪರಿಷತ್‌ಗಳು ಅರ್ಚಕರ ಕುಂದು–ಕೊರತೆಗಳನ್ನು ಆಲಿಸುವ ಬದಲು ಕೇವಲ ರಾಜಕೀಯಕ್ಕೆ ಸೀಮಿತವಾಗಿವೆ. ಐಎಎಸ್ ಮತ್ತು ಕೆಎಎಸ್ ಅಧಿಕಾರಿಗಳಿಗೆ ದೇವಸ್ಥಾನಗಳ ಬಗ್ಗೆ ಅರಿವೇ ಇಲ್ಲವಾಗಿದ್ದು, ನಮ್ಮ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ’ ಎಂದು ಒಕ್ಕೂಟ ಆರೋಪಿಸಿದೆ.

‘ಮುಜರಾಯಿ ದೇವಸ್ಥಾನಗಳಲ್ಲಿ ಸಹಾಯಕ ಅರ್ಚಕರ ಪರಿಚಾರಕರ ಹುದ್ದೆ, ಸ್ಥಾನಿಕರು, ಅಡುಗೆಯವರು, ಒಳಾಂಗಣ ನೌಕರರು, ಮಂಗಳವಾದ್ಯ ನುಡಿಸುವವರ ಹುದ್ದೆಗಳು ಅನೇಕ ವರ್ಷಗಳಿಂದ ಖಾಲಿ ಇವೆ. ಇದರಿಂದ ದೇವಸ್ಥಾನದ ಕೆಲಸ ಕಾರ್ಯಗಳಿಗೆ ತೊಂದರೆಯಾಗಿದೆ. ಕೂಡಲೇ ಆ ಹುದ್ದೆಗಳನ್ನು ಭರ್ತಿ ಮಾಡಬೇಕು’ ಎಂದು ಒಕ್ಕೂಟದ ಮುಖ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಎನ್. ದೀಕ್ಷಿತ್ ಅವರು ಮನವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ.

‘ರಾಜ್ಯದ ‘ಎ’, ‘ಬಿ’ ಮತ್ತು ‘ಸಿ’ ದರ್ಜೆ ದೇವಸ್ಥಾನಗಳ ಪ್ರಧಾನ ಅರ್ಚಕರನ್ನು ಆಹ್ವಾನಿಸಿ ಅವರ ಕುಂದು–ಕೊರತೆಗಳನ್ನು ಆಲಿಸಬೇಕು. ಪ್ರತಿವರ್ಷ ನಡೆಯಬೇಕಿರುವ ರಥೋತ್ಸವ, ಪವಿತ್ರೋತ್ಸವ ಮೊದಲಾದ ಸೇವೆಗಳನ್ನು ಕೋವಿಡ್ ನಿಯಮಗಳಿಗೆ ಅನುಗುಣವಾಗಿ ಆಯಾ ಸೇವಾಕರ್ತರನ್ನು ಮಾತ್ರ ಕರೆಸಿ ನಡೆಸಲು ಸೂಕ್ತ ಆದೇಶ ನೀಡಬೇಕು. ರಾಜ್ಯದ ‘ಎ’ ಮತ್ತು ‘ಬಿ’ ದರ್ಜೆ ದೇವಸ್ಥಾನಗಳ ಆದಾಯದಲ್ಲಿ ಶೇ 35ರಷ್ಟನ್ನು ಸಿಬ್ಬಂದಿ ವೇತನಕ್ಕೆ ನೀಡಲಾಗುತ್ತಿದೆ. ಇದನ್ನು ಶೇ 45ಕ್ಕೆ ಹೆಚ್ಚಿಸಿ 6ನೇ ವೇತನ ಆಯೋಗ ಜಾರಿಗೊಳಿಸಬೇಕು’ ಎಂದು ಮನವಿ ಮಾಡಿದ್ದಾರೆ.

‘ಸಿ’ ವರ್ಗದ ದೇವಾಲಯಗಳಿಗೆ ತಿಂಗಳಿಗೆ ₹4 ಸಾವಿರ ಇರುವ ತಸ್ತೀಕ್ ಮೊತ್ತವನ್ನು ₹5 ಸಾವಿರಕ್ಕೆ ಹೆಚ್ಚಿಸಬೇಕು ಎಂದು ಆಗ್ರಹಿಸಿದ್ದಾರೆ.

‘ಅನಂತ ಕುಮಾರ್ ಬಿಜೆಪಿ ಕಾರ್ಯಕರ್ತರಿಗೆ ಸ್ಫೂರ್ತಿ’

ಬೆಂಗಳೂರು: ಕೇಂದ್ರದ ಮಾಜಿ ಸಚಿವ ದಿವಂಗತ ಎಚ್.ಎನ್. ಅನಂತ ಕುಮಾರ್ ಅವರ ಜತೆಗಿನ ಒಡನಾಟ, ಸಾಧನೆಗಳು ಹಾಗೂ ಸೇವೆಯನ್ನು ಪ್ರಮುಖರು, ರಾಜಕಾರಣಿಗಳು ಮತ್ತು ವಿವಿಧ ಕ್ಷೇತ್ರಗಳ ತಜ್ಞರು ಬುಧವಾರ ಆತ್ಮೀಯವಾಗಿ ಸ್ಮರಿಸಿದರು.



ಅನಂತ ಕುಮಾರ್

ಅದಮ್ಯ ಚೇತನ ಮತ್ತು ಅನಂತಕುಮಾರ್ ಪ್ರತಿಷ್ಠಾನ ಆಯೋಜಿಸಿದ್ದ ಅನಂತ ಕುಮಾರ್ ಅವರ 62ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಬಿಜೆಪಿ ಬಲಪಡಿಸುವಲ್ಲಿ ಅವರು ವಹಿಸಿದ ಪ್ರಮುಖ ಪಾತ್ರ ಮತ್ತು ಕೇಂದ್ರ ಸಚಿವರಾಗಿ ಅವರು ಸಲ್ಲಿಸಿದ ಸೇವೆಯನ್ನು ನೆನಪಿಸಿ-ಕೊಳ್ಳಲಾಯಿತು. ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮಾತನಾಡಿ, ‘ಪಕ್ಷ ಸಂಘಟನೆಯಲ್ಲಿ ಬಲಿಷ್ಠ ಶಕ್ತಿಯಾಗಿದ್ದ ಅನಂತ ಕುಮಾರ್ ಅವರು, ಜನನಾಯಕರಾಗಿದ್ದರು. ಸಾವಿರಾರು ಕಾರ್ಯಕರ್ತರಿಗೆ ಸ್ಫೂರ್ತಿದಾಯಕರಾಗಿ-ದ್ದರು’ ಎಂದು ಸ್ಮರಿಸಿದರು.

ರಾಷ್ಟ್ರ ಮಟ್ಟದಲ್ಲಿ ಮಹತ್ವದ ಖಾತೆಗಳನ್ನು ನಿಭಾಯಿಸಿದ್ದ ಅನಂತ ಕುಮಾರ್ ಅವರು, ಸದಾ ಜನಪರ ಕಾಳಜಿಯ ವ್ಯಕ್ತಿತ್ವ ಹೊಂದಿದ್ದರು. ಅವರು ನಮಗೆಲ್ಲರಿಗೂ ಸದಾ ಪ್ರೇರಣೆಯಾಗಿದ್ದಾರೆ.

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ತೇಜಸ್ವಿನಿ ಅನಂತ ಕುಮಾರ್ ಅವರ ಸೇವೆ ರಾಜ್ಯಕ್ಕೆ ಮತ್ತು ದೇಶಕ್ಕೆ ಬೇಕು. ಅನಂತ ಕುಮಾರ್ ಅವರ ಕನಸುಗಳನ್ನು ಈಡೇರಿಸಲು ಅವರು ಶ್ರಮಿಸಬೇಕು.

ಮುರುಗೇಶ್ ನಿರಾಣಿ, ಸಚಿವ

‘ರಾಜಕಾರಣದಲ್ಲಿ ಜನರ ವಿಶ್ವಾಸ ಗಳಿಸುವುದು ಸುಲಭವಲ್ಲ. ವಿಶ್ವಾಸ ಗಳಿಸಿದರೂ ಕಾಯಂ ಆಗಿ ಉಳಿಸಿಕೊಳ್ಳು-ವುದು ಇನ್ನೂ ಕಷ್ಟ. ಅನಂತ ಕುಮಾರ್ ಅವರು ಈ ವಿಷಯದಲ್ಲಿ ಎಂದಿಗೂ ನಿರಾಶೆ ಮಾಡಲಿಲ್ಲ. ಜನರ ಮಧ್ಯೆ ಇದ್ದು, ಅವರ ಮತ್ತು ಪಕ್ಷದ ವಿಚಾರಗಳನ್ನು ಬಿಂಬಿಸಿ ವಿಶ್ವಾಸಾರ್ಹತೆ ಗಳಿಸಿದ್ದರು’ ಎಂದು ಬಣ್ಣಿಸಿದರು.

ಸಚಿವರಾದ ಕೆ.ಎಸ್. ಈಶ್ವರಪ್ಪ, ಗೋವಿಂದ ಕಾರಜೋಳ, ಮುರುಗೇಶ ನಿರಾಣಿ, ಬಿ.ಸಿ. ನಾಗೇಶ್, ಶಾಸಕ ಎಲ್.ಎ. ರವಿಸುಬ್ರಹ್ಮಣ್ಯ ಅವರು, ಅನಂತಕುಮಾರ್ ಅವರು ಸುಮಾರು ಎರಡೂವರೆ ದಶಕಗಳ ಕಾಲ ರಾಷ್ಟ್ರ ರಾಜಕಾರಣ ಮತ್ತು ರಾಜ್ಯ ಬಿಜೆಪಿಯಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದ ಬಗ್ಗೆ ಸ್ಮರಿಸಿದರು.

ತೇಜಸ್ವಿನಿ ಅನಂತಕುಮಾರ ಉಪಸ್ಥಿ-ತರಿದ್ದರು. ಎಸ್ಸೆಸ್ಸೆಲ್ಸಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಈ ಸಂದರ್ಭದಲ್ಲಿ ಪ್ರತಿಭಾ ಪುರಸ್ಕಾರ ನೀಡಲಾಯಿತು. ಆನ್‌ಲೈನ್ ವೇದಿಕೆ ಮೂಲಕ ಈ ಕಾರ್ಯಕ್ರಮ ನಡೆಯಿತು.

ದೀಪಾವಳಿ, ದಸರಾಗೆ ಸಾವಿರ ವಿಶೇಷ ಬಸ್

ಬೆಂಗಳೂರು: ದಸರಾ ಹಾಗೂ ದೀಪಾವಳಿ ಪ್ರಯುಕ್ತ ಕೆಎಸ್‌ಆರ್‌ಟಿಸಿ ಹೆಚ್ಚುವರಿಯಾಗಿ 1 ಸಾವಿರ ವಿಶೇಷ ಬಸ್‌ಗಳ ಕಾರ್ಯಾಚರಣೆಗೆ ವ್ಯವಸ್ಥೆ ಮಾಡಿದೆ. ದಸರಾ ಹಬ್ಬಕ್ಕೆ ಅ.13ರಿಂದ 21ರವರೆಗೆ ಮತ್ತು ದೀಪಾವಳಿ ಹಬ್ಬಕ್ಕೆ ಅ.29ರಿಂದ ನ.7ರವರೆಗೆ ವಿಶೇಷ ಬಸ್‌ಗಳು ಕಾರ್ಯಾಚರಣೆ ಮಾಡಲಿವೆ ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

ಎನ್‌ಎಚ್‌ಎಂ: ಸಿಬ್ಬಂದಿಗೆ ಹೆಚ್ಚುವರಿ ವೇತನ

ಬೆಂಗಳೂರು: ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ (ಎನ್‌ಎಚ್‌ಎಂ) ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಹಾಗೂ ಹೊರಗುತ್ತಿಗೆ ಸಿಬ್ಬಂದಿಯ ವೇತನವನ್ನು ಶೇ 5ರಿಂದ ಶೇ 15 ರಷ್ಟು ಹೆಚ್ಚಿಸಲಾಗಿದೆ.

ಈ ಬಗ್ಗೆ ಎನ್‌ಎಚ್‌ಎಂ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ಆದೇಶ ಹೊರಡಿಸಿದ್ದಾರೆ. 2020–21ನೇ ಸಾಲಿನಲ್ಲಿ ₹ 15 ಸಾವಿರಕ್ಕಿಂತ ಕಡಿಮೆ ವೇತನ ಪಡೆಯುತ್ತಿದ್ದ ನೌಕರರಿಗೆ ಶೇ 15 ರಷ್ಟು ಹೆಚ್ಚುವರಿ ಮೊತ್ತವು ಅನುಮೋದನೆಗೊಂಡಿ-ದೆ. ಒಂದು ವರ್ಷ ಪೂರೈಸಿದವರಿಗೆ ಶೇ 5ರಷ್ಟು ಹೆಚ್ಚುವರಿ ವೇತನ ನೀಡಲಾಗುವುದು ಎಂದು ತಿಳಿಸಿದ್ದಾರೆ.

2021–22ನೇ ಸಾಲಿಗೆ ಅನ್ವಯವಾ-ಗುವಂತೆ 3 ವರ್ಷ ಸೇವೆ ಪೂರೈಸಿದವರಿಗೆ ಶೇ 10 ರಷ್ಟು ಹಾಗೂ 5 ವರ್ಷ ಪೂರ್ಣಗೊಳಿಸಿದವರಿಗೆ ಶೇ 5 ರಷ್ಟು ಸೇವಾನುಭವ ಭತ್ಯೆಯನ್ನು ನೌಕರರಿಗೆ ಹಂಚಿಕೆ ಮಾಡುವಂತೆ ಸೂಚಿಸಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Financial Services

INVEST 20K to 5Lakhs in Trading, Multiple Businesses. Weekly/Monthly 10%Secured Fixed Returns.Investors, Referral, Freelancers Welcome. Good Regular Income. Contact:-7892818780. Bengaluru.

Business Offers

Finance

NRI'S INVESTMENT And Finance AvailableOn LowInterest AgainstProperties, Land& Building,Sites,Flats, Converted& AgricultureLandsCall: 7411265189

JOB OPPORTUNITIES

General

REQUIRED SUPERVISOR for reputed corporate Travels to Manage Employee Transportation. Min. Experience 2 years. 7338585858

Marketing & Sales

WANTED MARKETING executive for Domestic Brand PlusS based in Delhi. Contact 9810085041

Part-Time Jobs

LIMITED MNC COMPANY Lost Job, Provide Work From Home Earn 30K to35K: 7019215243/ 9886641282

PERSONAL

Change of Name

I, MAHENDRA HEGGADE. M.B., S/o Beeraiah. C., Maregowdanadoddi, Channapatna Taluk, Ramanagara District, Iggaluru Post-562138. I have changed my name MAHENDRA HEGGADE to MAHENDRA HEGGADE. M.B., and my father name BEERAIAH to BEERAIAH. C., vide affidavit dated 21/9/2021 before Notary B.K.G.Raju, Doddaballapura

I, M. Manjunath S/o. B. Munikrishna r/at No.92, Ramanjinappa Layout, A.Narayanapura, Bengaluru-560016, have changed my minor Daughter's name from POOJITHA. M to MAYURI. M vide affidavit 22/09/2021 before notary G. Rajendra, Bengaluru.

I, DEVARAJAMMA D/o. Siddalingaiah r/at #34, Ram Mandir Road, Kaverinagar, BSK 3rd stage, Bangalore-560085, wrongly mentioned my name as Lakshmi in some documents. Here declaring my actual correct name is DEVARAJAMMA., vide affidavit 01/09/2021 notary Jayappa. A, Bangalore. Henceforth my name is consider as DEVARAJAMMA only.

I, RAJENDRA S/o. Chandrakanth residing at Krishna Mystiq, Flat No.402, B Block, Chikkathogur main road, Pragathi Nagar, Electronics City, Bangalore-560100 have changed my name to RAJENDRAKUMAR DABARABADI vide affidavit dated 22/09/2021 before notary S. Samuel Solomon, Bangalore

I, TABASSUM Pasha D/o Mizan Noor Shaikh Residing at No 37, 7th Cross, Rose Garden, Neelasandra, Viveknagar, Bangalore-560047. Have changed my name to TANNU SHAIKH D/o Mizan Noor Shaikh vide affidavit dated 22.09.2021 before notary A.R.Muneer Ahmed, Bangalore

I, GENETURANS LAZMAS SMITH s/o Creswell Smith residing at No.14, 2nd Cross, Opp.Yasho Keerthi Apts, Babusapalya, Kalyannagar, Bangalore-43 have changed my name to GENE TERRANCE SMITH vide affidavit dated 21-09-2021 before notary B.Seshagiri, Bangalore

I, RAVI. T., Residing at kasavanahalli village, Hanumanthapura Post, Jagaluru Taluk, Davanagere Dist. have changed my name as DEVENDRAPPA. T., vide affidavit dated 21/9/2021 before Notary H.Janardhan, Bangalore

I,RAVI .K S/o Karigowda residing at Madegowdanakoppalu Village, Dudda Hobli, Modachakanahalli post, Mandya Taluk, Mandya District have changed my minor son's name from KUSHAL GOWDA M.R to YASHAS GOWDA M.R affidavit dated 22.09.2021 notary S.R.Ravikumar, Bangalore-40

MANJU KAWAR W/o 14835098P– HAV– JITENDRA SINGH RATHORE R/a Guda Ajba, Bansi Jojawar, Pali, Rajasthan changed name from MANJU KAWAR to MANJU KUWAR notary KV Mani Bangalore.

I, R. Ramamurthy S/o. G. Rangappa residing at No.39, A Cross, A Main, near Christ School, Balaji Nagar, DRC Post, Bangalore- 560029, Have changed my minor Son's name from GOUTHAM. R to GOWTHAM. R vide affidavit dated 22/09/2021 before notary K.V. Mani, Bengaluru.

14835098P– HAV– JITENDRA SINGH RATHORE at ASC Centre (South) 3 TB changed my minor Daughter's name SHAKSI to SAKSHI notary KV Mani Bangalore.

I, SUSHMA Anand Bhoje resident of #D-1002, Vaishnavi Terraces, No.179 & 180, Dollars Colony, J. P. Nagar 4th Phase, Bangalore-560078, have changed my name from SUSHAMA ANAND BHOJE to SUSHMA ANAND BHOJE vide affidavit dated 18/09/2021 before notary Hegde Ganapati Venkatraman, Bengaluru

Lost

Loss of share certificates of APOLLO HOSPITALS ENTERPRISE LIMITED CHENNAI

Notice is hereby given that share certificates for 200 (Two Hundred only) equity shares of Apollo Hospitals Enterprise Limited, standing in the name of Late Prof Y.L.V.Pandit and bearing the following distinctive numbers have been lost. We request the Company to issue duplicate share certificate in lieu thereof and also effect transmission of said equity shares in our name. Any person who has a claim for the said shares should lodge such claim to the company by written communication addressed to **Apollo Hospitals Enterprise Limited, Secretarial Department, Ali Towers, 3rd Floor, Chennai 600 006** within 15 days from the date of this notice, failing which the company will proceed to issue duplicate share certificate in lieu of the Original Share Certificates as requested by me without further information.
Folio No. 5855
Name of the Holder
Y.L.V. PANDIT
Share Certificate No.355857
Distinctive Nos. 6373981-6374180
No.of Share: 200
(Legal heir of the Shareholder)
Dr. Sridhar Pandit
Place: Bangalore
Date: 23-09-2021

LOST

Original KIADB Receipt and other related Documents in the Name **MUSTAQ AHMED and JABEENA BEGUM** at Koramangala 5th Block. **Finder please contact: 9972883364 / 7760328126**

PUBLIC NOTICE

PUBLIC NOTICE

The general public is hereby informed that my client Mr.Shyam Thota S/o. Sri. Sadananda No.20, DWARAKAMAYI Opp. PV Shetty Godown, Pattanagere, Rajarajeshwari Nagar, Bengaluru has lost his 10th page of his original sale deed (parent document) which is registered on 11.06.2003, as Document No.BNG-(U)-KNGR/7752/2003-04. If found kindly return to the below address to his Counsel B.A. Chandrashekar, No.7, 1st Floor, Sirur Park Road, Seshadripuram, Bengaluru-560020, Mob.No. 9448432937.
Sd/-
[B. A. CHANDRA SHEKAR]
Advocate
Place: Bangalore
Date: 23-09-2021

NOTICE
TATA ELXI LIMITED
Registered Office: ITPB Road, White Field, Bangalore-560 048
NOTICE is hereby given that the certificate(s) for the under mentioned securities of the Company has/have been lost/mislaid and the holder(s) of the said securities / applicant(s) has/have applied to the Company to issue duplicate certificate(s)
Any person who has a claim in respect of the said securities should lodge such claim with the Company at its Registered Office within 15 days from this date, else the Company will proceed to issue duplicate certificate(s) without further intimation.
Name(s) of holder(s) and Jt. holder(s) if any
K. SANTHANAM, S. UMAMAHESWARI
Kind of Securities and face value
SHARE CERTIFICATES Rs. 2000.00
No. Securities 2 Nos
Distinctive Numbers(s)
0012596211 to 0012596310 and 0018837521 to 0018837620
Name(s) of holder(s) /Applicant(s)
K. SANTHANAM, S. UMAMAHESWARI
Place: Kumbakonam
Date: 21-09-2021

PUBLIC NOTICE
It is Informed to the General Public at large, that I have lost the original document i.e., Registered Sale Deed bearing document No. GAN-1-02648/2004-05, Ref: Book No.1, registered on 25/08/2004. It is notified that if anybody finds the same, please return to the undersigned or the nearest police station. It is notified & informed to the General Public not to deal with anybody in respect of the above said Sale Deed in any manner & whoever doing so is doing it at there own cost & risk. The finder of the document will be suitably rewarded.
E-mail: ravimalali@hotmail.com

CORRIGENDUM
In respect of PUBLIC NOTICE published in Deccan Herald and Prajavani dt. 28.08.2021, of my client M. Prasanna Kumar, S/o. Late G. Mallappa, R/at No. 13, 2nd Main Road, 3rd Cross, Kengeri Upanagara, Bangalore - 560 060.
The Lost original document to be read as 1) Sale deed dated 19-11-1990 registered as **Document No. 4069/1990-91,** Book 1, Vol-108, pages 275-276 in the office of the Sub-Registrar Kengeri, Bangalore, it is wrongly published as **Document No. 4096/90.**
Sd/- **B S Budihal,** Advocate
No.4-1/3, 2nd Floor, Sujatha Complex, 1st Main Road, Gandhinagar, Bangalore-560009. M: 98456 25102

PUBLIC NOTICE
My clients are negotiating to purchase the Property, which is more fully described in the Schedule below from its owners **1) Mrs. R. Jayavanthi, 2) Mrs. R.Deepika and 3) R. Manoj,** all residing at No.52, Dacosta Layout, 2nd Cross, Wheeler Road Extension, Cooke Town, Bengaluru-560 084.
Any person/s having any right, title, interest, lien, charge or claim whatsoever in, upon or to the Schedule Property or to any portion thereof, by way of any easement or under agreements, arrangements, lease, trust, inheritance , gift, partition, bequest, possession, mortgage, exchange or under his/her/its/their objection/s claim/s, in writing to me at the under mentioned address, through Registered Post, along with the supporting documentary evidence, within 15 days of the issuance of this notice, failing which my clients will proceed on the basis that are no claims over the Schedule Property.
SCHEDULE
All that property presently bearing Municipal No.37, old No.49, situated at Coles Road, now Netaji Road, Pulikeshi Nagar Ward No.91, Bengaluru, PIC No.91-94-37, measuring East to West: 29 Feet and North to South: 55'6", in all measuring 1609.50 square feet and bounded as follows:
ON THE EAST: Portion of Premises No.49, Coles Road; WEST: Tannery Road; NORTH: Property belongs to B.G. Basavaraj, SOUTH : Property bearing No.5-A, Tannery Road; Bengaluru.
(K.S. MADANA GOPAL)
Advocate,
No.1, Ground Floor, Royal Park
No.34, Park Road,
Bengaluru-560 051
Ph: No. 22864065

PUBLIC NOTICE
My client is intending to purchase Schedule Property from **K.M. Lakshminarayana, K.M. Meenakshaiah, K.M. Rukmangada,M.Lakshmikantha** sons of Late K.P. Munipapaiah and their legal heirs residing at No. 47, Chowlagalli, Ramannapet, Bangalore – 560 002. This Public Notice is hereby given for the information of General Public that any persons or Banks or Financial Institutions having any right, title, interest or claim against the Schedule Property, may contact with documentary proof in support of his/her/their claim. If no claim is so lodged with us within the said period of 15 days from this date of publication, it shall be presumed by my client that no one has any claim against the Schedule Property.
SCHEDULE PROPERTY :
All that piece and parcel of immovable Property bearing Old No. 43, New No.47, Chowlagalli, Ramannapet BBMP Old Ward No.47, New Ward No.119, Bangalore, **Site measuring** East to West: 32 feet 2 inches on northern side, 28 feet 7.5 inches on southern side, North to South : 55.5 feet, **Bounded on:** East By : House belongs to N.P. Guru lingappa, West By : House belongs to Ramanna, North By : House belongs to Chandragavi Chikka veeranna and Purle Giriyappa, South By : Chowlagalli Road **Sd/- P. Narasimhaiah,** Advocate,
No.1,18th Cross, Malleswaram, Bangalore- 560055
Ph: 080 23343461/23343467
Mobile: 9448273366
Mail: p.narasimhaiah@yahoo.co.in
Date :-21.09.2021
Place:- Bangalore

PUBLIC NOTICE
The Public in general is hereby informed that I, **R.Shreyas,** am negotiating to purchase the below mentioned schedule property from Dr. K Lokesh practicing at Dr. K Lokesh Healthcare Centre, #118 B.T. Krishnappa Building, Abbigere Main Road, K.G. Halli, Bangalore - 560015. Dr. Lokesh K claims that he is the absolute owner of the said property.
Any person having any rights, title, claim or interest in the said property, by way of sale, inheritance, possession, succession, mortgage, lien, lease, gift or otherwise howsoever in respect of the same, shall intimate the objection in writing to the **R.Shreyas, Contact No: 9902532426** with supporting documents thereof within 10 days from the date of publication of this notice or else any such claims by anyone shall not be considered and shall be deemed to have been waived and/or abandoned and I shall proceed to conclude negotiations and no claims shall be entertained thereafter.
Property Schedule
Site No. 242 formed in Sy. No. 25/1 in Karnataka State "D" Group Employees Central Association Layout, Srigandhadhakaval Village, Yeshwanthpur Hobli, Bangalore North Taluk, measuring East to West 40ft, North to South 30ft. Total Area of 1200 Sq.ft. and bounded as follows:
On the East by: Site No. 246 West by: Road, North by: Site No. 241 South by: Site No. 243.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH ಪ್ರಜಾವಾಣಿ **Classifieds**

EFFECTIVE FROM JUNE 3rd, 2020

DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

CONNECT ಕ್ಲಾಸಿಫೈಡ್ಸ್

Grand Flea Market in Collaboration with Chittara Presents
ಬೆಂಗಳೂರು ಆರ್ಟ್ಸ್ ಅಂಡ್ ಕ್ರಾಫ್ಟ್ಸ್ ಮೇಳ
BANGALORE ARTS & CRAFTS MELA
17th to 26th Sept 2021
11 AM - 7 PM
Karnataka Chitrakala Parishath
Kumara Krupa Road, Bengaluru
80+ Stalls | Live Performance | Much More..!
Your safety is our Priority, We have taken precaution & Safety Measures to prevent transmission of covid19
For Details Contact : 9611835597 / 6364685716 | Direct from The Artisans
Visit and experience a rare contemporary form of Arts & Crafts, Clothing, Home Decor, Furniture, Handicrafts, Traditional Apparels, Women's Wear, Jewellery, Sarees, Men's Wear, Kids Wear, Toys, Organic Product, Fashion Accessories & plenty more products direct from the makers from all across India.
Live Performance Details

The Shadow Show Live
Date : 25th Sept | Timings: 5.30 pm - 6.30 pm

Djembe Live Performance
Date : 26th Sept | Timings: 5 pm - 7 pm

80+ Shopping Stalls | Live Performance | Much More!

ಬೆಂಗಳೂರಿನಲ್ಲಿ ಮಾರಾಟ
ಕಾಂಚೀಪುರಂ ಎ.ಜಿ. ಬಾಬು ಸಾಹ್
ರೇಷ್ಮೆ ಸೀರೆ ವ್ಯಾಪಾರಿಗಳು
ದಸರಾ ಹಬ್ಬದ ಮಾರಾಟ
ಶ್ರೀ ಹರಿ ಕಲ್ಯಾಣ ಮಂಟಪ
ನಂ. 5–136/17, 30ನೇ ಮೈನ್, ಬನಶಂಕರಿ 3ನೇ ಹಂತ, ಬೆಂಗಳೂರು–560 085. ಮೊ. : 080-26693378, 26917845
ದಿನಾಂಕ: 24,25,26,27,28 & 29 ಸೆಪ್ಟೆಂಬರ್ 2021
ಬೆಳಿಗ್ಗೆ 11.00 ರಿಂದ ರಾತ್ರಿ 7.00 ರವರೆಗೆ
ಯಾವುದೇ ವಿನಿಮಯವಿಲ್ಲ, ಹಿಂತಿರುಗಿಸುವುದಿಲ್ಲ
ಮಾಸ್ಕ್ ಕಡ್ಡಾಯ
ಮಕ್ಕಳಿಗೆ ಹಾಗೂ 60 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳಿಗೆ ಪ್ರವೇಶವಿಲ್ಲ
At a time only 50 persons are allowed
ಕೈಚೀಲ ಮತ್ತು ಸಾಮಾನುಗಳನ್ನು ಒಳಗೆ ಅನುಮತಿಸಲಾಗುವುದಿಲ್ಲ
ನಮ್ಮ ಚಾನೆಲ್ ಅನ್ನು ಸಬ್‌ಸ್ಕ್ರೈಬ್ ಮಾಡಿ
ಎ.ಜಿ. ಬಾಬು ಸಾಹ್ YouTube
ಹೊಸ ಮಾರಾಟ ಮತ್ತು ಮಾಹಿತಿಗಾಗಿ ಬೆಲ್ ಐಕಾನ್ ಅನ್ನು ಒತ್ತಲು ಮರೆಯದಿರಿ
ರಿಯಾಯಿತಿ ಸೀರೆಗಳು ಸಹ ಲಭ್ಯವಿದೆ

ನಮ್ಮ ಮೆಟ್ರೊ ಎರಡನೇ ಹಂತದ ವಿಸ್ತರಣೆ • ಸುರಂಗದ ಮೊದಲ ಭಾಗ ಪೂರ್ಣ

ಸುರಂಗದಿಂದ ಹೊರ ಬಂದ 'ಊರ್ಜಾ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬುಧವಾರ ಸಮಯ ಬೆಳಿಗ್ಗೆ 10.15 ಆಗುತ್ತಿದ್ದಂತೆಯೇ ಶಿವಾಜಿನಗರದಲ್ಲಿ ಮೆಟ್ರೊ ನಿಲ್ದಾಣ ನಿರ್ಮಾಣವಾಗುತ್ತಿರುವ ಪರಿಸರದಲ್ಲಿ ಕಾರ್ಮಿಕರ ಕೇಕೆ ಮುಗಿಲುಮುಟ್ಟಿತು. 'ನಮ್ಮ ಮೆಟ್ರೊ' ಎರಡನೇ ಹಂತದ ವಿಸ್ತರಣೆ ಯೋಜನೆಯ ಸುರಂಗ ಮಾರ್ಗ ಮೊದಲ ಭಾಗವನ್ನು ಕೊರೆಯುವ ಕೆಲಸ ಪೂರ್ಣಗೊಂಡ ಸಡಗರವನ್ನು ತಡೆಯಲಾಗದೇ ಅವರು ಕುಣಿದು ಕುಪ್ಪಳಿಸಿದರು.

ಕಂಟೋನ್ಮೆಂಟ್‌ನಲ್ಲಿ ಮೆಟ್ರೊ ನಿಲ್ದಾಣ ನಿರ್ಮಾಣವಾಗಲಿರುವ ಸ್ಥಳದಲ್ಲಿ ಸುರಂಗ ಕೊರೆಯುವ ಸಲುವಾಗಿ 2020ರ ಜುಲೈನಲ್ಲಿ ನೆಲದಡಿ ಸೇರಿದ್ದ 'ಊರ್ಜಾ' ಯಂತ್ರ ಸರಿ ಸುಮಾರು 14 ತಿಂಗಳ ಬಳಿಕ ಶಿವಾಜಿನಗರದಲ್ಲಿ ನೆಲದಿಂದ ಹೊರ ಬಂದಿದೆ. ಕೋವಿಡ್ ಬಿಕ್ಕಟ್ಟಿನ ನಡುವೆಯೂ ಸುರಂಗ ಕೊರೆಯುವ ಕಾಮಗಾರಿಯಲ್ಲಿ ತೊಡಗಿದ್ದ ಕಾರ್ಮಿಕರಿಗೆ ಹಾಗೂ ಅಧಿಕಾರಿಗಳಿಗೆಲ್ಲ ದೊಡ್ಡ ಸವಾಲನ್ನು ಯಶಸ್ವಿಯಾಗಿ ಮುಗಿಸಿದ ಸಂತೃಪ್ತಿ. ಸ್ವತಃ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈ ಶುಭ ಸಂದರ್ಭಕ್ಕೆ ಸಾಕ್ಷಿಯಾಗಿದ್ದು, ಕಾರ್ಮಿಕರ ಖುಷಿಯನ್ನು ಇಮ್ಮಡಿಗೊಳಿಸಿತು.

ಜೀವನಾಡಿಯಾಗಲಿದೆ ಮೆಟ್ರೊ: ಸುರಂಗ ಕೊರೆಯುವ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಬಿಎಂಆರ್‌ಸಿಎಲ್ ಸಿಬ್ಬಂದಿಗೆ ಹಾಗೂ ಕಾರ್ಮಿಕರಿಗೆ ಶುಭ ಕೋರಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಎರಡನೇ ಹಂತದ ವಿಸ್ತರಣೆ ಪೂರ್ಣಗೊಂಡ ಬಳಿಕ ನಮ್ಮ ಮೆಟ್ರೊ ನಗರದ ಜನರ ಜೀವನಾಡಿಯಾಗಲಿದೆ. ಸುರಕ್ಷತೆಗೆ ಗಮನ ಕೊಟ್ಟು ಉತ್ತಮ ಕೆಲಸವನ್ನು ಬೆಂಗಳೂರು ಮೆಟ್ರೊ ರೈಲು ನಿಗಮದವರು (ಬಿಎಂಆರ್‌ಸಿಎಲ್) ಮಾಡುತ್ತಿದ್ದಾರೆ. ನಗರದಲ್ಲಿ ಮೆಟ್ರೊ ಕಾಮಗಾರಿ ನಡೆಸುವುದು ಸುಲಭವಲ್ಲ. ಎತ್ತರಿಸಿದ ಮಾರ್ಗ, ನಿಲ್ದಾಣಗಳು ಹಾಗೂ ಸುರಂಗ ನಿರ್ಮಾಣ ಸಂದರ್ಭದಲ್ಲಿ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಅವೆಲ್ಲವನ್ನೂ ಒಂದೊಂದಾಗಿ ಬಗೆಹರಿಸಿಕೊಂಡು ಬಹಳ ಚೆನ್ನಾಗಿ ಕಾಮಗಾರಿ ನಡೆಸುತ್ತಿದ್ದಾರೆ' ಎಂದು ಮೆಚ್ಚುಗೆ ಸೂಚಿಸಿದರು.

'ನಮ್ಮ ಮೆಟ್ರೊ ಮೊದಲ ಹಂತದ ಕಾಮಗಾರಿ ವೇಳೆ ಹಲವಾರು ತಾಂತ್ರಿಕ ಅಡಚಣೆಗಳು ಎದುರಾಗಿದ್ದವು. ಮೆಜೆಸ್ಟಿಕ್ ಬಳಿ ಸುರಂಗ ಕೊರೆಯುವ ಯಂತ್ರ ಸಿಲುಕಿಕೊಂಡಿತ್ತು. ಅದರಿಂದ ಪಾಠ ಕಲಿತಿದ್ದೇವೆ. ಊರ್ಜಾ ಸುರಂಗ ಕೊರೆಯುವ ಯಂತ್ರ ಯಶಸ್ವಿಯಾಗಿ 855 ಮೀ ಸುರಂಗವನ್ನು ಕೊರೆದಿದೆ. ಉತ್ಸಾಹದಿಂದ ಕೆಲಸ ಮಾಡುವುದಕ್ಕೆ ಊರ್ಜಾ ಎನ್ನುತ್ತಾರೆ. ಈ ಹೆಸರು ಅನ್ವರ್ಥವಾಗಿದೆ' ಎಂದರು.

ಗಡುವು 1 ವರ್ಷ ಕಡಿತ: 'ಎರಡನೇ ಹಂತದ ಕಾಮಗಾರಿ ಪೂರ್ಣಗೊಳಿಸಲು ಬಿಎಂಆರ್‌ಸಿಎಲ್ 2025ರ ಗಡುವು ಹಾಕಿಕೊಂಡಿತ್ತು. ಕಾಮಗಾರಿ ವೇಳೆ ಬಹಳಷ್ಟು ಜನರಿಗೆ ಅಡಚಣೆ ಆಗುತ್ತದೆ. ಮೆಟ್ರೊ ಕಾಮಗಾರಿ ಬೇಗ ಪೂರ್ಣಗೊಂಡರೆ ಬಹಳಷ್ಟು ಸಂಖ್ಯೆಯಲ್ಲಿ ಜನ ಅದನ್ನು ಬಳಸುತ್ತಾರೆ. ಹಾಗಾಗಿ ನಾನು ಗಡುವನ್ನು 2024ಕ್ಕೆ ಮರು ನಿಗದಿ ಮಾಡಿದ್ದೇನೆ. ಕಾಮಗಾರಿಯನ್ನು ನಿರಂತರವಾಗಿ ಮೇಲ್ವಿಚಾರಣೆ ನಡೆಸಲಿದ್ದೇನೆ' ಎಂದರು.

'ಜನರ ಸಹಕಾರ ಇಲ್ಲದೇ ಮೆಟ್ರೊ ಸಾಕಾರ ಆಗುತ್ತಿರಲಿಲ್ಲ. ನಿತ್ಯ ಸಂಚಾರಕ್ಕೆ ಅಡಚಣೆ ಆದರೂ ಕಾಮಗಾರಿಗೆ ಜನ ಸಹಕಾರ ಕೊಟ್ಟಿದ್ದಾರೆ. ಇದೇ ವೇಗದಲ್ಲಿ ಕಾಮಗಾರಿ ಮುಂದುವರಿಸಬೇಕು' ಎಂದರು.

ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್, 'ಎರಡನೇ ಹಂತದಲ್ಲಿ ಅತ್ಯಂತ ಕಠಿಣ ಸವಾಲುಗಳು ಇದ್ದವು. ಆರ್.ವಿ.ರಸ್ತೆಯಿಂದ ಬೊಮ್ಮಸಂದ್ರವನ್ನು ಸಂಪರ್ಕಿಸುವ ರೀಚ್-5 ಮಾರ್ಗ ಮತ್ತು ಗೊಟ್ಟಿಗೆರೆಯಿಂದ ನಾಗವಾರದವರೆಗಿನ ರೀಚ್-6 ಮಾರ್ಗದ ಕಾಮಗಾರಿಗಳಲ್ಲಿ. ರೀಚ್-6 ಮಾರ್ಗದಲ್ಲಿ 13.76 ಕಿ.ಮೀ ಉದ್ದದ ಸುರಂಗ ನಿರ್ಮಿಸಲಾಗುತ್ತಿದ್ದು, ಇದು ದೇಶದಲ್ಲೇ ಅತಿ ಉದ್ದದ ಮೆಟ್ರೊ ಸುರಂಗ. ಒಟ್ಟು 9 ಯಂತ್ರಗಳು ಸುರಂಗ ಕೊರೆಯುವ ಕಾರ್ಯದಲ್ಲಿ ತೊಡಗಿವೆ. ಪ್ರತಿ ದಿನ ಸರಾಸರಿ 3.5 ಮೀಗಳಷ್ಟು ಸುರಂಗ ಕೊರೆಯಲಾಗುತ್ತಿದೆ' ಎಂದರು.

'ಊರ್ಜಾ ಯಂತ್ರವು 855 ಮೀ ಸುರಂಗ ಕೊರೆದಿದೆ. ಕೆಲವು ಕಡೆ ಕಠಿಣ ಶಿಲೆಗಳನ್ನು ಕೊರೆಯಬೇಕಾಗಿ ಬಂತು. ಸಾಕಷ್ಟು ಅಡಚಣೆ ಎದುರಾಯಿತು. ಜನರೂ ಸಹಕರಿಸಿದ್ದಾರೆ. ನಮ್ಮಿಂದ ಆಗಿರುವ ತೊಂದರೆಗೆ ಜನರಲ್ಲಿ ಕ್ಷಮೆ ಕೇಳುತ್ತೇವೆ. ಮೂರು- ನಾಲ್ಕು ಕಡೆ ಕೆಸರು ಕಾಣಿಸಿಕೊಂಡು ಕುಸಿತ ಉಂಟಾಗಿತ್ತು' ಎಂದರು.

'ಮರಗಳ ತೆರವು ಸಂಬಂಧಿಸಿದ ವಿಚಾರ ಹೈಕೋರ್ಟ್‌ನಲ್ಲಿತ್ತು. ಈ ಸಮಸ್ಯೆ ನೀಗಿದ್ದು, ಯಾವುದೇ ಅಡಚಣೆ ಇಲ್ಲ' ಎಂದರು.

ಸಚಿವರಾದ ಉಮೇಶ್ ಕತ್ತಿ, ಎಸ್. ಟಿ.ಸೋಮಶೇಖರ, ಸಂಸದ ಪಿ.ಸಿ.ಮೋಹನ್, ಶಾಸಕ ರಿಜ್ವಾನ್ ಅರ್ಷದ್, ವಿಧಾನ ಪರಿಷತ್ ಸದಸ್ಯ ರಮೇಶ್ ಗೌಡ, ಬಿಎಂಆರ್‌ಸಿಎಲ್ ಅಧಿಕಾರಿಗಳು ಇದ್ದರು.

ಸುರಂಗದಿಂದ ಹೊರಬಂದ ಊರ್ಜಾ ಯಂತ್ರದ ಮುಂದೆ ಕಾರ್ಮಿಕರು ಸಂಭ್ರಮಿಸಿದರು – ಪ್ರಜಾವಾಣಿ ಚಿತ್ರ

'ಕಾರ್ಯಕ್ರಮ ಕನ್ನಡ ಮಯ'

ಸುರಂಗ ಕೊರೆದು ಹೊರಬಂದ ಊರ್ಜಾ ಯಂತ್ರವನ್ನು ಸ್ವಾಗತಿಸಲು ಬಿಎಂಆರ್‌ಸಿಎಲ್ ಏರ್ಪಡಿಸಿದ್ದ ಸಮಾರಂಭ ಕನ್ನಡಮಯವಾಗಿತ್ತು. ಸಮಾರಂಭದ ಬ್ಯಾನರ್‌ಗಳಲ್ಲೂ ಕನ್ನಡ ರಾರಾಜಿಸುತ್ತಿತ್ತು. ಊರ್ಜಾ ಯಂತ್ರದಲ್ಲೂ ರಾಷ್ಟ್ರ ಧ್ವಜದ ಜೊತೆಗೆ ಕನ್ನಡ ಧ್ವಜವನ್ನೂ ಅಳವಡಿಸಿ ಕರ್ಮಿಕರು ಸಂಭ್ರಮಿಸಿದರು.

ಮೈಸೂರು ರಸ್ತೆ- ಕೆಂಗೇರಿ ವಿಸ್ತರಿತ ಮಾರ್ಗದ ಲೋಕಾರ್ಪಣೆ ಸಮಾರಂಭದಲ್ಲಿ ಕನ್ನಡ ಕಡೆಗಣಿಸಿದ್ದಕ್ಕೆ ಟೀಕೆ ವ್ಯಕ್ತವಾಗಿತ್ತು. ಹಾಗಾಗಿ ಬಿಎಂಆರ್‌ಸಿಎಲ್ ಈ ಬಾರಿ ಎಚ್ಚರ ವಹಿಸಿತ್ತು.

21.25 ಕಿ.ಮೀ ಗೊಟ್ಟಿಗೆರೆಯಿಂದ ನಾಗವಾರದವರೆಗೆ ನಿರ್ಮಾಣವಾಗುವ ರೀಚ್-6 ಮಾರ್ಗದ ಒಟ್ಟು ಉದ್ದ

13.76 ಕಿ.ಮೀ ಡೇರಿವೃತ್ತದಿಂದ ನಾಗವಾರದವರೆಗೆ ನಿರ್ಮಾಣವಾಗುವ ಸುರಂಗ ಮಾರ್ಗದ ಒಟ್ಟು ಉದ್ದ

ನಮ್ಮ ಮೆಟ್ರೊ

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

'ವಿಮಾನ ನಿಲ್ದಾಣಕ್ಕೆ 2024ರಲ್ಲೇ ಮೆಟ್ರೊ'

'ಬೆಂಗಳೂರು ಉತ್ತರ, ದಕ್ಷಿಣ, ಪೂರ್ವ ಪಶ್ಚಿಮ ದಿಕ್ಕುಗಳಲ್ಲೂ ಬೆಳೆಯುತ್ತಿದೆ. ವಿಮಾನ ನಿಲ್ದಾಣಕ್ಕೆ ಮೆಟ್ರೊ ಸಂಪರ್ಕ ಕಲ್ಪಿಸುವ ಯೋಜನೆಯೂ ಸಿದ್ಧವಾಗಿದೆ. ಈಗಾಗಲೇ ಕೇಂದ್ರ ಸರ್ಕಾರವೂ ಅದಕ್ಕೆ ಒಪ್ಪಿಗೆ ಕೊಟ್ಟಿದೆ. ಹಣಕಾಸಿನ ನೆರವನ್ನೂ ನೀಡಲಿದೆ. ಬರುವ ದಿನಗಳಲ್ಲಿ ಈ ಕಾಮಗಾರಿಗೂ ಚಾಲನೆ ನೀಡಲಿದ್ದೇವೆ. ಬೆಂಗಳೂರಿನ ಅಭಿವೃದ್ಧಿಗೆ ಇದು ಮೈಲುಗಲ್ಲು ಆಗಲಿದೆ' ಎಂದು ಮುಖ್ಯಮಂತ್ರಿ ತಿಳಿಸಿದರು.

'ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ನಮ್ಮ ಮೆಟ್ರೊ 2ಎ ಮತ್ತು ಮತ್ತು 2ಬಿ ಹಂತದ ಕೆಲಸಕಾರ್ಯಗಳೂ ಆರಂಭವಾಗಿವೆ. 2ಬಿ ಟೆಂಡರ್ ಪ್ರಕ್ರಿಯೆ ಅಕ್ಟೋಬರ್‌ನಲ್ಲಿ ಪೂರ್ಣಗೊಳ್ಳಲಿದೆ. ಎರಡನೇ ಹಂತದ ಕಾಮಗಾರಿಗಳನ್ನು 2025ಕ್ಕೆ ಪೂರ್ಣಗೊಳಿಸಲು ಉದ್ದೇಶಿಸಿದ್ದೇವೆ. ಮುಖ್ಯಮಂತ್ರಿಯವರ ಸೂಚನೆ ಮೇರೆಗೆ ವಿಮಾನ ನಿಲ್ದಾಣ ಸಂಪರ್ಕದ ಕಾಮಗಾರಿಯೂ ಸೇರಿ ಎಲ್ಲ ಕಾಮಗಾರಿಗಳನ್ನೂ 2024 ಡಿಸೆಂಬರ್ ಒಳಗೆ ಪೂರ್ಣಗೊಳಿಸುತ್ತೇವೆ. ಕಾಮಗಾರಿಯ ವೇಗ ಹೆಚ್ಚಿಸಲು ಕ್ರಮ ಕೈಗೊಂಡಿದ್ದೇವೆ' ಎಂದು ಅಂಜುಮ್ ಪರ್ವೇಜ್ ತಿಳಿಸಿದರು.

ಪಕ್ಷ ಸಂಘಟನೆ: 'ಕೈ' ಒಕ್ಕಲಿಗ ನಾಯಕರ ಸಭೆ

ಬೆಂಗಳೂರು: ಒಕ್ಕಲಿಗ ಸಮುದಾಯವನ್ನು ಪಕ್ಷದತ್ತ ಸೆಳೆಯಲು ಮುಂದಾಗಿರುವ ಕಾಂಗ್ರೆಸ್‌ನ ಒಕ್ಕಲಿಗ ನಾಯಕರು, ನಗರದ ಏಟ್ರಿಯಾ ಹೋಟೆಲ್‌ನಲ್ಲಿ ಬುಧವಾರ ರಾತ್ರಿ ಸಭೆ ಸೇರಿ ಕಾರ್ಯತಂತ್ರ ರೂಪಿಸುವ ಬಗ್ಗೆ ಗಂಭೀರ ಚರ್ಚೆ ನಡೆಸಿದ್ದಾರೆ.

ಶಾಸಕ ಕೃಷ್ಣಬೈರೇಗೌಡ, ಮಾಜಿ ಶಾಸಕ ಚಲುವರಾಯಸ್ವಾಮಿ, ಸಂಸದ ಜಿ.ಸಿ. ಚಂದ್ರಶೇಖರ್ ಮತ್ತು ಡಿ.ಕೆ. ಸುರೇಶ್ ನೇತೃತ್ವದಲ್ಲಿ 40ಕ್ಕೂ ಹೆಚ್ಚು ಶಾಸಕರು, ಮಾಜಿ ಶಾಸಕರು ಸಭೆಯಲ್ಲಿ ಭಾಗಿಯಾಗಿದ್ದಾರೆ.

'ಒಕ್ಕಲಿಗ ಪ್ರಾಬಲ್ಯದ ಕ್ಷೇತ್ರಗಳು ಜೆಡಿಎಸ್ ಆಸ್ತಿ ಎಂಬಂತೆ ಬಿಂಬಿತವಾಗುತ್ತಿದೆ. ಆದರೆ, ಕಾಂಗ್ರೆಸ್ ಪಕ್ಷ ಕೂಡಾ ಈ ಸಮುದಾಯವನ್ನು ಗುರುತಿಸಿ ಸ್ಥಾನಮಾನಗಳನ್ನು ನೀಡಿದೆ. ಜೊತೆಗೆ, ಪಕ್ಷದಲ್ಲಿ ಇನ್ನಷ್ಟು ಪ್ರಾಧಾನ್ಯತೆ ನೀಡಬೇಕು. ಒಗ್ಗಲಿಗರು ಹೆಚ್ಚಿನ ಸಂಖ್ಯೆಯಲ್ಲಿರುವ ಕ್ಷೇತ್ರಗಳಲ್ಲಿ ಪಕ್ಷದಿಂದ ಸಮುದಾಯದ ಅಭ್ಯರ್ಥಿಗಳನ್ನು ಕಣಕ್ಕಿಳಿಸಬೇಕು. ಅಲ್ಲದೆ, ಅಭ್ಯರ್ಥಿಯ ಗೆಲುವಿಗೆ ಪೂರಕವಾದ ಕಾರ್ಯತಂತ್ರಗಳನ್ನು ಈಗಿನಿಂದಲೇ ರೂಪಿಸಬೇಕು ಎಂದು ಸಭೆಯಲ್ಲಿ ತೀರ್ಮಾನಿಸಲಾಗಿದೆ' ಎಂದು ಸಭೆಯಲ್ಲಿ ಭಾಗವಹಿಸಿದ ಶಾಸಕರೊಬ್ಬರು ಹೇಳಿದರು.

ಶಿವಶಂಕರರೆಡ್ಡಿ, ಬಿ.ಎಲ್. ಶಂಕರ್, ವಿ. ಮುನಿಯಪ್ಪ, ಶರತ್ ಬಚ್ಚೇಗೌಡ, ಡಾ. ರಂಗನಾಥ್, ನಂಜೇಗೌಡ, ಬಾಲಕೃಷ್ಣ, ನರೇಂದ್ರ, ಡಿ.ಟಿ. ರಾಜೇಗೌಡ, ಎಂ. ಕೃಷ್ಣಪ್ಪ, ಪ್ರೊ. ರಾಜೀವ್‌ಗೌಡ, ಟಿ.ಬಿ. ಚಯಚಂದ್ರ, ರಮೇಶಬಾಬು ಬಂಡಿಸಿದ್ಧಗೌಡ ಸಭೆಯಲ್ಲಿದ್ದರು.

ಪ್ರಭುಶಂಕರ್ ವಿರುದ್ಧದ ಪ್ರಕರಣ ವಜಾ

ಬೆಂಗಳೂರು: ಸಿಸಿಬಿ ಎಸಿಪಿಯಾಗಿದ್ದ ಪ್ರಭುಶಂಕರ್ ವಿರುದ್ಧದ ಸುಲಿಗೆ ಮತ್ತು ಭ್ರಷ್ಟಾಚಾರ ಪ್ರಕರಣವನ್ನು ಹೈಕೋರ್ಟ್ ವಜಾಗೊಳಿಸಿದೆ.

ಸಿಸಿಬಿಯಲ್ಲಿ ಎಸಿಪಿಯಾಗಿದ್ದ ಪ್ರಭುಶಂಕರ್ ಮತ್ತು ಇಬ್ಬರು ಇನ್‌ಸ್ಪೆಕ್ಟರ್‌ಗಳು 2020ರ ಲಾಕ್‌ಡೌನ್ ಅವಧಿಯಲ್ಲಿ ಸಿಗರೇಟ್ ವಿತರಕರಿಂದ ಹಣ ಸುಲಿಗೆ ಮಾಡಿದ್ದಾರೆ ಎಂಬ ಆರೋಪದಲ್ಲಿ ಅಮಾನತುಗೊಂಡಿದ್ದರು.

'ಆರೋಪಿತರಿಂದ ಯಾವುದೇ ಹಣ ವಶಕ್ಕೆ ಪಡೆಯದಿದ್ದರೂ ಮಹಜರ್ ದಾಖಲೆ ಸೃಷ್ಟಿಸಲಾಗಿದೆ. ಸುಲಿಗೆಯಾಗಿದೆ ಎನ್ನಲಾದ ವ್ಯಕ್ತಿ ದೂರು ನೀಡದಿದ್ದರೂ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಲಾಗಿದೆ. ಇವೆಲ್ಲವನ್ನೂ ಗಮನಿಸಿದರೆ ಅಧಿಕಾರಿಗಳ ನಡುವಿನ ಜಗಳಕ್ಕೆ ಪ್ರತಿಕಾರ ತೀರಿಸಿಕೊಳ್ಳುವ ಪ್ರಯತ್ನದಂತೆ ಕಾಣಿಸುತ್ತಿದೆ' ಎಂದು ನ್ಯಾಯಮೂರ್ತಿ ಎಚ್‌.ಪಿ. ಸಂದೇಶ್ ಅವರಿದ್ದ ಪೀಠ ಹೇಳಿತು.

'ಎಫ್‌ಐಆರ್ ರದ್ದುಗೊಳಿಸುವುದು ಉಸಿರಾಟ ಆರಂಭಿಸದ ಮಗುವನ್ನು ಕೊಲೆ ಮಾಡಿದಂತೆ' ಎಂದು ಪಬ್ಲಿಕ್ ಪ್ರಾಸಿಕ್ಯೂಟರ್ ಅಭಿಪ್ರಾಯಪಟ್ಟರು. 'ಮಗು ಕಾನೂನು ಬದ್ಧವಾಗಿ ಜನಿಸಬೇಕೇ ಹೊರತು ದಾಖಲೆಗಳನ್ನು ಸೃಷ್ಟಿಸುವುದರಿಂದ ಅಲ್ಲ' ಎಂದು ಪೀಠ ಅಭಿಪ್ರಾಯಪಟ್ಟಿತು.

ಅರ್ಚಕ ಸೇರಿ ಐವರ ಬಂಧನ

ಕೊಪ್ಪಳ: ಕುಷ್ಟಗಿ ತಾಲ್ಲೂಕಿನ ಹನಮಸಾಗರ ಸಮೀಪದ ಮಿಯಾಪುರದಲ್ಲಿ ಪರಿಶಿಷ್ಟ ಸಮುದಾಯದ ಚನ್ನದಾಸರ ಪಂಗಡಕ್ಕೆ ಸೇರಿದ 2 ವರ್ಷದ ಮಗು ಆಂಜನೇಯ ದೇವಾಲಯ ಪ್ರವೇಶಿಸಿದ್ದಕ್ಕೆ ದಂಡ ವಿಧಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಐವರನ್ನು ಬಂಧಿಸಿದ್ದಾರೆ.

'ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ನೀಡಿದ ದೂರಿನ ಅನ್ವಯ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಪ್ರಕಾರ ಪ್ರಕರಣ ದಾಖಲಿಸಲಾಗಿದೆ. ದೇವಸ್ಥಾನದ ಅರ್ಚಕ ಕರಕಪ್ಪ ಪೂಜಾರಿ, ಹನುಮಗೌಡ, ಗವಿಸಿದ್ದಪ್ಪ ಮ್ಯಾಗೇರಿ, ವಿರುಪಾಕ್ಷಗೌಡ ಮ್ಯಾಗೇರಿ ಮತ್ತು ಶರಣಗೌಡ ಎಂಬುವವರನ್ನು ಬಂಧಿಸಿ ಬುಧವಾರ ನ್ಯಾಯಾಂಗ ವಶಕ್ಕೆ ನೀಡಲಾಗಿದೆ' ಎಂದು ಸಬ್ ಇನ್‌ಸ್ಪೆಕ್ಟರ್ ತಿಮ್ಮಣ್ಣ ನಾಯಕ ತಿಳಿಸಿದರು.

ಪೂಜೆ ಬಳಿಕ ಹಚ್ಚಿದ್ದ ದೀಪಗಳಿಂದ ಬೆಂಕಿ ಹೊತ್ತಿರುವ ಶಂಕೆ

ಬೆಂಕಿ ಅವಘಡಕ್ಕೆ ಕಾರಣ ನಿಗೂಢ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವರಚಿಕ್ಕನಹಳ್ಳಿಯ 'ಆಶ್ರಿತ್ ಆಸ್ಪೈರ್' ವಸತಿ ಸಮುಚ್ಚಯದಲ್ಲಿ ಮಂಗಳವಾರ ಸಂಭವಿಸಿದ್ದ ಅಗ್ನಿ ದುರಂತಕ್ಕೆ ಕಾರಣ ಏನು ಎಂಬುದು ಖಚಿತವಾಗಿಲ್ಲ.

ವಿಧಿ ವಿಜ್ಞಾನ ಪ್ರಯೋಗಾಲಯ (ಎಫ್‌ಎಸ್‌ಎಲ್), ಬೆಸ್ಕಾಂ ಹಾಗೂ ಪೊಲೀಸರ ತಂಡವು ಘಟನಾ ಸ್ಥಳಕ್ಕೆ ಬುಧವಾರ ಭೇಟಿ ನೀಡಿ ಪರಿಶೀಲನೆ ನಡೆಸಿತು. ಎಫ್‌ಎಸ್‌ಎಲ್ ತಂಡವು ವಿವಿಧ ಬಗೆಯ 20 ವಸ್ತುಗಳನ್ನು ಸಂಗ್ರಹಿಸಿದೆ.

'ಫ್ಲ್ಯಾಟ್‌ನಲ್ಲಿದ್ದ ಎರಡು ಸಿಲಿಂಡರ್‌ಗಳಲ್ಲಿ ಅಡುಗೆ ಅನಿಲ ಹಾಗೆಯೇ ಇದೆ. ಶಾರ್ಟ್ ಸರ್ಕ್ಯೂಟ್ ಕೂಡ ಆಗಿಲ್ಲ. ಅಮೆರಿಕದಿಂದ ಮರಳಿದ್ದ ಭಾಗ್ಯರೇಖಾ, ಪೂಜೆ ಮಾಡಿದ ಬಳಿಕ ಕೊಠಡಿಯಲ್ಲಿ 10ಕ್ಕೂ ಹೆಚ್ಚು ದೀಪಗಳನ್ನು ಹಚ್ಚಿ ನಿದ್ರೆಗೆ ಜಾರಿರಬಹುದು. ಗಾಳಿಗೆ ದೀಪ ಕೆಳಗೆ ಬಿದ್ದು ಹತ್ತಿರದಲ್ಲಿದ್ದ ಯಾವುದಾದರೂ ವಸ್ತುವಿಗೆ ಹೊತ್ತಿಕೊಂಡಿರಬೇಕು. ಅದರಿಂದಲೇ ಅವಘಡ ಸಂಭವಿಸಿರಬಹುದು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಭೀಮಸೇನ್ ಅವರು ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಮನೆಯ ಒಳಾಂಗಣ ವಿನ್ಯಾಸ ಮಾಡಿಸಿದ್ದರು. ಇದಕ್ಕಾಗಿ ಪ್ಲೈವುಡ್ ಹಾಗೂ ಮರದ ಪೀಠೋಪಕರಣಗಳನ್ನೇ ಹೆಚ್ಚಾಗಿ ಬಳಕೆ ಮಾಡಿದ್ದರು. ಇದರಿಂದಾಗಿಯೇ ಬೆಂಕಿಯು ತೀವ್ರ ಸ್ವರೂಪ ಪಡೆದುಕೊಂಡಿರಬಹುದು' ಎಂದು ಅವರು ಹೇಳಿದ್ದಾರೆ.

ಬೆಂಕಿಯ ಕೆನ್ನಾಲಗೆಗೆ ಮನೆಯಲ್ಲಿರುವ ವಸ್ತುಗಳೆಲ್ಲಾ ಸುಟ್ಟು ಕರಕಲಾಗಿರುವುದು

'ಬೆಂಕಿಯ ತೀವ್ರತೆಗೆ ಫ್ಲ್ಯಾಟ್‌ನಲ್ಲಿದ್ದ ಎಲ್ಲಾ ವಸ್ತುಗಳು ಸುಟ್ಟು ಕರಕಲಾಗಿವೆ. ಫ್ರಿಡ್ಜ್‌ನಿಂದ ಕಿಡಿಯೊಂದು ಹೊರಹೊಮ್ಮಿರಬಹುದು ಎಂಬ ಅನುಮಾನವೂ ಮೂಡಿದೆ. ಸಿಲಿಂಡರ್‌ನ ರೆಗ್ಯುಲೇಟರ್ ಸಿಕ್ಕಿಲ್ಲ. ಫ್ಲ್ಯಾಟ್‌ನ ಬಾಲ್ಕನಿಗೆ ಕಬ್ಬಿಣದ ಗ್ರಿಲ್ ಅಳವಡಿಸದೇ ಹೋಗಿದ್ದರೆ ಭಾಗ್ಯರೇಖಾ ಹಾಗೂ ಅವರ ತಾಯಿ ಬದುಕುಳಿಯುವ ಸಾಧ್ಯತೆ ಇತ್ತು' ಎಂದರು.

ಅಪಾರ್ಟ್‌ಮೆಂಟ್ ಸಮುಚ್ಚಯದ ಮಾಲೀಕರ ನಿರ್ಲಕ್ಷ್ಯ?: 'ವಸತಿ ಸಮುಚ್ಚಯದಲ್ಲಿ ಆಕಸ್ಮಿಕವಾಗಿ ಅಗ್ನಿ ಅವಘಡಗಳು ಸಂಭವಿಸಿದರೆ ತಕ್ಷಣವೇ ಬೆಂಕಿ ನಂದಿಸಲು ಅಗತ್ಯವಿರುವ ನೀರಿನ ಕೊಳವೆಗಳ ವ್ಯವಸ್ಥೆ ಈ ಸಮುಚ್ಚಯದಲ್ಲಿ ಇರಲಿಲ್ಲ. ಬೆಂಕಿ ಅವಘಡದ ಸಂದರ್ಭದಲ್ಲಿ ನಿವಾಸಿಗಳನ್ನು ಎಚ್ಚರಿಸಲು 'ಸೈರನ್' ವ್ಯವಸ್ಥೆಯೂ ಇರಲಿಲ್ಲ' ಎಂದು ನಿವಾಸಿಗಳು ಆರೋಪಿಸಿದ್ದಾರೆ.

ಪ್ರಕರಣ ದಾಖಲು: ಘಟನೆ ಸಂಬಂಧ ಭಾಗ್ಯರೇಖಾ ಅವರ ಅಳಿಯ ಸಂದೀಪ್, ಬೇಗೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

'ಆಕಸ್ಮಿಕ ಸಾವು ಪ್ರಕರಣ ದಾಖಲಿಸಿಕೊಂಡಿದ್ದು ತನಿಖೆ ಮುಂದುವರಿಸುತ್ತೇವೆ' ಎಂದು ಪೊಲೀಸರು ಹೇಳಿದ್ದಾರೆ.

'ಅಗ್ನಿಶಾಮಕ ದಳವನ್ನು ಬಲಪಡಿಸಲು ಕ್ರಮ'

'ಬೆಂಗಳೂರಿನಲ್ಲಿ ಗಗನಚುಂಬಿ ಕಟ್ಟಡಗಳು ಹೆಚ್ಚುತ್ತಲೇ ಇವೆ. ಈ ಕಟ್ಟಡಗಳಲ್ಲಿ ಆಕಸ್ಮಿಕ ಅಗ್ನಿ ಅವಘಡಗಳು ಸಂಭವಿಸಿದರೆ ಅಲ್ಲಿ ಸಿಲುಕುವವರನ್ನು ಸುರಕ್ಷಿತವಾಗಿ ಹೊರಗೆ ತರಬೇಕಾದುದು ನಮ್ಮ ಜವಾಬ್ದಾರಿ. ಇಂತಹ ಸಂದಿಗ್ಧ ಪರಿಸ್ಥಿತಿಯನ್ನು ನಿಭಾಯಿಸಲು ಅಗ್ನಿಶಾಮಕ ದಳವನ್ನು ಸಶಕ್ತಗೊಳಿಸಬೇಕಿದೆ. ಹೀಗಾಗಿ 50 ಮೀಟರ್‌ಗಳಷ್ಟು ಎತ್ತರಕ್ಕೆ ಹೋಗಲು ನೆರವಾಗುವಂತಹ ಎರಡು ಲಿಫ್ಟ್‌ಗಳನ್ನು ಖರೀದಿಸಲಾಗಿದೆ. 90 ಮೀ. ಎತ್ತರಕ್ಕೆ ಹೋಗಬಲ್ಲ ಎರಡು ಲಿಫ್ಟ್‌ಗಳನ್ನೂ ತರಿಸಲಾಗುತ್ತಿದೆ. ಇದಕ್ಕಾಗಿ ಸುಮಾರು ₹50 ಕೋಟಿ ವೆಚ್ಚ ಮಾಡಲಾಗಿದೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.

'ಆಶ್ರಿತ್ ಅಪಾರ್ಟ್‌ಮೆಂಟ್ ಸಮುಚ್ಚಯಕ್ಕೆ ಹೋಗಲು ಸೂಕ್ತ ರಸ್ತೆಯೇ ಇರಲಿಲ್ಲ ಎಂಬ ಮಾಹಿತಿ ಸಿಕ್ಕಿದೆ. ದೊಡ್ಡ ಅಪಾರ್ಟ್‌ಮೆಂಟ್ ಸಮುಚ್ಚಯಗಳನ್ನು ಕಟ್ಟುವಾಗ ದೊಡ್ಡ ರಸ್ತೆಗಳನ್ನೂ ನಿರ್ಮಾಣ ಮಾಡಬೇಕು. ಅಗ್ನಿಶಾಮಕ ದಳದ ವಾಹನಗಳು ಸಾಗಲು ಸೂಕ್ತ ವ್ಯವಸ್ಥೆ ಇರಬೇಕು. ಇಲ್ಲದಿದ್ದರೆ ಅಂತಹ ಕಟ್ಟಡಗಳಿಗೆ ಅನುಮತಿಯೇ ನೀಡಬಾರದು ಎಂದು ಅಧಿಕಾರಿಗಳಿಗೆ ಸೂಚಿಸಲಾಗುತ್ತದೆ' ಎಂದರು.

'ಬೆಂಕಿ ನಂದಿಸುವ ಸಿಲಿಂಡರ್ ಇದ್ದವು'

'ಪ್ರತಿ ಮಹಡಿಯಲ್ಲೂ ಬೆಂಕಿ ನಂದಿಸಲು ಅಗತ್ಯವಿರುವ ಸಿಲಿಂಡರ್‌ಗಳನ್ನು ಅಳವಡಿಸಲಾಗಿದೆ. ಬೆಂಕಿ ತೀವ್ರ ಸ್ವರೂಪ ಪಡೆದಿದ್ದರಿಂದ ಅದನ್ನು ಹತ್ತಿಕ್ಕಲು ಸಾಧ್ಯವಾಗಿಲ್ಲ' ಎಂದು ಬಿಬಿಎಂಪಿ ಬೊಮ್ಮನಹಳ್ಳಿ ವಲಯದ ಜಂಟಿ ಆಯುಕ್ತ ರಾಮಕೃಷ್ಣ ಸ್ಪಷ್ಟಪಡಿಸಿದ್ದಾರೆ.

'ಫ್ಲ್ಯಾಟ್‌ಗಳನ್ನು ಸ್ವಚ್ಛಗೊಳಿಸಿಕೊಡಲಾಗುತ್ತದೆ. ವಿದ್ಯುತ್ ಮತ್ತು ನೀರಿನ ಸರಬರಾಜು ಕೂಡ ಮಾಡಲಾಗುತ್ತದೆ. ಬಳಿಕ ನಿವಾಸಿಗಳಿಗೆ ಫ್ಲ್ಯಾಟ್ ಪ್ರವೇಶಿಸಲು ಅವಕಾಶ ನೀಡುತ್ತೇವೆ. ನಮ್ಮ ವೈದ್ಯಕೀಯ ತಂಡವೂ ಸ್ಥಳದಲ್ಲೇ ಇದ್ದು, ಅಗತ್ಯವಿದ್ದವರಿಗೆ ಪ್ರಾಥಮಿಕ ಚಿಕಿತ್ಸೆ ನೀಡಲಿದೆ' ಎಂದರು.

'ಸುರಕ್ಷತೆಗೆ ಧಕ್ಕೆ ತರುವ ರಚನೆ ತೆರವು'

ಬೆಂಗಳೂರು: ವಸತಿ ಸಮುಚ್ಚಯಗಳಿಗೆ ಸ್ವಾಧೀನಾನುಭವ ಪ್ರಮಾಣಪತ್ರ ಪಡೆದ ಬಳಿಕ ಬಾಲ್ಕನಿಯಲ್ಲಿ ಬದಲಾವಣೆಗಳನ್ನು ಮಾಡಬಾರದು ಎಂದು ಬಿಬಿಎಂಪಿಯು ಬುಧವಾರ ಸುತ್ತೋಲೆ ಹೊರಡಿಸಿದೆ.

ದೇವರ ಚಿಕ್ಕನಹಳ್ಳಿಯಲ್ಲಿ ಮಂಗಳವಾರ ಸಂಭವಿಸಿದ ಅಗ್ನಿ ಅವಘಡದಲ್ಲಿ ಇಬ್ಬರು ಮಹಿಳೆಯರು ಮೃತಪಟ್ಟ ಮರು ದಿನ ಹೊರಡಿಸಿರುವ ಈ ಸುತ್ತೋಲೆಯಲ್ಲಿ ಬಿಬಿಎಂಪಿಯು, 'ಕಟ್ಟಡಗಳ ಸುರಕ್ಷತೆಗೆ ಸಂಬಂಧಿಸಿ ನಿಯಮ ಉಲ್ಲಂಘನೆಗೆ ಅವಕಾಶ ಕಲ್ಪಿಸುವುದಿಲ್ಲ' ಎಂದು ಸ್ಪಷ್ಟಪಡಿಸಿದೆ.

ಬಿಬಿಎಂಪಿಯ ವ್ಯಾಪ್ತಿಯಲ್ಲಿರುವ ಕಟ್ಟಡಗಳಿಗೆ ಕಟ್ಟಡ ಬೈಲಾ - 2003, ಪರಿಷ್ಕೃತ ವಲಯ ನಿಯಮಾವಳಿಗಳು -2015 ಮತ್ತು ಭಾರತದ ರಾಷ್ಟ್ರೀಯ ಕಟ್ಟಡ ಸಂಹಿತೆ - 2016ರ ಅನ್ವಯ ನಕ್ಷೆ ಮಂಜೂರಾತಿ, ಪ್ರಾರಂಭಿಕ ಪ್ರಮಾಣ ಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣಪತ್ರಗಳನ್ನು ಪಡೆದ ನಂತರ ಕಟ್ಟಡಗಳ ಬಾಲ್ಕನಿಗಳನ್ನು ಮುಚ್ಚುವಂತಿಲ್ಲ. ಅಸುರಕ್ಷತೆಗೆ ಕಾರಣವಾಗುವಂತೆ ಕಟ್ಟಡದ ರಚನೆಯನ್ನು ಮಾರ್ಪಾಡು ಮಾಡಲು ಅವಕಾಶವಿಲ್ಲ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ನಿಯಮಾನುಸಾರ ಕಟ್ಟಡಗಳಿಗೆ ನಕ್ಷೆ ಮಂಜೂರಾತಿ, ಪ್ರಾರಂಭಿಕ ಪ್ರಮಾಣಪತ್ರ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರಗಳನ್ನು ಪಡೆದ ನಂತರ ವಸತಿ ಸಮುಚ್ಚಯಗಳಲ್ಲಿ ಹಾಗೂ ಇತರೆ ಕಟ್ಟಡಗಳ ಬಾಲ್ಕನಿಯಲ್ಲಿ ಬದಲಾವಣೆ ಮಾಡುವುದನ್ನು ತಡೆಗಟ್ಟಬೇಕು ಎಂದೂ ಅವರು ಸೂಚಿಸಿದ್ದಾರೆ.

ಒಂದು ವೇಳೆ, ಸ್ವಾಧೀನಾನುಭವ ಪ್ರಮಾಣಪತ್ರ ಪಡೆದ ಬಳಿಕ ಮಾರ್ಪಾಡು ಮಾಡುವ ಅವಶ್ಯವಿದ್ದಲ್ಲಿ ಪಾಲಿಕೆಯ ಪ್ರಾಧಿಕಾರದಿಂದ ಕಡ್ಡಾಯವಾಗಿ ಪೂರ್ವಾನುಮತಿ ಪಡೆಯಬೇಕು ಎಂದು ಮುಖ್ಯ ಆಯುಕ್ತರು ಸ್ಪಷ್ಟಸಿದ್ದಾರೆ.

'ಕಟ್ಟಡಗಳ ಬಾಲ್ಕನಿಯಲ್ಲಿ ಗರಿಷ್ಠ 3.5 ಅಡಿಗಳಷ್ಟು ಎತ್ತರದ ಗ್ರಿಲ್‌ಗಳನ್ನು ಅಳವಡಿಸುವುದಕ್ಕೆ ಮಾತ್ರ ಅವಕಾಶ ಇದೆ. ಆದರೆ, ನಗರದ ಬಹುತೇಕ ವಸತಿ ಸಮುಚ್ಚಯಗಳು ಸ್ವಾಧೀನಾನುಭವ ಪ್ರಮಾಣಪತ್ರ ಪಡೆದ ಬಳಿಕ ಬಾಲ್ಕಿನಿಗಳನ್ನು ಪೂರ್ತಿ ಮುಚ್ಚುವ ರೀತಿ ಕಬ್ಬಿಣದ ಗ್ರಿಲ್ ಅಳವಡಿಸಿರುತ್ತವೆ.' ಎಂದು ಪಾಲಿಕೆಯ ನಗರ ಯೋಜನಾ ವಿಭಾಗದ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಫ್ಲ್ಯಾಟ್‌ಗಳ ಬಾಲ್ಕನಿಗಳನ್ನು ಪೂರ್ತಿ ಮುಚ್ಚುವುದರಿಂದ ಯಾವ ರೀತಿ ಅಪಾಯ ಸಂಭವಿಸಬಹುದು ಎಂಬುದನ್ನು ದೇವರಚಿಕ್ಕನಹಳ್ಳಿಯ ಅಗ್ನಿ ದುರಂತ ತೋರಿಸಿಕೊಟ್ಟಿದೆ. ಬಾಲ್ಕನಿಗಳನ್ನು ಪೂರ್ತಿ ಮುಚ್ಚುವ ರೀತಿ ಗ್ರಿಲ್‌ಗಳನ್ನು ಅಳವಡಿಸಿದವರು, ತಾವಾಗಿಯೇ ಅದನ್ನು ತೆರವುಗೊಳಿಸಬೇಕು' ಎಂದು ಅವರು ಸಲಹೆ ನೀಡಿದರು.

'ಒ.ಸಿ ನೀಡಿದ ಬಳಿಕ ತಪಾಸಣೆ ಇಲ್ಲ'

'ಸ್ವಾಧೀನಾನುಭವಪತ್ರ (ಒ.ಸಿ) ನೀಡುವ ಮುನ್ನ ನಗರ ಯೋಜನೆ ವಿಭಾಗದ ಅಧಿಕಾರಿಗಳು ಕಟ್ಟಡವನ್ನು ಪರಿಶೀಲನೆ ನಡೆಸಬೇಕು. ಒಮ್ಮೆ ಒ.ಸಿ. ನೀಡಿದ ಬಳಿಕ ಕಟ್ಟಡವನ್ನು ಪರಿಶೀಲನೆ ನಡೆಸುವ ಪರಿಪಾಠ ಇಲ್ಲ. ಕಟ್ಟಡದಲ್ಲಿ ಅಕ್ರಮವಾಗಿ ಮಾರ್ಪಾಡು ಮಾಡಿದ ಬಗ್ಗೆ ಯಾರಾದರೂ ದೂರು ನೀಡಿದರೆ ಮಾತ್ರ ಪರಿಶೀಲನೆ ನಡೆಸಲಾಗುತ್ತದೆ. ಒ.ಸಿ ಪಡೆದ ಬಳಿಕ ಅಧಿಕಾರಿಗಳು ಕಟ್ಟಡವನ್ನು ಪರಿಶೀಲನೆ ನಡೆಸುವುದಿಲ್ಲ ಎಂಬ ಕಾರಣಕ್ಕೆ ಅನೇಕರು ಪಾಲಿಕೆಯ ಗಮನಕ್ಕೇ ತಾರದೆಯೇ ಕಟ್ಟಡದ ರಚನೆಯಲ್ಲಿ ಮಾರ್ಪಾಡು ಮಾಡುತ್ತಾರೆ. ಇಂತಹ ಉಲ್ಲಂಘನೆಗಳಿಗೆ ದಂಡ ವಿಧಿಸಲು ಅವಕಾಶ ಇದೆ' ಎಂದು ಬಿಬಿಎಂಪಿಯ ನಗರ ಯೋಜನೆ ವಿಭಾಗದ ಅಧಿಕಾರಿ ತಿಳಿಸಿದರು.

ಶಾಲೆಯಲ್ಲೇ ಮಸಾಜ್: ಪ್ರಭಾರ ಮುಖ್ಯಶಿಕ್ಷಕ ಅಮಾನತು

ಬೆಂಗಳೂರು: ವಿದ್ಯಾರ್ಥಿಯನ್ನು ಶಾಲೆಗೆ ಸೇರಿಸಲು ಬಂದ ಪೋಷಕಿಯಿಂದಲೇ, ಕೋದಂಡರಾಮಪುರ ಬಿಬಿಎಂಪಿ ಪ್ರೌಢ ಶಾಲೆಯ ಪ್ರಭಾರ ಮುಖ್ಯಶಿಕ್ಷಕ ಲೋಕೇಶಪ್ಪ ಅವರು ಮಸಾಜ್ ಮಾಡಿಸಿಕೊಂಡ ಆರೋಪ ಕೇಳಿಬಂದಿದೆ. ಶನಿವಾರ ಈ ಪ್ರಕರಣ ನಡೆದಿದ್ದು ಬಿಬಿಎಂಪಿಯು ಲೋಕೇಶಪ್ಪ ಅವರನ್ನು ಸೇವೆಯಿಂದ ಅಮಾನತು ಮಾಡಿದೆ.

ಮಗುವನ್ನು ಶಾಲೆಗೆ ದಾಖಲಿಸಲು ಬಂದ ಮಹಿಳೆಯಲ್ಲಿ ಆಕೆಯ ವೃತ್ತಿಯ ಬಗ್ಗೆ ಲೋಕೇಶಪ್ಪ ವಿಚಾರಿಸಿದ್ದರು. ಬ್ಯೂಟಿ ಪಾರ್ಲರ್ ನಡೆಸುತ್ತಿರುವುದಾಗಿ ಆ ಮಹಿಳೆ ತಿಳಿಸಿದ್ದರು. ಆಗ ಮುಖ್ಯ ಶಿಕ್ಷಕ ಮಸಾಜ್ ಮಾಡುವಂತೆ ಒತ್ತಾಯಿಸಿದ್ದರು. ಮಗುವಿನ ಶಿಕ್ಷಣಕ್ಕೆ ತೊಡಕಾಗಬಾರದು ಎಂಬ ಕಾರಣಕ್ಕೆ ಆ ಮಹಿಳೆ ಇದಕ್ಕೆ ಒಪ್ಪಿದ್ದರು. ತರಗತಿ ಕೊಠಡಿಯೊಂದಕ್ಕೆ ಮಹಿಳೆಯನ್ನು ಕರೆದೊಯ್ದು ಮಸಾಜ್ ಮಾಡಿಸಿಕೊಂಡ ಲೋಕೇಶಪ್ಪ, ಆಕೆಯ ಜೊತೆ ಅಶ್ಲೀಲವಾಗಿಯೂ ಮಾತನಾಡಿದ್ದರು ಎಂದು ಗೊತ್ತಾಗಿದೆ.

ಮಸಾಜ್ ಮಾಡಿಸಿಕೊಳ್ಳುತ್ತಿರುವ ದೃಶ್ಯವನ್ನು ಶಾಲೆಯ ಶಿಕ್ಷಕರೊಬ್ಬರು ಸೆರೆ ಹಿಡಿದಿದ್ದಾರೆ. ಈ ಬಗ್ಗೆ ಬಿಬಿಎಂಪಿ ಶಿಕ್ಷಣ ವಿಭಾಗದ ಅಧಿಕಾರಿಗಳು ವಿಚಾರಿಸಿದಾಗ ಲೋಕೇಶಪ್ಪ ತನ್ನ ತಪ್ಪನ್ನು ಒಪ್ಪಿಕೊಂಡಿದ್ದಾರೆ.

'ಬೆಂಕಿ ಬಿದ್ದಿದೆ ಬೇಗ ಕಾಪಾಡಪ್ಪ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊಠಡಿಯಲ್ಲಿ ಬೆಂಕಿ ಬಿದ್ದಿದೆ. ಬೇಗ ಬಂದು ಕಾಪಾಡಪ್ಪ. ಬೇಗ ಬಾ...'

ದೇವರಚಿಕ್ಕನಹಳ್ಳಿಯ ವಸತಿ ಸಮುಚ್ಚಯದಲ್ಲಿ ಮಂಗಳವಾರ ಸಂಭವಿಸಿದ್ದ ಅಗ್ನಿ ದುರಂತದಲ್ಲಿ ಸಜೀವ ದಹನವಾದ ಭಾಗ್ಯರೇಖಾ ಅವರು ತಮ್ಮ ಅಳಿಯ ಸಂದೀಪ್ ಬಳಿ ರಕ್ಷಣೆಗಾಗಿ ಅಂಗಲಾಚಿದ್ದ ಪರಿ ಇದು.

ಸಂದೀಪ್–ಪ್ರೀತಿ ದಂಪತಿ ಪ್ರೀತಿಯ ಅವರ ತಾಯಿ ಭಾಗ್ಯರೇಖಾ ವಾಸವಿದ್ದ ಫ್ಲ್ಯಾಟ್‌ನ ಪಕ್ಕದಲ್ಲೇ (ಫ್ಲ್ಯಾಟ್ ನಂಬರ್ 211) ನೆಲೆಸಿದ್ದರು. ಅತ್ತೆ ಕರೆ ಮಾಡಿ ಹೇಳಿದ ಬಳಿಕವಷ್ಟೇ ಸಂದೀಪ್‌ಗೆ ಅಗ್ನಿ ಅವಘಡದ ವಿಷಯ ಗೊತ್ತಾಗಿತ್ತು.

'ಸಂಜೆಯ ಹೊತ್ತಿನಲ್ಲಿ ಅತ್ತೆಯ ಕರೆ ಬಂತು. ಅತ್ತೆ ಅಳುತ್ತಾ 'ಹಾಲ್‌ನಲ್ಲಿ ಬೆಂಕಿ ಬಿದ್ದಿದೆ ಬೇಗ ಬಾರಪ್ಪ...' ಎಂದರು. ಮೊಬೈಲ್‌ನಲ್ಲಿ ಮಾತನಾಡುತ್ತಲೇ ಅವರಿದ್ದ ಫ್ಲ್ಯಾಟ್‌ನತ್ತ ಓಡಿದೆ. ಬಾಗಿಲು ತೆರೆಯುವಂತೆ ಹೇಳಿದೆ. ಬೆಂಕಿ ಆವರಿಸಿಕೊಂಡಿದೆ ಬಾಗಿಲ ಬಳಿ ಬರಲೂ ಆಗುತ್ತಿಲ್ಲ ಎಂದು ಕಣ್ಣೀರಿಟ್ಟರು. ಹೀಗಾಗಿ ಬಾಲ್ಕನಿಯತ್ತ ತೆರಳುವಂತೆ ಸೂಚಿಸಿದ್ದೆ' ಎಂದು ಸಂದೀಪ್ ಹೇಳಿದರು.

'ನಾವು ಬಾಗಿಲು ತೆರೆದ ಕೂಡಲೇ ಬೆಂಕಿಯ ಜ್ವಾಲೆ ನಮ್ಮತ್ತ ನುಗ್ಗಿತು. ಅದರಿಂದ ಮಾವ ಭೀಮಸೇನ್ ಅವರ ತಲೆಗೆ ಸುಟ್ಟ ಗಾಯಗಳಾದವು. ಕೊಠಡಿಯ ತುಂಬಾ ಬೆಂಕಿಯ ಕೆನ್ನಾಲಗೆ ಆವರಿಸಿತ್ತು. ಒಳಗೆ ಏನೂ ಕಾಣುತ್ತಿರಲಿಲ್ಲ. ಕೊನೆಯ ಕ್ಷಣದವರೆಗೂ ಅವರು ರಕ್ಷಣೆಗಾಗಿ ಕೋರಿದರು. ಹೀಗಿದ್ದರೂ ಜೀವ ಉಳಿಸಲು ಆಗಲಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಮಗಳನ್ನು ನೋಡಲು ಬಂದಿದ್ದ ವೃದ್ಧೆ: ಭಾಗ್ಯರೇಖಾ ಅವರ ತಾಯಿ ಲಕ್ಷ್ಮಿದೇವಿ (82 ವರ್ಷ) ಅವರು ಮಗನ ಜೊತೆ ಉತ್ತರಹಳ್ಳಿಯಲ್ಲಿ ವಾಸವಿದ್ದರು. ಮಗಳು ಅಮೆರಿಕದಿಂದ ಮರಳಿರುವ ವಿಷಯ ತಿಳಿದು ಮನೆಗೆ ಬಂದಿದ್ದರು.

'ಹೊಗೆಯ ವಾಸನೆ ಬಂದಿದ್ದರಿಂದ ನಾವೆಲ್ಲಾ ಮನೆಯ ಹೊರಗೆ ಬಂದು ನೋಡಿದೆವು. ಅದಾಗಲೇ ಬೆಂಕಿ ಹೊತ್ತಿ ಉರಿಯುತ್ತಿತ್ತು. ಬಾಲ್ಕನಿಗೆ ಕಬ್ಬಿಣದ ಗ್ರಿಲ್ ಅಳವಡಿಸದೆ ಹೋಗಿದ್ದರೆ ಮೇಲಿಂದ ಜಿಗಿದು ಜೀವ ಉಳಿಸಿಕೊಳ್ಳಬಹುದಿತ್ತು. ಆ ಮಹಿಳೆ ಕಾಪಾಡಿ, ಕಾಪಾಡಿ... ಎಂದು ಚೀರಾಡುತ್ತಿದ್ದರು. ಅವರ ಆಕ್ರಂದನ ಕೇಳಿ ದುಃಖ ಉಮ್ಮಳಿಸಿ ಬರುತ್ತಿತ್ತು. ಆ ಸ್ಥಿತಿಯಲ್ಲಿ ಅವರನ್ನು ಕಾಪಾಡುವುದು ಸಾಧ್ಯವೇ ಇರಲಿಲ್ಲ' ಎಂದು ಸ್ಥಳೀಯರೊಬ್ಬರು ಹೇಳಿದರು.

'ಮಾತನಾಡುತ್ತಲೇ ಬೆಂಕಿಗಾಹುತಿ'

'ಮನೆಯಲ್ಲಿ ಕೆಲಸ ಮಾಡುತ್ತಿದ್ದಾಗ ವಯರ್‌ಗಳು ಸುಟ್ಟ ವಾಸನೆ ಬಂತು. ಬಾಲ್ಕನಿಗೆ ಬಂದು ನೋಡಿದಾಗ ಪಕ್ಕದ ಆಶ್ರಿತ್ ವಸತಿ ಸಮುಚ್ಚಯದ ಫ್ಲ್ಯಾಟ್‌ವೊಂದರಲ್ಲಿ ಬೆಂಕಿ ಹೊತ್ತಿ ಉರಿಯುತ್ತಿತ್ತು. ಎರಡು ಬಾಲ್ಕನಿಗಳಲ್ಲಿ ನಿಂತಿದ್ದ ಮಹಿಳೆಯರು ನೆರವಿಗಾಗಿ ಅಂಗಲಾಚುತ್ತಿದ್ದರು. ನೋಡು ನೋಡುತ್ತಿದ್ದಂತೆಯೇ ವೃದ್ಧೆ ಬೆಂಕಿಗೆ ಆಹುತಿಯಾದರು. ಮತ್ತೊಬ್ಬ ಮಹಿಳೆ ಮೊಬೈಲ್‌ನಲ್ಲಿ ಸುಮಾರು 15 ನಿಮಿಷ ಮಾತನಾಡುತ್ತಲೇ ಇದ್ದರು' ಎಂದು ಸ್ಥಳೀಯರಾದ ಮಂಜು ರಾಜ್ ತಿಳಿಸಿದರು.

ತಿರುಪತಿ: ಉಚಿತ ದರ್ಶನದ ಟೋಕನ್ ಆನ್‌ಲೈನ್‌ನಲ್ಲಿ ಲಭ್ಯ

ಹೈದರಾಬಾದ್: ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ಭಕ್ತರಿಗಾಗಿ ಉಚಿತ ದರ್ಶನದ ಟೋಕನ್‌ಗಳನ್ನು ಶನಿವಾರದಿಂದ ಆನ್‌ಲೈನ್ ಮೂಲಕ ನೀಡಲು ನಿರ್ಧರಿಸಿದೆ. ತಿರುಮಲಕ್ಕೆ ಬರುವ ಭಕ್ತರು ಉಚಿತ ಅಥವಾ ವಿಶೇಷ ದರ್ಶನದ ಟಿಕೆಟ್ ಜತೆಗೆ ಎರಡು ಡೋಸ್ ಕೋವಿಡ್ ಲಸಿಕೆ ಪಡೆದಿರುವ ಪ್ರಮಾಣ ಪತ್ರ ಅಥವಾ ಕೋವಿಡ್ ಪರೀಕ್ಷೆಯ ನೆಗೆಟಿವ್ ವರದಿಯನ್ನು ಹಾಜರುಪಡಿಸಬೇಕು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ತಿರುಪತಿಯಲ್ಲಿನ ಟಿಕೆಟ್ ಕೌಂಟರ್‌ಗಳನ್ನು ಭಾನುವಾರದಿಂದ ಮುಚ್ಚಲಾಗುತ್ತದೆ ಎಂದು ಅವರು ಹೇಳಿದ್ದಾರೆ.

ಕೃಷ್ಣಮಠದಲ್ಲಿ ಎಲ್ಲ ಸೇವೆಗಳು ಆರಂಭ

ಉಡುಪಿ: ಜಿಲ್ಲೆಯಲ್ಲಿ ಕೋವಿಡ್–19 ಪ್ರಮಾಣ ತಗ್ಗುತ್ತಿರುವ ಹಿನ್ನೆಲೆಯಲ್ಲಿ ಬುಧವಾರದಿಂದ ಕೃಷ್ಣಮಠದಲ್ಲಿ ಪೂಜೆ, ಸೇವಾ ಕೈಂಕರ್ಯಗಳು ಆರಂಭವಾಗಿವೆ.

'ಉದ್ಯೋಗ ಆಧಾರಿತ ಶಿಕ್ಷಣ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದ್ಯಾರ್ಥಿ ಕೇಂದ್ರಿತ ಮತ್ತು ಉದ್ಯೋಗ ಆಧಾರಿತ ಶಿಕ್ಷಣ ನೀಡುವ ಅಗತ್ಯ ಇರುವುದರಿಂದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದರು.

ಎ.ಪಿ.ಎಸ್ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಣ ನೀತಿ ಕುರಿತು ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದಿವೆ. ವಿದ್ಯಾರ್ಥಿ ಮತ್ತು ಉದ್ಯೋಗ ಕೇಂದ್ರಿತ ಶಿಕ್ಷಣ ನೀಡಲು ಇನ್ನೂ ಆಗಿಲ್ಲ. ಹೀಗಾಗಿ, ಶಿಕ್ಷಣ ವ್ಯವಸ್ಥೆಯ ಬದಲಾವಣೆ ಅಗತ್ಯವಿದೆ. ನಮ್ಮ ದೇಶದ ಸಾಂಪ್ರದಾಯಿಕ ಶಿಕ್ಷಣದಲ್ಲಿ ಇರುವ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಮುಂದಾಗಿದೆ. ಇದಕ್ಕೆ ಅಧ್ಯಾಪಕರ ಸಹಕಾರ ಬೇಕು' ಎಂದು ಹೇಳಿದರು.

ಸಂಸ್ಥೆಯ ಅಧ್ಯಕ್ಷ ಟಿ.ವಿ. ಮಾರುತಿ ಮಾತನಾಡಿ, 'ಹೊಸ ಶಿಕ್ಷಣ ನೀತಿ ಇಂದು ಅತ್ಯಗತ್ಯವಾಗಿ ಬೇಕಾಗಿದೆ. ಅನೇಕ ವರ್ಷಗಳ ಹಿಂದೆಯೇ ಆಗಬೇಕಿದ್ದ ಕೆಲಸ ಇಂದು ಕಾರ್ಯರೂಪಕ್ಕೆ ಬರುತ್ತಿರುವುದು ಸಂತಸದ ವಿಷಯ' ಎಂದರು.

ಕಾರ್ಯಾಗಾರವನ್ನು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಉದ್ಘಾಟಿಸಿದರು. ಟ್ರಸ್ಟಿ ಎ.ಪಿ. ಆಚಾರ್ಯ, ಅಧ್ಯಕ್ಷ ಟಿ.ವಿ. ಮಾರುತಿ, ಉಪಾಧ್ಯಕ್ಷ ಕೆ.ಎನ್ ನರಸಿಂಹಮೂರ್ತಿ, ಟ್ರಸ್ಟಿ ಕೆ.ಮೋಹನ ದೇವ್ ಆಳ್ವ, ಎ.ಆರ್ ಆಚಾರ್ಯ ಇದ್ದರು

'ಕೊಡವರು ಬಂದೂಕು ಇಟ್ಟುಕೊಳ್ಳಬಹುದು'

ಬೆಂಗಳೂರು: ಕೊಡವ ಸಮುದಾಯ ಮತ್ತು ಜಮ್ಮಾ ಹಿಡುವಳಿದಾರರು ಬಂದೂಕು ಇಟ್ಟುಕೊಳ್ಳಲು ಶಸ್ತ್ರಾಸ್ತ್ರ ಕಾಯ್ದೆಯ ನಿಬಂಧನೆಗಳಿಗೆ ವಿನಾಯಿತಿ ನೀಡಿ 2019ರ ಅಕ್ಟೋಬರ್‌ನಲ್ಲಿ ಕೇಂದ್ರ ಸರ್ಕಾರ ಹೊರಡಿಸಿದ್ದ ಅಧಿಸೂಚನೆಯನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ಮತ್ತು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರನ್ನು ಒಳಗೊಂಡ ವಿಭಾಗೀಯ ಪೀಠ, ಈ ವಿನಾಯಿತಿ ಪ್ರಶ್ನಿಸಿ ನಿವೃತ್ತ ಸೇನಾಧಿಕಾರಿ ಕ್ಯಾಪ್ಟನ್ ಚೇತನ್ ವೈ.ಕೆ. ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿತು.

ಕೇಂದ್ರ ಸರ್ಕಾರದ ಮನವಿಯನ್ನು ತಿರಸ್ಕರಿಸಿದ ಸುಪ್ರೀಂ ಕೋರ್ಟ್

ಎನ್‌ಡಿಎಗೆ ಮಹಿಳೆ: ಈ ವರ್ಷವೇ ಅವಕಾಶ

ನವದೆಹಲಿ (ಪಿಟಿಐ): ರಾಷ್ಟ್ರೀಯ ರಕ್ಷಣಾ ಅಕಾಡೆಮಿಗೆ (ಎನ್‌ಡಿಎ) ಮಹಿಳೆಯರ ಪ್ರವೇಶವನ್ನು ಒಂದು ವರ್ಷ ಮುಂದೂಡಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ. ನವೆಂಬರ್‌ನಲ್ಲಿ ನಡೆಯಲಿರುವ ಪ್ರವೇಶ ಪರೀಕ್ಷೆಯನ್ನು ಬರೆಯಲು ಮಹಿಳಾ ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಿದೆ.

ಎನ್‌ಡಿಎಗೆ ಮಹಿಳೆಯರ ಪ್ರವೇಶದ ಅಧಿಸೂಚನೆಯನ್ನು 2022ರ ಮೇಯಲ್ಲಿ ಹೊರಡಿಸಲಾಗುವುದು ಎಂದು ಕೇಂದ್ರ ಸರ್ಕಾರವು ಕೋರ್ಟ್‌ಗೆ ತಿಳಿಸಿತ್ತು. ಆದರೆ, ಇದನ್ನು ಕೋರ್ಟ್ ಒಪ್ಪಿಕೊಂಡಿಲ್ಲ. ಮಹಿಳೆಯರ ಹಕ್ಕನ್ನು ಮೊಟಕು ಮಾಡುವುದು ಸಾಧ್ಯವಿಲ್ಲ ಎಂದು ನ್ಯಾಯಮೂರ್ತಿ ಎಸ್.ಕೆ.ಕೌಲ್ ನೇತೃತ್ವದ ಪೀಠವು ಹೇಳಿದೆ.

ಎನ್‌ಡಿಎ ಪ್ರವೇಶಕ್ಕಾಗಿ ಪ್ರತಿ ವರ್ಷ ಎರಡು ಪರೀಕ್ಷೆಗಳು–ಎನ್‌ಡಿಎ–1 ಮತ್ತು ಎನ್‌ಡಿಎ–2 ನಡೆಯುತ್ತವೆ. ಮೊದಲ ಪರೀಕ್ಷೆಗೆ ಯುಪಿಎಸ್‌ಸಿ ಜನವರಿಯಲ್ಲಿ ಅಧಿಸೂಚನೆ ಹೊರಡಿಸುತ್ತದೆ. ಎರಡನೇ ಪರೀಕ್ಷೆಯ ಅಧಿಸೂಚನೆಯನ್ನು ಮೇ-ಜೂನ್‌ನಲ್ಲಿ ಹೊರಡಿಸಲಾಗುತ್ತದೆ. ಜನವರಿಯಲ್ಲಿ ಅಧಿಸೂಚನೆ ಹೊರಡಿಸಿದ ಪರೀಕ್ಷೆಯು ಏಪ್ರಿಲ್‌ನಲ್ಲಿ ಮತ್ತು ಜೂನ್‌ನಲ್ಲಿ ಅಧಿಸೂಚನೆ ಹೊರಡಿಸಿದ ಪರೀಕ್ಷೆಯು ಸೆಪ್ಟೆಂಬರ್‌ನಲ್ಲಿ ನಡೆಯುತ್ತದೆ. ಆಯ್ಕೆಯಾದ ಅಭ್ಯರ್ಥಿಗಳ ಸೇರ್ಪಡೆಯು ಮರುವರ್ಷ ನಡೆಯುತ್ತದೆ. ಹಾಗಾಗಿ, ಸರ್ಕಾರವು 2022ರ ಮೇಯಲ್ಲಿ ಅಧಿಸೂಚನೆ ಹೊರಡಿಸಿದರೆ ಪ್ರವೇಶ ಅವಕಾಶವು 2023ರ ಜೂನ್‌ನಲ್ಲಷ್ಟೇ ಲಭ್ಯವಾಗುತ್ತದೆ ಎಂದು ಹಿರಿಯ ವಕೀಲ ಚಿನ್ಮಯ್ ಪ್ರದೀಪ್ ಶರ್ಮಾ ಪೀಠಕ್ಕೆ ವಿವರಿಸಿದರು.

ಕೋವಿಡ್‌ನಿಂದಾಗಿ ಮುಂದೂಡಿಕೆಯಾಗಿ ಈ ವರ್ಷದ ನವೆಂಬರ್‌ನಲ್ಲಿ ನಡೆಯಲಿರುವ ಎನ್‌ಡಿಎ ಪ್ರವೇಶ ಪರೀಕ್ಷೆಗೆ ಮಹಿಳೆಯರಿಗೆ ಅವಕಾಶ ಇರಬೇಕು ಎಂದು ಕೋರ್ಟ್ ನೀಡಿದ ಮಧ್ಯಂತರ ಆದೇಶದಲ್ಲಿ ಸ್ಪಷ್ಟವಾಗಿದೆ ಎಂದು ಅವರು ತಿಳಿಸಿದರು.

ಅತ್ಯಗತ್ಯವಾದ ಮೂಲಸೌಕರ್ಯ ಸೃಷ್ಟಿಸಲು ಸರ್ಕಾರಕ್ಕೆ ಸ್ವಲ್ಪ ಸಮಯ ಬೇಕು ಎಂಬುದು ನಿಜ. ಆದರೆ, ಅದಕ್ಕಾಗಿ ಮಹಿಳೆಯರ ಪ್ರವೇಶವನ್ನು ಒಂದು ವರ್ಷ ಮುಂದಕ್ಕೆ ಹಾಕಲಾಗದು ಎಂದು ಪೀಠವು ತಿಳಿಸಿತು.

ಪಠ್ಯಕ್ರಮ, ಮೂಲಸೌಕರ್ಯ, ದೈಹಿಕ ಸಾಮರ್ಥ್ಯ ತರಬೇತಿ, ವಸತಿ ಸೌಲಭ್ಯ ಮುಂತಾದವುಗಳಲ್ಲಿ ಮಾಡಬೇಕಾದ ಬದಲಾವಣೆಗಳ ಪರಿಶೀಲನೆಗೆ ಅಧ್ಯಯನ ತಂಡವನ್ನು ರಚಿಸಲಾಗಿದೆ. ಸಿದ್ಧತೆಗಳನ್ನು ಮಾಡಲು ಕನಿಷ್ಠ ಆರು ತಿಂಗಳು ಸಮಯ ಬೇಕು ಎಂದು ಸರ್ಕಾರದ ಪರವಾಗಿ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಬಾಟಿ ಹೇಳಿದರು.

ಆದರೆ, ಪ್ರವೇಶ ಪ್ರಕ್ರಿಯೆ ಆರಂಭವಾಗಬೇಕು. ಇತರ ವಿಷಯಗಳನ್ನು ಹಂತ ಹಂತವಾಗಿ ಸರಿಪಡಿಸಬಹುದು ಎಂದು ಪೀಠವು ತಿಳಿಸಿತು. 'ನಿಮ್ಮ ಮುಂದೆ ಇರುವ ಸಮಸ್ಯೆಗಳ ಬಗ್ಗೆ ಅರಿವಿದೆ. ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಸಾಮರ್ಥ್ಯ ನಿಮಗೆ ಇದೆ. ಹಾಗಾಗಿ, ಒಂದು ತಂಡಕ್ಕೆ ಅವಕಾಶ ನಿರಾಕರಣೆ ಮಾಡುವುದು ಬೇಡ. ಪರೀಕ್ಷೆ ಬರೆಯಲು ಅವಕಾಶ ಕೊಡಬೇಕು ಎಂಬುದು ಮಧ್ಯಂತರ ಆದೇಶದಲ್ಲಿ ಸ್ಪಷ್ಟವಾಗಿಯೇ ಇದೆ. ಎಷ್ಟು ಮಹಿಳೆಯರು ಪರೀಕ್ಷೆಯಲ್ಲಿ ಉತ್ತೀರ್ಣರಾಗುತ್ತಾರೆ ನೋಡೋಣ' ಎಂದು ಪೀಠವು ಹೇಳಿದೆ.

ಇದು ಪರಿವರ್ತನೆಯ ಹಂತ. ಪರಿವರ್ತನೆಯನ್ನು ಮುಂದೂಡಲು ಬಯಸುವುದಿಲ್ಲ. ಈ ಪರೀಕ್ಷೆಯಲ್ಲಿ ಅತ್ಯುತ್ತಮ ಫಲಿತಾಂಶ ಬಾರದಿರಬಹುದು. ಆದರೆ, ಭವಿಷ್ಯದತ್ತ ನೋಡಬೇಕು

ಸುಪ್ರೀಂ ಕೋರ್ಟ್

ವಿಜಯಪುರ, ಬಾಗಲಕೋಟೆ ಜಿಲ್ಲೆಗಳಲ್ಲಿ ಭಾರಿ ಮಳೆ

ಡೋಣಿ ಪ್ರವಾಹ: ಕೊಚ್ಚಿಹೋದ ವ್ಯಕ್ತಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ವಿಜಯಪುರ ಜಿಲ್ಲೆಯ ತಾಳಿಕೋಟೆ-ಹಡಗಿನಾಳ ಸಂಪರ್ಕ ಸೇತುವೆ ಮೇಲೆ ಉಕ್ಕಿ ಹರಿಯುತ್ತಿರುವ ಡೋಣಿ ನದಿಯನ್ನು ದಾಟಲು ಹೋದ ವ್ಯಕ್ತಿಯೊಬ್ಬರು ಬುಧವಾರ ಪ್ರವಾಹಕ್ಕೆ ಸಿಲುಕಿ ಕೊಚ್ಚಿ ಹೋಗಿದ್ದಾರೆ.

ತಾಳಿಕೋಟೆ ನಿವಾಸಿ ಇಬ್ರಾಹಿಂ ಬೇಪಾರಿ(56) ಕೊಚ್ಚಿಹೋದ ವ್ಯಕ್ತಿ ಎಂದು ಗುರುತಿಸಲಾಗಿದೆ. ಅಗ್ನಿ ಶಾಮಕ ಮತ್ತು ಪೊಲೀಸ್ ಸಿಬ್ಬಂದಿ ವ್ಯಕ್ತಿಯ ಪತ್ತೆಗೆ ಕಾರ್ಯಾಚರಣೆ ನಡೆಸಿದ್ದಾರೆ.

ವಿಜಯಪುರ ನಗರ ಸೇರಿದಂತೆ ಸಿಂದಗಿ, ತಾಳಿಕೋಟೆ, ನಾಲತವಾಡ, ಮುದ್ದೇಬಿಹಾಳ, ತಿಕೋಟಾ, ಬಬಲೇಶ್ವರ, ದೇವರ ಹಿಪ್ಪರಗಿ ವ್ಯಾಪ್ತಿಯಲ್ಲಿ ಮೂರು ದಿನಗಳಿಂದ ಧಾರಾಕಾರ ಮಳೆಯಾಗುತ್ತಿದೆ.

ಬಾಗಲಕೋಟೆ ಜಿಲ್ಲೆಯ ಬಾದಾಮಿಯಲ್ಲಿ ಧಾರಾಕಾರ ಮಳೆಯಾಗುತ್ತಿದ್ದು ರಸ್ತೆಗಳು ಜಲಾವೃತವಾಗಿವೆ. ಗುಳೇದಗುಡ್ಡ ಪಟ್ಟಣ ಹಾಗೂ ಸುತ್ತಮುತ್ತ ಎಡೆಬಿಡದೆ ಸುರಿಯುತ್ತಿರುವ ಮಳೆಗೆ ವಿವಿಧ ಗ್ರಾಮಗಳ ಹೊಲ ಮತ್ತು ಗದ್ದೆಗಳಲ್ಲಿ ನೀರು ನಿಂತು ಬೆಳೆ ನಷ್ಟವಾಗಿವೆ. ಹುನಗುಂದ ತಾಲ್ಲೂಕಿನ ಅಮೀನ-ಗಡದಲ್ಲಿ ಭರ್ಜರಿ ಮಳೆಯಾಗಿದ್ದು ಅಲ್ಲಿನ ಸೂಳಿಭಾವಿ ರಸ್ತೆಯ ಕೆರೆ ತುಂಬಿ ಕೋಡಿ ಬಿದ್ದಿದ್ದು ಆಶ್ರಯ ಕಾಲೊನಿ ಹಾಗೂ ಸುತ್ತಮುತ್ತ-ಲಿನ ಮನೆಗಳಿಗೆ ನೀರು ನುಗ್ಗಿದೆ. ಹನುಮಂತನ ಗುಡಿ ಜಲಾವೃತವಾಗಿದೆ.

ಹೊಸಪೇಟೆಯಲ್ಲಿ ದಿನವಿಡೀ ಬಿಟ್ಟು ಬಿಟ್ಟು ಮಳೆಯಾಗುತ್ತಿದೆ. ಹಗರಿಬೊಮ್ಮನಹಳ್ಳಿ, ಹೂವಿನ ಹಡಗಲಿಯಲ್ಲೂ ಕೆಲಕಾಲ ಮಳೆಯಾಗಿದೆ.

ಬಾಗಲಕೋಟೆ ಜಿಲ್ಲೆಯ ಬಾದಾಮಿಯಲ್ಲಿ ಬುಧವಾರ ಭಾರಿ ಮಳೆಯಾಗಿದ್ದು ರಾಡಿ ನೀರು ತುಂಬಿದ ರಸ್ತೆಬದಿಯಲ್ಲೇ ಮಹಿಳೆಯೊಬ್ಬರು ತರಕಾರಿ ಮಾರಾಟ ಮಾಡಿದರು

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	114.87	5,524	10,799
ಹಾರಂಗಿ	2,859	2,857.94	1,377	1,577
ಕಬಿನಿ	2,284	2,283.3	1,500	2,000
ಹೇಮಾವತಿ	2,922	2,915.92	2,178	5,172
ಲಿಂಗನಮಕ್ಕಿ	1,819	1,816.15	4,071	-
ಸೂಪಾ (ಮೀ)	564	557.03	2,811	2,811
ಮಾಣಿ	594.36	587.76	1558	-
ತುಂಗಭದ್ರಾ	1,633	1,632.90	14,121	13,524
ಮಲಪ್ರಭಾ	2,079.50	2,079.50	574	1,994
ಘಟಪ್ರಭಾ	2,175	2,175.00	2,391	2,391
ಭದ್ರಾ	186	185.30	3,019	3,621
ಆಲಮಟ್ಟಿ (ಮೀ)	519.60	519.60	10,945	10,945
ನಾರಾಯಣಪುರ (ಮೀ)	492.25	492.01	20,000	10,200

* ನೆಲಮಟ್ಟದಿಂದ

ಸಿಡಿಲು ಬಡಿದು ಎತ್ತು ಸಾವು

ಕಲಬುರ್ಗಿ: ಕಲಬುರ್ಗಿ ನಗರವೂ ಸೇರಿದಂತೆ ಜಿಲ್ಲೆಯಾದ್ಯಂತ ಬುಧವಾರ ಭಾರಿ ಮಳೆ ಸುರಿದಿದ್ದು, ಕಾಳಗಿ ತಾಲ್ಲೂಕಿನ ತೆಂಗಳಿ ಗ್ರಾಮದಲ್ಲಿ ಸಿಡಿಲು ಬಡಿದು ಎತ್ತು ಮೃತಪಟ್ಟಿದೆ.

ಫಕ್ರುಸಾಬ್ ಅಲ್ಲಾವುದ್ದೀನ್ ಗುಂಡಗುರ್ತಿ ಎಂಬುವವರ ತೊಗರಿಸನಹಳ್ಳಿ ಹೊಲದಲ್ಲಿ ತೊಗರಿ ಬೆಳೆಯಲ್ಲಿ ಗಳೆ ಹೊಡೆಯುತ್ತಿದ್ದಾಗ ಮಳೆ ಬರಲಾರಂಭಿಸಿತು. ಈ ಸಂದರ್ಭದಲ್ಲಿ ಸಿಡಿಲಿನ ಹೊಡೆತಕ್ಕೆ ಒಂದು ಎತ್ತು ಸ್ಥಳದಲ್ಲೇ ಜೀವ ಬಿಟ್ಟಿದೆ. ಮೃತ ಎತ್ತಿನ ಬೆಲೆ ಅಂದಾಜು ₹ 1 ಲಕ್ಷ ಇದೆ ಎಂದು ರೈತ ತಿಳಿಸಿದ್ದಾರೆ. ಮಳೆಯ ಅಬ್ಬರಕ್ಕೆ ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ವಡಗಾಂವದಲ್ಲಿ ರೈತ ಝುರೆಪ್ಪ ಅವರ ಹೊಲದಲ್ಲಿನ ಪಪ್ಪಾಯಿ ಗಿಡಗಳು ನೆಲಕ್ಕುರುಳಿವೆ.

ಅಸ್ಪೃಶ್ಯತೆ ಆಚರಣೆ: ಹೋಟೆಲ್ ಬಂದ್

ಚನ್ನರಾಯಪಟ್ಟಣ: ಅಸ್ಪೃಶ್ಯತೆ ಆಚರಿಸಿದ ದೂರಿನ ಮೇರೆಗೆ ತಾಲ್ಲೂಕಿನ ದಿಂಡಗೂರು ಗ್ರಾಮದ ಹೋಟೆಲ್ ಅನ್ನು ಮುಚ್ಚುವಂತೆ ತಹಶೀಲ್ದಾರ್ ಸೂಚಿಸಿದ್ದಾರೆ.

ಮುಜರಾಯಿ ಇಲಾಖೆಗೆ ಸೇರಿದ ಚನ್ನಕೇಶವ ದೇವಾಲಯ ಮತ್ತು ಹೋಟೆಲ್‌ಗೆ ಪರಿಶಿಷ್ಟ ಜಾತಿಯವರಿಗೆ ಪ್ರವೇಶ ನಿರಾಕರಿಸಲಾಗಿದೆ ಎಂದು ಪರಿಶಿಷ್ಟ ಸಮುದಾಯದ ಡಿ.ಸಿ. ಸಂತೋಷ್ ಅವರು ತಹಶೀಲ್ದಾರ್ ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ದೂರು ನೀಡಿದ್ದರು.

'ಸೋಮವಾರ ತಾಲ್ಲೂಕು ಆಡಳಿತ ಗ್ರಾಮದಲ್ಲಿ ಏರ್ಪಡಿಸಿದ್ದ ಸೌಹಾರ್ದ ಸಭೆಗೆ, ಅಸ್ಪೃಶ್ಯತೆ ಆಚರಿಸಿದ ಜಾತಿಯ ಮುಖಂಡರು ಹಾಜರಾಗದೇ ಇದ್ದುದರಿಂದ ಸಭೆಯನ್ನು ಮುಂದೂಡಲಾಗಿದೆ' ಎಂದು ಗ್ರಾಮದ ನಿವಾಸಿ ಡಿ.ಸಿ. ಸಂತೋಷ್ ಹೇಳಿದರು.

'ಹೋಟೆಲ್‌ಗೆ ಭೇಟಿ ನೀಡಿ ಪರಿಶೀಲಿಸಲಾಗಿದ್ದು, ಅಸ್ಪೃಶ್ಯತೆ ಆಚರಣೆ ಮಾಡುತ್ತಿದ್ದ ಕಾರಣ ಹೋಟೆಲ್ ಮುಚ್ಚಿಸಲಾಗುವುದು' ಎಂದು ತಹಶೀಲ್ದಾರ್ ಜೆ.ಬಿ. ಮಾರುತಿ ತಿಳಿಸಿದರು.

ಶ್ರೀಗಂಧ ಕೃಷಿಗೆ ಉತ್ತೇಜನ: ಕೇಂದ್ರ ಸಚಿವರ ಭರವಸೆ

ಪ್ರಜಾವಾಣಿ ವಾರ್ತೆ

ರಾಮನಗರ: ಶ್ರೀಗಂಧದ ಅರಣ್ಯ ಕೃಷಿಗೆ ಕರ್ನಾಟಕ ಸರ್ಕಾರ ಅವಕಾಶ ನೀಡಿದ್ದು, ಕೇಂದ್ರ ಸರ್ಕಾರದಿಂದ ನರೇಗಾ ಯೋಜನೆ ಅಡಿ ರೈತರಿಗೆ ಅಗತ್ಯ ನೆರವು ನೀಡಲಾಗುವುದು ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಗಿರಿರಾಜ್ ಸಿಂಗ್ ತಿಳಿಸಿದರು.

ಜಿಲ್ಲೆಯ ಮಾಗಡಿ ತಾಲ್ಲೂಕಿನ ಸೋಲೂರಿನಲ್ಲಿ ಶ್ರೀಗಂಧ ಕೃಷಿ ಮಾಡುತ್ತಿರುವ ಜಮೀನುಗಳಿಗೆ ಭೇಟಿ ನೀಡಿ, ಶ್ರೀಗಂಧದ ಬಗ್ಗೆ ಮಾಹಿತಿ ಪಡೆದ ಸಂದರ್ಭ ಪತ್ರಕರ್ತರ ಜೊತೆ ಅವರು ಮಾತನಾಡಿದರು. 'ಕರ್ನಾಟಕದಲ್ಲಿ ಶ್ರೀಗಂಧಕ್ಕೆ ಮಹತ್ವದ ಸ್ಥಾನವಿದೆ. ದೇಶ-ವಿದೇಶಗಳಲ್ಲೂ ಇದಕ್ಕೆ ಬೇಡಿಕೆ ಇದೆ. ಆದರೆ ಈವರೆಗೂ ಇದನ್ನು ಬೆಳೆಯಲು ಅನುಮತಿ ಇರಲಿಲ್ಲ. ವರ್ಷಗಳ ಹಿಂದಷ್ಟೇ ಸರ್ಕಾರ ಇದಕ್ಕೆ ಅನುಮತಿ ನೀಡಿರುವುದು ಉತ್ತಮ ಬೆಳವಣಿಗೆ. ಇದನ್ನು ಬೆಳೆಯುವ ರೈತರಿಗೆ ಇನ್ನಷ್ಟು ಉತ್ತೇಜನ ಸಿಗಬೇಕಿದೆ. ನರೇಗಾ ಅಡಿ ಈಗಾಗಲೇ ಇದಕ್ಕೆ ನೆರವು ನೀಡಲಾಗುತ್ತಿದೆ' ಎಂದರು.

'ಶ್ರೀಗಂಧ ರೈತರಿಗೆ ಉತ್ತೇಜನ ನೀಡುವ ಜೊತೆಗೆ ಮರಗಳಿಗೆ ರಕ್ಷಣೆಯನ್ನೂ ನೀಡಬೇಕು. ಆಗ ಮಾತ್ರ ರೈತರು ನಿರ್ಭೀತಿಯಿಂದ ಬೆಳೆಯಲು ಸಾಧ್ಯ' ಎಂದು ಸಂಸದ ಡಿ.ಕೆ. ಸುರೇಶ್ ಸಚಿವರಲ್ಲಿ ಮನವಿ ಮಾಡಿದರು.

ಸೋಲೂರಿನಲ್ಲಿ ಶ್ರೀಗಂಧದ ಕೃಷಿಯನ್ನು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಗಿರಿರಾಜ್ ಸಿಂಗ್ ವೀಕ್ಷಿಸಿದರು. ಸಂಸದ ಡಿ.ಕೆ. ಸುರೇಶ್ ಜೊತೆಗಿದ್ದರು

ಪದ್ಮರಾಜ ದಂಡಾವತಿ, ಹಾಗಲವಾಡಿಗೆ ಬಿ.ಎಂ.ಶ್ರೀ. ಪ್ರತಿಷ್ಠಾನ ಪ್ರಶಸ್ತಿ

ಬೆಂಗಳೂರು: ಬಿ.ಎಂ.ಶ್ರೀ ಪ್ರತಿಷ್ಠಾನ ಕೊಡಮಾಡುವ 'ಶಾ. ಬಾಲೂರಾವ್ ಅನುವಾದ ಪ್ರಶಸ್ತಿ'ಗೆ ಪತ್ರಕರ್ತ ಪದ್ಮರಾಜ ದಂಡಾವತಿ ಅವರು ಅನುವಾದಿಸಿದ ಕೃತಿ 'ಸೀತಾ' ಹಾಗೂ 'ಶಾ. ಬಾಲೂರಾವ್ ಯುವ ಬರಹಗಾರ ಪ್ರಶಸ್ತಿ'ಗೆ ಹರೀಶ್ ಹಾಗಲವಾಡಿ ಅವರ 'ಋಷ್ಯಶೃಂಗ' ಕೃತಿ ಆಯ್ಕೆಯಾಗಿದೆ.

2020ರಲ್ಲಿ ಮೊದಲ ಮುದ್ರಣಗೊಂಡ ಕೃತಿಗಳನ್ನು ಈ ಪ್ರಶಸ್ತಿಗಳಿಗೆ ಆಯ್ಕೆ ಮಾಡಲಾಗಿದೆ. ಅನುವಾದ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಪ್ರೊ.ಎಂ.ಎಸ್. ರಘುನಾಥ್ ಹಾಗೂ ಪ್ರೊ. ನಗರಗೆರೆ ರಮೇಶ್ ಇದ್ದರು. ಯುವ ಬರಹಗಾರರ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಡಾ. ಆನಂದರಾಮ ಉಪಾಧ್ಯ ಮತ್ತು ಡಾ.ಜಿ.ವಿ.ಆನಂದಮೂರ್ತಿ ಇದ್ದರು. ಈ ಪ್ರಶಸ್ತಿಗಳು ತಲಾ ₹ 25 ಸಾವಿರ ನಗದು, ಫಲಕವನ್ನು ಒಳಗೊಂಡಿವೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಡಾ.ಆರ್. ಲಕ್ಷ್ಮೀನಾರಾಯಣ ತಿಳಿಸಿದ್ದಾರೆ.



ಪದ್ಮರಾಜ ದಂಡಾವತಿ

ಹರೀಶ್ ಹಾಗಲವಾಡಿ

ಯಲ್ಲಮ್ಮ ದೇವಸ್ಥಾನ: ಭಕ್ತರ ದರ್ಶನಕ್ಕೆ ಮುಕ್ತ

ಬೆಳಗಾವಿ: ಜಿಲ್ಲೆಯ ಸವದತ್ತಿಯ ಯಲ್ಲಮ್ಮನಗುಡ್ಡದಲ್ಲಿರುವ ರೇಣುಕಾ ಯಲ್ಲಮ್ಮ ದೇವಸ್ಥಾನವನ್ನು ಸಾರ್ವಜನಿಕರ ದರ್ಶನಕ್ಕೆ ಸೆ.28ರಿಂದ ಅವಕಾಶ ಕಲ್ಪಿಸಲಾಗಿದೆ.

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಅ. 18ಕ್ಕೆ ಸಾವಿರ ಮಠಾಧೀಶರ ಸಮಾವೇಶ

ಚಿತ್ರದುರ್ಗ: ಮಧ್ಯ ಕರ್ನಾಟಕ ಭಾಗದ ಪ್ರಸಿದ್ಧ ಶರಣ ಸಂಸ್ಕೃತಿ ಉತ್ಸವ ಸೆ. 23ರಿಂದ ಆರಂಭವಾಗುತ್ತಿದೆ. ಇದರ ಅಂಗವಾಗಿ ಮುರುಘಾಮಠದಲ್ಲಿ ಅ. 18ರಂದು ಇದೇ ಪ್ರಥಮ ಬಾರಿ ಸಾವಿರ ಮಠಾಧೀಶರ ಸಮ್ಮುಖದಲ್ಲಿ 'ಸರ್ವ ಜನಾಂಗದ ಮಠಾಧೀಶರ ಬೃಹತ್ ಸಮಾವೇಶ' ಹಮ್ಮಿಕೊಳ್ಳಲಾಗಿದೆ.

'2020ರ ಗಣಮೇಳದಲ್ಲಿ ಆಯೋಜಿಸಿದ್ದ ಶಿವಯೋಗವು ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್ ಪ್ರಶಸ್ತಿಗೆ ಪಾತ್ರವಾಗಿದೆ. ಅದೇ ರೀತಿ ಈ ಬಾರಿಯ ಸಾಮೂಹಿಕ ಲಿಂಗ ಪೂಜೆಯೂ ದಾಖಲೆ ಸೃಷ್ಟಿಸಲಿದೆ' ಶಿವಮೂರ್ತಿ ಮುರುಘಾ ಶರಣರು ಬುಧವಾರ ತಿಳಿಸಿದರು.

ನಿಧನ ವಾರ್ತೆ

ಜಿ.ಭಗವಾನ್

ಕೋಲಾರ: 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಬಳಗದ ನಿವೃತ್ತ ಪತ್ರಿಕಾ ಛಾಯಾಗ್ರಾಹಕ ಜಿ. ಭಗವಾನ್ (92) ಅವರು ನಗರದ ಆರ್.ಎಲ್. ಜಾಲಪ್ಪ ಆಸ್ಪತ್ರೆಯಲ್ಲಿ ಬುಧವಾರ ನಿಧನರಾದರು.

ಕೇಂದ್ರದ ಮಾಜಿ ಸಚಿವ ಆರ್.ಎಲ್. ಜಾಲಪ್ಪ ಅವರ ಸಹೋದರಿಯ ಪತಿಯಾದ ಭಗವಾನ್ ಅವರು ಮೂಲತಃ ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ-ದವರು. 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯಲ್ಲಿ ಸುಮಾರು 25 ವರ್ಷಗಳ ಕಾಲ ಛಾಯಾಗ್ರಾಹಕರಾಗಿ ಸೇವೆ ಸಲ್ಲಿಸಿದ್ದ ಅವರು ದೇಶ, ವಿದೇಶದ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಭಗವಾನ್ ಅವರಿಗೆ ಪತ್ನಿ ಮತ್ತು 6 ಪುತ್ರಿಯರಿದ್ದಾರೆ. ದೊಡ್ಡಬಳ್ಳಾಪುರ-ದಲ್ಲಿನ ಈಡಿಗ ಸಮಾಜದ ರುದ್ರಭೂ-ಮಿಯಲ್ಲಿ ಗುರುವಾರ (ಸೆ.23) ಬೆಳಿಗ್ಗೆ 11ಕ್ಕೆ ಮೃತರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಮಂಗಳಾನಂದಾಜಿ



ತುರುವೇಕೆರೆ: ತಾಲ್ಲೂಕಿನ ಮಾದಿಹಳ್ಳಿ ಸಮೀಪದ ಬದರಿ-ಕಾಶ್ರಮದ ಮಾತಾ ಮಂಗಳಾನಂದಾಜಿ (74) ಅವರು ಅನಾರೋಗ್ಯದಿಂದಾಗಿ ಬುಧವಾರ ಮುಂಜಾನೆ ಅಮೆರಿಕದ ಕ್ಯಾಲಿಫೋರ್ನಿ-ಯಾದಲ್ಲಿ ನಿಧನರಾದರು.

ಅಮೆರಿಕದ ಆಸ್ಪತ್ರೆಯಲ್ಲಿ ಎರಡು ತಿಂಗಳಿಂದ ಚಿಕಿತ್ಸೆ ಪಡೆಯುತ್ತಿದ್ದರು.

ಸ್ವಾಮಿ ವಿವೇಕಾನಂದರ ಚಿಂತನೆಗಳಿಗೆ ಪ್ರಭಾವಿತರಾಗಿದ್ದ ಮಂಗಳಾನಂದಾಜಿ ಕ್ಯಾಲಿಫೊ-ರ್ನಿಯಾದಲ್ಲಿ ಶ್ರೀಮತ್ ಸ್ವಾಮಿ ಓಂಕಾರಾನಂದಜಿ ಮಹಾರಾಜ್ ಅವರು ಸ್ಥಾಪಿಸಿದ್ದ ಬದರಿಕಾಶ್ರಮ-ಕ್ಕೆ ಸೇರಿ, ಅವರಿಂದ ಮಂತ್ರ ದೀಕ್ಷೆ ಪಡೆದು ಸನ್ಯಾಸಿಯಾಗಿ ಮಾದಿಹಳ್ಳಿಗೆ ಬಂದಿದ್ದರು. 25 ವರ್ಷಗಳಿಂದ ಇಲ್ಲಿನ ಮಠದಲ್ಲಿ ಕಾರ್ಯನಿರ್ವಹಿಸಿದ್ದರು.

ಕ್ಯಾಲಿಫೋರ್ನಿಯಾದಲ್ಲಿ ಅಂತ್ಯಕ್ರಿಯೆ ನಡೆಸಲು ಅಲ್ಲಿನ ಸ್ಥಳೀಯ ಸರ್ಕಾರ ಅನುಮತಿ ನೀಡಿದ ನಂತರ ಅಂತಿಮ ಸಂಸ್ಕಾರ ನಡೆಯಲಿದೆ ಎಂದು ಆಶ್ರಮದ ಮೂಲಗಳು ತಿಳಿಸಿವೆ.

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ.
ದೂರವಾಣಿ : 0831-2463850 ಫ್ಯಾಕ್ಸ್ : 0831-2423008
No. EE/MI&GWDDD/BGM/TND/AE-1/2021-22/3134 ದಿನಾಂಕ : 21-09-2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಡಬ್ಲ್ಯೂ - 4) (2ನೇ ಕರೆ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಅಧಿನಿಯಮ-2000 ರ ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಅರ್ಹ ಗುತ್ತಿಗೆದಾರರಿಂದ ಐಟಂ ದರದಂತೆ ಗುತ್ತಿಗೆಯನ್ನು "ಇ-ಪ್ರೋಕ್ಯೂರಮೆಂಟ್" ಮುಖಾಂತರ ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಬೆಳಗಾವಿ ಇವರಿಂದ ಆಹ್ವಾನಿಸಲಾಗಿದೆ. ನಬಾರ್ಡ ಆರ್.ಐ.ಡಿ.ಎಫ್.-26 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಒಟ್ಟು 01 ಕಾಮಗಾರಿಗಾಗಿ ಗುತ್ತಿಗೆಯನ್ನು ಕರೆಯಲಾಗಿದ್ದು, ಅಂದಾಜು ಮೊತ್ತ ರೂ. 120.00 ಲಕ್ಷಗಳು. ಸದರಿ ಕಾಮಗಾರಿಗೆ ಗುತ್ತಿಗೆದಾರರು ದರವನ್ನು ಜಿ.ಎಸ್.ಟಿ. ರಹಿತ ನಮೂದಿಸುವುದು ಮತ್ತು ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ ಜಿ.ಎಸ್.ಟಿ. ಪ್ರತ್ಯೇಕವಾಗಿ ನೀಡಲಾಗುವುದು ಹಾಗೂ ಹೆಚ್ಚುವರಿ ಗುತ್ತಿಗೆ ಅವಧಿಯಲ್ಲಿ ಜಿ.ಎಸ್.ಟಿ. ದರಗಳಲ್ಲಿ ಹೆಚ್ಚಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವುದು. ಸದರಿ ಕಾಮಗಾರಿಯ ವಿವರಗಳನ್ನು "ಇ-ಪ್ರೋಕ್ಯೂರಮೆಂಟ್"ನಲ್ಲಿ ದಿನಾಂಕ : 24-09-2021 ರಿಂದ ಪಡೆಯಬಹುದು.

1) ಪೂರ್ವ ಟೆಂಡರ್ ಸಭೆ ದಿನಾಂಕ : 30-09-2021 ರ ಬೆಳಿಗ್ಗೆ 11.00 ಗಂಟೆಗೆ. 2) ಟೆಂಡರ್ ಕ್ಲಾರಿಫೀಕೇಷನ್ ದಿನಾಂಕ : 30-09-2021 ರ ಸಾಯಂಕಾಲ 5.30 ಗಂಟೆವರೆಗೆ. 3) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : 01-10-2021 ರ ಸಾಯಂಕಾಲ 4.00 ಗಂಟೆಯವರೆಗೆ. 4) ಟೆಂಡರ್ ತೆರೆಯುವ ದಿನಾಂಕ : 04-10-2021 ರ ಬೆಳಿಗ್ಗೆ 11.00 ಗಂಟೆ (ಸಾಧ್ಯವಾದಲ್ಲಿ). 5) ಹೆಚ್ಚಿನ ವಿವರಗಳಿಗೆ ಸಂಪರ್ಕಿಸುವ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ. 5) ಅಂತರಜಾಲ ತಾಣದ ವಿಳಾಸ : www.eproc.karnataka.gov.in

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಸ.ನೀ. ಮತ್ತು ಅಂ.ಅ.ಇ, ವಿಭಾಗ, ಬೆಳಗಾವಿ.
ಡಿಐಪಿಆರ್/ಬೆಳಗಾವಿ/793/ಮಣಿಪಾಲ್/21-22

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.
ಸಂ: ಕಾನಿಇಂ:ಲೋಇ:ವಿಕೊ:ಸರ್ವಿಸ್‌ಟೆಂಡರ್:ಟೆಂ:2021-22: 2035
ದಿನಾಂಕ:18-09-2021.

ಅಲ್ಪಾಕಾಲಾವಧಿ ಟೆಂಡರ್ ಪ್ರಕಟಣೆ
ಸೇವಾ ದರ ನಮೂದಿಸಲು ಟೆಂಡರ್ ಪ್ರಕಟಣೆ

2021-22ನೇ ಸಾಲಿನ ಲೆಕ್ಕ ಶೀರ್ಷಿಕೆ 2059-ಯೋಜನೇತರ ಅಡಿಯಲ್ಲಿ ಕೊಪ್ಪಳ ಲೋಕೋಪಯೋಗಿ ಇಲಾಖೆ ವಿಭಾಗದ ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ಇಲಾಖೆ ಕೊಪ್ಪಳ ಉಪ ವಿಭಾಗದ ಅಡಿಯಲ್ಲಿಯ ಸರ್ಕ್ಯೂರ್ಟ ಹೌಸ್ ಹಾಗೂ ಹಳೇ ಪ್ರವಾಸಿ ಮಂದಿರ, ಕೊಪ್ಪಳ, ಪ್ರವಾಸಿ ಮಂದಿರ ಹುಲಗಿ, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ ಹಾಗೂ ಲೋಕೋಪಯೋಗಿ ಇಲಾಖೆ ಉಪ ವಿಭಾಗ, ಕೊಪ್ಪಳ ನಿರ್ವಹಣೆ ಮಾಡುವುದಕ್ಕಾಗಿ ನೌಕರರನ್ನು ಹೊರಗುತ್ತಿಗೆ ಆಧಾರದಲ್ಲಿ ತಿಂಗಳೊಂದರ ಸೇವಾದರ ನಮೂದಿಸಲು ಸ್ಪರ್ದಾತ್ಮಕ ದರಗಳನ್ನು ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿತ ಹೊರಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಏಕ ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು "ಇ-ಪ್ರೂಕ್ಯೂರಮೆಂಟ್ ಪೋರ್ಟಲ್" http://eproc.karnataka.gov.in ಮುಖಾಂತರ ಭಾಗವಹಿಸಬಹುದು.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 08539-222318 ರಿಂದ ಮಾಹಿತಿ ಪಡೆಯಬಹುದು ಮತ್ತು ಅಂತರ್‌ಜಾಲದ ಮೂಲಕ ವೆಬ್ ಸೈಟ್‌ನಲ್ಲಿಯು http://eproc.karnataka.gov.in ರಲ್ಲಿ ಪಡೆಯಬಹುದು. ಈ ಟೆಂಡ್ ದಾಖಲೆಗಳನ್ನು ಸದರಿ ವೆಬ್ ಸೈಟ್‌ನಲ್ಲಿಯ ದಾಖಲೆಯಿಂದ ದಿನಾಂಕ: 22-09-2021ರ ನಂತರ ನಿಗದಿತ ಅವಧಿಯೊಳಗೆ ನಕಲು ತೆಗೆಯುವುದು (Down load) ಮಾಡಿಕೊಳ್ಳಬಹುದಾಗಿದೆ.

1. ಟೆಂಡರ್ ಪ್ರೊಸೆಸಿಂಗ್ ಶುಲ್ಕ : ಇ-ಪ್ರೂಕ್ಯೂರಮೇಮಟ್‌ನಲ್ಲಿರುವಂತೆ. 2. ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿತ ಕಾಲಾವಧಿ : ಇ-ಪ್ರೂಕ್ಯೂರಮೇಮಟ್‌ನಲ್ಲಿರುವಂತೆ. 3. ಟೆಂಡರ್ ಆಕ್ಷೇಪಣೆ: ಸ್ಪಷ್ಟೀಕರಣಗಳಿಗಾಗಿ ನಿಗದಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯ ಇ-ಪ್ರೂಕ್ಯೂರಮೇಂಟ್‌ನಲ್ಲಿರುವಂತೆ. 4. ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ 01-10-2021 ಸಮಯ 16.00 ಗಂಟೆ. 5. ಟೆಂಡರ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ 04-10-2021 ಸಮಯ 11.00 ಗಂಟೆ.

ಸಹಿ/-ಕಾನಿಇಂ,ಲೋಇ ವಿಭಾಗ, ಕೊಪ್ಪಳ.
ಡಿಐಪಿಆರ್/ಕೊಪ್ಪಳ/277/ಎಂಸಿಎ/2021-22

ಮೈಸೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ (ಪೂ&ಪ), ಸಯ್ಯಾಜಿರಾವ್ ರಸ್ತೆ
ಮೈಸೂರು - 570024 ಇ-ಮೇಲ್: eeemccmys@gmail.com
ಸಂಖ್ಯೆ: ಮೈನಪಾ/ಕಾಇಂ(ಪೂ&ಪ)/ಟಿಎನ್-40/21-22 ದಿನಾಂಕ: 21-09-2021

ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ವಿವಿಧ ಅನುದಾನದಡಿ ಒಟ್ಟು 76 ಕಾಮಗಾರಿಗಳನ್ನು (ಒಟ್ಟು ಮೊತ್ತ ರೂ.976.73 ಲಕ್ಷಗಳು) (ಕಾಮಗಾರಿಗಳ ಇಂಡೆಂಟ್ ಸಂಖ್ಯೆ: 119923, 112399, 113977, 118755, 114275, 118033, 118043, 119709, 111539, 119931, 119913, 118045, 119915, 112909, 119924, 113990, 119708, 111421, 119911, 111493, 114279, 119921, 114273, 114271, 115678, 88280, 114272, 112968, 111442, 100450, 83223, 111441, 114636, 119918, 119926, 111507, 119925, 118040, 104639, 119917, 119914, 115670, 114656, 114653, 119927, 112764, 111691, 115708, 119920, 111547, 103151, 119930, 112083, 113925, 113923, 112740, 111542, 112429, 85931, 99081, 99127, 116106, 111559, 112428, 113972, 119922, 119928, 83251, 111555, 99102, 112043, 106835, 104668, 99433, 119283, 114120) ಮೇಲೆ ಕಾಣಿಸಿದ ಉಲ್ಲೇಖದನ್ವಯ ಟೆಂಡರನ್ನು ಆಹ್ವಾನಿಸಲಾಗಿದ್ದು, ಟೆಂಡರನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಮುಂದುವರೆದು ಕಾಮಗಾರಿಗಳ ಹೆಸರು, ಟೆಂಡರ್‌ಗಿಟ್ಟ ಮೊತ್ತ ಹಾಗೂ ಇನ್ನಿತರೆ ಷರತ್ತುಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಚೇರಿಯಿಂದ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ: **23-09-2021**ರ ನಂತರ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್‌ನಲ್ಲಿ https://eproc.karnataka.gov.in ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ತಮ್ಮ ಬಿಡ್ಡನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಳಿಗೆ ಬಿಡ್ಡನ್ನು ಸಲ್ಲಿಸುವ ಕೊನೆಯ ದಿನಾಂಕ: **11-10-2021** ಹಾಗೂ ಬಿಡ್ಡನ್ನು ತೆರೆಯುವ ದಿನಾಂಕ: **12-10-2021**. ಇನ್ನಿತರೆ ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರರು (ಪೂರ್ವ ಮತ್ತು ಪಶ್ಚಿಮ) ಕಚೇರಿಯಿಂದ ಪಡೆಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಮೈಸೂರು ಮಹಾನಗರ ಪಾಲಿಕೆ, ಮೈಸೂರು
DIPR/MYS/YC/532/2021-22

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹರಪನಹಳ್ಳಿ
ಸಂಖ್ಯೆ : ಕಾಪಾಅ/ಗ್ರಾಕುನೀ&ನೈ/ತಾಂತ್ರಿಕ/Lab Instruments/2021-22/606
ದಿನಾಂಕ:21-09-2021.

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ-21/2021-22

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹರಪನಹಳ್ಳಿ ಇವರು WQMSP ಯೋಜನೆಯಡಿ ಸದರಿ ವಿಭಾಗ ವ್ಯಾಪ್ತಿಯ ಹೂವಿನಹಡಗಲಿ, ಕೂಡ್ಲಿಗಿ ತಾಲ್ಲೂಕು ಪ್ರಯೋಗಾಲಯಗಳಲ್ಲಿ ಮತ್ತು ವಿಜಯನಗರ ಜಿಲ್ಲಾ ಪ್ರಯೋಗಾಲಯಕ್ಕೆ ಅವಶ್ಯಕವಿರುವ ಉಪಕರಣಗಳನ್ನು ಖರೀದಿಸುವ ಸಲುವಾಗಿ ಕರ್ನಾಟಕ ಪಾರದರ್ಶಕ ಅಧಿನಿಯಮ 1999 ನಿಯಮಗಳು 2000ರ ಮೇರೆಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಅವಧಿ ದಿನಾಂಕ: 21-09-2021 ರಿಂದ 29-09-2021ರ ಸಾಯಂಕಾಲ 5.00 ಗಂಟೆಯವರೆಗೆ ಹಾಗೂ ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ತೆರೆಯುವ ದಿನಾಂಕ: 30-09-2021 ರಂದು ಸಂಜೆ 5.05 ಗಂಟೆ ನಂತರ. ಹೆಚ್ಚಿನ ಮಾಹಿತಿಗಾಗಿ www.eproc.karnataka.gov.in ವೆಬ್‌ಸೈಟ್‌ನಲ್ಲಿ ನೋಡಬಹುದು.

ಸಹಿ/- ಕಾರ್ಯಪಾಲಕ ಇಂಜಿನೀಯರ್, ಗ್ರಾಕುನೀ&ನೈ. ವಿಭಾಗ, ಹರಪನಹಳ್ಳಿ
ಡಿಐಪಿಆರ್/ಬಳ್ಳಾರಿ/383/ಎಂಸಿಎ/2021-22

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
(ಹಿಂದಿನ ಮೈಸೂರು ಮಿನರಲ್ಸ್ ಲಿಮಿಟೆಡ್)
ಆಡಳಿತ ಕಛೇರಿ: ಟಿ.ಟಿ.ಎಂ.ಸಿ. "ಎ" ಬ್ಲಾಕ್, 5ನೇ ಮಹಡಿ, ಬಿ.ಎಂ.ಟಿ.ಸಿ ಕಟ್ಟಡ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-560027. ದೂರವಾಣಿ: 080-22278813/14/15/16
ಫ್ಯಾಕ್ಸ್: 080-22213172 ವೆಬ್‌ಸೈಟ್: www.ksmcl.org
No: 537-II/KSMCL/MECH/CONVEYOR BELT/2021-22/1556 Date: 21-09-2021

ಇ-ಟೆಂಡರ್ ಆಹ್ವಾನ

ಸಂಸ್ಥೆಯ ಸುಬ್ಬರಾಯನಹಳ್ಳಿ ಮತ್ತು ತಿಮ್ಮಪ್ಪನಗುಡಿ ಕಬ್ಬಿಣದ ಅದಿರು ಗಣಿಗಳು, ಸಂಡೂರು, ಬಳ್ಳಾರಿ ಜಿಲ್ಲೆ ಇಲ್ಲಿಗೆ Downhill Pipe Conveyor System ಅನ್ನು ಅಳವಡಿಸುವ ಬಗ್ಗೆ Engineering Project Management Consultancy ರವರನ್ನು ನೇಮಿಸಲು ಇ-ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.

ವೇಳಾಪಟ್ಟಿ : 1) ಬಿಡ್-ಪೂರ್ವ ವಿಚಾರಣೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : **04-10-2021 ರಂದು 15:00 ಗಂಟೆ.** 2) ಬಿಡ್-ಪೂರ್ವ ಸಭೆಯ ದಿನಾಂಕ : **07-10-2021 ರಂದು 11:00 ಗಂಟೆಗೆ.** ಸ್ಥಳ : ಕೆಎಸ್‌ಎಂಸಿಎಲ್ ನೋಂದಾಯಿತ ಕಛೇರಿ, ಬೆಂಗಳೂರು. 3) ಬಿಡ್-ಪೂರ್ವ ವಿಚಾರಣೆಗಳಿಗೆ ಉತ್ತರಿಸುವುದು : ದಿನಾಂಕ : **12-10-2021**ಕ್ಕೆ ಮುಂಚಿತವಾಗಿ. 4) ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ : **29-10-2021 ರಂದು 17:00 ಗಂಟೆ.** 5) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : **02-11-2021 ರಂದು 11:00 ಗಂಟೆ.** 6) ಇಎಂಡಿ : **ರೂ. 11,00,000/-**

ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/-
ಪ್ರಧಾನ ವ್ಯವಸ್ಥಾಪಕರು (ಉ)
ವಾ.ಸಂ.ಇ/ಬೆಂ.ನಗರ/RO. No. 1615/2021-22

ಕೋವಿಡ್-19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ
ಸ.ನೀ. ಮತ್ತು ಅಂ.ಅ ವಿಭಾಗ, ಮಂಡ್ಯ

ಟೆಂಡರ್ ಅಧಿಸೂಚನೆ ಸಂಖ್ಯೆ:07/2021-22, ದಿ:21.09.2021

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ-571401 ಇವರು ಇ-ಪ್ರೋಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯು-4 ರ ಪ್ರಕಾರ "ಇ" - ಪ್ರಕ್ಯೂರ್‌ಮೆಂಟ್‌ನಲ್ಲಿ ಐಟಂವಾರು ಟೆಂಡರ್ ಅನ್ನು ಅಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ : 4702 ಅಣೆಕಟ್ಟು ಮತ್ತು ಪಿಕಪ್ (ಪ್ರಧಾನ ಕಾಮಗಾರಿ) ಅಡಿಯಲ್ಲಿ ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಕಬ್ಬಾರೆ ಏತ ನೀರಾವರಿ ಯೋಜನೆಗಾಗಿ ಶಿಂಷಾ ನದಿಗೆ ಅಡ್ಡಲಾಗಿ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿ ಟೆಂಡರಿಗಿಟ್ಟ ಮೊತ್ತ **ರೂ. 423.00 ಲಕ್ಷಗಳಾಗಿರುತ್ತದೆ** ಹಾಗೂ ಇ.ಎಂ.ಡಿ **ರೂ. 634500.00 ಗಳಾಗಿರುತ್ತದೆ.** ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಯನ್ನು ಈ ಕಛೇರಿ ವೇಳೆಯಲ್ಲಿ **ದಿನಾಂಕ : 05.10.2021 ರವರಗೆ** ಪಡೆಯಬಹುದಾಗಿದೆ. **ದಿನಾಂಕ:07.10.2021ರ 17-30 ಗಂಟೆವರೆಗೆ** ಟೆಂಡರ್‌ನ ನಿಗದಿತ ನಮೂನೆಗಳನ್ನು "www.eproc.karnataka. gov.in" ನಲ್ಲಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗದಿತ ಇ.ಎಂ.ಡಿ.ಯೊಂದಿಗೆ ಕೆಳಕಂಡ ಕಾಲಂಗಳನ್ವಯ ಬಿಡ್ಡ್‌ನ್ನು ಅಪ್ ಲೋಡ್ ಮಾಡಬಹುದಾಗಿದೆ. ಈ ಟೆಂಡರ್‌ನ ತಾಂತ್ರಿಕ ಬಿಡ್ಡ್‌ನ್ನು **ದಿನಾಂಕ : 11.10.2021 ರಂದು ಬೆಳಿಗ್ಗೆ : 11-00 ಗಂಟೆಗೆ** ತೆರೆಯಲಾಗುವುದು. ಈ ಟೆಂಡರ್‌ನ ಆರ್ಥಿಕ ಬಿಡ್ಡ್‌ನ್ನು **ದಿನಾಂಕ : 16.10.2021 ರಂದು ಬೆಳಿಗ್ಗೆ : 11-00 ಗಂಟೆಗೆ** ತೆರೆಯಲಾಗುವುದು. ಟೆಂಡರ್ ದಾಖಲಾತಿಗಳನ್ನು ವೆಬ್ ಸೈಟ್ "www.eproc.karnataka. gov.in" ನಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯ ಬಹುದು.

ವಿ.ಸೂ : ಸದರಿ ಟೆಂಡರ್‌ನ ಕಾಮಗಾರಿಯನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ ಇವರಿಗೆ ಕಾಯ್ದಿರಿಸಲಾಗಿದೆ. ಈ ಕಾಮಗಾರಿಗೆ ಸಂಬಂಧಿಸಿದಂತೆ ಷರತ್ತು ಮತ್ತು ನಿಬಂಧನೆಗಳನ್ನು "ಇ" - ಪ್ರಕಟಣೆಯಲ್ಲಿಯೇ ಪ್ರಕಟಿಸಲಾಗುವುದು. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಸ.ನೀ.ಮತ್ತು ಅಂ.ಅ.ವಿಭಾಗ, ಮಂಡ್ಯ
DIPR/AD-MDY/MCA/356/2021-22

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಪೋರೇಟ್ ಕಛೇರಿ, ನಂ. 29. ವಿಜಯನಗರ 2ನೇ ಹಂತ, ಹಿನಕಲ್, ಮೈಸೂರು-570 017.
ಸಂಖ್ಯೆ:ಸೆಸ್ಕ್/ಇಬಿಸಿ/ಎಸ್‌ಎ1/11/2021-22/10092 ದಿನಾಂಕ: 20.09.2021

ಪ್ರಕಟಣೆ

ಕೆ.ಇ.ಆರ್.ಸಿ (Fuel Cost Adjustment Charges-FAC) ಅಧಿನಿಯಮ-2013 ರಂತೆ ಅಕ್ಟೋಬರ್-2021 ರಿಂದ ಡಿಸೆಂಬರ್-2021 ರವರೆಗಿನ ಬಿಲ್ಲಿಂಗ್ ಕ್ವಾಟರ್‌ಗಾಗಿ FAC ಬಗ್ಗೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗದ ಮುಂದೆ ಅರ್ಜಿಯನ್ನು ಸಲ್ಲಿಸಿರುತ್ತದೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗವು ಆರ್ಥಿಕ ವರ್ಷ-22 ರ ಒಂದನೆಯ ತ್ರೈಮಾಸಿಕದ ವಿದ್ಯುತ್ ಖರೀದಿ ವೆಚ್ಚದ ಇಳಿಕೆಯನ್ನು ಗಮನದಲ್ಲಿರಿಸಿಕೊಂಡು, **FAC 6 ಪೈಸೆ/ಯೂನಿಟ್** ಅನ್ನು ಚಾವಿಸನಿನಿಯ ಎಲ್ಲಾ ಗ್ರಾಹಕರಿಗೆ **ಮರುಪಾವತಿಸಲು /ಹೊಂದಾಣಿಕೆ** ಮಾಡಲು ಆದೇಶ ಹೊರಡಿಸಿರುತ್ತದೆ. ಅದರಂತೆ, ಚಾವಿಸನಿನಿಯ ಎಲ್ಲಾ ಗ್ರಾಹಕರುಗಳಿಗೆ **ಅಕ್ಟೋಬರ್-2021 ರಿಂದ ಡಿಸೆಂಬರ್-2021**ರವರೆಗಿನ ಬಿಲ್ಲಿಂಗ್ ಕ್ವಾಟರ್‌ನಲ್ಲಿ ಪ್ರತಿ ಯೂನಿಟ್‌ಗೆ 6 ಪೈಸೆಯಂತೆ FAC ಯನ್ನು ಪ್ರಸ್ತುತ ವಿದ್ಯುತ್‌ದರದೊಂದಿಗೆ ಮರುಪಾವತಿ / ಹೊಂದಾಣಿಕೆ ಮಾಡಲಾಗುವುದು. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗದ FAC ಆದೇಶದ ಪ್ರತಿಯು ಚಾವಿಸನಿನಿಯ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ (cescmysore.karnataka.gov.in).

ಸಹಿ/- ಮುಖ್ಯ ಆರ್ಥಿಕ ಅಧಿಕಾರಿ
ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
DIPR/MYS/KAVITA/D34/2021-22

ಗುಲಬರ್ಗಾ ವಿಶ್ವವಿದ್ಯಾಲಯ
ಜ್ಞಾನ ಗಂಗಾ, ಕಲಬುರಗಿ-585 106, ಕರ್ನಾಟಕ
ದೂರವಾಣಿ ಸಂ. : 08472-263202, ಫ್ಯಾಕ್ಸ್ : 08472-263206
ಇ-ಮೇಲ್ : registrarugug@rediffmail.com
ಕ್ರ.ಸಂ. ಗುವಿಕ:ಆಡಳಿತ:ಸಾ-7:2021-22:980 ದಿನಾಂಕ : 21-09-2021

:: ಪರಿಷ್ಕೃತ ಅಧಿಸೂಚನೆ ::

ವಿಷಯ : ಗುಲಬರ್ಗಾ ವಿಶ್ವವಿದ್ಯಾಲಯದ **39ನೇ ವಾರ್ಷಿಕ ಘಟಿಕೋತ್ಸವವನ್ನು ನವಂಬರ್/ಡಿಸೆಂಬರ 2021** ರಲ್ಲಿ ಜರುಗಿಸುವ ಕುರಿತು.
ಉಲ್ಲೇಖ : 1. ಈ ಕಚೇರಿಯ ಅಧಿಸೂಚನೆ ಸಂಖ್ಯೆ ಗುವಿಕ:ಆಡಳಿತ:ಸಾ-7:2021-22:567, ದಿನಾಂಕ 27.07.2021
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 20-09-2021

ಉಲ್ಲೇಖ (1) ರಲ್ಲಿಯ ಈ ಕಚೇರಿಯ ಅಧಿಸೂಚನೆಯಲ್ಲಿ, ಗುಲಬರ್ಗಾ ವಿಶ್ವವಿದ್ಯಾಲಯದ 39ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರಮಾಣಪತ್ರ ಪಡೆಯಲು ನಿಗದಿತ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ದಿನಾಂಕಗಳನ್ನು ಈ ಕೆಳಗಿನಂತೆ ಪರಿಷ್ಕರಿಸಲಾಗಿದೆ.

ಶುಲ್ಕದ ವಿವರಗಳು	ಅಧಿಸೂಚನೆಯಲ್ಲಿ ನಿಗದಿಪಡಿಸಿದ ದಿನಾಂಕ	ಪರಿಷ್ಕೃತ ದಿನಾಂಕ
ರೂ. 50.00 ಪ್ರತಿದಿನಕ್ಕೆ ದಂಡ ಶುಲ್ಕದೊಂದಿಗೆ ಆನ್‌ಲೈನ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ	15-09-2021	09-11-2021
ರೂ. 500.00 ಪ್ರತಿ ದಿನಕ್ಕೆ ದಂಡ ಶುಲ್ಕದೊಂದಿಗೆ ಆನ್‌ಲೈನ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ :	16-09-2021 ರಿಂದ, ಘಟಿಕೋತ್ಸವ ಜರುಗುವ 10 ದಿವಸಗಳ ಮುಂಚೆ	ದಿನಾಂಕ: 10-11-2021 ರಿಂದ 20-11-2021

ಸಹಿ/- ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/624/ಎಂ.ಸಿ&ಎ/2021-22

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜನೀಯರರವರ ಕಛೇರಿ
ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ
ಸಂಖ್ಯೆ:ಕಾಪಾಅ/ಗ್ರಾನೀಸಮತ್ತುನೈ/ವಿಯಾ/ಟೆ.ಪ್ರ/ಪಿ.ಬಿ/JJM/2021-22/694 ದಿನಾಂಕ:15-09-2021

ಅಲ್ಪಾವಧಿ ಟೆಂಡರ ಪ್ರಕಟಣೆ (ದ್ವಿ ಲಕೋಟೆ) "ಇ-ಪ್ರೊಕ್ಯೂರ್‌ಮೆಂಟ್" ಮೂಲಕ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜನೀಯರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಅಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.

1) ಕಾಮಗಾರಿಯ ವಿವರ: 1) Naganatagi (General)–Est Cost Rs.63.00 lakhs- Indent No.34680, 2) Saidapur (General)–Est Cost Rs.68.00 lakhs- Indent No. 34681 & 3) Chandapur (General)–Est Cost Rs.53.40 lakhs- Indent No. 34682 in SHAHAPUR TQ, 4) Tumkur (General)–Est Cost Rs.187.10 lakhs- Indent No.34683, 5) Thanagunda (General)–Est Cost Rs.154.68 lakhs- Indent No. 34684, 6) Allipur (General)–Est Cost Rs.139.70 lakhs- Indent No. 34685, 7) Siddapur-B (General)–Est Cost Rs.55.00 lakhs- Indent No. 34686, 8) Arkera-B (General)–Est Cost Rs.79.00 lakhs- Indent No. 34687, 9) Gudalgunta (General)–Est Cost Rs.68.00 lakhs- Indent No. 34688, 10) Bheemanagar (General)–Est Cost Rs.99.80 lakhs- Indent No. 34689, 11)Hedagimadra (General)–Est Cost Rs.175.00 lakhs- Indent No. 34690, 12) Ashok Nagar (General)–Est Cost Rs.60.10 lakhs- Indent No. 34691 & 13) Khanahalli (General)–Est Cost Rs.67.60 lakhs- Indent No. 34692 in YADGIR TQ. 2) ಲೆಕ್ಕ ಶೀರ್ಷಿಕೆ: Jal Jeevan Mission-2020-21, 3) ಗುತ್ತಿಗೆದಾರರ, ಅರ್ಹತೆ : 3ನೇ ಹಾಗೂ ಮೇಲ್ಪಟ್ಟು ದರ್ಜೆ, 4) ಟೆಂಡರ ಫಾರಂ ಪಡೆಯುವ ದಿನಾಂಕ: **27-09-2021 ರಿಂದ 05-10-2021.** 5) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ : ಇ-ಪ್ರೊಕ್ಯೂರ್‌ಮೆಂಟ್ ಪ್ರಕಾರ. 6) Pre Bid Meeting Date: 30-09-2021 & Address: Office of the Executive Engineer, RDW&S Division Yadgir at 11.00 am, 7) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: **05-10-2021 ಸಾಯಂಕಾಲ 4.30 ಗಂಟೆವರೆಗೆ.** 8) ತಾಂತ್ರಿಕ ಬಿಡ್ಡ್ ತೆರೆಯುವ ದಿನಾಂಕ: **07-10-2021 ಸಾಯಂಕಾಲ 5.00 ಗಂಟೆಯ ನಂತರ.** 9) ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: **11-10-2021 ಬೆಳಿಗ್ಗೆ 11.00 ಗಂಟೆಯ ನಂತರ,** 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರೈಲ್ವೇ ನಿಲ್ದಾಣದ ಹತ್ತಿರ ಯಾದಗಿರ. 11) ಅಂತರ್ಜಾಲ ತಾಣದ ವಿಳಾಸ: www.eproc.karnataka.gov.in.

ಸಹಿ/- ಕಾರ್ಯಪಾಲಕ ಇಂಜನೀಯರರು,
ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ.
ವಾ.ಸಾ.ಸಂ.ಇ/ಯಾದಗಿರಿ/200/ಎಂಸಿ&ಎ/2021-22

ಸವಿತಾ, ಮಡಿವಾಳ ಸಮಾಜದಲ್ಲಿ ಕುಲಕಸುಬು ನಂಬಿದವರನ್ನು ಸಂಕಷ್ಟಕ್ಕೆ ದೂಡಿದ ಕೋವಿಡ್

ಕ್ಷೌರ, ಬಟ್ಟೆಯಿಂದೀಗ ಹೊಟ್ಟೆ ತುಂಬುತ್ತಿಲ್ಲ

• ಬಸವರಾಜ ಹವಾಲ್ದಾರ

ಹುಬ್ಬಳ್ಳಿ: 'ಅಂದು ದುಡಿದು ಅಂದೇ ಊಟ ಮಾಡಬೇಕು' ಎನ್ನುವ ಆರ್ಥಿಕ ಸ್ಥಿತಿಯಲ್ಲಿರುವ ನಮ್ಮಂತಹವರಿಗೆ ತಿಂಗಳುಗಟ್ಟಲೇ ಲಾಕ್‌ಡೌನ್ ಮಾಡಿದ್ದರಿಂದ ಹೊಟ್ಟೆಗೆ ಹಿಟ್ಟಿಲ್ಲದಂತಾಗಿತ್ತು. ಸಾಲ–ಸೋಲ ಮಾಡಿ ಲಾಕ್‌ಡೌನ್ ಸಮಯದಲ್ಲಿ ಜೀವನ ನಡೆಸಿದ್ದಾಯಿತು. ಈಗಲೂ ಬಟ್ಟೆ ಒಗೆಯುವುದಕ್ಕೆ, ಇಸ್ತ್ರಿ ಮಾಡುವುದಕ್ಕೆ ಮೊದಲಿನಷ್ಟು ಬಟ್ಟೆಗಳು ಬರುತ್ತಿಲ್ಲ. ಕ್ಷೌರಕ್ಕೆ ಬರಲು ಸಾಕಷ್ಟು ಜನರು ಹಿಂದೇಟು ಹಾಕುತ್ತಾರೆ. ಊಟಕ್ಕೆ ವ್ಯವಸ್ಥೆಯಾದರೆ ಸಾಕು ಎನ್ನುವಂತಾಗಿದೆ'

ಹೀಗೆಂದು ಒಂದೇ ಉಸಿರಿನಲ್ಲಿ ಕೋವಿಡ್‌ನಿಂದಾಗಿರುವ ಸಂಕಷ್ಟಗಳ ಸರಮಾಲೆಯನ್ನು ಬಿಚ್ಚಿಡುತ್ತಾರೆ ಸವಿತಾ ಹಾಗೂ ಮಡಿವಾಳ ಸಮುದಾಯ ದುಡಿಮೆಗಾರರು.

'ಊರಿಗೆ ಹೋಗೋಣ ಎಂದರೆ ಭೂಮಿ ಇಲ್ಲ. ಅಪ್ಪನ ಕಾಲದ ಗುಡಿಸಲು ಯಾವಾಗಲೋ ಬಿದ್ದು ಹೋಗಿದೆ. ಇಲ್ಲಿ ಮನೆ, ಅಂಗಡಿಯ ಬಾಡಿಗೆ ಕಟ್ಟಬೇಕು. ಜತೆಗೆ ಕುಟುಂಬದ ಜವಾಬ್ದಾರಿ. ಕೋವಿಡ್ ಭಯದಿಂದ ಸಾಕಷ್ಟು ಜನರು ತಿಂಗಳಿಗೆ ಮಾಡಿಸುತ್ತಿದ್ದ ಕ್ಷೌರವನ್ನು ಎರಡು ತಿಂಗಳಿಗೆ ಮಾಡಿಸುತ್ತಿದ್ದಾರೆ. ಶೇವಿಂಗ್ ಅನ್ನು ಮನೆಯಲ್ಲಿಯೇ ಮಾಡಿಕೊಳ್ಳಲಾರಂಭಿಸಿದ್ದಾರೆ. ಎಷ್ಟೋ ಮನೆಗಳಲ್ಲಿ ಮಕ್ಕಳ ಕ್ಷೌರವನ್ನು ಕುಟುಂಬದ ಹಿರಿಯರೇ ಮಾಡುತ್ತಿದ್ದಾರೆ. ಇಲ್ಲಿರಲಾಗದ, ಊರಿಗೆ ಮರಳಲಾರದ ಅತಂತ್ರ ಸ್ಥಿತಿಯಲ್ಲಿದ್ದೇವೆ' ಎನ್ನುತ್ತಾರೆ ಧಾರವಾಡ ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಗೋಪಾಲ ವಲ್ಲೆಪಲ್ಲೆ.

'ಲಾಕ್‌ಡೌನ್ ಸಮಯದಲ್ಲಿ ಬಟ್ಟೆ ಒಗೆಯುವುದು, ಇಸ್ತ್ರಿ ಮಾಡುವುದನ್ನು ರೂಢಿ ಮಾಡಿಕೊಂಡಿದ್ದಾರೆ. ಕೋವಿಡ್‌ನಿಂದ ಮನೆಯೊಳಕ್ಕೆ ಸೇರಿಸಿಕೊಳ್ಳಲು ಹಿಂದೇಟು ಹಾಕಿ ತಾವೇ ಬಟ್ಟೆ ತೊಳೆದುಕೊಳ್ಳುತ್ತಿದ್ದಾರೆ' ಎನ್ನುತ್ತಾರೆ ಧಾರವಾಡ ಜಿಲ್ಲಾ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಬಸವರಾಜ ಬೆಳಗಲಿ.

ದರ ಬದಲಾವಣೆ ಇಲ್ಲ: ಎರಡು ವರ್ಷಗಳಿಂದ ಬಹುತೇಕ ಅಂಗಡಿಗಳಲ್ಲಿ ಕ್ಷೌರ, ಬಟ್ಟೆ ಒಗೆಯುವುದು, ಇಸ್ತ್ರಿ ಮಾಡುವ ದರದಲ್ಲಿ ಬದಲಾವಣೆ ಮಾಡಿಲ್ಲ. ಗ್ರಾಹಕರು ಬಂದರೆ ಸಾಕು ಎನ್ನುವಂತಹ ಸ್ಥಿತಿ ಇರುವುದರಿಂದ ಬೆಲೆ ಏರಿಸಲು ಹೋಗಿಲ್ಲ. 'ನಾವು ಬೆಲೆ ಏರಿಸಿಲ್ಲ. ಆದರೆ, ಜೀವನಕ್ಕೆ ಬೇಕಾದ ಉಳಿದ ಎಲ್ಲ ವಸ್ತುಗಳ ಬೆಲೆಯಲ್ಲಿ ಏರಿಕೆಯಾಗಿದೆ. ಆದಾಯ ಕಡಿಮೆಯಾಗಿ, ಖರ್ಚು ಹೆಚ್ಚಿರುವುದರಿಂದ ಸಾಲದ ಸುಳಿಗೆ ಸಿಲುಕುತ್ತಿದ್ದೇವೆ' ಎನ್ನುತ್ತಾರೆ ಕ್ಷೌರಿಕ ವೃತ್ತಿ ಮಾಡುತ್ತಿರುವ ಲಕ್ಷ್ಮಣ.

ಷರತ್ತುಗಳು ಅಡ್ಡಿ: ಬಿಪಿಎಲ್ ಪಡಿತರ ಚೀಟಿ ಹೊಂದಿರಬೇಕು. ಆಧಾರ್ ಸಂಖ್ಯೆ ಲಿಂಕ್ ಹೊಂದಿರುವ ಬ್ಯಾಂಕ್ ಖಾತೆ ಹೊಂದಿರುವುದು ಕಡ್ಡಾಯ. ಜನ್ಮ ದಿನ ದಾಖಲೆ ನೀಡಬೇಕು ಎನ್ನುವುದು ಸೇರಿ ಹಲವು ದಾಖಲೆಗಳನ್ನು ಕೇಳಲಾಗಿದೆ. ಬಿಪಿಎಲ್ ಪಡಿತರ ಚೀಟಿ ಹಾಗೂ ಆಧಾರ್ ಸಂಖ್ಯೆ ಹೊಂದಿಲ್ಲದವರು ಬಹಳಷ್ಟು ಜನರಿದ್ದಾರೆ. ಆಧಾರ್ ಸಂಖ್ಯೆಯಲ್ಲಿ ಮೊಬೈಲ್ ಸಂಖ್ಯೆ ಅಪ್‌ಡೇಟ್ ಮಾಡದಿರುವವರು, ಹೆಸರು ತಪ್ಪಾಗಿರುವವರೂ ಇದ್ದಾರೆ. ಅರ್ಜಿಯನ್ನು ಸೇವಾ ಸಿಂಧೂ ಪೋರ್ಟಲ್‌ನಲ್ಲಿ ಸಲ್ಲಿಸಬೇಕಿದೆ. ಗ್ರಾಮೀಣ ಪ್ರದೇಶದಲ್ಲಿ ಅನಕ್ಷರಸ್ಥರಿರುವುದರಿಂದ ಅರ್ಜಿ ಸಲ್ಲಿಸಲು ಆಗುತ್ತಿಲ್ಲ ಎನ್ನುವುದು ಮುಖಂಡರ ದೂರು.

ಕುಟುಂಬಕ್ಕೆ ಒಬ್ಬರಿಗೆ ಎನ್ನುವುದು ಅಡ್ಡಿ: ಕೂಡು ಕುಟುಂಬವಾಗಿದ್ದರೂ, ಹಲವಾರು ಮಂದಿ ಬೇರೆ, ಬೇರೆ ಅಂಗಡಿಗಳಲ್ಲಿ, ಒಂದೇ ಅಂಗಡಿಯಲ್ಲಿ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಒಬ್ಬರಿಗೆ ಪರಿಹಾರ ನೀಡುತ್ತಿರುವುದರಿಂದ ವೃತ್ತಿಯಲ್ಲಿದ್ದರೂ ಇನ್ನೊಬ್ಬರಿಗೆ ಸಿಗುತ್ತಿಲ್ಲ.

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ಕಟ್ಟಡ ಕಾರ್ಮಿಕರಿಗೆ ಪಿಂಚಣಿ, ದುರ್ಬಲತೆ ಪಿಂಚಣಿ, ವಸತಿ ಯೋಜನೆಗೆ ಆರ್ಥಿಕ ನೆರವು, ಹೆರಿಗೆ ಭತ್ಯೆ, ಅವರ ಮಕ್ಕಳಿಗೆ ಶಿಷ್ಯ ವೇತನ, ಅಡುಗೆ ಅನಿಲ ಸಂಪರ್ಕ ಸೇರಿದಂತೆ ಹಲವು ಸೌಲಭ್ಯಗಳನ್ನು ಕಲ್ಪಿಸಲಾಗುತ್ತದೆ. ಬೇರೆ ಕಾರ್ಮಿಕರಿಗೆ ಈ ಸೌಲಭ್ಯಗಳಿಲ್ಲ. ಎಲ್ಲ ಕಾರ್ಮಿಕರಿಗೂ ಇಂತಹ ಸೌಲಭ್ಯ ದೊರೆಯಬೇಕು ಎನ್ನುವುದು ಅವರ ಆಗ್ರಹ.

ಹುಬ್ಬಳ್ಳಿಯ ಅಶೋಕನಗರದ ದೋಬಿಘಾಟ್‌ನಲ್ಲಿ ಬಟ್ಟೆ ಒಣ ಹಾಕುತ್ತಿರುವುದು– ಪ್ರಜಾವಾಣಿ ಚಿತ್ರ: ಗುರು ಹಬೀಬ

ಬದುಕು ಬೀದಿಗೆ ತಂದ ಕೋವಿಡ್

ಕೋವಿಡ್ ಪರಿಹಾರಕ್ಕೆ ಅರ್ಜಿ ಸಲ್ಲಿಸಿದವರ ವಿವರ			
ಸಮಾಜ	ಅರ್ಜಿ ಸಲ್ಲಿಕೆ	ಪರಿಹಾರ ವಿತರಣೆ	ಬಾಕಿ ಅರ್ಜಿ
ಮಡಿವಾಳ	71,193	64,176	7,193
ಸವಿತಾ	62,526	55,466	7,526

ವೃತ್ತಿಯಲ್ಲಿರುವ 2.30 ಲಕ್ಷ ಜನರ ಪಟ್ಟಿಯನ್ನು ಪರಿಹಾರಕ್ಕಾಗಿ ಮಂಡಳಿಗೆ ನೀಡಲಾಗಿತ್ತು. ಆದರೆ, 54 ಸಾವಿರ ಜನರಿಗೆ ನೀಡಲಾಗಿದೆ.

ಎನ್.ಆರ್. ನಾಗೇಶ, ಅಧ್ಯಕ್ಷ, ಕರ್ನಾಟಕ ರಾಜ್ಯ ಸವಿತಾ ಸಮಾಜ ಮೈಸೂರು ಘಟಕ

ಸರ್ಕಾರ ನಮ್ಮ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಸಂಘದಿಂದ ಕೋವಿಡ್‌ನಿಂದ ಮೃತರಾದವರಿಗೆ ತಲಾ ₹5,000 ಪರಿಹಾರ ನೀಡಲಾಗಿದೆ

ಬಿ.ಆರ್. ಪ್ರಕಾಶ, ಅಧ್ಯಕ್ಷ, ಕರ್ನಾಟಕ ರಾಜ್ಯ ಮಡಿವಾಳ ಕ್ಷೇಮಾಭಿವೃದ್ಧಿ ಸಂಘ

ನಿಗಮಕ್ಕಿಲ್ಲ ಅಧ್ಯಕ್ಷ

ಹುಬ್ಬಳ್ಳಿ: ಮಡಿವಾಳ ಮಾಚಿದೇವರ ಅಭಿವೃದ್ಧಿ ನಿಗಮ ರಚಿಸಲಾಗಿದೆ. ಆದರೆ, ಅದಕ್ಕೆ ಅಧ್ಯಕ್ಷರನ್ನು ನೇಮಿಸಿಲ್ಲ ಎಂದು ದೂರುತ್ತಾರೆ ಕರ್ನಾಟಕ ರಾಜ್ಯ ಮಡಿವಾಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಬಿ.ಆರ್. ಪ್ರಕಾಶ್.

ಎನ್. ಶಂಕರಪ್ಪ ಅವರನ್ನು ನೇಮಕ ಮಾಡಲಾಗಿತ್ತು. ಅವರು ಬೇಡ ಎಂದ ಮೇಲೆ ಯಾರನ್ನೂ ನೇಮಿಸಿಲ್ಲ. ₹5 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ ಎನ್ನುತ್ತಾರೆ. ಆದರೆ, ಅದರಿಂದ ಸಮುದಾಯದ ಯಾರಿಗೂ ಪ್ರಯೋಜನವಾಗಿಲ್ಲ ಎಂದರು.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ರಾಜ್ಯದಲ್ಲಿ ಮತಾಂತರ ನಿಷೇಧ ಕಾಯ್ದೆಯ ಅಗತ್ಯ ಇದೆಯೆ?
ಸಂವಾದ ಮಧ್ಯಾಹ್ನ 1ರಿಂದ 2
ಭಾಗವಹಿಸುವವರು:
ರಮೇಶ್ ಬಾಬು, ವಕ್ತಾರ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ. **ಜಗದೀಶ ಶೇಣವ,** ಸಹವಕ್ತಾರ, ಬಿಜೆಪಿ.
ಸಬಿಹಾ ಭೂಮಿಗೌಡ, ವಿಶ್ರಾಂತ ಕುಲಪತಿ, ಅಕ್ಕಮಹಾದೇವಿ ಮಹಿಳಾ ವಿ.ವಿ. **ಕೆ.ಎಸ್.ವಿಮಲಾ,** ರಾಜ್ಯ ಉಪಾಧ್ಯಕ್ಷೆ, ಜನವಾದಿ ಮಹಿಳಾ ಸಂಘಟನೆ
ಮಿಸಳ್ ಹಾಪ್ಚಾ
ಮಳೆ ತರಲು ಬಂದ ಜೋಕುಮಾರ
https://bit.ly/3kw0rkh
ಪಾಡ್‌ಕಾಸ್ಟ್: ಈದಿನದ ವಿಶೇಷ : ಸಂಜೆ 4 **ಆಟನೋಟ,** ಪ್ರತೀ ದಿನ: ಬೆಳಿಗ್ಗೆ 7 **ವಚನವಾಣಿ,** ಬೆ. 7.30 **ದಿನದ ಸೂಕ್ತಿ,** ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 **ಪ್ರಜಾವಾಣಿ ವಾರ್ತೆ ಬುಲೆಟಿನ್,** ಬೆಳಿಗ್ಗೆ 9.30 **ಸಂಪಾದಕೀಯ,** ಬೆಳಿಗ್ಗೆ 9 **ಪ್ರಚಲಿತ**
ಪ್ರಜಾವಾಣಿ ಕನ್ನಡ ಧ್ವನಿ

ಮುಂಡಗೋಡಿನ ಬೌದ್ಧ ಗುರು ಯಶಿ ಅವರ ಮೃತದೇಹದ ಅಂತ್ಯಕ್ರಿಯೆಗೆ ಸಿದ್ಧತೆ ಮಾಡಿಕೊಂಡಿರುವುದು

ಮೃತಪಟ್ಟು ಹದಿನಾಲ್ಕು ದಿನಗಳ ನಂತರ ಅಂತ್ಯಕ್ರಿಯೆ

ಮುಂಡಗೋಡ: ಕಳೆದ ಹದಿಮೂರು ದಿನಗಳ ಹಿಂದೆ ಮೃತಪಟ್ಟರೂ, ಆತ್ಮ ಜೀವಂತವಾಗಿದೆ ಎಂದು ಬೌದ್ಧ ಬಿಕ್ಕುಗಳಿಂದ ಪೂಜಿಸಲಾಗುತ್ತಿದ್ದ, ಶೇರ್ ಗಾಡೆನ್ ಬೌದ್ಧ ಮಂದಿರದ ಹಿರಿಯ ಬೌದ್ಧ ಬಿಕ್ಕು ಯಶಿ ಫೋನತ್ಸೋ(90) ಅವರ ಅಂತ್ಯಕ್ರಿಯೆ ಗುರುವಾರ ಬೆಳಿಗ್ಗೆ ನಡೆಯಲಿದೆ.

ಸೆ.9ರಂದು ಅವರು ಮೃತಪಟ್ಟಿದ್ದರು. ಆದರೆ ಅವರ ಮೃತದೇಹದಿಂದ ದುರ್ವಾಸನೆಯಾಗಲಿ, ಮೂಗಿನಿಂದ ದ್ರವವಾಗಲಿ ಬರುತ್ತಿಲ್ಲವೆಂಬ ಕಾರಣಕ್ಕೆ ಗುರುವಿನ ಆತ್ಮ ದೇಹ ಬಿಟ್ಟು ಹೋಗುವರೆಗೂ ಇತರ ಬಿಕ್ಕುಗಳು ಪೂಜೆ, ಪ್ರಾರ್ಥನೆಯಲ್ಲಿ ತೊಡಗಿದ್ದರು.

'ಇತರ ಬೌದ್ಧ ಮುಖಂಡರು ಮೃತದೇಹವನ್ನು ಪರೀಕ್ಷಿಸಿದ್ದು, ಆತ್ಮವು ದೇಹದಿಂದ ಹೋಗಿದೆ ಎಂಬುದನ್ನು ದೃಢಪಡಿಸಿದ್ದಾರೆ. ಇದರಿಂದ ಶೇರ್ ಗಾಡೆನ್ ಬೌದ್ಧ ಮಂದಿರದ ಆವರಣದಲ್ಲಿ ಗುರುವಾರ ಅಂತ್ಯಕ್ರಿಯೆ ನಡೆಸಲಾಗುವುದು' ಎಂದು ಬೌದ್ಧ ಬಿಕ್ಕು ಶೇರ್ ಗಾಡೆನ್ ಮೊನ್ಯಾಸ್ಟ್ರಿಯ ಗೆಶೆ ಜಾಂಗಚುಪ್ ನೊರ್ಬು ತಿಳಿಸಿದರು.

'ಮೃತಪಟ್ಟಿರುವ ಬೌದ್ಧ ಗುರು ಯಶಿ ಅವರು, ವಾರಾಣಸಿಯಲ್ಲಿ 20ಕ್ಕೂ ಹೆಚ್ಚು ವರ್ಷ ಬೌದ್ಧತತ್ವದ ಬೋಧನೆ ಮಾಡಿದ್ದಾರೆ. ಇಲ್ಲಿನ ಬೌದ್ಧ ಮಂದಿರದಲ್ಲಿ ಮಾರ್ಗದರ್ಶಕರಾಗಿ ಕೆಲಸ ಮಾಡಿದ್ದಾರೆ. ಧ್ಯಾನ ಮಾಡುತ್ತಲೇ, ಪ್ರಾಣ ತ್ಯಾಗ ಮಾಡಿದ್ದರು. ಆದರೆ, ಅವರ ಆತ್ಮ ಇನ್ನೂ ಜೀವಂತ ಇದ್ದಿದ್ದರಿಂದ, ಇಲ್ಲಿಯವರೆಗೂ ಕೋಣೆಯಲ್ಲಿ ಮಂಚದಲ್ಲಿ ಮಲಗಿದ್ದ ಸ್ಥಿತಿಯಲ್ಲಿಯೇ ಇದ್ದ ಮೃತದೇಹದ ಮುಂದೆ ದೀಪ ಬೆಳಗಿಸಿ, ಪ್ರಾರ್ಥಿಸಲಾಗುತ್ತಿತ್ತು' ಎಂದರು.

ಮತ್ಸ್ಯಪ್ರಿಯರಿಗೆ 'ಮೀನು ಚಕ್ಕುಲಿ': ನಾರಿಯರ ಪ್ರಯತ್ನ

• ಸಂಧ್ಯಾ ಹೆಗಡೆ

ಮಂಗಳೂರು: ಕರಾವಳಿಗರ ಊಟದ ತಟ್ಟೆಯಲ್ಲಿ ಪ್ರಮುಖ ಖಾದ್ಯವಾಗಿ ಕಾಣಿಸುತ್ತಿದ್ದ ಮೀನು ಈಗ ಚಹಾದ ಜತೆಗಿನ ಕುರುಕಲು ಸ್ನ್ಯಾಕ್ಸ್ ರೂಪದಲ್ಲಿ ಮಾರುಕಟ್ಟೆಗೆ ಬಂದಿದೆ. ನಾಲ್ವರು ಮಹಿಳೆಯರು ಸೇರಿ ಸಿದ್ಧಪಡಿಸುತ್ತಿರುವ 'ಮೀನು ಚಕ್ಕುಲಿ' ಮತ್ಸ್ಯ ಪ್ರಿಯರ ಮನಗೆದ್ದಿದೆ.

ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ಲಾಯಿಲದ ಸಮಗ್ರ ಸಂಜೀವಿನಿ ಒಕ್ಕೂಟದ ಸ್ನೇಹ ಸ್ವ ಸಹಾಯ ಸಂಘದ ಮಹಿಳೆಯರಾದ ಸಾವಿತ್ರಿ ಎಚ್.ಎಸ್., ಶಾಹಿದಾ ಬೇಗಂ, ನಸೀಮಾ ಮತ್ತು ಹರ್ಷಿಯಾ ಸೇರಿ, 18 ದಿನಗಳಲ್ಲಿ ಸುಮಾರು 45 ಕೆ.ಜಿ. ಯಷ್ಟು 'ಮೀನು ಚಕ್ಕುಲಿ' ಮಾರಾಟ ಮಾಡಿದ್ದಾರೆ.

ಬೆಳ್ತಂಗಡಿಯ ಲಾಯಿಲದಲ್ಲಿ ಮೀನಿನ ಚಕ್ಕುಲಿ ತಯಾರಿಸಿ ಪ್ರದರ್ಶಿಸಿದ ಮಹಿಳೆಯರು –ಪ್ರಜಾವಾಣಿ ಚಿತ್ರಗಳು

ಮೀನಿನ ಪಾಲಕ್, ಮೀನಿನ ಪೆಪ್ಪರ್, ಮೀನಿನ ಖಾರ, ಮೀನಿನ ಸಾದಾ ಹೀಗೆ ನಾಲ್ಕು ಬಗೆಯ ಚಕ್ಕುಲಿಗಳು ಇವರ ಅಡುಗೆಮನೆಯಲ್ಲಿ ಸಿದ್ಧವಾಗುತ್ತವೆ. 100 ಗ್ರಾಂ ಚಕ್ಕುಲಿಗೆ ₹35 ದರ.

'ಸ್ವ ಉದ್ಯೋಗ ಕಾರ್ಯಕ್ರಮದ ಅಡಿಯಲ್ಲಿ ಚಕ್ಕುಲಿ ತಯಾರಿಕೆ, ಅಣಬೆ ಕೃಷಿ, ಮೀನು ಸಾಕಣೆ, ಮಸಾಲೆ ಹುಡಿ ತಯಾರಿಕೆ ಹೀಗೆ ನಾವು ಪ್ರತ್ಯೇಕವಾಗಿ ಗೃಹೋದ್ಯಮ ನಡೆಸುತ್ತಿದ್ದೆವು. ಆಗಸ್ಟ್‌ನಲ್ಲಿ ಮೀನುಗಾರಿಕಾ ಕಾಲೇಜು ಮತ್ತು ನಬಾರ್ಡ್ ನೀಡಿದ ಮೀನು ಉತ್ಪನ್ನಗಳ ಸಿದ್ಧತಾ ತರಬೇತಿಯಲ್ಲಿ ಚಕ್ಕುಲಿ ತಯಾರಿಕೆ ಕಲಿತೆವು. ಕಲಿತ ವಿದ್ಯೆಯನ್ನು ಕಾರ್ಯಗತಗೊಳಿಸಲು ₹25 ಸಾವಿರ ಬಂಡವಾಳ ಹಾಕಿ, ಉದ್ಯಮ ಪ್ರಾರಂಭಿಸಿದ್ದೇವೆ' ಎಂದು ಸಾವಿತ್ರಿ ತಿಳಿಸಿದರು.

ಮೀನಿನಿಂದ ತಯಾರಿಸಿದ ಚಕ್ಕುಲಿ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/3nXhBLF

'ಮಂಗಳೂರು ನಗರ, ಸ್ಥಳೀಯ ಅಂಗಡಿಗಳಲ್ಲಿ ಮಾರಾಟಕ್ಕೆ ಇಟ್ಟಿದ್ದ ಉತ್ಪನ್ನಗಳು ಗ್ರಾಹಕರ ಮನಗೆದ್ದಿವೆ. ರಾಣಿ ಮೀನಿನ (ಮದ್ಮಲ್) ಮೀಟ್ ಜತೆಗೆ ಅಕ್ಕಿಹಿಟ್ಟು, ಹುರಿಗಡಲೆ ಹಿಟ್ಟು, ಉದ್ದಿನ ಬೇಳೆ, ಜೀರಿಗೆ, ಓಂಕಾಳು ಬಳಸಿ ತಯಾರಿಸುವ ಚಕ್ಕುಲಿ ತಿಂದರೆ, ಮೀನು ತಿಂದ ಸ್ವಾದ ಸಿಗುತ್ತದೆ ಎಂಬುದು ಗ್ರಾಹಕರ ಅಭಿಪ್ರಾಯ' ಎಂದು ಹರ್ಷಿಯಾ ಪ್ರತಿಕ್ರಿಯಿಸಿದರು.

ಪ್ರಜಾವಾಣಿ ವಿಶೇಷ

ರಾಣಿ ಮೀನಿನ ಮೀಟ್ ಜತೆಗೆ ವಿವಿಧ ಪದಾರ್ಥಗಳನ್ನು ಸೇರಿಸಿ ತಯಾರಿಸುವ ಈ ಮೌಲ್ಯವರ್ಧಿತ ಉತ್ಪನ್ನವನ್ನು 45ರಿಂದ 50 ದಿನಗಳವರೆಗೆ ಕೆಡದಂತೆ ಇಡಬಹುದು.

ಸಾವಿತ್ರಿ ಎಚ್.ಎಸ್., ಚಕ್ಕುಲಿ ತಯಾರಕಿ

'ಮೀನಿನ ಕೋಡುಬಳೆ, ಹಪ್ಪಳ, ಸಂಡಿಗೆ ಮತ್ತಿತರ ಉತ್ಪನ್ನಗಳನ್ನು ತಯಾರಿಸಿದ್ದೇವೆ. ಮೀನುಗಾರಿಕಾ ಸಚಿವ ಎಸ್. ಅಂಗಾರ ಅವರು ನಮಗೆ ಪ್ರೋತ್ಸಾಹ ನೀಡಿರುವುದು ಬಲ ಹೆಚ್ಚಿಸಿದೆ' ಎಂದು ಶಾಹಿದಾ ಬೇಗಂ, ನಸೀಮಾ ಹೇಳಿದರು. ಸಂಪರ್ಕ ಸಂಖ್ಯೆ: 9980887012, 8050727601.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಅಮೃತ ಗ್ರಾಮ ಪಂಚಾಯಿತಿ
ಯೋಜನೆಯ ಉದ್ಘಾಟನೆ
ಸ್ಥಳ: ವಿಧಾನಸೌಧ, ಬೆಂಗಳೂರು
ದಿನಾಂಕ: 23.09.2021, ಬೆಳಿಗ್ಗೆ 10.00 ಗಂಟೆಗೆ

ರಾಜ್ಯದಲ್ಲಿ ಆಯ್ದ 750 ಗ್ರಾಮ ಪಂಚಾಯಿತಿಗಳಲ್ಲಿ
ಅಮೃತ ಗ್ರಾಮ ಪಂಚಾಯಿತಿ
ಯೋಜನೆ ಜಾರಿ
ಸಮಗ್ರ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಅಮೃತ ಗ್ರಾಮ ಪಂಚಾಯಿತಿ

ಯೋಜನೆಯ ಆಶಯಗಳು
ಆಯ್ಕೆ ಮಾಡುವ ಗ್ರಾಮ ಪಂಚಾಯಿತಿಗಳಲ್ಲಿ
- ಶಾಲೆಗಳು / ಅಂಗನವಾಡಿಗಳಿಗೆ ಆಟದ ಮೈದಾನ ಹಾಗೂ ಆವರಣ ಗೋಡೆ, ಕುಡಿಯುವ ನೀರು, ಶೌಚಾಲಯ ಒದಗಿಸುವುದು
- ಕೆರೆ / ಕಲ್ಯಾಣಿಗಳ ಪುನಶ್ಚೇತನ
- ಪ್ರತಿ ಮನೆಗೆ ಕುಡಿಯುವ ನೀರಿನ ನಳ ಸಂಪರ್ಕ
- ಶೇ. 100 ರಷ್ಟು ಘನ ತ್ಯಾಜ್ಯ ವಿಂಗಡಣೆ ಹಾಗೂ ವಿಲೇವಾರಿ
- ತ್ಯಾಜ್ಯ ನೀರಿನ ವೈಜ್ಞಾನಿಕ ನಿರ್ವಹಣೆ
- ಗ್ರಾಮ ಪಂಚಾಯಿತಿ ಕಟ್ಟಡಗಳಿಗೆ ಸೌರ ವಿದ್ಯುತ್ ಹಾಗೂ ಬೀದಿ ದೀಪಗಳ ಅಳವಡಿಕೆ
- ಗ್ರಂಥಾಲಯಗಳ ಡಿಜಿಟಲೀಕರಣ
- ಉದ್ಯಾನವನ ನಿರ್ಮಾಣ

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಕೆ.ಎಸ್. ಈಶ್ವರಪ್ಪರವರು ಕಾರ್ಯಕ್ರಮಕ್ಕೆ ಚಾಲನೆ ನೀಡುತ್ತಿರುವುದು.

ಕಲಬುರ್ಗಿಯ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯ ಪ್ರಾದೇಶಿಕ ಕೇಂದ್ರ ಕಟ್ಟಡ ಉದ್ಘಾಟನೆ (ವರ್ಚುಯಲ್)
ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಅಮೃತ ಗ್ರಾಮ ಪಂಚಾಯಿತಿ ಯೋಜನೆಯ ಉದ್ಘಾಟನೆ
ಶ್ರೀ ಗಿರಿರಾಜ್ ಸಿಂಗ್
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು, ಭಾರತ ಸರ್ಕಾರ

ಅಭಿವೃದ್ಧಿ ಯೋಜನೆಗಳ ಛಾಯಾ ಚಿತ್ರಗಳ ಪ್ರದರ್ಶನ ಉದ್ಘಾಟನೆ
ಶ್ರೀ ಕೆ.ಎಸ್. ಈಶ್ವರಪ್ಪ
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು, ಕರ್ನಾಟಕ ಸರ್ಕಾರ

ಸರ್ವರಿಗೂ ಆದರದ ಸ್ವಾಗತ
ಡಾ|| ಹೆಚ್.ಎಸ್. ಪ್ರಕಾಶ್ ಕುಮಾರ್ ಕ.ಇ.ಸೇ. ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಅನಿರುದ್ಧ್ ಶ್ರವಣ್. ಪಿ ಭಾ.ಆ.ಸೇ. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಶಿಲ್ಪಾ ನಾಗ್ ಭಾ.ಆ.ಸೇ. ನಿರ್ದೇಶಕರು ಇ – ಆಡಳಿತ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಎನ್. ಮಂಜುಶ್ರೀ ಭಾ.ಆ.ಸೇ ಮಿಷನ್ ಡೈರೆಕ್ಟರ್ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ
ಮಾಸ್ಕ್ ಧರಿಸಿ ವ್ಯಕ್ತಿಗತ ಅಂತರ ಕಾಪಾಡಿ ಆರೋಗ್ಯದಿಂದಿರಿ
ಪ್ರಿಯಾಂಕ ಮೇರಿ ಫ್ರಾನ್ಸಿಸ್ ಭಾ.ಆ.ಸೇ. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಡಾ|| ಎಸ್. ಸೆಲ್ವ ಕುಮಾರ್ ಭಾ.ಆ.ಸೇ. ಸರ್ಕಾರದ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ
ಉಮಾ ಮಹದೇವನ್ ಭಾ.ಆ.ಸೇ. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ. ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಎಲ್.ಕೆ. ಅತೀಕ್ ಭಾ.ಆ.ಸೇ. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ದೇಶದ ಕಾಡು, ವನ್ಯಜೀವಿ ನದಿಗಳು ಸೇರಿ ಪರಿಸರ ಉಳಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

ಮೈಸೂರು ಅತ್ಯಾಚಾರ ಪ್ರಕರಣ: ಎಫ್‌ಐಆರ್ ದಾಖಲಿಸುವಲ್ಲಿ ವಿಳಂಬ– ಆರೋಪ

ಪೊಲೀಸ್ ಇಲಾಖೆ ವೈಫಲ್ಯ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣ ನಿಭಾಯಿಸುವಲ್ಲಿ ಪೊಲೀಸ್ ಇಲಾಖೆಯ ವೈಫಲ್ಯ ಎದ್ದು ಕಾಣುತ್ತದೆ ಎಂದು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ತರಾಟೆಗೆ ತೆಗೆದುಕೊಂಡರು.

ವಿಧಾನಸಭೆಯಲ್ಲಿ ಬುಧವಾರ ನಿಯಮ 69 ರಡಿ ವಿಷಯ ಪ್ರಸ್ತಾಪಿಸಿದ ಅವರು, 'ಘಟನೆ ನಡೆದ ಪ್ರದೇಶವು ರಿಂಗ್ ರಸ್ತೆಗೆ ಕೂಗಳತೆಯಲ್ಲೇ ಇದೆ. ಅದು ನಿರ್ಜನ ಪ್ರದೇಶವೇನೂ ಅಲ್ಲ. ಆದರೆ, ಮೈಸೂರು ಪೊಲೀಸ್ ಆಯುಕ್ತರು ಆ ಪ್ರದೇಶದಲ್ಲಿ ಅನೇಕ ಬಾರಿ ಇಂತಹ ಕೃತ್ಯಗಳು ನಡೆದಿವೆ ಎಂದು ಹೇಳಿದ್ದಾರೆ. ಹಾಗಿದ್ದರೆ, ಅಲ್ಲಿ ಪೊಲೀಸರ ಗಸ್ತು ಏಕೆ ಹಾಕಿಲ್ಲ. ಈ ಸ್ಥಳ ಆಲನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಗೆ ಸೇರಿದೆ. ಠಾಣೆಯಲ್ಲಿ ಸಾಕಷ್ಟು ಸಿಬ್ಬಂದಿ ಇದ್ದರೂ ಗಸ್ತು ಹಾಕುವುದಿಲ್ಲ ಎಂದರೆ ಆಶ್ಚರ್ಯವಾಗುತ್ತದೆ' ಎಂದರು.

ಅಷ್ಟೇ ಅಲ್ಲ ಘಟನೆ ನಡೆದ 14–15 ಗಂಟೆಗಳ ಬಳಿಕವಷ್ಟೆ ಎಫ್‌ಐಆರ್ ದಾಖಲು ಮಾಡಲಾಗಿದೆ. ಇಷ್ಟು ತಡ ಮಾಡಿದ್ದು ಏಕೆ? ಪ್ರಕರಣವನ್ನು ಮುಚ್ಚಿ ಹಾಕುವ ಉದ್ದೇಶವಿತ್ತೇ? ಜೆ.ಎಸ್ ವರ್ಮಾ ಸಮಿತಿ ವರದಿ ಶಿಫಾರಸ್ಸಿನಂತೆ ಅತ್ಯಾಚಾರಕ್ಕೆ ಒಳಗಾದ ಯುವತಿಯನ್ನು ಸರ್ಕಾರಿ ಆಸ್ಪತ್ರೆಗೆ ಸೇರಿಸದೇ ಖಾಸಗಿ ಆಸ್ಪತ್ರೆಗೆ ಸೇರಿಸಿದ್ದು ಏಕೆ? ಆಕೆಯಿಂದ ಹೇಳಿಕೆ ಏಕೆ ಪಡೆಯಲಿಲ್ಲ' ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ವಿಧಾನಸಭೆಯಲ್ಲಿ ಬುಧವಾರ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮಧ್ಯೆ ವಾಗ್ವಾದ ನಡೆಯಿತು. ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಇದ್ದಾರೆ

ಸಂತ್ರಸ್ತರೊಂದಿಗೆ ಉಡಾಫೆಯಿಂದ ಮಾತನಾಡಿದ, ಪ್ರಕರಣ ದಾಖಲಿಸಲು ವಿಳಂಬ ಮಾಡಿದ ಅಧಿಕಾರಿಗಳನ್ನು ಅಮಾನತು ಮಾಡಬೇಕಿತ್ತು. ಗೃಹ ಇಲಾಖೆ ವಿಫಲವಾಗಿದೆ

ಜಿ.ಟಿ.ದೇವೇಗೌಡ, ಜೆಡಿಎಸ್ ಸದಸ್ಯ

ಪೊಲೀಸರು ಅಪರಾಧ ನಿಯಂತ್ರಿಸುವುದನ್ನು ಬಿಟ್ಟ ಲಿಕ್ಕರ್ ಶಾಪ್ ಮುಂದೆ ಮಾಮೂಲಿ ವಸೂಲಿಗೆ ನಿಲ್ಲುತ್ತಾರೆ. ಮೈಸೂರು ನಗರಕ್ಕೆ ಕೆಟ್ಟ ಹೆಸರು ತಂದಿದ್ದಾರೆ

ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ

'ಗೃಹ ಸಚಿವರೂ ಈ ಪ್ರಕರಣದ ಬಗ್ಗೆ ಸೂಕ್ಷ್ಮವಾಗಿ ನಡೆದುಕೊಂಡಿಲ್ಲ. ಮೈಸೂರಿಗೆ ಹೋದವರು ಬೆಳಿಗ್ಗೆ ಚಾಮುಂಡಿ ದೇವಸ್ಥಾನಕ್ಕೆ ಹೋದರು, ಆ ಬಳಿಕ ಪೊಲೀಸ್ ಅಕಾಡೆಮಿಗೆ ಹೋದರು. ಕೊನೆಯಲ್ಲಿ ಘಟನೆ ಸ್ಥಳಕ್ಕೆ ಹೋದರು. ಪ್ರಕರಣವನ್ನು ಎಷ್ಟು ಗಂಭೀರವಾಗಿ ತೆಗೆದುಕೊಂಡಿದ್ದಾರೆ ಎಂಬುದಕ್ಕೆ ಇದು ಸಾಕ್ಷಿ. ಘಟನ ಸ್ಥಳಕ್ಕೆ ತಡವಾಗಿ ಹೋಗಿದ್ದು ವೈಫಲ್ಯ ಅಲ್ಲವೆ' ಎಂದರು.

'ತೀರ್ಥಹಳ್ಳಿ ಪ್ರಕರಣ ನಡೆದಾಗ ವಿರೋಧ ಪಕ್ಷದಲ್ಲಿದ್ದ ಕೆ.ಎಸ್. ಈಶ್ವರಪ್ಪ, 'ಸಿದ್ದರಾಮಯ್ಯ ಮಗಳ ಮೇಲೆ ಅತ್ಯಾಚಾರ ನಡೆದಿದ್ದರೆ, ಜಾರ್ಜ್ ಮಗಳು ಮರಿಯಮ್ಮ ಮೇಲೆ ಅತ್ಯಾಚಾರ ನಡೆದಿದ್ದರೆ ಏನು ಮಾಡುತ್ತಿದ್ದರು' ಎಂದು ಪ್ರಶ್ನಿಸಿದ್ದರು. ಆದರೆ, ಪ್ರಕರಣದಲ್ಲಿ ಅತ್ಯಾಚಾರ ನಡೆದಿರಲಿಲ್ಲ. ಬಿಜೆಪಿಯವರು ದೊಡ್ಡ ವಿವಾದ ಮಾಡಿದರು' ಎಂದು ಕಾಂಗ್ರೆಸ್‌ನ ಕೆ.ಜೆ. ಜಾರ್ಜ್ ಹೇಳಿದರು.

ಎಫ್‌ಐಆರ್ ವಿಳಂಬ ಜಟಾಪಟಿ: ಪೊಲೀಸರು ಎಫ್‌ಐಆರ್ ದಾಖಲಿಸಲು ವಿಳಂಬ ಮಾಡಿದ್ದಾರೆ ಎಂದು ಸಿದ್ದರಾಮಯ್ಯ ಆರೋಪಿಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿಕ್ರಿಯಿಸಿ, 'ಯುವತಿ ಬೆಳಿಗ್ಗೆ 11 ಗಂಟೆಗೆ ಹೇಳಿಕೆ ನೀಡಿದ್ದಾಳೆ. 12 ಗಂಟೆಗೆ ಎಫ್‌ಐಆರ್ ದಾಖಲಿಸಲಾಗಿದೆ. ಮಣಿಪಾಲ ಅತ್ಯಾಚಾರ ಪ್ರಕರಣದಲ್ಲಿ ನಿಮ್ಮ ಸರ್ಕಾರ ಏನು ಮಾಡಿತ್ತು ಎಂಬುದನ್ನು ಬಿಚ್ಚಿಡಲಾ' ಎಂದು ಪ್ರಶ್ನಿಸಿದರು.

ಕೆ.ಜೆ.ಜಾರ್ಜ್, 'ಮಣಿಪಾಲ ಅತ್ಯಾಚಾರ ಪ್ರಕರಣದಲ್ಲಿ ಎಸ್ಟೇಟ್ ಅಧಿಕಾರಿಯ ಹೇಳಿಕೆಯ ಆಧಾರದಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು. ಅಲ್ಪಸಂಖ್ಯಾತನೊಬ್ಬ ಈ ಕೃತ್ಯ ನಡೆಸಿದ್ದಾನೆ ಎಂದು ಬಿಜೆಪಿಯವರು ಹುಯಿಲೆಬ್ಬಿಸಿದ್ದರಿಂದ ಆರೋಪಿಗಳ ಪತ್ತೆ ಸ್ವಲ್ಪ ವಿಳಂಬವಾಯಿತು. ಆ ಆರೋಪಿಗಳಿಗೆ ಜೀವಾವಧಿ ಶಿಕ್ಷೆಯಾಗುವಂತೆ ನೋಡಿಕೊಳ್ಳಲಾಗಿದೆ' ಎಂದು ಸಮರ್ಥಿಸಿಕೊಂಡರು.

ಕೈಕಟ್ಟಿ ಕುಳಿತುಕೊಳ್ಳುವೆ ಎಂದ ರಮೇಶ್ ಕುಮಾರ್

'ಮೈಸೂರು ಅತ್ಯಾಚಾರ ಪ್ರಕರಣದಲ್ಲಿ ಯುವತಿ ಹೇಳಿಕೆ ನೀಡುವವರೆಗೆ ಎಫ್‌ಐಆರ್ ದಾಖಲಿಸಲು ಪೊಲೀಸರು ಕಾದಿದ್ದು ಸರಿಯಲ್ಲ. ಸ್ವಯಂಪ್ರೇರಿತರಾಗಿ ಎಫ್‌ಐಆರ್ ದಾಖಲಿಸಬಹುದಿತ್ತು' ಎಂದು ಕಾಂಗ್ರೆಸ್‌ನ ಕೆ.ಆರ್.ರಮೇಶ್ ಕುಮಾರ್ ಸಲಹೆ ನೀಡಿದರು.

'ಎಲ್ಲ ವಿಷಯಗಳಲ್ಲಿ ದೊಡ್ಡ ದೊಡ್ಡ ಶಬ್ದಗಳನ್ನು ಬಳಸಿ ನಿಮಗೆ ಬೇಕಾದಂತೆ ವಾದ ಮಂಡನೆ ಮಾಡುತ್ತೀರಿ. ಈ ಕಲೆ ನಿಮಗೆ ಕರಗತ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಛೇಡಿಸಿದರು.

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, 'ನೀವು ಎಲ್ಲ ವಿಷಯಗಳಲ್ಲೂ ಮಧ್ಯಪ್ರವೇಶಿಸಿ ಮಾತನಾಡುತ್ತೀರಿ. ಇದರಿಂದ ನಮಗೆ ಅವಕಾಶ ಸಿಗುತ್ತಿಲ್ಲ ಎಂದು ಹಲವು ಸದಸ್ಯರು ಬೇಸರಗೊಂಡಿದ್ದಾರೆ. ಇದೇ ರೀತಿ ಚರ್ಚೆ ಮುಂದುವರಿಸಿದರೆ ಉಳಿದ ಸದಸ್ಯರಿಗೆ ವಿಷಯ ಮಂಡಿಸಲು ಅವಕಾಶ ನೀಡುವುದಿಲ್ಲ. ಶಾಸನ ರಚನೆ ವಿಷಯಕ್ಕೆ ಹೋಗುತ್ತೇನೆ' ಎಂದು ರಮೇಶ್ ಕುಮಾರ್ ಅವರನ್ನು ಉದ್ದೇಶಿಸಿ ಹೇಳಿದರು.

'ನಾವು ಇಲ್ಲಿ ಚರ್ಚೆ ಮಾಡಲೆಂದೇ ಬರುತ್ತೇವೆ. ಮಾತನಾಡಬೇಡಿ ಎಂದು ಹೇಳುವಂತಿಲ್ಲ. ನಮ್ಮ ಸದಸ್ಯರು ಯಾರು ಮಾತನಾಡುತ್ತಿಲ್ಲ. ನೀವು ಶಾಸನ ರಚನೆಯ ವಿಚಾರ ಕೈಗೆತ್ತಿಕೊಳ್ಳಿ' ಎಂದು ರಮೇಶ್ ಕುಮಾರ್ ಆಕ್ರೋಶದಿಂದ ನುಡಿದರು. 'ಇನ್ನು ಯಾವುದೇ ವಿಷಯದ ಬಗ್ಗೆ ಮಾತನಾಡುವುದಿಲ್ಲ. ಇಲ್ಲಿ ಕೈಕಟ್ಟಿ ಕುಳಿತುಕೊಳ್ಳುವೆ' ಎಂದೂ ಹೇಳಿದರು.

ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆ ಆಗಲಿ

ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆ ಆಗಲಿದೆ ಎನ್ನುವ ಅರಿವ ಮೂಡುವ ಮಾದರಿಯಲ್ಲಿ ಅತ್ಯಂತ ಕಠಿಣ ಶಿಕ್ಷೆ ಆಗಬೇಕು ಎಂದು ವಿಧಾನಪರಿಷತ್‌ನಲ್ಲಿ ಬಿಜೆಪಿಯ ಭಾರತಿಶೆಟ್ಟಿ ಹೇಳಿದರು.

ರಾಜ್ಯದಲ್ಲಿ ಮಕ್ಕಳು ಹಾಗೂ ಮಹಿಳೆಯರ ಮೇಲೆ ನಡೆಯುತ್ತಿರುವ ಅತ್ಯಾಚಾರ ಪ್ರಕರಣ ತಡೆಗಟ್ಟುವ ನಿಟ್ಟಿನಲ್ಲಿ ಅಗತ್ಯ ಕ್ರಮವಹಿಸುವ ಕುರಿತು ಮಾತನಾಡಿದ ಅವರು, ಇಂದು ನೈತಿಕ ಶಿಕ್ಷಣ ನೀಡುವ ಕೆಲಸ ಆಗುತ್ತಿಲ್ಲ ಎಂದರು.

ಮೈಸೂರಿನಲ್ಲಿ ನಡೆದಿರುವ ಘಟನೆಗೆ ಗೃಹ ಸಚಿವರು ಆ ಹೆಣ್ಣು ಮಗಳು ಅಲ್ಲಿ ಏಕೆ ಹೋಗಬೇಕು ಎಂದಿದ್ದೇ ದೊಡ್ಡ ಚರ್ಚೆಗೆ ಕಾರಣವಾಯಿತು. ಆದರೆ ಪ್ರತಿಯೊಬ್ಬ ವ್ಯಕ್ತಿಯೂ ಇದೇ ಯೋಚನೆ ಮಾಡುತ್ತಾರೆ. ಶಾಲೆ, ಕಾಲೇಜುಗಳಲ್ಲಿ ಅಂಕ ಗಳಿಸುವುದರ ಬಗ್ಗೆಯೇ ಗಮನಹರಿಸುವುದರಿಂದ ನೈತಿಕ ಶಿಕ್ಷಣ ನೀಡುವಿಕೆ ಕೊರತೆ ಎದುರಾಗಿದೆ ಎಂದು ಹೇಳಿದರು.

ಬಿಜೆಪಿಯ ತೇಜಸ್ವಿನಿ ಗೌಡ ಮಾತನಾಡಿ,' ಸದ್ಯ ಇರುವ ಕಾನೂನು ಚೆನ್ನಾಗಿದೆ. ಆದರೆ, ಇದು ನ್ಯಾಯಾಲಯದಲ್ಲಿ ಏಕೆ ಬಿದ್ದು ಹೋಗಲಿದೆ ಎನ್ನುವುದನ್ನು ಗಮನಿಸಬೇಕು. ಉತ್ತಮ ವ್ಯಕ್ತಿ, ಸಮಾಜ ರೂಪಿಸು ಕಾರ್ಯ ಆಗಬೇಕು' ಎಂದರು.

ಸುದ್ದಿ 2 ನಿಮಿಷ

'ತುಳು, ಕೊಡವ ಭಾಷೆಗಳಿಗೆ ರಾಜ್ಯ ಭಾಷಾ ಸ್ಥಾನಮಾನಕ್ಕೆ ಯತ್ನ'

ಬೆಂಗಳೂರು: ತುಳು ಮತ್ತು ಕೊಡವ ಭಾಷೆಗಳನ್ನು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಿಸಿ, ರಾಜ್ಯಭಾಷಾ ಸ್ಥಾನಮಾನ ನೀಡಲು ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್ ಭರವಸೆ ನೀಡಿದರು.

ವಿಧಾನ ಪರಿಷತ್‌ನಲ್ಲಿ ಬುಧವಾರ ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಶೂನ್ಯವೇಳೆಯಲ್ಲಿ ಮಾಡಿದ ಆಗ್ರಹಕ್ಕೆ ಉತ್ತರಿಸಿದ ಅವರು, 'ತುಳು ಮತ್ತು ಕೊಡವ ಎರಡೂ ಭಾಷೆಗಳನ್ನು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಿಸಲು ಇರುವ ತೊಡಕುಗಳ ಕುರಿತು ಅಧಿಕಾರಿಗಳ ಜತೆ ಸಭೆ ನಡೆಸಿದ್ದೇನೆ. ನಾನು ಖುದ್ದಾಗಿ ದೆಹಲಿಗೆ ಹೋಗಿ ಕೇಂದ್ರ ಸರ್ಕಾರದ ಮನವೊಲಿಸುವ ಕೆಲಸ ಮಾಡುತ್ತೇನೆ' ಎಂದರು.

ವಿಷಯ ಪ್ರಸ್ತಾಪಿಸಿ ಮಾತನಾಡಿದ ಹರಿಪ್ರಸಾದ್, 'ತುಳು ಮತ್ತು ಕೊಡವ ಭಾಷೆಗಳಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಎರಡೂ ಭಾಷೆಗಳನ್ನು ಲಕ್ಷಾಂತರ ಮಂದಿ ಬಳಕೆ ಮಾಡುತ್ತಾರೆ. ಈ ಭಾಷೆಗಳನ್ನು ಎಂಟನೇ ಪರಿಚ್ಛೇದಕ್ಕೆ ಸೇರಿಸಿದರೆ ಅವುಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ನೆರವಾಗುತ್ತದೆ. ಈ ವಿಷಯದಲ್ಲಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಬೇಕು' ಎಂದು ಆಗ್ರಹಿಸಿದರು.

ಅತ್ಯಾಚಾರ ಆರೋಪ: ಕ್ಯಾಬ್ ಚಾಲಕ ಬಂಧನ

ಬೆಂಗಳೂರು: ಯುವತಿಯೊಬ್ಬರ ಮೇಲಿನ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ಯಾಬ್ ಚಾಲಕ ದೇವರಾಜುಲು ಎಂಬಾತನನ್ನು ಜೀವನ್‌ಬಿಮಾನಗರ ಪೊಲೀಸರು ಬಂಧಿಸಿದ್ದಾರೆ.

'ಎಚ್‌ಎಸ್‌ಆರ್ ಲೇಔಟ್‌ನಲ್ಲಿರುವ ಸ್ನೇಹಿತೆಯ ಮನೆಗೆ ಹೋಗಿದ್ದ ಸಂತ್ರಸ್ತ ಯುವತಿಯು ಮುರುಗೇಶಪಾಳ್ಯದಲ್ಲಿರುವ ಮನೆಗೆ ಹೋಗಲು ಬೆಳಗಿನ ಜಾವ 3.30ಕ್ಕೆ ಕ್ಯಾಬ್ ಕಾಯ್ದಿರಿಸಿದ್ದರು. ತಾನು ಸೂಚಿಸಿದ ವಸತಿ ಸಮುಚ್ಚಯದ ಬಳಿ ಕಾರು ನಿಲ್ಲಿಸದ ಚಾಲಕ, ಪಕ್ಕದ ರಸ್ತೆಗೆ ಹೋಗಿ ಕ್ಯಾಬ್ ನಿಲ್ಲಿಸಿ ಲೈಂಗಿಕ ದೌರ್ಜನ್ಯ ನಡೆಸಿದ್ದ ಎಂದು ಆರೋಪಿಸಿ ದೂರು ದಾಖಲಿಸಿದ್ದರು. ಯುವತಿಯು ಚಾಲಕನ ಮೊಬೈಲ್ ಕಸಿದುಕೊಂಡು ಮನೆಗೆ ಮರಳಿದ್ದರು' ಎಂದು ಪೊಲೀಸರು ಹೇಳಿದ್ದಾರೆ.

'ಯುವತಿಯು ಅತ್ಯಾಚಾರ ಪ್ರಕರಣ ದಾಖಲಿಸಿದ್ದರು. ಚಾಲಕನಿಂದ ಕಸಿದುಕೊಂಡಿದ್ದ ಮೊಬೈಲ್ ಅನ್ನು ಪೊಲೀಸರಿಗೆ ಒಪ್ಪಿಸಿದ್ದರು. ಆರೋಪಿಯ ಪತ್ತೆಗಾಗಿ ಮೂರು ಪ್ರತ್ಯೇಕ ತಂಡಗಳನ್ನು ರಚಿಸಲಾಗಿತ್ತು. ಆತನ ವಿಚಾರಣೆ ಮುಂದುವರಿಸಿದ್ದು, ಮತ್ತಷ್ಟು ಮಾಹಿತಿ ಕಲೆಹಾಕಲಾಗುತ್ತದೆ' ಎಂದು ಹೆಚ್ಚುವರಿ ಪೊಲೀಸ್ ಆಯುಕ್ತ ಎಸ್.ಮುರುಗನ್ ಹೇಳಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಕಂದಾಯ ಸಚಿವ ಆರ್. ಅಶೋಕ ಹೇಳಿಕೆ

'ಖಾಸಗಿ ಸಂಸ್ಥೆಗಳಿಗೆ ಗುತ್ತಿಗೆ ನೀಡಿದ್ದ ಜಮೀನು ಮಾರಾಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಸಂಘ, ಸಂಸ್ಥೆಗಳು ಗುತ್ತಿಗೆಗೆ ಪಡೆದಿರುವ ಜಮೀನುಗಳನ್ನು ಸ್ಥಿರಾಸ್ತಿ ಮಾರ್ಗಸೂಚಿ ದರದ ಆಧಾರದಲ್ಲಿ ನಿಗದಿತ ಮೌಲ್ಯಕ್ಕೆ ಖರೀದಿಸಲು ಅವಕಾಶ ನೀಡಲು ನಿರ್ಧರಿಸಲಾಗಿದೆ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಬುಧವಾರ ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಭಾರತಿ ಶೆಟ್ಟಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಹತ್ತಾರು ವರ್ಷಗಳಿಂದ ಬಿಡಿಗಾಸಿನ ಬಾಡಿಗೆ ಆಧಾರದಲ್ಲಿ ಸರ್ಕಾರಿ ಜಮೀನುಗಳನ್ನು ಗುತ್ತಿಗೆಗೆ ನೀಡಲಾಗಿದೆ. ಅವುಗಳಿಂದ ಸರ್ಕಾರದ ಬೊಕ್ಕಸಕ್ಕೆ ವರಮಾನ ಬರುತ್ತಿಲ್ಲ. ಕಟ್ಟಡ ಮತ್ತು ಇತರ ನಿರ್ಮಾಣಗಳು ಇರುವ ಜಮೀನುಗಳನ್ನು ಗುತ್ತಿಗೆ ರದ್ದುಪಡಿಸಿ ವಾಪಸ್ ಪಡೆಯುವುದಕ್ಕೂ ಕಷ್ಟವಾಗುತ್ತಿದೆ. ಆದ್ದರಿಂದ ಮಾರ್ಗಸೂಚಿ ದರದ ಆಧಾರದಲ್ಲೇ ಅವುಗಳನ್ನು ಆಯಾ ಸಂಸ್ಥೆಗಳು ಖರೀದಿಸಲು ಅವಕಾಶ ನೀಡಲು ಸರ್ಕಾರ ತೀರ್ಮಾನಿಸಿದೆ' ಎಂದರು.

ಸಂಘ ಸಂಸ್ಥೆಗಳಿಗೆ ಗುತ್ತಿಗೆಗೆ ನೀಡಿದ ಜಮೀನುಗಳನ್ನು ಸರ್ಕಾರ ವಾಪಸ್ ಪಡೆದ ಉದಾಹರಣೆಗಳು ತೀರಾ ಕಡಿಮೆ. ಪ್ರತಿ ಬಾರಿಯೂ ಅವಧಿ ಮುಗಿದ ಬಳಿಕ ಗುತ್ತಿಗೆ ನವೀಕರಿಸಲಾಗುತ್ತಿದೆ. ₹ 50 ಕೋಟಿ ಮೌಲ್ಯದ ಆಸ್ತಿಯನ್ನು ಗುತ್ತಿಗೆಗೆ ನೀಡಿದ್ದರೆ, ಅದರಿಂದ ವಾರ್ಷಿಕ ₹ 50,000 ಕೂಡ ವರಮಾನ ದೊರಕುತ್ತಿಲ್ಲ. ಕೆಲವು ಪ್ರಕರಣಗಳಲ್ಲಿ ₹ 1ರಿಂದ ₹ 10ರವರೆಗೆ ಮಾತ್ರ ಗುತ್ತಿಗೆ ಶುಲ್ಕ ಇರುವುದೂ ಇದೆ.

ಇದರಿಂದ ಸರ್ಕಾರಕ್ಕೆ ಆಗುತ್ತಿರುವ ನಷ್ಟ ತಪ್ಪಿಸಲು ಶುದ್ಧ ಕ್ರಯದ ಮೂಲಕ ಜಮೀನು ವಿಲೇವಾರಿ ಮಾಡಲು ಸರ್ಕಾರ ಮುಂದಾಗಿದೆ ಎಂದರು.

ನಿರ್ದಿಷ್ಟ ಉದ್ದೇಶಕ್ಕೆ ಜಮೀನು ಪಡೆದಿದ್ದು, ಅದೇ ಉದ್ದೇಶಕ್ಕೆ ಬಳಸುತ್ತಿರುವವರಿಗೆ ಮಾರ್ಗಸೂಚಿ ದರಕ್ಕೆ ಜಮೀನು ನೀಡಲಾಗುವುದು. ಅನ್ಯ ಉದ್ದೇಶಕ್ಕೆ ಬಳಸಿಕೊಂಡಿರುವವರಿಗೆ ಮಾರ್ಗಸೂಚಿ ದರದ ಎರಡೂವರೆ ಪಟ್ಟು ದರ ವಿಧಿಸಲಾಗುವುದು. ಮುಂದಿನ ದಿನಗಳಲ್ಲಿ ಸರ್ಕಾರಿ ಜಮೀನುಗಳನ್ನು ಗುತ್ತಿಗೆಗೆ ನೀಡುವಾಗ ವಿಧಿಸುವ ಶುಲ್ಕದ ದರವನ್ನೂ ಹೆಚ್ಚಿಸಲಾಗುವುದು ಎಂದು ತಿಳಿಸಿದರು.

'ಪ್ರಮುಖ ಸ್ಥಳಗಳಲ್ಲಿರುವ ಸರ್ಕಾರಿ ಜಮೀನುಗಳನ್ನು ಸಂಘ, ಸಂಸ್ಥೆಗಳಿಗೆ ಗುತ್ತಿಗೆಗೆ ನೀಡಲಾಗಿದೆ. ಕ್ರೈಸ್ತ ಮಿಷನರಿಗಳು ಸೇರಿದಂತೆ ಹಲವು ಸಂಸ್ಥೆಗಳು ಸರ್ಕಾರದಿಂದ ಗುತ್ತಿಗೆಗೆ ಪಡೆದ ಜಮೀನಿನಲ್ಲಿ ಕಟ್ಟಡ ನಿರ್ಮಿಸಿ ಬಾಡಿಗೆಗೆ ನೀಡಿವೆ. ಅವುಗಳಿಂದ ಸರ್ಕಾರಕ್ಕೆ ವರಮಾನ ಬರುತ್ತಿಲ್ಲ. ಆದರೆ, ಗುತ್ತಿಗೆ ಪಡೆದವರಿಗೆ ದೊಡ್ಡ ಪ್ರಮಾಣದ ವರಮಾನವಿದೆ. ಸರ್ಕಾರಿ ಕಚೇರಿಗಳಿಗೆ ಕಟ್ಟಡ ನಿರ್ಮಾಣಕ್ಕೆ ಸ್ಥಳಾವಕಾಶವಿಲ್ಲ. ಅನ್ಯ ಉದ್ದೇಶಕ್ಕೆ ಸರ್ಕಾರಿ ಜಮೀನು ಬಳಕೆಯನ್ನು ಪತ್ತೆಮಾಡಿ, ವಾಪಸ್ ಪಡೆಯಬೇಕು' ಎಂದು ಭಾರತಿ ಶೆಟ್ಟಿ ಆಗ್ರಹಿಸಿದರು.

ಕೊಡಗು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಗುತ್ತಿಗೆಗೆ ನೀಡಿದ್ದ ಜಮೀನುಗಳನ್ನು ವಾಪಸ್ ಪಡೆಯುವ ಕುರಿತು ಭಾರತಿ ಶೆಟ್ಟಿ ಪ್ರಶ್ನೆ ಕೇಳಿದ್ದರು. ಅಂತಹ ಯಾವುದೇ ಪ್ರಕರಣಗಳಿಲ್ಲ ಎಂದು ಉತ್ತರಿಸಿದ ಸಚಿವರು, 'ಬೆಳಗಾವಿ ಜಿಲ್ಲೆಯ ಖಾನಾಪುರ ಗ್ರಾಮದ ಸರ್ವೆ ನಂಬರ್ 53/ಎ–ಯಲ್ಲಿ ಕ್ರೀಡಾ ಮಂಡಳಕ್ಕೆ ನೀಡಿದ್ದ 5 ಗುಂಟೆ ಜಮೀನಿನ ಗುತ್ತಿಗೆ ಅವಧಿ ಮುಗಿದಿತ್ತು. ಗೋಕಾಕ ತಾಲ್ಲೂಕಿನ ಕೊಣ್ಣೂರ ಗ್ರಾಮದಲ್ಲಿ 672 ಎಕರೆ 8 ಗುಂಟೆ ಮತ್ತು 312 ಎಕರೆ ಮತ್ತು 10 ಗುಂಟೆಯನ್ನು ಫಾಲ್ಸ್ ಮಿಲ್ಸ್ ಸಂಸ್ಥೆಗೆ ನೀಡಿದ್ದ ಗುತ್ತಿಗೆ ಅವಧಿಯೂ ಪೂರ್ಣಗೊಂಡಿತ್ತು. ಈ ಪ್ರಕರಣಗಳಲ್ಲಿ ಗುತ್ತಿಗೆ ನವೀಕರಿಸಲಾಗಿದೆ' ಎಂದರು.

ವಾರದಲ್ಲಿ ₹ 35 ಕೋಟಿ ಬಿಡುಗಡೆ

ರಾಜ್ಯದಲ್ಲಿ ಇತ್ತೀಚೆಗೆ ಸುರಿದ ಭಾರಿ ಮಳೆಯಿಂದ ಉಂಟಾಗಿರುವ ಆಸ್ತಿ ಹಾನಿ, ಪ್ರಾಣ ಹಾನಿಗೆ ಪರಿಹಾರ ವಿತರಿಸಲು ಒಂದು ವಾರದೊಳಗೆ ₹ 35.70 ಕೋಟಿ ಬಿಡುಗಡೆ ಮಾಡಲಾಗುವುದು ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬುಧವಾರ ಕಾಂಗ್ರೆಸ್‌ನ ಶ್ರೀನಿವಾಸ ಮಾನೆ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಈಗಾಗಲೇ ₹ 154.65 ಕೋಟಿ ಪರಿಹಾರ ವಿತರಿಸಲಾಗಿದೆ. ಕೇಂದ್ರ ಸರ್ಕಾರದಿಂದ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ ₹ 35.70 ಕೋಟಿ ನೆರವು ಬರಬೇಕಿದೆ. ಕೇಂದ್ರ ಹಣ ನೀಡುವುದು ವಿಳಂಬವಾದರೂ ರಾಜ್ಯ ಸರ್ಕಾರ ಈ ಮೊತ್ತವನ್ನು ಬಿಡುಗಡೆ ಮಾಡಲಿದೆ' ಎಂದರು.

'ಅತ್ಯಾಚಾರ: ತ್ವರಿತ ನ್ಯಾಯಾಲಯ ಸ್ಥಾಪನೆ'

ಒಂದನೇ ಪುಟದಿಂದ

'ಅತ್ಯಾಚಾರ ಆರೋಪಿಗಳನ್ನು ಆಂಧ್ರ ಮಾದರಿಯಲ್ಲೇ ಎನ್‌ಕೌಂಟರ್ ಮಾಡಬೇಕಿತ್ತು' ಎಂದು ಜೆಡಿಎಸ್‌ನ ಸಾ.ರಾ.ಮಹೇಶ್ ಅಭಿಪ್ರಾಯಪಟ್ಟರು.

'ಎನ್‌ಕೌಂಟರ್ ಮಾಡಿ ಎಂದು ನಾನು ಹೇಳಲು ಆಗುವುದಿಲ್ಲ' ಎಂದು ಸಚಿವ ಜ್ಞಾನೇಂದ್ರ ಸ್ಪಷ್ಟಪಡಿಸಿದರು.

ತೆರಿಗೆ: ₹2,491 ಕೋಟಿ ನಷ್ಟ

ಒಂದನೇ ಪುಟದಿಂದ

ದಂಡ ವಿಧಿಸದೆ ನಷ್ಟ: ಕರದಾತರು ತಡವಾಗಿ ತೆರಿಗೆ ಪಾವತಿಸಿದ್ದಕ್ಕಾಗಿ ವಿವಿಧ ನಿಯಮಗಳಡಿ ₹32.72 ಕೋಟಿ ದಂಡ ವಿಧಿಸಬೇಕಾಗಿತ್ತು, ದಂಡ ವಿಧಿಸದೇ ನಷ್ಟ ಉಂಟು ಮಾಡಲಾಗಿದೆ. ಅಲ್ಲದೆ, ನಗರ ಪ್ರದೇಶಗಳಲ್ಲಿ 30 ಬಾರ್‌ಗಳು ಮತ್ತು ರೆಸ್ಟೋರೆಂಟ್‌ಗಳು ಮಾರ್ಚ್ 2014 ರಿಂದ ಮಾರ್ಚ್ 2017 ರ ಅವಧಿಯಲ್ಲಿ ಮದ್ಯ ಮಾರಾಟದ ಮೇಲೆ ಕಡಿಮೆ ಪ್ರಮಾಣದಲ್ಲಿ ತೆರಿಗೆ ಮತ್ತು ದಂಡ ವಿಧಿಸಲಾಗಿತ್ತು. ಇದರ ಮೊತ್ತ ₹6.15 ಕೋಟಿ ಆಗಿದೆ.

ಕಾರ್ಮಿಕ ಇಲಾಖೆಯು ನೋಂದಣಿ/ನವೀಕರಣದ ಪರಿಷ್ಕೃತ ದರಗಳನ್ನು ಜಾರಿಗೊಳಿಸದೇ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ನೋಂದಣಿ ನವೀಕರಿಸಿರುವುದರಿಂದ ₹39.59 ಕೋಟಿಯಷ್ಟು ನಷ್ಟವಾಗಿದೆ. ತಡವಾಗಿ ಕಾಮಗಾರಿ ಪೂರ್ಣಗೊಳಿಸಿದ ಗುತ್ತಿಗೆದಾರರಿಗೆ ಆರೋಗ್ಯ ಎಂಜಿನಿಯರಿಂಗ್ ವಿಭಾಗದ ಮುಖ್ಯ ಎಂಜಿನಿಯರ್ ಅತ್ಯಲ್ಪ ದಂಡ ವಿಧಿಸಿದ್ದಾರೆ. ಇದರಿಂದ ₹14.63 ಕೋಟಿಯಷ್ಟು ಕಡಿಮೆ ದಂಡ ವಿಧಿಸಿರುವುದರ ಜತೆಗೆ ಗುತ್ತಿಗೆದಾರರಿಗೆ ಅನುಚಿತ ರೂಪದಲ್ಲಿ ಲಾಭ ಮಾಡಿಕೊಟ್ಟಿರುವುದು ಕಂಡು ಬಂದಿದೆ ಎಂದು ಸಿಎಜಿ ವರದಿ ಹೇಳಿದೆ.

ಬೆಂಗಳೂರು ವಿ.ವಿ ಯಲ್ಲಿ ಅಸಮರ್ಪಕ ಆರ್ಥಿಕ ನಿರ್ವಹಣೆಯಿಂದ ₹12.97 ಲಕ್ಷ ದುರುಪಯೋಗವಾ ಗಿದೆ. ದಾಖಲೆಗಳ ತಿರುಚುವಿಕೆ ಮತ್ತು ಸಂಶಯಾಸ್ಪದ ದುರುಪಯೋಗದಿಂದ ₹1.28 ಲಕ್ಷ ಮತ್ತು ₹87.87ಲಕ್ಷ ಆದಾಯದಲ್ಲಿ ನಷ್ಟವಾಗಿದೆ ಎಂಬುದನ್ನು ವರದಿ ಬಹಿರಂಗಪಡಿಸಿದೆ.

ಅತ್ಯಾಚಾರ ಪದ ಬಳಸದಿರಿ: ಶಾಸಕಿಯರ ಕೋರಿಕೆ

'ಸದನದಲ್ಲಿ ಯಾವುದೇ ಸದಸ್ಯರು ರೇಪ್ (ಅತ್ಯಾಚಾರ) ಪದ ಬಳಸಬೇಡಿ. ಆ ಪದ ಕೇಳಿದ ಮನಸ್ಸಿಗೆ ನೋವಾಗುತ್ತದೆ' ಎಂದು ಮಹಿಳಾ ಸದಸ್ಯರಾದ ರೂಪಕಲಾ ಶಶಿಧರ್, ಸೌಮ್ಯಾ ರೆಡ್ಡಿ, ಡಾ.ಅಂಜಲಿ ನಿಂಬಾಳ್ಕರ್ ಕೋರಿಕೊಂಡರು.

ಕಾಂಗ್ರೆಸ್‌ನ ರೂಪಕಲಾ ಶಶಿಧರ್, 'ನನಗೂ ಮಗಳಿದ್ದಾಳೆ. ನಾವು, ಅಧಿಕಾರಿಗಳು, ಮಾಧ್ಯಮದವರು ರಾತ್ರಿ 8–9 ಗಂಟೆಯವರೆಗೂ ಇಲ್ಲಿದ್ದು ಮನೆಗೆ ಹೋಗುತ್ತೇವೆ. ಹೊರಗಡೆ ಜಗತ್ತಿನಲ್ಲಿ ಏನಾಗುತ್ತಿದೆ ಎಂಬುದೇ ಆ ಸಂದರ್ಭದಲ್ಲಿ ಗೊತ್ತಾಗುವುದಿಲ್ಲ. ಶಾಲೆಗೆ ಹೋದ ಮಗಳ ಬಗ್ಗೆ ಆತಂಕ ಸದಾ ಕಾಡುತ್ತಾ ಇರುತ್ತದೆ. ಸದನದಲ್ಲಿ ರೇಪ್ ಶಬ್ದ ಕೇಳಿದ ಕೂಡಲೇ ಆತಂಕ ಮತ್ತಷ್ಟು ಹೆಚ್ಚಾಗುತ್ತದೆ. ಇತ್ತೀಚಿನ ಘಟನೆಗಳನ್ನು ನೋಡಿದರೆ ಮಕ್ಕಳ ಸುರಕ್ಷತೆ ಬಗ್ಗೆ ಭಯವಾಗುತ್ತದೆ' ಎಂದರು.

'ಯಾದಗಿರಿ ಬೆತ್ತಲೆ ಪ್ರಕರಣದಲ್ಲಿ ದೌರ್ಜನ್ಯ ನಡೆಸಿದವರು ರಾಕ್ಷಸರು. ದೌರ್ಜನ್ಯ ನಡೆಸಿದ್ದು ಮಾತ್ರವಲ್ಲದೆ ಅದನ್ನು ವಿಡಿಯೊ ಮಾಡಿ ವಿಕೃತವಾಗಿ ವರ್ತಿಸಿದ್ದಾರೆ. ಅವರನ್ನು ಹುಡುಕಿಕೊಂಡು ಹೋಗಿ ಚಪ್ಪಲಿಯಿಂದ ಹೊಡೆಯಬೇಕು ಎಂದು ಅನಿಸುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಿನಿಶಾ ನೆರೊ, 'ಸಂಜೆ ಆರರ ನಂತರ ವಿಶ್ವವಿದ್ಯಾಲಯದ ಯುವತಿಯರು ಹೊರಗೆ ಅಡ್ಡಾಡಬಾರದು ಎಂದು ಮೈಸೂರು ವಿವಿ ಕುಲಪತಿ ಆದೇಶ ಹೊರಡಿಸಿದರು. ಇದು ಪುರುಷ ಮನಸ್ಥಿತಿ. ಹುಡುಗರನ್ನು ಒಳಗೆ ಕೂಡಿ ಹಾಕಿ ಹುಡುಗಿಯರನ್ನು ಹೊರಗೆ ಬಿಟ್ಟರೆ ದೌರ್ಜನ್ಯ ಪ್ರಕರಣಗಳಿಗೆ ಅವಕಾಶವೇ ಇರುವುದಿಲ್ಲ' ಎಂದು ಪ್ರತಿಪಾದಿಸಿದರು.

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಸಿದ್ದರಾಮಯ್ಯ ಪಂಚೆ ಕಳಚಿ ಬಿದ್ದಾಗ...

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಬಂದು ಹೋದ ಮೇಲೆ ನನ್ನ ಹೊಟ್ಟೆ ದಪ್ಪ ಆಗಿದೆ. ಪಂಚೆ ನಿಲ್ಲುತ್ತಿಲ್ಲ ಕಳಚಿ ಹೋಗ್ತಾ ಇದೆ ಈಶ್ವರಪ್ಪ...'

ಹೀಗೆಂದು ಹೇಳಿದ್ದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ. ವಿಧಾನಸಭೆಯಲ್ಲಿ ಬುಧವಾರ ಚರ್ಚೆಯಲ್ಲಿ ಪಾಲ್ಗೊಂಡಿದ್ದ ಸಿದ್ದರಾಮಯ್ಯ ಅವರು ಮಾತನಾಡುತ್ತಿದ್ದಾಗಲೇ, ಪಂಚೆ ಕಳಚಿ ಬಿದ್ದು ಸ್ವಾರಸ್ಯಕರ ಮತ್ತು ಹಾಸ್ಯ ಲೇಪಿತ ಮಾತುಗಳಿಗೆ ವೇದಿಕೆಯಾಯಿತು.

ಮೈಸೂರಿನಲ್ಲಿ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣದ ಬಗ್ಗೆ ಸಿದ್ದರಾಮಯ್ಯ ಮಾತನಾಡುತ್ತಿದ್ದರು. ಸಿದ್ದರಾಮಯ್ಯ ಹತ್ತಿರ ಹೋದ ಡಿ.ಕೆ. ಶಿವಕುಮಾರ್, ಅವರ ಕಿವಿಯಲ್ಲಿ, 'ಪಂಚೆ ಕಳಚಿದೆ ಸರಿ ಮಾಡಿಕೊಳ್ಳಿ' ಎಂದರು. ಇದರಿಂದ ತಡಬಡಾಯಿಸಿ ಪಂಚೆಗೆ ಕೈ ಹಾಕಿದಾಗ ಕಳಚಿ ಬಿದ್ದಿದ್ದು ಅವರ ಗಮನಕ್ಕೆ ಬಂದಿತು. ಎತ್ತಿ ಕಟ್ಟಿಕೊಳ್ಳಲು ಪ್ರಯತ್ನಿಸಿದರು. ಆದರೂ ನಿಲ್ಲುತ್ತಿರಲಿಲ್ಲ.

'ಸ್ವಲ್ಪ ಪಂಚೆ ಕಳಚಿಕೊಂಡಿದೆ ಸರಿ ಮಾಡಿಕೊಂಡು ಮಾತನಾಡುತ್ತೇನೆ' ಎಂದು ಸಿದ್ದರಾಮಯ್ಯ ನಗುತ್ತಾ ಪಂಚೆ ಬಿಗಿಗೊಳಿಸಿದರು. 'ಕೋವಿಡ್ ಬಂದು ಹೋದ ಮೇಲೆ 4–5 ಕೆ.ಜಿ ತೂಕ ಹೆಚ್ಚಾಗಿದೆ. ಹೊಟ್ಟೆ ದೊಡ್ಡದಾಗಿದೆ. ಪಂಚೆ ನಿಲ್ಲುತ್ತಿಲ್ಲ ಈಶ್ವರಪ್ಪ' ಎಂದೂ ಹೇಳಿದರು.

ಆಗ ಕಾಂಗ್ರೆಸ್‌ನ ಕೆ.ಆರ್. ರಮೇಶ್ ಕುಮಾರ್ ಮಧ್ಯ ಪ್ರವೇಶಿಸಿ, 'ಪಂಚೆ ಬಿಚ್ಚಿ ಹೋಗಿದ್ದು ಯಾರಿಗೂ ಗೊತ್ತಿರಲಿಲ್ಲ. ಪಕ್ಷದ ಮಾನ ಉಳಿಸಲು ಮುಂದಾದ ನಮ್ಮ ಅಧ್ಯಕ್ಷರು (ಡಿಕೆಶಿ) ಬಂದು ಕಿವಿಯಲ್ಲಿ ಹೇಳಿದರೆ, ಇವರು ಊರಿಗೆಲ್ಲ ಗೊತ್ತಾಗುವ ಹಾಗೆ ಮಾಡಿದ್ರು' ಎಂದರು.

'ಅವ್ರು ಕಾಯ್ತಾ ಇರ್ತಾರೆ' ಎಂದು ಈಶ್ವರಪ್ಪ ಅವರನ್ನು ಉದ್ದೇಶಿಸಿ ರಮೇಶ್ ಕುಮಾರ್ ಹೇಳಿದಾಗ, 'ಅದಾಗೇ ಕಳಚಿಕೊಂಡಿದೆ, ಅವರು ಕಳಚಕ್ಕೆ ಆಗಲ್ಲ' ಎಂದರು ಸಿದ್ದರಾಮಯ್ಯ.

'ಉದ್ದದ ಜುಬ್ಬಾ ಹಾಕುವುದರಿಂದ ಪಂಚೆ ಬಿಚ್ಚಿದರೂ ಏನೂ ಆಗುವುದಿಲ್ಲ. ಕೆಲವರು ನಿಲುವಂಗಿ ಹಾಕಿಕೊಳ್ಳುತ್ತಾರೆ. ಅದಿದ್ದರೆ ಪಂಚೆನೂ ಬೇಕಿಲ್ಲ, ಪ್ಯಾಂಟ್ ಕೂಡ ಬೇಕಾಗುವುದಿಲ್ಲ' ಎಂದರು ಸಿದ್ದರಾಮಯ್ಯ.

ಭೋಜನ ವಿರಾಮದ ವೇಳೆ ಹೊರ ಹೋಗುವಾಗಲೂ ಸಿದ್ದರಾಮಯ್ಯ ಅವರ ಪಂಚೆ ಕಳಚಿಕೊಂಡಿತು. 'ಹೊಟ್ಟೆ ದಪ್ಪ ಆಗಿ ಪ್ರಾಬ್ಲಂ ಆಗಿದೆ ಎಂದು ನಗುತ್ತಾ ಪಂಚೆ ಕಟ್ಟಿಕೊಳ್ಳಲು' ಅವರು ತಿಣುಕಾಡಿದರು.

'20 ಸಾವಿರ ಜನರ ಮತಾಂತರ: ಸತ್ಯಕ್ಕೆ ದೂರ'

ಚಿತ್ರದುರ್ಗ: 'ಬಲವಂತದ ಮತಾಂತರ ನಡೆಯುತ್ತಿದೆ ಎಂಬುದಾಗಿ ವಿಧಾನಸಭೆಯಲ್ಲಿ ಬಿಜೆಪಿ ಶಾಸಕ ಗೂಳಿಹಟ್ಟಿ ಡಿ. ಶೇಖರ್ ಅವರು ಮಾಡಿರುವ ಆರೋಪ ಸತ್ಯಕ್ಕೆ ದೂರವಾದುದು' ಎಂದು ಕ್ರಿಶ್ಚಿಯನ್ ಮಾನವ ಹಕ್ಕುಗಳ ವೇದಿಕೆ ರಾಜ್ಯ ಕಾರ್ಯದರ್ಶಿ ಸಾಲೊಮೋನ್ ರಾಜ್‌ಕುಮಾರ್ ತಿಳಿಸಿದರು.

'ಹೊಸದುರ್ಗ ತಾಲ್ಲೂಕು ಸೇರಿ ಚಿತ್ರದುರ್ಗ ಜಿಲ್ಲೆಯಲ್ಲಿ ಸುಮಾರು 20 ಸಾವಿರ ಮಂದಿ ಬಲವಂತದಿಂದ ಮತಾಂತರ ಆಗಿದ್ದಾರೆ ಎಂಬುದಾಗಿ ಶಾಸಕರು ಆರೋಪಿಸಿದ್ದಾರೆ. ಯಾವ ಪೊಲೀಸ್ ಠಾಣೆಯಲ್ಲೂ ಇಂತಹ ಒಂದೂ ಪ್ರಕರಣ ದಾಖಲಾಗಿಲ್ಲ. ಇದನ್ನು ಸಾಕ್ಷಿ ಸಮೇತ ಸಾಬೀತುಪಡಿಸಬೇಕು' ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಸವಾಲು ಹಾಕಿದರು.

'ಮತಾಂತರ ಕುರಿತು ಪ್ರಶ್ನಿಸಿದರೆ, ಅತ್ಯಾಚಾರ ಹಾಗೂ ದೌರ್ಜನ್ಯ ಪ್ರಕರಣ ದಾಖಲಿಸುವುದಾಗಿ ಚರ್ಚ್‌ನವರು ಬೆದರಿಕೆ ಒಡ್ಡುತ್ತಿದ್ದಾರೆ ಎಂಬ ಹೇಳಿಕೆಯೂ ಸತ್ಯವಲ್ಲ. ಕ್ರಿಶ್ಚಿಯನ್ ಸಮುದಾಯದವರ ಮೇಲೆ ಗೂಬೆ ಕೂರಿಸುವ ಪ್ರಯತ್ನ ಸರಿಯೇ' ಎಂದು ಪ್ರಶ್ನಿಸಿದರು.

ಸಾರಿಗೆ ನೌಕರರ ಮುಷ್ಕರ : ವಜಾ ಪ್ರಕರಣ ಇತ್ಯರ್ಥಕ್ಕೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ಸಂಸ್ಥೆಯ ನಾಲ್ಕು ನಿಗಮಗಳ ನೌಕರರ ಮುಷ್ಕರದ ಸಂದರ್ಭದಲ್ಲಿ ವಜಾ, ಅಮಾನತು ಮತ್ತು ವರ್ಗಾವಣೆಗೊಂಡ 6,444 ಪ್ರಕರಣಗಳಲ್ಲಿ 4,344 ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ ಎಂದು ಸಾರಿಗೆ ಸಚಿವ ಬಿ.ಶ್ರೀರಾಮುಲು ವಿಧಾನಸಭೆಯಲ್ಲಿ ತಿಳಿಸಿದರು.

ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಅವರ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಚಿವರು ಉತ್ತರ ನೀಡಿದರು. ಇತ್ಯರ್ಥವಾಗದೇ ಉಳಿದಿರುವ ಪ್ರಕರಣಗಳನ್ನು ಆದಷ್ಟು ಬೇಗ ಇತ್ಯರ್ಥಗೊಳಿಸಲಾಗುವುದು ಎಂದು ಶ್ರೀರಾಮುಲು ತಿಳಿಸಿದರು.

ವಜಾ, ಅಮಾನತು, ವರ್ಗಾವಣೆ ವಿವರ ಹೀಗಿದೆ– ಕೆಎಸ್‌ಆರ್‌ಟಿಸಿ 1429, ಬಿಎಂಟಿಸಿ 3787, ಎನ್‌ಡಬ್ಲ್ಯುಕೆಎಸ್‌ಆರ್‌ಟಿಸಿ 885, ಕಲ್ಯಾಣ ಕರ್ನಾಟಕ ಸಾರಿಗೆ ನಿಗಮ 343, ಒಟ್ಟು 6444 ಪ್ರಕರಣಗಳು ದಾಖಲಾಗಿದ್ದವು ಎಂದರು.

ನಿಗಮಗಳ ವಿಲೀನಕ್ಕೆ ಒತ್ತಾಯ

'ಸಾರಿಗೆ ಸಂಸ್ಥೆಗಳನ್ನು ನಷ್ಟದಿಂದ ಮೇಲೆತ್ತಲು ನಾಲ್ಕು ನಿಗಮಗಳನ್ನು ವಿಲೀನಗೊಳಿಸಬೇಕು' ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷ ಎಚ್.ವಿ. ಅನಂತ ಸುಬ್ಬರಾವ್ ಒತ್ತಾಯಿಸಿದರು.

'ಮಂಗಳವಾರ ನಡೆದ ಸಭೆಯಲ್ಲಿ ಸಾರಿಗೆ ಸಚಿವರಿಗೂ ಮನವರಿಕೆ ಮಾಡಿಕೊಡಲಾಗಿದೆ. ನಾಲ್ಕು ನಿಗಮಗಳಿಗೆ ನಾಲ್ವರು ಅಧ್ಯಕ್ಷ, ಉಪಾಧ್ಯಕ್ಷ, ಸಿಬ್ಬಂದಿ ವೆಚ್ಚ ಸೇರಿ ₹150 ಕೋಟಿ ಉಳಿತಾಯ ಸಾಧ್ಯವಿದೆ ಎಂಬ ಸಲಹೆ ನೀಡಲಾಗಿದೆ' ಎಂದು ವಿವರಿಸಿದರು.

ಅಮಾನತು ಮತ್ತು ವಜಾಗೊಂಡಿದ್ದ ನೌಕರರ ಪುನರ್ ನೇಮಕಕ್ಕೆ ಕೂಡಲೇ ಸರ್ಕಾರಿ ಆದೇಶ ಹೊರಡಿಸಬೇಕು ಎಂದು ಆಗ್ರಹಿಸಿದರು.

'ಸ್ಥಿರಾಸ್ತಿ ಮಾರ್ಗಸೂಚಿ ದರ ಪರಿಷ್ಕರಣೆಗೆ ಚಿಂತನೆ'

ಬೆಂಗಳೂರು: ರಾಜ್ಯದಾದ್ಯಂತ ವೈಜ್ಞಾನಿಕವಾಗಿ ಸ್ಥಿರಾಸ್ತಿಗಳ ಮಾರ್ಗಸೂಚಿ ದರ ಪರಿಷ್ಕರಿಸಲು ಚಿಂತನೆ ನಡೆದಿದೆ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬುಧವಾರ 'ಕರ್ನಾಟಕ ಸ್ಟಾಂಪು (ತಿದ್ದುಪಡಿ) ಮಸೂದೆ–2021'ರ ಪರ್ಯಾಲೋಚನೆ ಸಂದರ್ಭದಲ್ಲಿ ಮಾತನಾಡಿದ ಅವರು, 'ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಆಸ್ತಿಗಳ ಮಾರ್ಗಸೂಚಿ ದರದಲ್ಲಿ ಸ್ವಲ್ಪ ಹೆಚ್ಚಳ ಮಾಡುವುದು ಹಾಗೂ ಉಳಿದ ಪ್ರದೇಶಗಳಲ್ಲಿ ತುಸು ಇಳಿಕೆ ಮಾಡುವ ಪ್ರಸ್ತಾವವಿದೆ. ಕೋವಿಡ್‌ನಿಂದ ನೋಂದಣಿ ವಹಿವಾಟು ಕುಸಿದಿದೆ. ಸ್ಥಿರಾಸ್ತಿ ಮಾರಾಟ ಮತ್ತು ಖರೀದಿಯನ್ನು ಉತ್ತೇಜಿಸುವ ಉದ್ದೇಶದಿಂದ ಮಾರ್ಗಸೂಚಿ ದರ ಪರಿಷ್ಕರಣೆ ಅಗತ್ಯವಿದೆ' ಎಂದರು.

₹ 35 ಲಕ್ಷದಿಂದ ₹ 45 ಲಕ್ಷದವರೆಗಿನ ಮೌಲ್ಯದ ಅಪಾರ್ಟ್‌ಮೆಂಟ್‌ಗಳ ನೋಂದಣಿ ಮೇಲಿನ ಮುದ್ರಾಂಕ ಶುಲ್ಕವನ್ನು ಶೇಕಡ 5ರಿಂದ ಶೇ 3ಕ್ಕೆ ಇಳಿಕೆ ಮಾಡುವ ಪ್ರಸ್ತಾವವುಳ್ಳ ಕರ್ನಾಟಕ ಸ್ಟಾಂಪು (ತಿದ್ದುಪಡಿ) ಮಸೂದೆ–2021ಕ್ಕೆ ವಿಧಾನ ಪರಿಷತ್ ಒಪ್ಪಿಗೆ ನೀಡಿತು.

ರಾಜ್ಯ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ಒತ್ತಾಯ

ಅರಣ್ಯ ಹಕ್ಕು ಕಾಯ್ದೆ: ಪೂರ್ಣ ಅನುಷ್ಠಾನಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಅರಣ್ಯ ಹಕ್ಕು ಕಾಯ್ದೆ ಅನುಷ್ಠಾನದಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ರಾಜ್ಯ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ದೂರಿದೆ.

ಅರಣ್ಯ ಹಕ್ಕು ಕಾಯ್ದೆ ಅರಣ್ಯ ವಾಸಿಗಳ ಪರವಾಗಿದ್ದರೂ, ಕಾನೂನಿಗೆ ವ್ಯತಿರಿಕ್ತವಾದ ಕ್ರಮಗಳನ್ನು ಕೈಗೊಳ್ಳುತ್ತಿರುವುದರಿಂದ ಅರ್ಹ ಫಲಾನುಭವಿಗಳಿಗೆ ಅನ್ಯಾಯವಾಗುತ್ತಿದೆ. ಹೀಗಾಗಿ, ಕಾಯ್ದೆ ಬಗ್ಗೆ ಸರ್ಕಾರ ದೃಢ ನಿಲುವು ಪ್ರಕಟಿಸಬೇಕು ಎಂದು ವೇದಿಕೆ ಅಧ್ಯಕ್ಷ ಎ. ರವೀಂದ್ರ ನಾಯ್ಕ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು.

ಕಾಯ್ದೆ ಜಾರಿಯಾಗಿ 15 ವರ್ಷಗಳಾದರೂ ಸಾಗುವಳಿ ಹಕ್ಕು ಪತ್ರಗಳಿಗೆ ಗ್ರಹಣ ಹಿಡಿದಿದೆ.

ಅತಿ ಹೆಚ್ಚು ಹಕ್ಕುಪತ್ರ ಪಡೆದ ಜಿಲ್ಲೆಗಳು	
ಉತ್ತರ ಕನ್ನಡ	2,885
ಶಿವಮೊಗ್ಗ	2,444
ಚಾಮರಾಜನಗರ	2,136
ಕೊಡಗು	2,018
ಚಿಕ್ಕಮಗಳೂರು	1,911

ಇದರಿಂದ, ಅರಣ್ಯ ವಾಸಿಗಳ ಭೂಮಿ ಹಕ್ಕಿನ ಸಮಸ್ಯೆ ಅರಣ್ಯರೋದನವಾಗಿದೆ. ಅರಣ್ಯ ಹಕ್ಕು ಕಾಯ್ದೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸದ ಕಾರಣ 2,95,018 ಸಾಗುವಳಿಗಾಗಿ ಸಲ್ಲಿಸಿದ್ದ ಅರ್ಜಿಗಳಲ್ಲಿ ಶೇಕಡ 62.49ರಷ್ಟು ಅರ್ಜಿಗಳು ತಿರಸ್ಕೃತಗೊಂಡಿವೆ ಎಂದು ತಿಳಿಸಿದರು.

ರಾಜ್ಯದಲ್ಲಿ ಇದುವರೆಗೆ ಕೇವಲ 15,798 ಹಕ್ಕುಪತ್ರಗಳನ್ನು ವಿತರಿಸಲಾಗಿದೆ. ಇವುಗಳಲ್ಲಿ ಬುಡಕಟ್ಟು ಜನಾಂಗಕ್ಕೆ 12,481 ಹಾಗೂ ಇತರೆ ಪಾರಂಪರಿಕ ಅರಣ್ಯ ವಾಸಿಗಳಿಗೆ 1,976 ನೀಡಲಾಗಿದೆ. ಒಟ್ಟಾರೆಯಾಗಿ ಶೇಕಡ 5.35 ಸಾಗುವಳಿ ಅರ್ಜಿದಾರರಿಗೆ ಮಾತ್ರ ಹಕ್ಕು ಪತ್ರ ದೊರೆತಿದೆ ಎಂದು ವಿವರಿಸಿದರು.

ಸಾಗುವಳಿ ಹಕ್ಕಿಗಾಗಿ ಮೊದಲು ಗ್ರಾಮ ಅರಣ್ಯ ಸಮಿತಿಗೆ ಅರ್ಜಿ ಸಲ್ಲಿಸಬೇಕು. ನಂತರ, ಉಪವಿಭಾಗ ಸಮಿತಿಗೆ ಸಲ್ಲಿಸಬೇಕು. ಆದರೆ, ಉಪವಿಭಾಗ ಸಮಿತಿಗಳು ಕಾನೂನುಗಳನ್ನು ಪಾಲಿಸದೆಯೇ ಅರ್ಜಿಗಳನ್ನು ತಿರಸ್ಕರಿಸುತ್ತಿದೆ. ಉತ್ತರ ಕನ್ನಡ ಜಿಲ್ಲೆಯ ಶಿರಸಿ ಉಪವಿಭಾಗದ ಅರಣ್ಯ ಹಕ್ಕು ಸಮಿತಿಯು ಒಂದೇ ದಿನದಲ್ಲಿ 15 ಸಾವಿರ ಅರ್ಜಿಗಳನ್ನು ತಿರಸ್ಕರಿಸಿದೆ ಎಂದು ಉದಾಹರಣೆ ನೀಡಿದರು.

ಪಾರಂಪರಿಕ ಅರಣ್ಯ ವಾಸಿಗಳಿಗೆ ಮೂರು ತಲೆಮಾರುಗಳ ದಾಖಲೆಗಳನ್ನು ಒದಗಿಸುವಂತೆ ಸೂಚಿಸಲಾಗುತ್ತಿದೆ. ಆದರೆ, ಜನವಸತಿ ಪ್ರದೇಶದಲ್ಲಿ ಮೂರು ತಲೆಮಾರು ವಾಸವಿದ್ದ ಬಗ್ಗೆ ದಾಖಲೆಗಳನ್ನು ಕೊಟ್ಟರೆ ಸಾಕು ಎಂದು ಕೇಂದ್ರ ಸರ್ಕಾರದ ಬುಡಕಟ್ಟು ಸಚಿವಾಲಯ ನಿರ್ದೇಶನ ನೀಡಿದೆ. ಈ ನಿರ್ದೇಶನವನ್ನು ಅಧಿಕಾರಿಗಳು ಪಾಲಿಸುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅರಣ್ಯ ವಾಸಿಗಳ ಹಕ್ಕುಗಳ ಬಗ್ಗೆ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ. ಈ ಅರ್ಜಿ ವಿಚಾರಣೆ ಮುಗಿಯುವವರೆಗೂ ಒಕ್ಕಲೆಬ್ಬಿಸಬಾರದು ಎಂದು ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ ಎಂದು ತಿಳಿಸಿದರು.

'ಚಾಣಕ್ಯ ಹೆಸರಲ್ಲಿ ಆರ್‌ಎಸ್‌ಎಸ್‌ಗೆ ಜಮೀನು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ (ಆರ್‌ಎಸ್‌ಎಸ್) ₹ 400 ಕೋಟಿಯ ಜಮೀನನ್ನು ಕೇವಲ ₹ 50 ಕೋಟಿಗೆ ನೀಡುವುದಕ್ಕಾಗಿ ಚಾಣಕ್ಯ ವಿಶ್ವವಿದ್ಯಾಲಯದ ಮಸೂದೆ ತರಲಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ದೇವನಹಳ್ಳಿ ಬಳಿಯ ಹರಳೂರು ಗ್ರಾಮದಲ್ಲಿ ಪ್ರತಿ ಎಕರೆ 1.50 ಕೋಟಿ ಪರಿಹಾರ ನೀಡಿ 116 ಎಕರೆ ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಸ್ವಾಧೀನಪಡಿಸಿಕೊಂಡಿತ್ತು. ₹ 175 ಕೋಟಿ ಪರಿಹಾರ ನೀಡಿ ಸ್ವಾಧೀನಪಡಿಸಿಕೊಂಡಿರುವ ಜಮೀನಿನ ಈಗಿನ ಮೌಲ್ಯ ₹ 400 ಕೋಟಿ. ಅದನ್ನು ₹ 50 ಕೋಟಿಗೆ ನೀಡುತ್ತಿರುವುದು ನ್ಯಾಯವೆ' ಎಂದು ಪ್ರಶ್ನಿಸಿದರು.

ಸೆಸ್ ಸಂಸ್ಥೆಯಲ್ಲಿರುವ ಎಲ್ಲರೂ ಆರ್‌ಎಸ್‌ಎಸ್‌ನವರು. ಯಾವುದೇ ಶಿಕ್ಷಣ ಸಂಸ್ಥೆ ನಡೆಸಿದ ಅನುಭವವೇ ಈ ಸಂಸ್ಥೆಗೆ ಇಲ್ಲ. ಈ ಸಂಸ್ಥೆಯಲ್ಲಿರುವವರೆಲ್ಲರೂ ಮನುವಾದಿಗಳು ಮತ್ತು ವರ್ಣಾಶ್ರಮ ವ್ಯವಸ್ಥೆಯನ್ನು ಬೆಂಬಲಿಸುವವರು. ಅವರಿಗೆ ಬಿಡಿಗಾಸಿಗೆ ಜಮೀನು ಬಳುವಳಿ ನೀಡುವುದಕ್ಕೆ ಬಿಜೆಪಿ ಸರ್ಕಾರ ತರಾತುರಿಯಲ್ಲಿ ಮಸೂದೆ ಮಂಡಿಸಿ, ಅಂಗೀಕಾರ ಪಡೆದಿದೆ ಎಂದು ದೂರಿದರು.

ವಿಶ್ವವಿದ್ಯಾಲಯ ಆರಂಭಿಸಲು ಬೇಕಾದ ಯಾವ ಅರ್ಹತೆಗಳೂ ಸೆಸ್ ಸಂಸ್ಥೆಗೆ ಇಲ್ಲ. ಮೂಲಸೌಕರ್ಯವನ್ನೂ ಹೊಂದಿಲ್ಲ. ಯಾವ ಅರ್ಹತೆಯ ಮೇಲೆ ವಿಶ್ವವಿದ್ಯಾಲಯ ಆರಂಭಕ್ಕೆ ಅನುಮತಿ ನೀಡಲಾಗುತ್ತಿದೆ ಮತ್ತು ಜಮೀನು ಮಂಜೂರು ಮಾಡಲಾಗುತ್ತಿದೆ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದರು.

'ಕೋವಿಡ್ ಎರಡನೆ ಅಲೆ ಇದ್ದಾಗ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಆಗಿನ ಸರ್ಕಾರ, ತರಾತುರಿಯಲ್ಲಿ ಸಂಪುಟ ಸಭೆ ನಡೆಸಿ ಸೆಸ್‌ಗೆ ಜಮೀನು ಮಂಜೂರು ಮಾಡಿದೆ. ಇದು ದೊಡ್ಡ ಹಗರಣ. ಯಾವುದೇ ಅರ್ಹತೆ ಇಲ್ಲದ ಸಂಸ್ಥೆಗೆ ವಿಶ್ವವಿದ್ಯಾಲಯ ಸ್ಥಾಪನೆಗೆ ಅನುಮತಿ ನೀಡಲಾಗುತ್ತಿದೆ. ಇದು ದೊಡ್ಡ ಅಪರಾಧ. ರಾಜ್ಯ ಸರ್ಕಾರ ಚಾಣಕ್ಯ ವಿಶ್ವವಿದ್ಯಾಲಯ ಸ್ಥಾಪನೆಗೆ ಅನುಮತಿ ನೀಡಬಾರದು' ಎಂದು ಒತ್ತಾಯಿಸಿದರು.

ಕೈಗಾರಿಕಾ ಜಮೀನು ನೀಡಕೂಡದು: ಡಿಕೆಶಿ

'ಖಾಸಗಿ ವಿಶ್ವವಿದ್ಯಾಲಯ ಸ್ಥಾಪನೆಗೆ ಸಂಬಂಧಿಸಿದ ಎಲ್ಲ ನಿಯಮಗಳನ್ನೂ ಉಲ್ಲಂಘಿಸಿ ಚಾಣಕ್ಯ ವಿಶ್ವವಿದ್ಯಾಲಯಕ್ಕೆ ಒಪ್ಪಿಗೆ ನೀಡಲಾಗಿದೆ. ಅಸ್ತಿತ್ವದಲ್ಲಿ ಇಲ್ಲದ ಸಂಸ್ಥೆಗೆ ಕಡಿಮೆ ದರಕ್ಕೆ ಜಮೀನು ನೀಡುತ್ತಿರುವುದೇ ಸಂಶಯಾಸ್ಪದ ಕೆಲಸ' ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

'ಏರೋಸ್ಪೇಸ್ ಪಾರ್ಕ್ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಂಡಿರುವ ಜಮೀನನ್ನು ಚಾಣಕ್ಯ ವಿಶ್ವವಿದ್ಯಾಲಯಕ್ಕೆ ನೀಡುವುದು ಸರಿಯಲ್ಲ. ಮಾಗಡಿ ಬಳಿಯಲ್ಲಿ ಸಂಸ್ಕೃತ ವಿಶ್ವವಿದ್ಯಾಲಯದ ಸಮೀಪದಲ್ಲಿ ಸರ್ಕಾರಿ ಜಮೀನು ಲಭ್ಯವಿದೆ. ಅದನ್ನು ಬೇಕಿದ್ದರೆ ನೀಡಲಿ' ಎಂದರು.

ಗ್ರೂಪ್-ಸಿ ಹುದ್ದೆ ಪರೀಕ್ಷೆ ಸಿದ್ಧತೆ ಹೇಗಿರಬೇಕು?

ಕರ್ನಾಟಕ ಲೋಕ ಸೇವಾ ಆಯೋಗವು ಗ್ರೂಪ್ ಸಿ ವೃಂದದ ತಾಂತ್ರಿಕೇತರ ಹುದ್ದೆಗಳಾದ ಲೇಬರ್ ಇನ್‌ಸ್ಪೆಕ್ಟರ್, ಹಾಸ್ಟೆಲ್ ವಾರ್ಡನ್, ಸಾಂಖಿಕ ನಿರೀಕ್ಷಕರು, ಪ್ರಥಮ ದರ್ಜೆ ಕಂದಾಯ ನಿರೀಕ್ಷಕರು, ಕರವಸೂಲಿಗಾರರು ಈ ಮೊದಲಾದ 523 ಹುದ್ದೆಗಳ ನೇಮಕಾತಿಗೆ ಬರುವ ಡಿಸೆಂಬರ್ ತಿಂಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲು ನಿಶ್ಚಯಿಸಿದೆ. ಪರೀಕ್ಷೆ ಹೇಗಿರುತ್ತದೆ ಮತ್ತು ತಯಾರಿ ಹೇಗೆ ನಡೆಸಬೇಕೆಂಬುದನ್ನು ನೋಡೋಣ

> ಕರ್ನಾಟಕ ಲೋಕ ಸೇವಾ ಆಯೋಗವು 'ಗ್ರೂಪ್ ಸಿ'ಯ ವಿವಿಧ 523 ಹುದ್ದೆಗಳ ನೇಮಕಾತಿಗೆ ಡಿಸೆಂಬರ್‌ನಲ್ಲಿ ಪರೀಕ್ಷೆ ನಡೆಸಲಿದೆ. ಈ ಪರೀಕ್ಷೆಗೆ ತಯಾರಿ ಹೇಗಿರಬೇಕು?

ಪರೀಕ್ಷೆಯಲ್ಲಿ ಏನೇನು ಇರುತ್ತದೆ?

ಈ ಪರೀಕ್ಷೆಯಲ್ಲಿ ಮೂರು ಪ್ರಶ್ನೆ ಪತ್ರಿಕೆ ಇರುತ್ತದೆ. ಮೊದಲನೆಯದು ಕಡ್ಡಾಯ ಕನ್ನಡ. ಈ ಪತ್ರಿಕೆಯಲ್ಲಿ ಪಡೆದಿರುವ ಅಂಕಗಳನ್ನು ಅಂತಿಮ ರ್‍ಯಾಕಿಂಗ್‌ಪಟ್ಟಿಯಲ್ಲಿ ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ಎರಡನೆಯದು ಸಾಮಾನ್ಯ ಜ್ಞಾನ. ಮೂರನೆಯದು ಸಂವಹನ. ಎರಡನೇ ಮತ್ತು ಮೂರನೇ ಪತ್ರಿಕೆಗಳು ಮಹತ್ವದ್ದಾಗಿದೆ. ಅಂದರೆ ಸಾಮಾನ್ಯ ಜ್ಞಾನ ಹಾಗೂ ಸಂವಹನ ಬಹಳ ಮಹತ್ವದ್ದಾಗಿದೆ. ಇವೆರಡರಲ್ಲಿ ಗಳಿಸಿದ ಅಂಕಗಳನ್ನು ಸ್ಪರ್ಧೆಗೆ ಪರಿಗಣಿಸುವುದರಿಂದ ಅತ್ಯುತ್ತಮ ತಯಾರಿ ಮಾಡಿಕೊಳ್ಳಬೇಕು.

ಸಾಮಾನ್ಯ ಜ್ಞಾನ ಪತ್ರಿಕೆಯು 100 ಅಂಕಗಳನ್ನು ಒಳಗೊಂಡಿರುತ್ತದೆ. ಈ ಪತ್ರಿಕೆಯಲ್ಲಿ ಈ ಕೆಳಗಿನ ವಿಷಯದ ಮೇಲೆ ಪ್ರಶ್ನೆ ಕೇಳಲಾಗುತ್ತದೆ. ಪ್ರಚಲಿತ ಘಟನೆ, ಸಾಮಾನ್ಯ ವಿಜ್ಞಾನ, ಭೂಗೋಳ, ಸಮಾಜ ವಿಜ್ಞಾನ, ಭಾರತೀಯ ಸಮಾಜ ಮತ್ತು ಅದರ ಕ್ರಿಯಾತ್ಮಕತೆ, ಭಾರತೀಯ ಇತಿಹಾಸ, ಭಾರತದ ಸಂವಿಧಾನ ಮತ್ತು ಸಾರ್ವಜನಿಕ ಆಡಳಿತ, ಪ್ರಾಯೋಗಿಕ ಜ್ಞಾನ ಮತ್ತು ಮಾನಸಿಕ ಸಾಮರ್ಥ್ಯ, ಕರ್ನಾಟಕ ರಾಜ್ಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸ, ಸ್ವಾತಂತ್ರ್ಯಾ ನಂತರ ಭೂ ಸುಧಾರಣೆ ಮತ್ತು ಸಾಮಾಜಿಕ ಬದಲಾವಣೆ, ಕರ್ನಾಟಕದ ಆರ್ಥಿಕತೆ ಮತ್ತು ಅದರ ಬಲ ಹಾಗೂ ದೌರ್ಬಲ್ಯ, ಪ್ರಸ್ತುತ ಹಂತ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಗ್ರಾಮೀಣ ಸಹಕಾರ, ಕರ್ನಾಟಕ ಸಮರ್ಥ ಆಡಳಿತಕ್ಕಾಗಿ ವಿಜ್ಞಾನ ಮತ್ತು ತಂತ್ರಜ್ಞಾನದ ಪಾತ್ರ, ಕರ್ನಾಟಕದಲ್ಲಿ ಪರಿಸರ ಸಮಸ್ಯೆಗಳು ಮತ್ತು ಅಭಿವೃದ್ಧಿ ವಿಷಯಗಳು.

ಮೂರನೆಯದು ಸಂವಹನ. ಈ ಪತ್ರಿಕೆಯು 35 ಅಂಕಗಳಿಗಾಗಿ ಸಾಮಾನ್ಯ ಕನ್ನಡ, 35 ಅಂಕಗಳಿಗಾಗಿ ಸಾಮಾನ್ಯ ಇಂಗ್ಲಿಷ್, 30 ಅಂಕಗಳಿಗಾಗಿ ಕಂಪ್ಯೂಟರ್ ಜ್ಞಾನ ಒಳಗೊಂಡಿರುತ್ತದೆ.

ಪರೀಕ್ಷೆಗೆ ಏನೇನು ಓದಬೇಕು?

ಈ ಪರೀಕ್ಷೆ ಒಂದು ಸ್ಪರ್ಧಾತ್ಮಕ ಪರೀಕ್ಷೆಯಾಗಿದ್ದು ನಿಮ್ಮ ಜೊತೆಗೆ ಪರೀಕ್ಷೆ ಬರೆಯುವವರೊಡನೆ ಸ್ಪರ್ಧೆ ನೀಡಿ ಮುಂದೆ ಇರುವುದೇ ಮುಖ್ಯ. ಈಗ ಲಭ್ಯವಿರುವ ಎರಡು ತಿಂಗಳಲ್ಲಿ ಸಂಪೂರ್ಣ ಅಧ್ಯಯನ ಮಾಡಿಕೊಂಡು ಮುನ್ನಡೆಯಬೇಕಾಗಿದೆ.

ಸಾಮಾನ್ಯ ವಿಜ್ಞಾನ, ಭೂಗೋಳ, ಸಮಾಜ ವಿಜ್ಞಾನ ವಿಷಯಗಳಿಗೆ 8, 9, 10ನೇ ತರಗತಿಯ ವಿಜ್ಞಾನ ಮತ್ತು ಸಮಾಜವಿಜ್ಞಾನದ ಪುಸ್ತಕಗಳನ್ನು ಓದಬೇಕು, ಪ್ರತಿಯೋಗಿತಾ ದರ್ಪಣ ಪ್ರಕಟಿಸಿರುವ ಭಾರತೀಯ ಇತಿಹಾಸ, ಜನರಲ್ ಜಿಯಾಗ್ರಫಿ ಹಾಗೂ ಜನರಲ್ ಸೈನ್ಸ್ ಪುಸ್ತಕಗಳನ್ನು ಕೂಡಾ ಪರಾಮರ್ಶಿಸಿ.

ಭಾರತೀಯ ಸಮಾಜ ಮತ್ತು ಅದರ ಕ್ರಿಯಾತ್ಮಕತೆ ಈ ವಿಷಯಕ್ಕೆ ಭಾರತೀಯ ಸಮಾಜಶಾಸ್ತ್ರ ಪುಸ್ತಕ ಓದಬಹುದು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಪ್ರಕಟಿಸಿರುವ ಭಾರತದ ಗೆಜೆಟಿಯರ್ ಸಂಪುಟ-2 ರಲ್ಲಿ ಇರುವ ಸಮಾಜ, ಧರ್ಮ, ಸಾಹಿತ್ಯ ಎಂಬ ಅಧ್ಯಾಯದಲ್ಲಿರುವ ಕೆಲವು ಆಯ್ದ ಭಾಗಗಳನ್ನು ಓದಿಕೊಳ್ಳುವುದು ಉತ್ತಮ.

ಭಾರತದ ಸಂವಿಧಾನ ಮತ್ತು ಸಾರ್ವಜನಿಕ ಆಡಳಿತದ ಕುರಿತು ಬೇರೆ ಬೇರೆ ಲೇಖಕರು ಬರೆದಿರುವ ಪುಸ್ತಕಗಳು ಲಭ್ಯ. ಅವುಗಳನ್ನು ಅಂಗಡಿಯಲ್ಲಿ ಖರೀದಿಸಬಹುದು ಅಥವಾ ಗ್ರಂಥಾಲಯಗಳಲ್ಲಿ ಓದಬಹುದು.

ಕರ್ನಾಟಕ ರಾಜ್ಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸ, ಸ್ವಾತಂತ್ರ್ಯ ನಂತರ ಭೂ ಸುಧಾರಣೆ ಮತ್ತು ಸಾಮಾಜಿಕ ಬದಲಾವಣೆ, ಕರ್ನಾಟಕ ಆರ್ಥಿಕತೆ ಮತ್ತು ಅದರ ಬಲ ಹಾಗೂ ದೌರ್ಬಲ್ಯ, ಪ್ರಸ್ತುತ ಹಂತ, ಈ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ ಗೆಜೆಟಿಯರ್ ಇಲಾಖೆ ಪ್ರಕಟಿಸಿರುವ 'ಕರ್ನಾಟಕ ಕೈಪಿಡಿ' ಓದಬೇಕು. ಇದರ ಜೊತೆಗೆ ಬಜೆಟ್, ಕರ್ನಾಟಕ ಎಕನಾಮಿಕ್ ಸರ್ವೇ ಓದುವುದು ಉತ್ತಮ. ಇಡೀ ಪುಸ್ತಕ ಓದುವ ಅವಶ್ಯಕತೆ ಇಲ್ಲ. ನಿಮ್ಮ ಪಠ್ಯಕ್ರಮದಲ್ಲಿ ಯಾವೆಲ್ಲಾ ವಿಷಯಗಳು ನೀಡಿದ್ದಾರೋ ಅವುಗಳಿಗೆ ಸಂಬಂಧಿಸಿದ ಚಾಪ್ಟರ್‌ಗಳನ್ನು ಅವಶ್ಯ ಓದಿ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಗ್ರಾಮೀಣ ಸಹಕಾರ ಕುರಿತು ತಜ್ಞರು ಬರೆದಿರುವ ಪುಸ್ತಕದ ಜೊತೆಗೆ ಪಂಚಾಯಿತಿರಾಜ್ ಕೈಪಿಡಿ ಎಂಬ ಪುಸ್ತಕವನ್ನು ಓದಬಹುದು.

ವಿವಿಧ ಪ್ರಕಾಶನಗಳ ಮಾರ್ಗದರ್ಶಿ ಪುಸ್ತಕಗಳು ನಿಮ್ಮ ತಯಾರಿಗೆ ಸಹಕಾರಿಯಾಗಬಲ್ಲದು. ದಿನಪತ್ರಿಕೆಗಳಲ್ಲಿ ಬರುವ ರಾಷ್ಟ್ರೀಯ, ಅಂತರರಾಷ್ಟ್ರೀಯ ಮತ್ತು ರಾಜ್ಯದ ಸುದ್ದಿಸಂಗತಿಗಳನ್ನು ಸಂಗ್ರಹಿಸಿ ಓದುವುದು ಒಳ್ಳೆಯದು. ಯೂಟ್ಯೂಬ್ ಚಾನೆಲ್‌ಗಳಲ್ಲಿ ಇರುವ ವಿಡಿಯೊ ಪಾಠಗಳನ್ನು ಕೂಡ ನೋಡಿಕೊಳ್ಳಬಹುದು.

ದಿನಪತ್ರಿಕೆಗಳನ್ನು ಓದುವಾಗ ನೀವು ಈಗಾಗಲೇ ಭಾರತದ ಸಂವಿಧಾನವನ್ನು ಓದಿರಿರುವುದರ ಆಧಾರದ ಮೇಲೆ ಅದಕ್ಕೆ ಸಂಬಂಧಿಸಿದ ಲೇಖನ/ ವರದಿಗಳಿದ್ದರೆ ಗಮನ ಕೊಟ್ಟು ಓದಿ, ರಾಜಕೀಯ ನಾಯಕರ/ ಪಕ್ಷಗಳ ಕಚ್ಚಾಟದ ವರದಿಗೆ ಮಹತ್ವ ಕೊಡುವುದು ಬೇಡ. ಅರ್ಥಶಾಸ್ತ್ರಕ್ಕೆ ಸಂಬಂಧಿಸಿದಂತೆ ವರದಿಗಳು ಪ್ರಕಟವಾದರೆ ಭಾರತೀಯ ಅರ್ಥಶಾಸ್ತ್ರದ ಹಿನ್ನೆಲೆಯಲ್ಲಿರುವ ವರದಿಗಳನ್ನು ಓದಿ. ಕಂಪನಿಗಳ ತ್ರೈಮಾಸಿಕ ಸಾಧನೆಗಳ ಕುರಿತು, ಷೇರು ಮಾರುಕಟ್ಟೆಯ ಬಗ್ಗೆ ಬರುವ ವರದಿಗಳ ಕಡೆಗೆ ಹೆಚ್ಚು ಗಮನ ಕೊಡುವುದು ಬೇಡ, ವಿಜ್ಞಾನದ ವಿಷಯಕ್ಕೆ ಸಂಬಂಧಿಸಿದಂತೆ ಪ್ರಕಟವಾಗುವ ಎಲ್ಲಾ ವರದಿ ಹಾಗೂ ಲೇಖನಗಳನ್ನು ಮರೆಯದೇ ಓದಿ.

ಇತಿಹಾಸವನ್ನು ಅಧ್ಯಯನ ಮಾಡುವಾಗ ಕರ್ನಾಟಕ ಹಾಗೂ ಭಾರತ ಇತಿಹಾಸ ಎರಡನ್ನು ಗಮನ ಕೊಟ್ಟು ಓದಿ. ಸ್ವಾತಂತ್ರ್ಯ ಹೋರಾಟ, ಸಾಂಸ್ಕೃತಿಕ ಭಾರತ ಮತ್ತು ಸಾಂಸ್ಕೃತಿಕ ಕರ್ನಾಟಕದ ಕುರಿತಾದ ಎಲ್ಲಾ ಅಂಶಗಳನ್ನು ಗಮನ ಕೊಟ್ಟು ಓದಿ.

ರಾಷ್ಟ್ರೀಯ ಉದ್ಯಾನವನ, ನದಿಗಳು, ಪ್ರಶಸ್ತಿಗಳು, ಇತ್ತೀಚಿಗೆ ಪ್ರಕಟವಾದ ಪುಸ್ತಕಗಳು ಮತ್ತು ಅದರ ಲೇಖಕರು, ನೈಸರ್ಗಿಕ ವಿಕೋಪಗಳಾದ ಚಂಡಮಾರುತ, ಸುನಾಮಿ, ಪ್ರವಾಹ ಮೊದಲಾದವುಗಳಿಗೆ ಸಂಬಂಧಿಸಿದ ಮಾಹಿತಿ, ಕ್ರೀಡಾರಂಗದಲ್ಲಾದ ಇತ್ತೀಚಿನ ಸಾಧನೆ ಮತ್ತು ಸಾಧಕರ ಪರಿಚಯ, ಕಲಾವಿದರು ಮತ್ತು ಅವರ ಸಾಧನೆ, ಇತ್ತೀಚಿಗೆ ಪ್ರಕಟವಾದ ಪ್ರಶಸ್ತಿಗಳು, ಅಂತರರಾಷ್ಟ್ರೀಯ/ ರಾಷ್ಟ್ರೀಯ/ ರಾಜ್ಯದಲ್ಲಿ ಸುದ್ದಿಯಲ್ಲಿರುವ ಸ್ಥಳಗಳು ಹಾಗೂ ಮಹನೀಯರ ಬಗ್ಗೆ ಮಾಹಿತಿ, ದೇಶಗಳು ಅವುಗಳ ರಾಜಧಾನಿ ಮತ್ತು ಸುದ್ದಿಯಲ್ಲಿರುವ ಪ್ರಮುಖ ಸ್ಥಳಗಳ ಮಾಹಿತಿ. ನಮ್ಮ ದೇಶದಲ್ಲಿರುವ ಕೇಂದ್ರಾಡಳಿತ ಪ್ರದೇಶಗಳು ಹಾಗೂ ರಾಜ್ಯಗಳು, ಅವುಗಳ ರಾಜಧಾನಿ ಈ ಮೊದಲಾದ ಸಾಮಾನ್ಯಜ್ಞಾನ ಕುರಿತ ಮಾಹಿತಿಯನ್ನು ಬಿಡುವಿದ್ದಾಗಲೆಲ್ಲಾ ಕಣ್ಣಾಡಿಸುತ್ತಾ ಇರಿ.

ಪ್ರತಿದಿನವೂ ಅಭ್ಯಾಸಕ್ಕಾಗಿ ಒಂದಿಷ್ಟು ಸಮಯವನ್ನು ತೆಗೆದಿಡುವುದರ ಜೊತೆಗೆ ಪ್ರತಿನಿತ್ಯವೂ ನೀವು ಹಿಂದೆ ಓದಿದ ವಿಷಯ ವಸ್ತುವನ್ನು ಪುನರಾವರ್ತನೆ ಮಾಡುತ್ತಾ ಅಧ್ಯಯನ ಮಾಡುವುದರಿಂದ ಹಿಂದೆ ಓದಿರುವುದನ್ನು ಮರೆತು ಹೋಗದಂತೆ ತಡೆಯಬಹುದು. ಪ್ರತೀದಿನ ಪರೀಕ್ಷೆ ಮುಗಿಯುವ ತನಕ ಕನಿಷ್ಟ 5-6 ಗಂಟೆಯನ್ನಾದರೂ ಓದಲು ಮೀಸಲಿಡಿ. ಅದರಲ್ಲಿ 1 ಗಂಟೆ ಬಹುಆಯ್ಕೆ ಪ್ರಶ್ನೆಗಳನ್ನು ಬಿಡಿಸಲು ಮೀಸಲಿಟ್ಟರೆ ಚೆನ್ನ. ಪರೀಕ್ಷೆ ಹತ್ತಿರ ಹತ್ತಿರ ಬಂದಂತೆ ಒತ್ತಡಕ್ಕೆ ಒಳಗಾಗುವ ಸಾಧ್ಯತೆ ಇರುತ್ತದೆ. ಹೀಗಾಗಿ ನೀವು ಆ ಒತ್ತಡಕ್ಕೆ ಒಳಗಾಗದಂತೆ ಶಾಂತ ಚಿತ್ತರಾಗಿರಿ ಅದಕ್ಕಾಗಿ ಯೋಗ ಅಥವಾ ಧ್ಯಾನದ ಕಡೆಗೆ ಗಮನ ಹರಿಸಿ. ಕನಿಷ್ಠ 10-15 ನಿಮಿಷವಾದರೂ ಧ್ಯಾನ ಮಾಡುವುದು ಉತ್ತಮ.

(ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್)

ಓದಿದ್ದನ್ನು ಮನನ ಮಾಡಿಕೊಳ್ಳಲು ಬರವಣಿಗೆ ಅನುಕೂಲ

ಶಿ.ಗು. ಹಿರೇಮಠ

ಹುನಗುಂದ ತಾಲ್ಲೂಕಿನ ಪ್ರೊಬೇಶನರಿ ತಹಶೀಲ್ದಾರ್ ಆಗಿ ಕಾರ್ಯನಿರ್ವಹಿಸಿ ಸದ್ಯ ಬಾಗಲಕೋಟೆಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ವಿಶೇಷ ಭೂಸ್ವಾಧೀನ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಶ್ವೇತಾ ಬಿಡಿಕರ್ ಅವರು ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯರು. ಯಾವುದೇ ಸ್ಪರ್ಧಾತ್ಮಕ ಕೇಂದ್ರದಲ್ಲಿ ತರಬೇತಿ ಪಡೆಯದೇ 2017ರಲ್ಲಿ ನಡೆದ ಕೆಎಎಸ್ ಪರೀಕ್ಷೆಯಲ್ಲಿ ಮೂರು ಹಂತಗಳಲ್ಲಿಯೂ ಉತ್ತಮ ಅಂಕ ಪಡೆದು ರಾಜ್ಯಕ್ಕೆ 28ನೇ ರ್‍ಯಾಂಕ್ ಪಡೆದಿದ್ದಾರೆ. ಬಾಹ್ಯವಾಗಿ ಪದವಿ ಪೂರೈಸಿದ್ದಲ್ಲದೇ ಕೇಂದ್ರ ಸರ್ಕಾರಿ ನೌಕರಿ ನಿಭಾಯಿಸುತ್ತಾ ಕೆಎಎಸ್ ಅಧಿಕಾರಿ ಹುದ್ದೆ ಅಲಂಕರಿಸಿದ್ದು ವಿಶೇಷ.

ಅವರು ಕಂದಾಯ ಇಲಾಖೆಯಲ್ಲಿ ಎಸಿ ಹುದ್ದೆಗೆ ಆಯ್ಕೆಯಾದರು. ಯಾವುದೇ ಕೋಚಿಂಗ್ ಪಡೆದುಕೊಂಡಿಲ್ಲ. ಕೆಎಎಸ್ ಮತ್ತು ಐಎಎಸ್ ತೇರ್ಗಡೆಯಾದವರ ಬಳಿ ಹೋಗಿ ಮಾರ್ಗದರ್ಶನ ಪಡೆದ ಅವರು ತಮ್ಮ ಪಯಣದ ಹಾದಿಯನ್ನು ಇಲ್ಲಿ ತೆರೆದಿಟ್ಟಿದ್ದಾರೆ.

• ಸ್ಪರ್ಧಾತ್ಮಕ ಪರೀಕ್ಷೆ ಬರೆಯಬೇಕೆಂಬ ಆಸೆ ಮೂಡಿದ್ದು ಹೇಗೆ?

ಚಿಕ್ಕೋಡಿಯಲ್ಲಿ ಪ್ರೌಢಶಾಲೆ ಓದುವಾಗ ನಿತ್ಯ ಶಾಲೆಗೆ ತೆರಳುವ ಸಂದರ್ಭದಲ್ಲಿ ದಾರಿಯಲ್ಲಿ ತಹಶೀಲ್ದಾರ್ ಹಾಗೂ ಉಪವಿಭಾಗಾಧಿಕಾರಿ ಕಚೇರಿ ದಾಟಿಕೊಂಡು ಹೋಗಬೇಕಾಗಿತ್ತು. ಅಲ್ಲಿ ಮೇಲಧಿಕಾರಿಗಳಿಗೆ ಕೊಡುವ ಗೌರವ, ಅವರ ಅಧಿಕಾರದ ಗತ್ತು, ಕಾರ್ಯವೈಖರಿ ನೋಡಿ ನಾನೂ ಕೆಎಎಸ್ ಅಧಿಕಾರಿಯಾಗಬೇಕೆಂಬ ಆಸೆ ಮೂಡಿತು. ನಮ್ಮ ಶಾಲೆಯ ಇಂಗ್ಲಿಷ್ ಶಿಕ್ಷಕರಾದ ರಾಘವೇಂದ್ರ ಕುಲಕರ್ಣಿ ಅವರು ಪಾಠ ಮಾಡುವಾಗ ಸ್ಪರ್ಧಾತ್ಮಕ ಪರೀಕ್ಷೆ ಕುರಿತು ಒಲವನ್ನು ಮೂಡಿಸಿದರು. ಮುಂದೆ ಎಸ್ಸೆಸ್ಸೆಲ್ಸಿಯಲ್ಲಿ ಶೇ 90 ಅಂಕ ಪಡೆದಿದ್ದರಿಂದ ಮನೆಯಲ್ಲಿ ಎಲ್ಲರೂ ವಿಜ್ಞಾನ ವಿಭಾಗಕ್ಕೆ ಸೇರಬೇಕೆಂಬ ಒತ್ತಾಸೆ ಮಾಡಿದರು. ನಾನು ಸ್ಪರ್ಧಾತ್ಮಕ ಪರೀಕ್ಷೆಗೆ ಅನುಕೂಲವಾಗಲು ಕಲಾ ವಿಭಾಗ ಆಯ್ಕೆ ಮಾಡಿಕೊಂಡೆ.

• ನಿಮ್ಮ ಶೈಕ್ಷಣಿಕ ಜೀವನ ಹೇಗಿತ್ತು?

ನಮ್ಮ ತಂದೆ ಎಲ್.ಐ.ಸಿ ಯಲ್ಲಿ ಉದ್ಯೋಗಿಯಾಗಿದ್ದರು. ನಮ್ಮದು ಮಧ್ಯಮ ವರ್ಗದ ಕುಟುಂಬ. ನಮ್ಮ ಅಕ್ಕ ಬಿಎಡ್ ಮಾಡಿದ್ದರಿಂದ ನಾನು ಕೆಎಎಸ್ ಮಾಡಲು ಅನುಕೂಲವಾಯಿತು. ಪಿಯುಸಿಯಲ್ಲಿ ಶೇ 94 ಅಂಕ ಗಳಿಸಿದ್ದರಿಂದ ಅಂಚೆ ಕಚೇರಿಯಲ್ಲಿ ಅಂಚೆ ಸಹಾಯಕಿ ಕೆಲಸಕ್ಕೆ ನೇಮಕಗೊಂಡೆ. ಇದರಿಂದ ಆರ್ಥಿಕವಾಗಿ ಕುಟುಂಬ ನಡೆಸಲು ಸಹಾಯವಾಯಿತು. ಅಂಚೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಾ ಬಿಎ ಪದವಿ(ಬಾಹ್ಯ) ಅಧ್ಯಯನ ಹಾಗೂ ಇಂಗ್ಲಿಷ್ ಮತ್ತು ಸಾರ್ವಜನಿಕ ಆಡಳಿತ ವಿಷಯದಲ್ಲಿ ಎಂಎ ಪಾಸು ಮಾಡಿಕೊಂಡೆ. ಆಗ ನನಗೆ ಮನೆಯಲ್ಲಿ ಮದುವೆ ಮಾಡುವ ಆಲೋಚನೆ ಮಾಡಿದರು. ನನಗೆ ಉದ್ಯೋಗ ಸಿಕ್ಕಿರಬಹುದು, ಆದರೆ ನನ್ನ ಗುರಿ ಕೆಎಎಸ್ ಎಂದು ತಿಳಿಸಿದಾಗ ಮನೆಯಲ್ಲಿ ಎಲ್ಲರೂ ಸಮ್ಮತಿಸಿದರು.

• ಕರ್ತವ್ಯದ ಜೊತೆಗೆ ಕೆಎಎಸ್ ತಯಾರಿ ಹೇಗಿತ್ತು?

ನಾನು ಅಂಚೆ ಇಲಾಖೆಯಲ್ಲಿ 2008ರಲ್ಲಿ ಕೆಲಸಕ್ಕೆ ಸೇರಿಕೊಂಡಾಗ ನನಗೆ 19 ವರ್ಷ. ಕೆಲಸ ನಿರ್ವಹಿಸುತ್ತಾ ಎರಡು ವರ್ಷ ನನ್ನ ಆಸೆ ತಣ್ಣಗಾಗಿತ್ತು. ಆದರೆ ಗುರಿ ಜೀವಂತವಾಗಿತ್ತು. ಅಂಚೆ ಇಲಾಖೆಯಲ್ಲಿ ನನ್ನ ಜೊತೆ ಕಾರ್ಯನಿರ್ವಸುತ್ತಿದ್ದ ಸಹೋದ್ಯೋಗಿ ಸಂತೋಷ ಕಾಮಗೌಡ ಅವರು ಕೆಎಎಸ್ ಪರೀಕ್ಷೆಗೆ ತಯಾರಿ ನಡೆಸಿದ್ದರು. ಅವರ ಸಹಕಾರ ಮತ್ತು ಪ್ರೋತ್ಸಾಹ ನನಗೆ ದೊರೆಯಿತು. ಮತ್ತೆ ನಾನು ಕೆಎಎಸ್ ಅಧಿಕಾರಿ ಆಗಬೇಕೆಂಬ ಆಸೆಗೆ ಜೀವಂತಿಕೆ ಬಂದಿತು. ಸಂತೋಷ ಅವರು 2014ರಲ್ಲಿ ಕೆಎಎಸ್ ಉತ್ತೀರ್ಣರಾದರು. ಉಪವಿಭಾಗಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಾ ನನಗೆ ಮಾರ್ಗದರ್ಶನ ನೀಡಿದರು. ಅವರ ಮಾರ್ಗದರ್ಶನದಿಂದ ನನಗೆ ಹಲವು ಬಹುಮುಖ್ಯ ಅಧ್ಯಯನ ಸಾಮಗ್ರಿಗಳು ದೊರೆತವು. ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿದ್ದರಿಂದ ಕನ್ನಡ ಸಾಹಿತ್ಯ ಆಯ್ಕೆ ಮಾಡಿಕೊಂಡೆ. ಸಾಹಿತಿ ಸಾ.ಶಿ.ಮರುಳಯ್ಯನವರ ಆಡಿಯೊ ಕ್ಲಿಪಿಂಗ್ ತುಂಬಾ ಸಹಾಯವಾಯಿತು. ಬಿಡುವಿದ್ದಾಗ ನಾನು ಆಡಿಯೊ ಕೇಳುತ್ತಿದ್ದೆ. ನನ್ನ ಕೆಲಸದ ಜೊತೆಗೆ ಆಡಿಯೊ ಉಪಯೋಗಕ್ಕೆ ಬಂತು. ಬೆಳಿಗ್ಗೆ 3 ಗಂಟೆ ಮತ್ತು ಸಂಜೆ 3 ಗಂಟೆ ಅಧ್ಯಯನಕ್ಕೆ ಸಮಯ ಮೀಸಲಿಟ್ಟಿದ್ದೆ.

ಶ್ವೇತಾ ಬಿಡಿಕರ್

• ಮುಂದಿನ ತಯಾರಿ ಹೇಗಿತ್ತು?

2011 ಮತ್ತು 14ರಲ್ಲಿ ನಡೆದ ಕೆಎಎಸ್ ಅಂತಿಮ ಪರೀಕ್ಷೆಯಲ್ಲಿ ಎರಡು ಬಾರಿ ವಿಫಲಳಾದೆ. ಆದರೆ ಧೃತಿಗೆಡಲಿಲ್ಲ. ನಿರಂತರ ಅಧ್ಯಯನ ಮುಂದುವರೆಸಿದೆ. ಎರಡು ಸಲ ಸೋತಿದ್ದೇ ಮುಂದಿನ ಸಲ ಪಾಸಾಗಲು ಸ್ಫೂರ್ತಿಯಾಯಿತು. ಮೂರನೇ ಬಾರಿ ಹೆಚ್ಚಿನ ಓದಿಗೆ ಅವಕಾಶ ದೊರೆಯಿತು. 2017ರಲ್ಲಿ ಕೆಎಎಸ್ ಅಂತಿಮ ಪರೀಕ್ಷೆಗೆ ಹೆಚ್ಚಿನ ಅಧ್ಯಯನ ಮಾಡಲು ಮೂರು ತಿಂಗಳು ಕೆಲಸಕ್ಕೆ ರಜೆ ಹಾಕಿದೆ. ದಿನಕ್ಕೆ ಒಂಬತ್ತು ತಾಸು ಅವಕಾಶ ದೊರೆಯಿತು. ಈ ಸಂದರ್ಭದಲ್ಲಿ ಸಾಮಾಜಿಕ ಜಾಲತಾಣದಿಂದ ದೂರವಿದ್ದೆ. ದೀರ್ಘವಾಗಿ ಓದಿದ ನಂತರ ಮೂರು ಗಂಟೆ ಬರವಣಿಗೆಯಲ್ಲಿ ತೊಡಗಿಸಿಕೊಂಡೆ. ನಿತ್ಯ ಮೂರು ತಾಸು ಓದಿದ ವಿಷಯವನ್ನು ನೆನಪಿಸಿಕೊಂಡು ಬರೆಯುತ್ತಿದ್ದೆ. ಬರವಣಿಗೆಯಲ್ಲಿ ಪಳಗುವಂತೆ ಸಿದ್ಧಳಾದೆ.

• ಸ್ಪರ್ಧಾರ್ಥಿಗಳಿಗೆ ಕೆಎಎಸ್ ತರಬೇತಿ ಅವಶ್ಯವೆ?

ಯಾರಿಗೆ ಅವಶ್ಯಕತೆ ಇದೆಯೋ ಅವರು ತರಬೇತಿ ಪಡೆಯಬಹುದು. ತರಬೇತಿ ಪಡೆಯದೆಯೂ ಹಲವರು ಯಶಸ್ವಿಯಾಗಿದ್ದಾರೆ. ತರಬೇತಿ ಪಡೆದವರೂ ಉತ್ತೀರ್ಣರಾಗಿದ್ದಾರೆ. ಈಗ ಆನ್‌ಲೈನ್ ತರಬೇತಿಗಳಿವೆ. ಗೂಗಲ್‌ನಲ್ಲಿ ವಿಷಯಕ್ಕೆ ಸಂಬಂಧಿಸಿದಂತೆ ಸಾಕಷ್ಟು ವೆಬ್‌ಸೈಟ್‌ಗಳಿವೆ. ತರಬೇತಿ ಪಡೆಯಲು ಅಸಾಧ್ಯವಾದರೆ ಮನೆಯಲ್ಲಿದ್ದುಕೊಂಡೇ ಶ್ರಮ ಹಾಕಿದರೆ ಖಂಡಿತ ಯಶಸ್ವಿಯಾಗಬಹುದು. ಗ್ರಂಥಾಲಯಗಳಿಗೆ ಭೇಟಿಕೊಡಬಹುದು.

• ಸ್ಪರ್ಧಾರ್ಥಿಗಳಿಗೆ ನಿಮ್ಮ ಸಲಹೆ ಏನು?

ಎಲ್ಲಕ್ಕಿಂತ ಮುಖ್ಯವಾಗಿ ಒಂದು ತಪಸ್ಸು ಎಂದು ಅದನ್ನು ಪರಿಗಣಿಸಬೇಕು. ಸಾಮಾನ್ಯ ಅಧ್ಯಯನಕ್ಕಾಗಿ ದಿನಾ ಪತ್ರಿಕೆ ಕೊಂಡು ಓದುತ್ತಿದ್ದೆ. ನೋಟ್ಸ್ ಮಾಡಿಟ್ಟುಕೊಳ್ಳುವುದು ನನ್ನ ದಿನನಿತ್ಯದ ಕೆಲಸವಾಗಿತ್ತು. ಕೇವಲ ಓದುತ್ತಾ ಹೋಗುವುದಕ್ಕಿಂತ ಓದಿದ್ದನ್ನು ಮನನ ಮಾಡಿಕೊಳ್ಳಲು ಬರವಣಿಗೆ ತುಂಬಾ ಅನುಕೂಲ. ಆರು ತಾಸು ಅಧ್ಯಯನ ಮಾಡಿದರೆ ಮೂರು ಗಂಟೆ ಬರೆದು ತೆಗೆಯಬೇಕು. ಈ ಪ್ರವೃತ್ತಿ ಪ್ರತಿಯೊಬ್ಬ ಸ್ಪರ್ಧಾರ್ಥಿಗಳು ಬೆಳೆಸಿಕೊಳ್ಳಬೇಕು. ಓದುವ ಧ್ಯಾನ ಬರೆಯುವಾಗಲೂ ಇರಬೇಕು. ಸ್ಪಷ್ಟ ಗುರಿ, ನಿತ್ಯ ಶ್ರಮ ಇದ್ದರೆ ಯಶಸ್ವಿ ಕಟ್ಟಿಟ್ಟ ಬುತ್ತಿ.

ಪಿಯುಸಿ ನಂತರ ಸ್ಪರ್ಧಾತ್ಮಕ ಪರೀಕ್ಷೆ

ಶಶಿ ಕೆಳಗಿನಮನೆ

ಪ್ರತಿಯೊಬ್ಬ ವಿದ್ಯಾರ್ಥಿಗೂ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಎಂದರೆ ಮಹತ್ವದ ಮೈಲಿಗಲ್ಲುಗಳಿದ್ದಂತೆ. ಈ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವುದು ಯಶಸ್ಸಿಗೆ ಮುನ್ನುಡಿ ಎನ್ನಬಹುದು. ಹೆಚ್ಚಿನವರು ಪದವಿ ಮಾಡಲು ಸಿದ್ಧತೆ ನಡೆಸಿದರೆ, ಕೆಲವರು ಸರ್ಕಾರಿ ಹುದ್ದೆಗಳಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸಲು ಶುರು ಮಾಡುತ್ತಾರೆ.

ಪಿಯುಸಿ ಅಥವಾ 12ನೇ ತರಗತಿಯ ನಂತರ ಸರ್ಕಾರಿ ಹುದ್ದೆಗಳಿಗಾಗಿ ಸಾಕಷ್ಟು ಸ್ಪರ್ಧಾತ್ಮಕ ಪರೀಕ್ಷೆಗಳಿದ್ದು, ವಿದ್ಯಾರ್ಥಿಗಳು ತಮ್ಮ ಆಸಕ್ತಿಗೆ ಅನುಗುಣವಾಗಿ ಆಯ್ಕೆ ಮಾಡಿಕೊಳ್ಳಬಹುದು. ಈ ತರಹದ ಪರೀಕ್ಷೆಗಳ ವಿಷಯ ಬಂದಾಗ ಮತ್ತು ಸರ್ಕಾರಿ ಉದ್ಯೋಗಕ್ಕೆ ಸೇರುವಾಗ ಪ್ರತಿಯೊಬ್ಬರ ಮನಸ್ಸಿಗೆ ಬರುವುದೆಂದರೆ ಉದ್ಯೋಗ ಭದ್ರತೆ. ಹೀಗಾಗಿ ಪಿಯುಸಿ ನಂತರವೂ ರಕ್ಷಣಾ ಇಲಾಖೆಗಳು, ಬ್ಯಾಂಕ್ ಮತ್ತು ರೈಲ್ವೇಸ್‌ನಲ್ಲಿ ಉದ್ಯೋಗಗಳು ಸಾಕಷ್ಟಿದ್ದು, ಉದ್ಯೋಗ ಭದ್ರತೆ ಬಯಸುವವರು ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ಮಾಡಬಹುದು.

ನ್ಯಾಷನಲ್ ಡಿಫೆನ್ಸ್ ಅಕಾಡೆಮಿ (ಎನ್‌ಡಿಎ)

ಭಾರತದಲ್ಲಿ ಭದ್ರತಾ ಪಡೆಗಳಲ್ಲಿ ಉದ್ಯೋಗಕ್ಕೆ ಸೇರುವವರ ಪ್ರಥಮ ಆಯ್ಕೆ ಇದು ಎನ್ನಬಹುದು. ಎನ್‌ಡಿಎ ಮತ್ತು ಇಂಡಿಯನ್ ನೇವಲ್ ಅಕಾಡೆಮಿ ಕೋರ್ಸ್ (ಐಎನ್‌ಎಸಿ) ನ ಆರ್ಮಿ, ನೇವಿ ಹಾಗೂ ಏರ್‌ಫೋರ್ಸ್ ವಿಭಾಗಗಳಲ್ಲಿರುವ ಖಾಲಿ ಹುದ್ದೆಗಳಿಗೆ ಇದು ಪರೀಕ್ಷೆಗಳನ್ನು ನಡೆಸುತ್ತದೆ. ವಿವಿಧ ಅಕಾಡೆಮಿಗಳಿಗೆ ವಿವಿಧ ಬಗೆಯ ಅರ್ಹತೆಗಳಿರುತ್ತವೆ.

ಉದಾಹರಣೆಗೆ ಐಎನ್‌ಎಸಿಯ ಆರ್ಮಿ ವಿಭಾಗಕ್ಕೆ ಸ್ಪರ್ಧಾರ್ಥಿಗಳು ಪಿಯುಸಿ ಪಾಸಾಗಿರಬೇಕು. ಎನ್‌ಡಿಎಯ ವಿವಿಧ ವಿಭಾಗಗಳಿಗೆ ಭೌತಶಾಸ್ತ್ರ ಮತ್ತು ಗಣಿತ ತೆಗೆದುಕೊಂಡು ಪಿಯುಸಿ ಅಥವಾ 12ನೇ ತರಗತಿ ಉತ್ತೀರ್ಣರಾಗಿರಬೇಕು. ಈ ಪರೀಕ್ಷೆಗಳು ವರ್ಷಕ್ಕೆ ಸಾಮಾನ್ಯವಾಗಿ ಎರಡು ಸಲ, ಎರಡು ಹಂತಗಳಲ್ಲಿ ನಡೆಯುತ್ತವೆ.

ಮೊದಲ ಹಂತ ಲಿಖಿತ ಪರೀಕ್ಷೆ– ಗಣಿತ ಮತ್ತು ಜನರಲ್ ಎಬಿಲಿಟಿ, ಎರಡನೆಯದು ಎಸ್‌ಎಸ್‌ಬಿ ಸಂದರ್ಶನ.

ಈ ಪರೀಕ್ಷೆ ಹಾಗೂ ಸಂದರ್ಶನದಲ್ಲಿ ಪಾಸಾದವರು ಮೂರು ವರ್ಷಗಳ ತರಬೇತಿ ಪಡೆದು, ಜೆಎನ್‌ಯುನಲ್ಲಿ ಪದವಿ ಕೂಡ ಮಾಡಬಹುದು. ಈ ಪರೀಕ್ಷೆಗಳನ್ನು ಯುಪಿಎಸ್‌ಸಿ ನಡೆಸುತ್ತದೆ.

ಎಸ್‌ಎಸ್‌ಸಿ ಸಿಎಚ್‌ಎಸ್‌ಎಲ್

12ನೇ ತರಗತಿ ನಂತರ ಸರ್ಕಾರಿ ಉದ್ಯೋಗಕ್ಕೆ ಸೇರುವವರು ನೆಚ್ಚಿನ ಸ್ಪರ್ಧಾತ್ಮಕ ಪರೀಕ್ಷೆಯಿದು.

ಪೋಸ್ಟಲ್ ಸಹಾಯಕರು/ ಸಾರ್ಟಿಂಗ್ ಸಹಾಯಕರು, ಡೇಟಾ ಎಂಟ್ರಿ ಆಪರೇಟ್, ಲೋವರ್ ಡಿವಿಸಿನಲ್ ಕ್ಲರ್ಕ್, ಕೋರ್ಟ್ ಕ್ಲರ್ಕ್ ಮೊದಲಾದ ಹುದ್ದೆಗಳಿಗೆ ಈ ಪರೀಕ್ಷೆಯು ಮೂರು ಹಂತಗಳಲ್ಲಿ ನಡೆಯುತ್ತದೆ.

ಒಬ್ಜೆಕ್ಟಿವ್ ಮಲ್ಟಿಪಲ್ ಟೈಪ್, ಇಂಗ್ಲಿಷ್/ ಹಿಂದಿಯಲ್ಲಿ ಪ್ರಶ್ನೆ ಪತ್ರಿಕೆ, ಕೌಶಲ ಪರೀಕ್ಷೆ/ ಕಂಪ್ಯೂಟರ್ ಕೌಶಲ ಪರೀಕ್ಷೆ. ಮೊದಲ ಹಂತದ ಪರೀಕ್ಷೆ ಆನ್‌ಲೈನ್‌ನಲ್ಲಿ, ಎರಡನೆಯ ಹಂತ ಆಫ್‌ಲೈನ್‌ನಲ್ಲಿ ನಡೆಯುತ್ತದೆ.

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 64

871. 'ಕನಿಷ್ಠ ಅಗತ್ಯ ಕಾರ್ಯಕ್ರಮ' ರೂಪಿಸಿದ ಯೋಜನೆ
ಎ) ನಾಲ್ಕನೇ ಪಂಚವಾರ್ಷಿಕ ಯೋಜನೆ
ಬಿ) ಐದನೆಯ ಪಂಚವಾರ್ಷಿಕ ಯೋಜನೆ
ಸಿ) ಆರನೆಯ ಪಂಚವಾರ್ಷಿಕ ಯೋಜನೆ
ಡಿ) ಏಳನೆಯ ಪಂಚವಾರ್ಷಿಕ ಯೋಜನೆ

872. ವಿತ್ತೀಯ ಜವಾಬ್ದಾರಿ ಮತ್ತು ಬಜೆಟ್ ನಿರ್ವಹಣಾ ಅಧಿನಿಯಮವು ಕೆಳಗಿನ ಈ ಯಾವುದಕ್ಕೆ ಸಂಬಂಧಿಸಿದೆ?
ಎ) ವಿತ್ತೀಯ ಕೊರತೆ
ಬಿ) ಕಂದಾಯ ಕೊರತೆ
ಸಿ) ಎ ಮತ್ತು ಬಿ
ಡಿ) ವಿತ್ತೀಯ ಅಥವಾ ಕಂದಾಯ ಕೊರತೆಗಳು ಅಲ್ಲ

873. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ
1. ಜಿಡಿಪಿಗೆ ಕೃಷಿ ಕ್ಷೇತ್ರದ ಕೊಡುಗೆಯು ಭಾರತದ ಸಂದರ್ಭದಲ್ಲಿ ಸತತವಾಗಿ ಕುಸಿಯುತ್ತಿದೆ.
2. ಜಿಡಿಪಿಗೆ ಸೇವೆಗಳ ಕ್ಷೇತ್ರದ ಕೊಡುಗೆಯು ಸತತವಾಗಿ ಏರುತ್ತಿದೆ.
ಎ) ಸರಿಯಾದ ಹೇಳಿಕೆಗಳನ್ನು ಆಯ್ಕೆ ಮಾಡಿ
ಎ) 1 ಮಾತ್ರ ಸರಿ ಬಿ) 2 ಮಾತ್ರ ಸರಿ
ಸಿ) 1 ಮತ್ತು 2 ಸರಿ ಡಿ) 1 ಮತ್ತು 2 ತಪ್ಪು

874. ಭಾರತದಲ್ಲಿ ರಾಷ್ಟ್ರೀಯ ವರಮಾನದ ಅಂದಾಜುಗಳನ್ನು ಕ್ರೋಢೀಕರಿಸುವವರು ಯಾರು?
ಎ) ರಾಷ್ಟ್ರೀಯ ಸಾಂಖ್ಯಿಕ ಕಚೇರಿ
ಬಿ) ಕೇಂದ್ರೀಯ ಸಾಂಖ್ಯಿಕ ಕಚೇರಿ
ಸಿ) ರಾಷ್ಟ್ರೀಯ ಅಭಿವೃದ್ಧಿ ಮಂಡಳಿ
ಡಿ) ನೀತಿ ಆಯೋಗ

875. ಆರ್ಥಿಕ ಅಭಿವೃದ್ಧಿಯೊಂದಿಗೆ ಸಗಟು ದೇಶಿಯ ಉತ್ಪನ್ನದಲ್ಲಿನ ಸೇವಾ ಕ್ಷೇತ್ರದ ಪಾಲು
ಎ) ಹೆಚ್ಚಾಗುತ್ತದೆ ಬಿ) ಕಡಿಮೆಯಾಗುತ್ತದೆ
ಸಿ) ಏರಿಳಿತವಾಗುತ್ತದೆ ಡಿ) ಸ್ಥಿರವಾಗುತ್ತದೆ

876. ಸಾರ್ವಜನಿಕ ಸಾಲ ಎಂದರೆ
ಎ) ಸಾರ್ವಜನಿಕರು ಎತ್ತುವ ಸಾಲ
ಬಿ) ಭಾರತೀಯ ರಿಸರ್ವ್ ಬ್ಯಾಂಕ್ ಎತ್ತುವ ಸಾಲ
ಸಿ) ರಾಷ್ಟ್ರೀಕೃತ ಬ್ಯಾಂಕುಗಳು ಎತ್ತುವ ಸಾಲ
ಡಿ) ಸರ್ಕಾರ ಎತ್ತುವ ಸಾಲ

877. ಭಾರತದ ಪ್ರಪ್ರಥಮ ಪ್ರಾಥಮಿಕ ಪತ್ತಿನ ವ್ಯವಸಾಯ ಸಹಕಾರಿ ಸಂಘ ಇರುವ ಜಾಗ
ಎ) ಕಣಗಿಹಾಳ-ಗದಗ
ಬಿ) ಆನಂದ-ಗುಜರಾತ್
ಸಿ) 24 ಪರಗಣ-ಪಶ್ಚಿಮ ಬಂಗಾಳ
ಡಿ) ಗೋಕಾಕ್-ಬೆಳಗಾವಿ

878. ಬ್ಯಾಂಕಿಂಗ್ ಉದ್ಯಮಕ್ಕೆ ಸಂಬಂಧಪಟ್ಟಂತೆ Non-performing Assets ಎಂದರೆ
ಎ) ಹೆಚ್ಚುವರಿ ಸಿಬ್ಬಂದಿ
ಬಿ) 20 ವರ್ಷಕ್ಕಿಂತ ಹಳೆಯ ಬ್ಯಾಂಕಿನ ವಾಹನಗಳು
ಸಿ) ಗ್ರಾಮೀಣ ಪ್ರದೇಶದಲ್ಲಿರುವ ಬ್ಯಾಂಕಿನ ಕಟ್ಟಡಗಳು
ಡಿ) ವಸೂಲಿ ಆಗದಿರುವ ಬ್ಯಾಂಕಿನ ಸಾಲಗಳು

879. ಒಂದು ಗೊತ್ತಾದ ವರ್ಷದಲ್ಲಿ ಒಂದು ರಾಷ್ಟ್ರದಲ್ಲಿ ಉತ್ಪಾದನೆಯಾದ ಎಲ್ಲ ಅಂತಿಮ ಸರಕು ಮತ್ತು ಸೇವೆಗಳ ಮಾರುಕಟ್ಟೆ ಮೌಲ್ಯ ಈ ಕೆಳಗಿನ ಯಾವುದರ ವ್ಯಾಖ್ಯಾನವಾಗಿದೆ
ಎ) ರಾಷ್ಟ್ರೀಯ ಆದಾಯ
ಬಿ) ಒಟ್ಟು ದೇಶಿಯ ಉತ್ಪಾದನೆ
ಸಿ) ಒಟ್ಟು ರಾಷ್ಟ್ರೀಯ ಉತ್ಪಾದನೆ
ಡಿ) ಒಟ್ಟು ರಾಷ್ಟ್ರೀಯ ತಲಾ ಆದಾಯ

880. ಭಾರತದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಉದ್ದೇಶಗಳಲ್ಲಿ ಈ ಕೆಳಗಿನ ಯಾವ ಉದ್ದೇಶಗಳನ್ನು ಒಳಗೊಂಡಿದೆ?
1. ಜನರ ಅನುಭೋಗದ ಅವಶ್ಯಕತೆಗಳನ್ನು ಪೂರೈಸುವುದು
2. ಬೆಲೆಗಳಲ್ಲಿ ಸ್ಥಿರತೆ ಕಾಪಾಡುವುದು
3. ಉತ್ಪಾದನೆ ಮತ್ತು ಮಾರುಕಟ್ಟೆ ವ್ಯವಸ್ಥೆಯನ್ನು ರೂಢಿಸುವುದು
ಸರಿಯಾದ ಹೇಳಿಕೆ ಆಯ್ಕೆಮಾಡಿ
ಎ) 1 ಮತ್ತು 2 ಬಿ) 2 ಮತ್ತು 3
ಸಿ) 1 ಮತ್ತು 3 ಡಿ) 1, 2 ಮತ್ತು 3

881. ಮಾನವ ಅಭಿವೃದ್ಧಿ ಸೂಚ್ಯಂಕ ಈ ಕೆಳಕಂಡ ಸೂಚಕಗಳನ್ನು ಒಳಗೊಂಡಿರುತ್ತದೆ.
1. ರಾಷ್ಟ್ರೀಯ ಆದಾಯ 2. ನಿರೀಕ್ಷಿತ ಆಯುಷ್ಯಾವಧಿ
3. ಶಿಕ್ಷಣದ ಮಟ್ಟ 4. ಬಡತನ ರೇಖೆ
ಸರಿಯಾದ ಉತ್ತರ ಆಯ್ಕೆಮಾಡಿ
ಎ) 1 ಮತ್ತು 2 ಬಿ) 2 ಮತ್ತು 3
ಸಿ) 3 ಮತ್ತು 4 ಡಿ) 1, 2, 3 ಮತ್ತು 4

882. ಈ ಕೆಳಗಿನವುಗಳಲ್ಲಿ ಯಾವವು ನೇರ ತೆರಿಗೆಗಳಾಗಿವೆ?
1. ಆದಾಯ ತೆರಿಗೆ 2. ಕಂಪನಿ ತೆರಿಗೆ
3. ಬಡ್ಡಿ ತೆರಿಗೆ 4. ಸಂಪತ್ತು ತೆರಿಗೆ
ಸರಿಯಾದ ಉತ್ತರ ಆಯ್ಕೆಮಾಡಿ
ಎ) 1, 2 ಮತ್ತು 3 ಬಿ) 2, 3 ಮತ್ತು 4
ಸಿ) 1, 3 ಮತ್ತು 4 ಡಿ) 1, 2, 3 ಮತ್ತು 4

883. ಹಣಕಾಸು ಆಯೋಗದ ಶಿಫಾರಸುಗಳು ಈ ಕೆಳಗಿನ ವಿಷಯಗಳನ್ನು ಒಳಗೊಂಡಿರುತ್ತದೆ.
1. ತೆರಿಗೆ ಹಂಚಿಕೆ 2. ಅನುದಾನ ನೀಡಿಕೆ
3. ರಾಜ್ಯಗಳಿಗೆ ಕೇಂದ್ರದಿಂದ ಸಾಲ
ಸರಿಯಾದ ಉತ್ತರ ಆಯ್ಕೆಮಾಡಿ
ಎ) 1 ಮತ್ತು 2 ಬಿ) 2 ಮತ್ತು 3
ಸಿ) 1 ಮತ್ತು 3 ಡಿ) 1, 2 ಮತ್ತು 3

884. ಈ ಕೆಳಗಿನ ಯಾವ ತೆರಿಗೆಯನ್ನು ರಾಜ್ಯ ಸರ್ಕಾರಗಳು ವಿಧಿಸುತ್ತವೆ?
ಎ) ಆದಾಯ ತೆರಿಗೆ ಬಿ) ಸಂಪತ್ತಿನ ತೆರಿಗೆ
ಸಿ) ಸೇವಾ ತೆರಿಗೆ ಡಿ) ವೃತ್ತಿ ತೆರಿಗೆ

885. ವಿಶೇಷ ಆರ್ಥಿಕ ವಲಯ ಕಾಯ್ದೆ ಜಾರಿಗೆ ಬಂದದ್ದು?
ಎ) 2000 ಬಿ) 2005
ಸಿ) 2007 ಡಿ) 1991

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 63ರ ಉತ್ತರಗಳು: 856. ಎ, 857. ಡಿ, 858. ಬಿ, 859. ಎ, 860. ಬಿ, 861. ಡಿ, 862. ಡಿ, 863. ಡಿ, 864. ಎ, 865. ಎ, 866. ಡಿ, 867. ಡಿ, 868. ಸಿ, 869. ಎ, 870. ಸಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ವಿಶ್ವಭ್ರಾತೃತ್ವ ಭಾವನೆಯನ್ನು ಹೊಂದುವುದು ಮತ್ತು ಎಲ್ಲ ಜೀವಿಗಳನ್ನೂ ಮನುಷ್ಯಸಮಾನ ಎಂದು ಪರಿಗಣಿಸುವುದೇ ಅತ್ಯುನ್ನತವಾದ ಧರ್ಮ.

–ಗುರುನಾನಕ್

ಜೂಜು ನಿಷೇಧಿಸುವ ಅನಿವಾರ್ಯ ಉದ್ಯಮದ ಹಿತ ಕಾಯುವ ಅಗತ್ಯ

ಆನ್‌ಲೈನ್ ಮೂಲಕ ನಡೆಯುವ ಜೂಜು ನಿಷೇಧಿಸುವ ಉದ್ದೇಶದ 'ಕರ್ನಾಟಕ ಪೊಲೀಸ್ (ತಿದ್ದುಪಡಿ) ಮಸೂದೆ- 2021'ಕ್ಕೆ ರಾಜ್ಯ ವಿಧಾನಸಭೆ ಅನುಮೋದನೆ ನೀಡಿದೆ. ರಾಜ್ಯದಲ್ಲಿ ಆನ್‌ಲೈನ್ ಜೂಜು ನಿಷೇಧ ಮಾಡುವುದಾಗಿ ಬಸವರಾಜ ಬೊಮ್ಮಾಯಿ ಅವರು ಗೃಹಸಚಿವ ಆಗಿದ್ದಾಗ ಹೇಳಿದ್ದರು. ಆ ಮಾತು ಈಗ ಕ್ರಿಯಾರೂಪಕ್ಕೆ ಬರುತ್ತಿದೆ. 'ಹಣವನ್ನು ಕಟ್ಟಿ ಜೂಜಿನ ರೀತಿಯಲ್ಲಿ ಆಡುವ ಆನ್‌ಲೈನ್ ಆಟಗಳಿಗೆ ಕರ್ನಾಟಕದಲ್ಲಿ ನಿಷೇಧ ಹೇರುವ ಕುರಿತು ಚಿಂತನೆ ನಡೆದಿದೆ, ಇದಕ್ಕಾಗಿ ಕಾನೂನು ರೂಪಿಸಲಾಗುವುದು' ಎಂದು ಬೊಮ್ಮಾಯಿ ಹೇಳಿದ್ದಾಗಿ ಈ ಹಿಂದೆ ವರದಿಯಾಗಿತ್ತು. ಜೂಜಿನ ರೂಪದ ಆಟಗಳಲ್ಲಿ ಹಣ ತೊಡಗಿಸಿದ ಹಲವರು ಕಷ್ಟಪಟ್ಟು ದುಡಿದ ಹಣವನ್ನು ಕಳೆದುಕೊಂಡಿರುವ ಬಗ್ಗೆ ತಮಗೆ ಮಾಹಿತಿ ಬಂದಿರುವುದಾಗಿಯೂ, ಕೆಲವರ ಪಾಲಿಗೆ ಈ ಆಟಗಳು ದುಶ್ಚಟಗಳಂತೆ ಪರಿಣಮಿಸಿವೆ ಎಂದೂ ಅವರು ಹೇಳಿದ್ದರು. ವಾಸ್ತವದಲ್ಲಿ, ಜೂಜು ತಪ್ಪು ಎಂಬ ಮಾತನ್ನು ಭಾರತೀಯರಿಗೆ ಕಾನೂನಿನ ಮೂಲಕ ಹೇಳುವ ಅಗತ್ಯ ಇಲ್ಲ. ಆಧುನಿಕ ಆಡಳಿತ ವ್ಯವಸ್ಥೆ, ಆಧುನಿಕ ಕಾನೂನುಗಳು ರೂಪುಗೊಳ್ಳುವ ಮೊದಲೇ, ಜೂಜು ತಪ್ಪು ಎನ್ನುವ ಮಾತನ್ನು ಮಹಾಕಾವ್ಯವೊಂದರ ಮೂಲಕ ಹೇಳಿದ ನಿದರ್ಶನ ಭಾರತದಲ್ಲಿ ಇದೆ. ಜೂಜಾಡುವುದು ಸರಿ ಎಂದಾಗಿದ್ದರೆ ಬಹುಶಃ ಮಹಾಭಾರತ ಕಾವ್ಯವೇ ಹುಟ್ಟಿಕೊಳ್ಳುತ್ತಿರಲಿಲ್ಲವೇನೋ. ಜೂಜು ಬೇಡ ಎನ್ನುವುದು ಭಾರತದ ಮಟ್ಟಿಗೆ ಒಂದು ಅನುಕರಣೀಯ ಜೀವನಮೌಲ್ಯವೂ ಹೌದು. ಜೂಜಾಟದ ದುಷ್ಪರಿಣಾಮಗಳು ವರ್ತಮಾನದಲ್ಲಿಯೂ ಕಣ್ಣಿಗೆ ರಾಚುವಂತೆ ಇವೆ.

ಆನ್‌ಲೈನ್ ಆಟಗಳಲ್ಲಿ ಅದೃಷ್ಟದ ಬಲದಲ್ಲಿ ನಡೆಯುವಂಥವು ಯಾವುವು, ಕೌಶಲವನ್ನು ಆಧರಿಸಿ ನಡೆಯುವಂಥವು ಯಾವುವು ಎಂಬುದನ್ನು ಸರ್ಕಾರ ಸ್ಪಷ್ಟವಾಗಿ ಗುರುತಿಸಬೇಕು

ದೇಶದಲ್ಲಿ ಇಂಟರ್ನೆಟ್ ಬಳಕೆ ಮಾಡುತ್ತಿರುವ ವ್ಯಕ್ತಿಗಳ ಪೈಕಿ ಶೇಕಡ 46ರಷ್ಟು ಮಂದಿ ಆನ್‌ಲೈನ್ ಮೂಲಕ ಒಂದಲ್ಲ ಒಂದು ಬಗೆಯ ಆಟವನ್ನು ಆಡುತ್ತಿದ್ದಾರೆ ಎಂದು ವರದಿಯೊಂದು ಹೇಳುತ್ತದೆ. ದೇಶದಲ್ಲಿ ಆನ್‌ಲೈನ್ ಆಟಗಳನ್ನು ಒದಗಿಸುವ ಉದ್ಯಮ ಬೃಹತ್ ಪ್ರಮಾಣದಲ್ಲಿ ಬೆಳವಣಿಗೆ ಕಾಣುತ್ತಿದೆ. ಆನ್‌ಲೈನ್ ಮೂಲಕ ಆಡುವ ಆಟಗಳನ್ನು ಅಭಿವೃದ್ಧಿಪಡಿಸುವ ಕೆಲವು ಕಂಪನಿಗಳು ತಮ್ಮ ಷೇರುಗಳನ್ನು ಸಾರ್ವಜನಿಕರ ಖರೀದಿಗೆ ಮುಕ್ತವಾಗಿಸಿವೆ, ಅಲ್ಲಿ ಲಕ್ಷಾಂತರ ಮಂದಿ ಸಣ್ಣ ಹೂಡಿಕೆದಾರರು ಹಣ ತೊಡಗಿಸಿದ್ದಾರೆ, ಈ ಕಂಪನಿಗಳ ಷೇರುಗಳು ಈಗ ಷೇರು ಮಾರುಕಟ್ಟೆಗಳಲ್ಲಿ ಮುಕ್ತವಾಗಿ ಮಾರಾಟ-ಖರೀದಿ ಆಗುತ್ತಿವೆ. ಆನ್‌ಲೈನ್ ಮೂಲಕ ಆಡುವ ಆಟಗಳನ್ನು ಅಭಿವೃದ್ಧಿಪಡಿಸುವ ಉದ್ಯಮವು 2024ರ ವೇಳೆಗೆ ₹ 27 ಸಾವಿರ ಕೋಟಿ ಮೌಲ್ಯದ್ದಾಗಬಹುದು ಎನ್ನುತ್ತದೆ ಒಂದು ಅಂದಾಜು. 2014ರಿಂದ 2020ರ ನಡುವಿನ ಅವಧಿಯಲ್ಲಿ ಈ ಉದ್ಯಮವು ಸರಿಸುಮಾರು ₹ 2,500 ಕೋಟಿ ಬಂಡವಾಳ ಆಕರ್ಷಿಸಿದೆ ಎಂಬ ಅಂದಾಜು ಕೂಡ ಇದೆ. ಉದ್ಯಮವು ವಾರ್ಷಿಕ ಶೇಕಡ 22ರಷ್ಟು ಪ್ರಮಾಣದಲ್ಲಿ ಬೆಳವಣಿಗೆ ಸಾಧಿಸುತ್ತಿದೆ ಎಂದು ಮೇಪಲ್ ಕ್ಯಾಪಿಟಲ್ ಅಡ್ವೈಸರ್ಸ್ ವರದಿ ಹೇಳಿದೆ. ದೊಡ್ಡ ಪ್ರಮಾಣದಲ್ಲಿ ಬಂಡವಾಳವನ್ನು ಆಕರ್ಷಿಸಿರುವ, ಮುಂದೆ ಒಳ್ಳೆಯ ಬೆಳವಣಿಗೆ ಕಾಣುವ ಸಾಮರ್ಥ್ಯವನ್ನು ಹೊಂದಿರುವ ಈ ಉದ್ದಿಮೆಯು ನೂರಾರು ಕುಟುಂಬಗಳಿಗೆ ಆಸರೆ ಎಂಬುದರಲ್ಲಿ ಅನುಮಾನ ಇಲ್ಲ.

ಆನ್‌ಲೈನ್ ಮೂಲಕ ಆಡುವ, ಹಣವನ್ನು ಗೆಲ್ಲಬಹುದಾದ ಆಟಗಳಲ್ಲಿ ಎರಡು ವಿಧ. ಅದೃಷ್ಟದ ಮೂಲಕವೇ ಹಣವನ್ನು ಗೆದ್ದುಕೊಳ್ಳಲು ಅವಕಾಶ ಕಲ್ಪಿಸುವ ಆಟಗಳು ಒಂದು ಬಗೆಯದ್ದಾದರೆ, ಆಡುವವರ ಸಾಮರ್ಥ್ಯದ ಆಧಾರದಲ್ಲಿ ಹಣ ಗೆದ್ದುಕೊಳ್ಳಲು ಅವಕಾಶ ಕಲ್ಪಿಸುವ ಆಟಗಳು ಇನ್ನೊಂದು ಬಗೆಯವು. ಈಗ ವಿಧಾನಸಭೆಯು ಅನುಮೋದನೆ ನೀಡಿರುವ ತಿದ್ದುಪಡಿ ಮಸೂದೆಯು ಮೊದಲ ವರ್ಗದಲ್ಲಿ ಬರುವ ಆಟಗಳನ್ನು ಮಾತ್ರವೇ ನಿಷೇಧಿಸುತ್ತದೆ. ವ್ಯಕ್ತಿಯು ತನ್ನ ಕೌಶಲದ ಆಧಾರದಲ್ಲಿ ಹಣ ಗೆದ್ದುಕೊಳ್ಳಲು ಅವಕಾಶ ಮಾಡಿಕೊಡುವ ಆನ್‌ಲೈನ್ ಆಟಗಳನ್ನು ಇದು ನಿಷೇಧ ಮಾಡುವುದಿಲ್ಲ ಎಂದು ಸರ್ಕಾರವು ವಿವರಣೆ ನೀಡಿದೆ. ಆದರೆ, ಈ ಮಸೂದೆಯು ಕಾಯ್ದೆಯಾಗಿ ಜಾರಿಗೆ ಬಂದ ನಂತರದಲ್ಲಿ ಕೌಶಲ ಆಧಾರಿತ ಆನ್‌ಲೈನ್ ಆಟಗಳೂ ನಿರ್ಬಂಧಕ್ಕೆ ಗುರಿಯಾಗಬಹುದು ಎನ್ನುವ ಆತಂಕವು ಕೆಲವು ಶಾಸಕರಿಂದಲೂ ಉದ್ಯಮ ವಲಯದಿಂದಲೂ ವ್ಯಕ್ತವಾಗಿದೆ. ಇಡೀ ಮಸೂದೆಯ ಯಶಸ್ಸು ಅಥವಾ ಸೋಲು ಈ ಆತಂಕವನ್ನು ಆತುಕೊಂಡಿದೆ. ಜೂಜನ್ನು ನಿಷೇಧಿಸುವ ಭರದಲ್ಲಿ ವ್ಯಕ್ತಿಯ ಕೌಶಲದ ಆಧಾರದಲ್ಲಿ ಮುನ್ನಡೆಯುವ ಆನ್‌ಲೈನ್ ಆಟಗಳೂ ನಿಷೇಧಗೊಂಡರೆ ಎರಡು ಬಗೆಯ ಕೆಟ್ಟ ಪರಿಣಾಮಗಳು ಉಂಟಾಗುತ್ತವೆ. ಅದುವರೆಗೆ ಸ್ಮಾರ್ಟ್‌ಫೋನ್ ಅಥವಾ ಕಂಪ್ಯೂಟರ್ ಮೂಲಕ ತನ್ನ ಪಾಡಿಗೆ ತಾನು ಆಟ ಆಡಿಕೊಂಡು ಇರುತ್ತಿದ್ದ 'ನಿರಪರಾಧಿ' ವ್ಯಕ್ತಿ ಇದ್ದಕ್ಕಿದ್ದಂತೆ 'ಅಪರಾಧಿ' ಆಗುತ್ತಾನೆ. ಇಂತಹ ಆಟಗಳನ್ನು ಅಭಿವೃದ್ಧಿಪಡಿಸುವ ಉದ್ಯಮ ಸೊರಗುತ್ತದೆ, ಆ ಉದ್ಯಮವನ್ನು ನೆಚ್ಚಿಕೊಂಡವರು ಕಷ್ಟ ಅನುಭವಿಸಬೇಕಾಗುತ್ತದೆ. ನಿರ್ಬಂಧಗಳ ಉದ್ದೇಶ ಒಳ್ಳೆಯದಾಗಿದ್ದರೂ ಅವುಗಳ ಪರಿಣಾಮವು ಕೆಟ್ಟದ್ದಾಗುತ್ತದೆ. ಸರ್ಕಾರವು ಆನ್‌ಲೈನ್ ಆಟಗಳಲ್ಲಿ ಅದೃಷ್ಟದ ಬಲದಲ್ಲಿ ನಡೆಯುವಂಥವು ಯಾವುವು, ಕೌಶಲವನ್ನು ಆಧರಿಸಿ ನಡೆಯುವಂಥವು ಯಾವುವು ಎಂಬುದನ್ನು ಸ್ಪಷ್ಟವಾಗಿ ಗುರುತಿಸಬೇಕು. 'ಇದನ್ನು ಗುರುತಿಸುವ ಕೆಲಸ ಸರಿಯಾಗಿ ಆಗಿಲ್ಲ' ಎಂದು ವಿರೋಧ ಪಕ್ಷಗಳು ಆರೋಪಿಸಿವೆ. ಸರ್ಕಾರವು ಉದ್ಯಮದ ಪ್ರತಿನಿಧಿಗಳು, ಐ.ಟಿ. ತಜ್ಞರು ಹಾಗೂ ಕಾನೂನು ತಜ್ಞರು ಇರುವ ಸಮಿತಿಯನ್ನು ರಚಿಸಿ, ಆಟಗಳನ್ನು ಸ್ಪಷ್ಟವಾಗಿ ವರ್ಗೀಕರಿಸುವ ಕೆಲಸವನ್ನು ಮಾಡಬಹುದು. ಈ ಕಾರ್ಯದಲ್ಲಿ ಎಡವಿದರೆ ಒಂದು ಉದ್ಯಮ ಸೊರಗುತ್ತದೆ.

ದಿನದ ಟ್ವೀಟ್

ಹೆಚ್ಚಿದ ಸವಾಲು

ತಾಲಿಬಾನ್ ಬಹಳ ಹಿಂದಿನಿಂದಲೂ ಮಾದಕವಸ್ತು ಜಿಹಾದ್ ವ್ಯವಹಾರವನ್ನು ಅವಲಂಬಿಸಿದೆ. ಪಾಕಿಸ್ತಾನವು ಇದರಲ್ಲಿ ಪಾಲುದಾರ ಹಾಗೂ ಸಾಗಣೆದಾರನಾಗಿ ಕಾರ್ಯ ನಿರ್ವಹಿಸುತ್ತಿದೆ. ತಾಲಿಬಾನ್ ಮತ್ತೆ ಅಧಿಕಾರಕ್ಕೆ ಬಂದಿರುವುದು ಭಾರತಕ್ಕೆ ಗಡಿಯಾಚೆಗಿನ ಭಯೋತ್ಪಾದನೆಯ ಸವಾಲನ್ನಷ್ಟೇ ಅಲ್ಲ, ಅದರ ಅಕ್ರಮ ಮಾದಕದ್ರವ್ಯ ವ್ಯವಹಾರದ ಸವಾಲನ್ನೂ ಹೆಚ್ಚಿಸಿದೆ. ದೇಶದಲ್ಲಿನ ಎರಡು ಹೆರಾಯಿನ್ ವಶ ಪ್ರಕರಣಗಳು ಇದನ್ನು ಒತ್ತಿ ಹೇಳುತ್ತಿವೆ.

ಬ್ರಹ್ಮ ಚೆಲ್ಲನಿ, ಲೇಖಕ

ಕಿಡಿನುಡಿ

ಬಲವಂತದಿಂದ ಮತಾಂತರ ಮಾಡುವವರ ವಿರುದ್ಧ ಕಾನೂನಿನ ಅನ್ವಯ ಕ್ರಮ ಕೈಗೊಳ್ಳಲಿ. ಅದಕ್ಕೆ ನಮ್ಮ ಸಮ್ಮತಿ ಇದೆ. ಆದರೆ, ಸ್ವ-ಇಚ್ಛೆಯಿಂದ ಆಗುವವರನ್ನು ಬಲವಂತ, ಆಮಿಷ ಎಂಬ ಅರ್ಥದಲ್ಲಿ ಬಿಂಬಿಸುವುದು ಸರಿಯಲ್ಲ. ಶಾಸಕ ಗೂಳಿಹಟ್ಟಿ ಶೇಖರ್ ಅವರ ತಾಯಿ ಬಲವಂತದಿಂದ ಮತಾಂತರ ಆಗಿದ್ದಾರೋ ಇಲ್ಲವೋ ಎಂಬುದನ್ನು ಅವರ ತಾಯಿಯೇ ಸ್ಪಷ್ಟಪಡಿಸಬೇಕು.

ಸಾಲೊಮನ್ ರಾಜ್‌ಕುಮಾರ್
ರಾಜ್ಯ ಕಾರ್ಯದರ್ಶಿ, ಕ್ರಿಶ್ಚಿಯನ್ ಮಾನವ ಹಕ್ಕುಗಳ ವೇದಿಕೆ

25 ವರ್ಷಗಳ ಹಿಂದೆ

ಸೋಮವಾರ, 23-9-1996

• **ಕಾವೇರಿ ವಿವಾದಕ್ಕೆ ಮುಂದಿನ ಸಭೆಯಲ್ಲಿ ಶಾಶ್ವತ ಪರಿಹಾರ**

ನವದೆಹಲಿ, ಸೆ. 22– ಕಾವೇರಿ ವಿವಾದವನ್ನು ಪರಸ್ಪರ ಮಾತುಕತೆಗಳಿಂದ ಇತ್ಯರ್ಥ ಪಡಿಸಿಕೊಳ್ಳುವ ಯತ್ನವಾಗಿ ಕಳೆದ ಎರಡು ದಿನಗಳಿಂದ ಇಲ್ಲಿ ನಡೆದ ಕರ್ನಾಟಕ ಮತ್ತು ತಮಿಳುನಾಡಿನ ಮುಖ್ಯಮಂತ್ರಿಗಳ ಮೂರನೇ ಸುತ್ತಿನ ಮಾತುಕತೆಯು ಉಭಯ ರಾಜ್ಯಗಳಿಗೂ ಫಲಪ್ರದವಾಗುವಂತೆ ನಡೆಯಿತು ಎಂಬ ಬಗೆಗೆ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಹರ್ಷ ವ್ಯಕ್ತಪಡಿಸಿದರು ಎಂದು ವಿಶ್ವಸನೀಯ ಮೂಲಗಳು ಹೇಳಿವೆ.

• **ಇಂದು ರಾವ್ ಉತ್ತರಾಧಿಕಾರಿ ಆಯ್ಕೆ**

ನವದೆಹಲಿ, ಸೆ. 22 (ಪಿಟಿಐ, ಯುಎನ್‌ಐ)– ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಪಿ.ವಿ. ನರಸಿಂಹ ರಾವ್ ಅವರಿಗೆ ತಮ್ಮ ನಿರ್ಧಾರವನ್ನು ಬದಲಿಸುವಂತೆ ಅವರ ನಿಷ್ಠರ ಒತ್ತಡ ಮುಂದುವರಿದಿದ್ದರೆ ಇನ್ನೊಂದೆಡೆ, ನಾಳೆ ನಡೆಯಲಿರುವ ಪಕ್ಷದ ಕಾರ್ಯಕಾರಿಣಿ ಸಭೆಯಲ್ಲಿ ತೆಗೆದುಕೊಳ್ಳಬೇಕಾದ ನಿರ್ಣಯಗಳ ಬಗ್ಗೆ ಭಿನ್ನರು ತಂತ್ರ ರೂಪಿಸುತ್ತಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 23-9-1971

• **ವಿದ್ಯುತ್ ಮಗ್ಗಗಳಲ್ಲಿ ಬಣ್ಣದ ಹತ್ತಿ ಸೀರೆ ನೇಯ್ಗೆ ರದ್ದು: ಆಜ್ಞೆ ಕಟ್ಟುನಿಟ್ಟು ಜಾರಿ**

ಬೆಂಗಳೂರು, ಸೆ. 22– ವಿದ್ಯುತ್‌ಚಾಲಿತ ಮಗ್ಗಗಳು ಬಣ್ಣದ ಹತ್ತಿ ಸೀರೆಗಳನ್ನು ನೇಯಬಾರದೆಂದಿರುವ ಆಜ್ಞೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಸರ್ಕಾರ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಆದೇಶ ನೀಡಿದೆ.

1948ರ ಹತ್ತಿ ಬಟ್ಟೆ ಆಜ್ಞೆಯ ರೀತ್ಯ ವಿದ್ಯುತ್‌ಚಾಲಿತ ಮಗ್ಗಗಳು ಬಣ್ಣದ ಹತ್ತಿ ಸೀರೆಗಳನ್ನು ನೇಯುವಂತಿಲ್ಲ. ಕೈಮಗ್ಗದ ಕೈಗಾರಿಕೆಗೆ ಉತ್ತೇಜನ ನೀಡುವ ಉದ್ದೇಶದಿಂದ ಈ ಆಜ್ಞೆಯನ್ನು ಜಾರಿಗೆ ತರಲಾಗಿದೆ. ಆದರೆ ಈ ನಿಯಮವನ್ನು ಸರಿಯಾಗಿ ಪಾಲಿಸದೇ ಇರುವ ಕಾರಣ ಕೈಮಗ್ಗ ಕೈಗಾರಿಕೆಗೆ ಏಟು ಬೀಳುತ್ತಿದೆಯೆಂದು ಟೆಕ್ಸ್‌ಟೈಲ್ ಕಮಿಷನರ್ ಅವರು ಸರ್ಕಾರದ ಗಮನಕ್ಕೆ ತಂದ ಕಾರಣ ಈ ಆದೇಶವನ್ನು ನೀಡಲಾಗಿದೆಯೆಂದು ರಾಜ್ಯಪಾಲರು ಇಂದು ವರದಿಗಾರರಿಗೆ ತಿಳಿಸಿದರು.

ಶಾಸನಸಭೆಯು ಆರೋಪ– ಪ್ರತ್ಯಾರೋಪಗಳ ಪಡಸಾಲೆಯಷ್ಟೇ ಆದರೆ ಸಮಸ್ಯೆಗಳಿಗೆ ಪರಿಹಾರ ಸಿಗದು

ಸದನದ ಕಲಾಪ ಮತ್ತು ಹಳೆಯ ವರಸೆ

ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಅಗತ್ಯ ವಸ್ತುಗಳ ಬೆಲೆ ಏರಿಕೆ ಕುರಿತು ರಾಜ್ಯ ಸರ್ಕಾರದ ಗಮನ ಸೆಳೆಯುವ ಉದ್ದೇಶ ಹೊತ್ತು ಕಾಂಗ್ರೆಸ್ ಪಕ್ಷದ ನಾಯಕರು ಇತ್ತೀಚೆಗೆ ವಿಧಾನಸೌಧ ತಲುಪಲು ಚಕ್ಕಡಿ ಏರಿದರು, ಸೈಕಲ್ ತುಳಿದರು. ಬೆಲೆ ಏರಿಕೆ ಸಂಕಟವನ್ನು ಸರ್ಕಾರಕ್ಕೆ ತಲುಪಿಸುವುದರ ಜೊತೆಗೆ ತಮ್ಮ ಜನಪರ ಕಾಳಜಿಯನ್ನು ಮತದಾರರಿಗೆ ಮುಟ್ಟಿಸುವ ಆಶಯ ಅವರ ಕಾರ್ಯಕ್ರಮದಲ್ಲಿ ಅಡಕವಾಗಿದ್ದು ರಹಸ್ಯವೇನಲ್ಲ.

ಆದರೆ, ಮುಂದಿನ ಮುಖ್ಯಮಂತ್ರಿ ಹುದ್ದೆಗೆ ಸ್ಪರ್ಧೆಗಿಳಿದಿರುವ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಈ ಪ್ರಯತ್ನಗಳು ಒಂದು ರೀತಿಯಲ್ಲಿ ಸಾಂಪ್ರದಾಯಿಕ ರಾಜಕೀಯ ಪಕ್ಷಗಳಿಗೆ ಮರೆತೇಹೋಗಿದ್ದ ಪ್ರತಿಭಟನೆಯ ರಿಹರ್ಸಲ್‌ನಂತೆ ಕಾಣಿಸಿದವು. ಹಾಗಾಗಿ ಜನಸಾಮಾನ್ಯರನ್ನು ತೀವ್ರ ಸಂಕಟಕ್ಕೀಡು ಮಾಡಿರುವ ಬೆಲೆ ಏರಿಕೆಯಂತಹ ಗಹನ ವಿಷಯ ಕೂಡ ಮಹತ್ವ ಕಳೆದುಕೊಂಡು ಪ್ರಹಸನದ ರೂಪ ಪಡೆಯುವಂತಾಯಿತು. ಈ ನಾಯಕರ ಪ್ರತಿಭಟನೆಯ ದೃಶ್ಯಗಳು ಜನರಲ್ಲಿ ನಗೆ ಉಕ್ಕಿಸಿದರೆ ಆಡಳಿತ ಪಕ್ಷದವರಿಗೆ ಮನಸೋಇಚ್ಛೆ ಗೇಲಿ ಮಾಡಲು ಅವಕಾಶ ಕಲ್ಪಿಸಿದವು.

ಬಹುಪಾಲು ದಿನಬಳಕೆ ವಸ್ತುಗಳ ಬೆಲೆ ಏರಿಕೆಯಿಂದಾಗಿ ಏದುಸಿರು ಬಿಡುತ್ತಿರುವ ಜನಸಾಮಾನ್ಯರ ಬದುಕಿನ ಬವಣೆಯನ್ನು ಆಡಳಿತಪಕ್ಷ, ವಿರೋಧಪಕ್ಷ ಎಂಬ ಭೇದವಿಲ್ಲದೇ ಜನಪ್ರತಿನಿಧಿಗಳು ಸದನದಲ್ಲಿ ಸಮರ್ಥವಾಗಿ ಬಿಂಬಿಸಬೇಕಿತ್ತು. ಅದಾಗದೆ ಸದನದಲ್ಲಿ ವ್ಯರ್ಥ, ಮನರಂಜನಾ ಸ್ವರೂಪದ ಮಾತುಗಾರಿಕೆಯ ಪೈಪೋಟಿಯೇ ನಡೆಯಿತು. ಉತ್ತರ ನೀಡಿದ ಮುಖ್ಯಮಂತ್ರಿ ಕೂಡ ತಮ್ಮ ಮಾತುಗಳಿಗೆ ಚಮತ್ಕಾರಿಕ ಪದಪುಂಜಗಳ ತೋರಣ ಪೋಣಿಸಿದರೇ ಹೊರತು ಅವರ ಮಾತುಗಳಲ್ಲಿ ಸಮಸ್ಯೆಯ ಗಾಂಭೀರ್ಯ, ಕಾಳಜಿಯ ಕುರುಹು ಕಾಣಿಸಲೇ ಇಲ್ಲ.

ಕೊನೆಗೂ ಬೆಲೆಯೇರಿಕೆ ಸಮಸ್ಯೆಯ ಇರುವಿಕೆಯನ್ನಾದರೂ ಸರ್ಕಾರ ಒಪ್ಪಿತೇ, ಅದರ ನಿಯಂತ್ರಣಕ್ಕೆ ಕೈಗೊಳ್ಳುವ ಕ್ರಮಗಳನ್ನು ಪ್ರಕಟಿಸಿತೇ, ಈ ದಿಸೆಯಲ್ಲಿ ವಿರೋಧಪಕ್ಷದ ಸದಸ್ಯರು ರಚನಾತ್ಮಕ ಸಲಹೆಗಳನ್ನೇನಾದರೂ ನೀಡಿದರೇ ಎಂಬ ಪ್ರಶ್ನೆಗಳು ಹಾಗೇ ಉಳಿದವು.

ಇತ್ತೀಚೆಗೆ ವಿರೋಧ ಪಕ್ಷಗಳ ಪ್ರತಿಯೊಂದು ಆರೋಪ, ಆಕ್ಷೇಪಕ್ಕೆ, ಆಡಳಿದಲ್ಲಿರುವವರು 'ನೀವೇನು ಕಮ್ಮಿ, ನಿಮ್ಮ ಆಡಳಿತದಲ್ಲಿ ಹಾಗಿತ್ತು…' ಎಂದು ಮರುದೂಷಣೆ ಮಾಡುವುದು ಪರಿಪಾಟವಾಗಿದೆ. ಸಮಸ್ಯೆಯ ಹೊಣೆಯನ್ನು ಪರಸ್ಪರರ ಹೆಗಲಿಗೆ ಹೊತ್ತುಹಾಕಿ ಪರಿಹಾರ ಹುಡುಕುವ ಪ್ರಯತ್ನದಿಂದ ನುಣುಚಿಕೊಳ್ಳುವ ಜಾಣತನವಿದು. ಪ್ರಶ್ನಿಸುವವರ ನೈತಿಕತೆಯನ್ನೇ ಅನುಮಾನಿಸಿ ಸುಮ್ಮನಾಗಿಸುವುದು ಪ್ರಚಲಿತ ತಂತ್ರಗಾರಿಕೆ. ಅದಕ್ಕೆ ತಕ್ಕಂತೆಯೇ ಯಾರ ಆಡಳಿತಾವಧಿಯಲ್ಲಿ ಎಷ್ಟೆಷ್ಟು ಬೆಲೆ ಏರಿಕೆ ಆಗಿತ್ತು ಎಂಬ ಅಂಶ ಸದನದ ಚರ್ಚೆಯ ಮುಖ್ಯ ವೇದಿಕೆಗೆ ಬಂದಿತೇ ಹೊರತು ಸಮಸ್ಯೆಯ ಮೂಲದ ಪರಿಶೀಲನೆ, ಪರಿಹಾರದ ಉಪಾಯಗಳು ಯಾವ ಸದಸ್ಯರ ಮಿದುಳಿಗೂ ಹೊಳೆಯಲಿಲ್ಲ, ಯಾರ ನಾಲಗೆಗೂ ನಿಲುಕಲಿಲ್ಲ!

ಈ ಹಿಂದೆ ಅಟಲ್ ಬಿಹಾರಿ ವಾಜಪೇಯಿ ಅವರು ಬೆಲೆ ಏರಿಕೆ ಮೂಲಕ ಆಗಿನ ಸರ್ಕಾರ ಲೂಟಿ ಹೊಡೆದಿದೆ ಎಂದು ಆರೋಪಿಸಿದ್ದನ್ನು ಪ್ರಸ್ತಾಪಿಸಿದ ಸಿದ್ದರಾಮಯ್ಯ ಅವರು 'ಲೂಟಿ' ಪದವನ್ನು ಸದನ ಚ್ಯೂಯಿಂಗ್ ಗಮ್‌ನಂತೆ ಜಗಿಯಲು ಅನುವು ಮಾಡಿಕೊಟ್ಟರು. 'ನಿಮ್ಮ ಪಕ್ಷದ ಆಡಳಿತದಲ್ಲೂ ಅಗತ್ಯ ವಸ್ತುಗಳ ಬೆಲೆ ಏರಿಕೆ ಆಗಿತ್ತು; ನೀವೂ ಲೂಟಿ ಮಾಡಿದಿರಾ?' ಎಂಬುದು ಮುಖ್ಯಮಂತ್ರಿಯವರ ಮರುಪ್ರಶ್ನೆ. ಅದಕ್ಕೆ ವಿರೋಧಪಕ್ಷಗಳ ತಗಾದೆ. ಹೀಗೆ ಮಾತಿನ ಎಳೆ ಹಿಡಿದುಕೊಂಡು ಎಳೆದಾಡುವುದರಿಂದ ಅಗತ್ಯ ವಸ್ತುಗಳ ಬೆಲೆ ಇಳಿಯುವುದಿಲ್ಲ, ಸದನದ ಸಮಯ ಮತ್ತು ಕರದಾತರ ಹಣ ಖರ್ಚಾಗುತ್ತದೆ, ಜನಪ್ರತಿನಿಧಿಗಳ ಗೌರವ ಇಳಿಕೆಯಾಗುತ್ತದೆ ಎಂಬ ಅರಿವು ಯಾರಿಗೂ ಇಲ್ಲ.

ವಾಚ್ಯಾರ್ಥದಲ್ಲಿ ಸದನವನ್ನು ಮಾತಿನ ಮನೆ ಎಂದು ಗುರುತಿಸುವುದು ನಿಜ. ಹಾಗೆಂದು ಪ್ರಜಾಪ್ರಭುತ್ವ ವ್ಯವಸ್ಥೆಯ ತಳಪಾಯವಾದ ಶಾಸನಸಭೆಯಲ್ಲಿ ಆಡುವ ಮಾತುಗಳ ಹಿಂದಿರಬೇಕಾದ ಅರ್ಥವಂತಿಕೆ, ಕಳಕಳಿ ಕಳೆದುಕೊಂಡು ಕೇವಲ ಬಾಯಿಮಾತುಗಳ ಭರಾಟೆಗೆ, ಗಲಾಟೆಗೆ, ವಾಕ್ಚಾತುರ್ಯದ ಪ್ರದರ್ಶನಕ್ಕೆ ವೇದಿಕೆಯಾದರೆ ಹೇಗೆ? ಸದನದ ಮಾತುಗಾರಿಕೆಯ ನೇತಾರ ಎನ್ನಿಸಿಕೊಳ್ಳುವ ವಿಧಾನಸಭೆಯ ಮಾಜಿ ಅಧ್ಯಕ್ಷ ಕೆ.ಆರ್.ರಮೇಶ್ ಕುಮಾರ್ ಅವರೇ ಹೇಳುವಂತೆ, ವಿಧಾನಸಭೆಯಲ್ಲಿ ಆಡಳಿತಪಕ್ಷ, ವಿರೋಧಪಕ್ಷಗಳ ಬದಲಾಗಿ ಮಾಜಿ ಆಡಳಿತಪಕ್ಷ, ಮಾಜಿ ವಿರೋಧಪಕ್ಷ ಹಾಗೂ ಭಾವಿ ಆಡಳಿತಪಕ್ಷ, ಭಾವಿ ವಿರೋಧಪಕ್ಷಗಳು ಕಾರ್ಯನಿರ್ವಹಿಸುತ್ತಿವೆ. ಸದನದಲ್ಲಿ ಕಲಾಪ ನಡೆಯುವ ಸಂದರ್ಭದಲ್ಲಿ, ವಿರೋಧಿ ಪಾಳಯದಲ್ಲಿರುವವರು ಒಂದು ಹಿಡಿಯಷ್ಟು ಹಾಲಿ ಆಡಳಿತಪಕ್ಷದವರಾಗಿ, ಆಡಳಿತದ ಚುಕ್ಕಾಣಿ ಹಿಡಿದವರು ಮುಷ್ಟಿಯಷ್ಟು ಹಾಲಿ ವಿರೋಧಪಕ್ಷದವರಾಗಿ ಯೋಚಿಸಲು ಸಾಧ್ಯವಾದರೆ ಅದರ ಪರಿಣಾಮವೇ ಬೇರೆಯಾದೀತು.

ಅದೇ ಸದನ, ಹೆಚ್ಚುಕಮ್ಮಿ ಅವರೇ ಸದಸ್ಯರು, ಅವೇ ಸಮಸ್ಯೆಗಳು, ಅವೇ ಮಾತುಗಳು, ಅವೇ ಬಾಯಿಗಳು. ಆದರೆ ಬದಿಗಳು ಮಾತ್ರ ಬೇರೆ ಬೇರೆ. ಅಲ್ಲಿದ್ದಾಗ ಆ ಮಾತು, ಇಲ್ಲಿದ್ದಾಗ ಈ ಮಾತು. ಅಷ್ಟೇ ವ್ಯತ್ಯಾಸ. ಯಾವುದೋ ಪದಬಳಕೆ, ಹೀಯಾಳಿಕೆ ನೆಪದಿಂದ ವಿರೋಧಪಕ್ಷ ಸಭಾತ್ಯಾಗ ಮಾಡುವುದು, ಆ ಸಮಯದಲ್ಲಿಯೇ ಸರ್ಕಾರ ಚರ್ಚೆಯಿಲ್ಲದೆ ತನ್ನಿಷ್ಟದ ಮಸೂದೆಗಳನ್ನು ಮಂಡಿಸಿ ಒಪ್ಪಿಗೆ ಪಡೆಯುವುದು ಏನನ್ನು ತೋರಿಸುತ್ತದೆ? ಇದೊಂಥರಾ ಅಲಿಖಿತ ಒಡಂಬಡಿಕೆ ಎಂದೆನ್ನಿಸುವುದಿಲ್ಲವೇ? ಸದನದಲ್ಲಿ ಮನರಂಜನೆಯ ಮಾತುಗಾರಿಕೆಯೇ ಮುಖ್ಯವಾಗಿ, ಅದೇ ಸದಸ್ಯರ ಅರ್ಹತೆಗೆ ಅಳತೆಗೋಲಾಗಿ ಪರಿಣಮಿಸಿದರೆ ಪ್ರಜಾಪ್ರಭುತ್ವ ಪರಂಪರೆಯಲ್ಲಿ ಬಳಕೆಯಲ್ಲಿರುವ 'ಸಂಸದೀಯ ಪಟು' ಪದದ ಅರ್ಥ ತಿರುಚಬೇಕಾದೀತು. ಸದನವು ಬರೀ ಆರೋಪ ಪ್ರತ್ಯಾರೋಪಗಳ ಪಡಸಾಲೆಯಾದರೆ, ದೂಷಣೆಗಳ, ಸಮರ್ಥನೆಗಳ ಕದನಕಣವಾದರೆ 'ಸದನ ಕಲಿ'ಗಳ ಸಂತತಿ ಬೆಳೆಯಬಹುದಷ್ಟೇ; ಜನರ ಸಮಸ್ಯೆಗಳಿಗೆ ಪರಿಹಾರ ಸಿಗಲಾರದು.

ರಾಜ್ಯ ಸರ್ಕಾರದ ನಾಯಕತ್ವ ಬದಲಾಗಿ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾದಾಗ ಸಹಜವಾಗಿಯೇ ಹೊಸ ಭರವಸೆ ಹುಟ್ಟಿಕೊಂಡಿತ್ತು. ಅವರು ಆಡಳಿತದ ಹಳೆಯ ಶೈಲಿಯ ನಡೆನುಡಿ ದಾಟಿ ಸಾಗುವರೆಂದು ಭಾವಿಸಲಾಗಿತ್ತು. ಆದರೆ ಸದನದಲ್ಲಿ ಅವರ ಮಾತಿನ ಧಾಟಿ, ವರಸೆ ಹೆಚ್ಚೇನೂ ಆಶಾದಾಯಕವಾಗಿ ಕಾಣಿಸುತ್ತಿಲ್ಲ. ಅಗತ್ಯ ವಸ್ತುಗಳ ಬೆಲೆಯೇರಿಕೆ ಕುರಿತು ನಿಯಮ 69ರ ಅಡಿ ವಿಧಾನಸಭೆಯಲ್ಲಿ ನಡೆದ ಚರ್ಚೆಗೆ ಮೊದಲ ಬಾರಿಗೆ ಸರ್ಕಾರದ ಮುಖ್ಯಸ್ಥರಾಗಿ ಉತ್ತರಿಸುವಾಗ ಬೊಮ್ಮಾಯಿಯವರು ಕಾಂಗ್ರೆಸ್ ನೇತೃತ್ವದ ಸರ್ಕಾರದ ಅವಧಿಯ ಬೆಲೆಯೇರಿಕೆಯ ಅಂಕಿಅಂಶ ಬಿಚ್ಚಿಟ್ಟಿದ್ದಾರೆ. ತಮ್ಮ ಆಡಳಿತದ ಅವಧಿಯಲ್ಲಿ ಮಾತ್ರ ಬೆಲೆ ಏರಿಕೆಯಾಗಿಲ್ಲ ಎಂಬುದು ಈ ಮಾಜಿ ವಿರೋಧ ಪಕ್ಷದ ಸದಸ್ಯರ ಮಾತಿನ ತಿರುಳು!

ಸ್ವತಃ ರೈತಪರ ಹೋರಾಟ ಮಾಡಿದ್ದ ಬೊಮ್ಮಾಯಿಯವರು ನವದೆಹಲಿ ಬಳಿಯ ರೈತರ ಹೋರಾಟವನ್ನು 'ಪ್ರಾಯೋಜಿತ' ಎಂದು ಅವಹೇಳನ ಮಾಡಿದ್ದು ಯಾರನ್ನೋ ಮೆಚ್ಚಿಸುವ ಯತ್ನವೆಂಬುದು ಸ್ಪಷ್ಟ. ಸುಪ್ರೀಂ ಕೋರ್ಟ್ ತೀರ್ಪಿನ ಆಶಯಕ್ಕೆ ವಿರುದ್ಧವಾಗಿ ಧಾರ್ಮಿಕ ಕಟ್ಟಡಗಳ ಸಂರಕ್ಷಣಾ ಮಸೂದೆಗೆ ಮಾಜಿ ಆಡಳಿತಪಕ್ಷ ದನಿಗೂಡಿಸಿದೆ. ಮತಾಂತರ ನಿಷೇಧ ಕಾಯ್ದೆ ರೂಪಿಸಲು ಕೂಡಾ ಸರ್ಕಾರ ಚಿಂತನೆ ನಡೆಸಿದೆಯಂತೆ.

ರಾಯಿಸ್ಟ್ ಎಸ್.ಆರ್.ಬೊಮ್ಮಾಯಿ ಅವರ ಮಗನಾಗಿ, ಜನತಾಪರಿವಾರದ ಸಮಾಜವಾದಿ ಹಿನ್ನೆಲೆಯ ರಾಜಕಾರಣಿಯಾಗಿ ಗುರುತಿಸಿಕೊಂಡ ಬಸವರಾಜ ಬೊಮ್ಮಾಯಿ ಅವರು ತಮ್ಮ ಸೈದ್ಧಾಂತಿಕ ಸ್ಥಿತ್ಯಂತರ ನಿಭಾಯಿಸುವ ಸವಾಲು ಮತ್ತು ಸಂದಿಗ್ಧ ಎದುರಿಸುತ್ತಿರುವಂತೆ ಕಾಣಿಸುತ್ತದೆ. ಹಾಗಾಗಿ ಯಾವ ವೇದಿಕೆಯಲ್ಲಿಯೂ ಪಕ್ಷದ ಬಲಪಂಥೀಯ ಧೋರಣೆಗಳನ್ನು ಗಟ್ಟಿದನಿಯಲ್ಲಿ ಪ್ರತಿಪಾದಿಸುವ ಅವಕಾಶ ಕಳೆದುಕೊಳ್ಳುತ್ತಿಲ್ಲ. ಅವರ ಇಂತಹ ವರ್ತನೆಗಳು ಹೊಸದಾಗಿ ಮತಾಂತರಗೊಂಡವರ ಅತಿರೇಕದ ಧರ್ಮನಿಷ್ಠೆಯಂತೆ ಕಂಡರೆ ಅಚ್ಚರಿಯಿಲ್ಲ!

ಚುರುಮುರಿ

ತ್ರಿಕೋಣ ಪಾಲಿಸಿ

• ಆನಂದ

'ಅದೇನೊ ಮುಕ್ತ ಭಾರತ್…' ಅಂತ ಹೇಳ್ತಾ ಇದ್ದರಲ್ಲ, ಏನು? ಯಾರು?' ಎಂದು ಹೆಂಡತಿ ಕೇಳಿದಳು. 'ಅದು ಸಾಕ್ಷಾತ್ ಮೋದೀಜಿ. ಕಾಂಗ್ರೆಸ್ ಮುಕ್ತ್ ಭಾರತ್' ಎಂದೆ. 'ಅದನ್ನು ಕಾಂಗ್ರೆಸ್‌ನೋರೇ ಡು ಇಟ್ ಯುವರ್‌ಸೆಲ್ಫ್ ತರಹ ಮಾಡ್ಕೊತಿದಾರೆ. ಆದರೆ ಬೆಂಗಳೂರು ರಸ್ತೆ ಗುಂಡಿ ಮುಕ್ತ್ ಯಾವಾಗ ಆಗುತ್ತೆ?' ಎಂದಳು.

'ಬೇಕಾದಷ್ಟು ಸಲ ಆಗಿದೆಯಲ್ಲ. ಮೇಯರ್ ಗಡುವುಗಳು ನೀಡಿದ್ದರು ಗುಂಡಿ ಮುಚ್ಚೋದಿಕ್ಕೆ. ಬೆಂಗಳೂರು ಉಸ್ತುವಾರಿ ತಮ್ಮದೇ ಅಂದುಕೊಂಡಿದ್ದ ಹಳೇ ಮಂತ್ರಿಗಳು ಗಡುವು ನೀಡಿದ್ದರು. ಹೊಸಾ ಮುಖ್ಯಮಂತ್ರಿಗಳೂ ಹಳೇ ಗುಂಡಿಗಳ ಬಗ್ಗೆ ಗಮನ ಹರಿಸಿದ್ದಾರೆ. ಬಿಬಿಎಂಪಿ ಕಮಿಷನರ್ ಗಡುವು ನೀಡ್ತಲೇ ಇರ್ತಾರೆ' ಎಂದೆ.

'ಗುಂಡಿಗಳು ಹಾಗೇ ಇವೆಯಲ್ಲಾ?' ಎಂದಳು ಬೇಸರದಿಂದ.

'ರಸ್ತೆ ಅಂಡ್ ಗುಂಡಿ ಲೈಕ್ ಇಡ್ಲಿ ಅಂಡ್ ಸಾಂಬಾರ್, ಪೂರಿ ಅಂಡ್ ಪಲ್ಯ, ಸರ್ಕಾರಿ ಆಫೀಸ್ ಅಂಡ್ ಲಂಚ ಗೊ ಟುಗೆದರ್' ಎಂಬ ಸರಳ ವಿವರಣೆ ನೀಡಿದೆ.

'ಗುಂಡಿನೇ ಬೀಳದೆ ಇರೋ ಅಂತಹ ರಸ್ತೆ ಯಾಕೆ ನಿರ್ಮಿಸಬಾರದು? ಲಾಲೂಜಿ ಜೈಲಿಗೆ ಹೋಗೋ ಮುಂಚೆ ಹೇಳ್ತಾ ಇದ್ರಲ್ಲಾ ಹೇಮಾಮಾಲಿನಿ ಕೆನ್ನೆ ತರಹ…'

'ಅಂತಹ ರಸ್ತೆ ನಿರ್ಮಿಸಲು ಕಂಟ್ರಾಕ್ಟರೇನು ಮೂರ್ಖನೆ?' ಎಂದೆ.

'ಯಾಕೆ?'

'ಒಂದು ಟೆಂಡರ್ ಹಣದಲ್ಲಿ ಅವನು, ಆ ಏರಿಯಾ ರಾಜಕಾರಣಿ ಮತ್ತು ಇಂಜಿನಿಯರ್ ಬದುಕಬೇಕು' ಎಂದೆ.

'ಲಿವ್ ಅಂಡ್ ಲೆಟ್ ಲಿವ್ ಪಾಲಿಸಿ ತಾನೆ?' ಎಂದಾಗ ಅವಳಿಗೆ ರಾಜಕಾರಣಿ- ಅಧಿಕಾರಿ- ಕಂಟ್ರಾಕ್ಟರ್ ತ್ರಿಕೋಣ ಅರ್ಥವಾದಂತೆ ಅನ್ನಿಸಿತು.

'ಕರೆಕ್ಟ್ ಮೇಡಂ. ಅವರಿಬ್ಬರಿಗೂ ತಿನ್ನಿಸಿದ ಮೇಲೆ ಉಳಿದ ಹಣದಲ್ಲಿ ಕಂಟ್ರಾಕ್ಟರ್ ತನ್ನ ಲಾಭ ಮುರಿದುಕೊಂಡು ಸಿಗುವ ಹಣದಲ್ಲಿ ರಸ್ತೆ ನಿರ್ಮಿಸಿದರೆ ಗುಂಡಿ ಏಳದೇ ಇನ್ನೇನು ಇರಲು ಸಾಧ್ಯ?' ಎಂದೆ.

'ಈಗ ಅದನ್ನು ಮುಚ್ಚಲು ಮತ್ತೆ ಕಾಂಟ್ರ್ಯಾಕ್ಟ್. ಮತ್ತೆ ಮೂರು ಪಾಲು. ರಸ್ತೆ ಇದ್ದ ಮೇಲೆ ಗುಂಡಿ ಗ್ಯಾರಂಟಿ ಬಿಡಿ' ಎಂದು ಮಾತು ಮುಗಿಸಿದಳು.

ಸಂಗತ

ಪಠ್ಯರಚನೆ: ವಸ್ತುಸಂಗತಿ ಆದ್ಯತೆಯಾಗಲಿ

ಬೇಕು ಪಂಥಾತೀತ, ಪಕ್ಷಾತೀತ ಧೋರಣೆಯ ಪಠ್ಯರಚನಾಕಾರರು, ಪರಿಶೀಲಕರು

• ಡಾ. ಆರ್.ಲಕ್ಷ್ಮೀನಾರಾಯಣ

'ಪಠ್ಯಪುಸ್ತಕ ಪರಿಶೀಲನೆಯಲ್ಲಿ ಓಲೈಕೆಯ ರಾಜಕಾರಣ ಸಲ್ಲದು' ಎಂಬ ಸಂಪಾದಕೀಯ (ಪ್ರ.ವಾ., ಸೆ. 21) ಅತ್ಯಂತ ಔಚಿತ್ಯಪೂರ್ಣ ಮತ್ತು ಸಕಾಲಿಕವಾದದ್ದು. ಬೆಳೆಯುವ ಹಂತದಲ್ಲಿರುವ ಮಕ್ಕಳಿಗೆ ಯಾವುದೇ ವಿಷಯದಲ್ಲಾದರೂ ಸರಿಯಾದ ಮತ್ತು ಪ್ರಸ್ತುತ ವೈಜ್ಞಾನಿಕ ಯುಗಕ್ಕೆ ತಕ್ಕುನಾದ ರೀತಿಯಲ್ಲಿರುವ ಹಾಗೂ ಕರಾರುವಾಕ್ಕಾಗಿರುವ ಮಾಹಿತಿಯನ್ನು ಪಠ್ಯಪುಸ್ತಕಗಳು ಒಳಗೊಂಡಿರಬೇಕು ಎಂಬುದು ಮಕ್ಕಳ ಶಿಕ್ಷಣದಲ್ಲಿ ಆಸಕ್ತಿ ಹೊಂದಿರುವವರೆಲ್ಲರ ಕಾಳಜಿ ಮತ್ತು ನಿರೀಕ್ಷೆ. ಹಾಗಿಲ್ಲದೆ ಆಕ್ಷೇಪಾರ್ಹ ವಿಷಯಗಳಿವೆ ಎಂದು ದೂರು ಬಂದಾಗ, ಪರಿಶೀಲನೆಯ ಸಲುವಾಗಿ ತಜ್ಞರ ಸಮಿತಿ ರಚಿಸುವುದೂ ಸರಿಯಾದ್ದೇ.

ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದಂತೆ ಆಯಾ ವಿಷಯಗಳ ತಜ್ಞರೇ ಪಠ್ಯ ರಚನೆಯಲ್ಲಿ ಇರುತ್ತಾರಾದ್ದರಿಂದ ಹೆಚ್ಚು ವಿವಾದಗಳಿಗೆ ಆಸ್ಪದ ಇರುವುದಿಲ್ಲ. ಆದರೆ ಅದೇ ಸಮಾಜ ವಿಜ್ಞಾನ ಮತ್ತು ಇತಿಹಾಸ ವಿಷಯಗಳಿಗೆ ಸಂಬಂಧಿಸಿದ ಪಾಠಗಳು ಹಾಗೆಯೇ ವಸ್ತುನಿಷ್ಠವಾಗಿಯೇ ಇರುತ್ತವೆಂಬುದನ್ನು ಈಚಿನ ದಿನಗಳಲ್ಲಿ ನಿರೀಕ್ಷಿಸುವುದೇ ಸರಿಯಲ್ಲವೇನೋ ಎಂಬ ಭಾವನೆಗೆ ಮತ್ತೆ ಮತ್ತೆ ಎಡೆ ದೊರೆಯುತ್ತಿರುವುದು ವಿಷಾದಕರ. ಅದರ ರಚನಾಕಾರರು ಮತ್ತು ಪರಿಶೀಲಕರು ವಸ್ತುಸಂಗತಿಗಳನ್ನು ಮಾತ್ರ ಸೇರಿಸಿದರೆ ವಿವಾದಕ್ಕೆ ಎಡೆ ಇರುವುದಿಲ್ಲ. ಆದರೆ ಹಾಗಾಗದೆ, ಸರ್ಕಾರ ಮುನ್ನಡೆಸುವ ಪಕ್ಷ ಬದಲಾದಾಗ ಆಯಾ ಪಕ್ಷಗಳ ವಿಚಾರ, ಧೋರಣೆಗಳಿಗೆ ಅನುಸಾರವಾಗಿಯೋ ಅವುಗಳನ್ನು ಪರೋಕ್ಷವಾಗಿ ಬಿಂಬಿಸುವ ರೀತಿಯಲ್ಲೋ ಪಠ್ಯಗಳು ರಚಿತವಾಗುತ್ತಿವೆಯೆಂದು ಈಚೆಗೆ ಬಹಳವಾಗಿ ಕೇಳಿಬರುತ್ತಿದೆ. ಇದಕ್ಕಿಂತಲೂ ಹೇಯವಾದ್ದು ಇನ್ನೊಂದಿಲ್ಲ.

ಹೊಸಮತಗಳು, ಧರ್ಮಗಳು ಉದಯವಾದದ್ದು ವಸ್ತುಸತ್ಯ. ಇವುಗಳ ಉದಯಕ್ಕೆ ಕಾರಣಗಳೇನೆಂದು ಇದಮಿತ್ಥಂ ಎಂದು ಹೇಳಲಾಗದಿದ್ದಾಗ ಅವರವರ ವಿಚಾರಧಾರೆಗೆ ತಕ್ಕಂತೆ ವ್ಯಾಖ್ಯಾನಿಸುವುದು ಇದ್ದೇ ಇರುತ್ತದೆ. ವೈದಿಕ ಧರ್ಮ, ವೈದಿಕ ದರ್ಶನಗಳು, ವೈದಿಕಾಚರಣೆಗಳು ಕೆಲವು ಸಾವಿರ ವರ್ಷಗಳು ರೂಢಿಯಲ್ಲಿದ್ದ ನಂತರದಲ್ಲಿ ಅವುಗಳ ತತ್ವಗಳಲ್ಲಿ ಹೆಚ್ಚು ಸಮಾಧಾನ ಕಾಣದೆ, ಯಜ್ಞ ಯಾಗಾದಿಗಳ ಸಮಯದಲ್ಲಿ ಆಗುತ್ತಿದ್ದ ಪ್ರಾಣಿಬಲಿಯನ್ನು ವಿರೋಧಿಸಿ ಮೊದಲಿಗೆ ಜೈನ ಧರ್ಮ ಉದಿಸಿತು. ಹೆಚ್ಚು ಕಡಿಮೆ ಅದೇ ಸಮಯದಲ್ಲಿ ಕೆಲವೇ ವರ್ಷಗಳ ಅಂತರದಲ್ಲಿ ವೈದಿಕ ದರ್ಶನಗಳು ಹೇಳುವ ದೇವರು, ಆತ್ಮಗಳನ್ನು ಒಪ್ಪದೆ ಅಥವಾ ಅದರಲ್ಲಿ ಸಮಾಧಾನ ಸಿಗದೆ ಬೇರೊಂದೇ ವಿಚಾರ ಪ್ರಣಾಲಿಯ ಬೌದ್ಧ ಧರ್ಮ ಉದಿಸಿತು. ಜೈನವು ಪೂರ್ತಿ ಅಹಿಂಸೆಗೆ ಪ್ರಾಧಾನ್ಯ ನೀಡಿದರೆ ಬೌದ್ಧ ಧರ್ಮ ದಯೆ, ಕರುಣೆಗೆ ಪ್ರಾಧಾನ್ಯ ನೀಡಿದರೂ ಮಾಂಸಾಹಾರವನ್ನೇನೂ ವರ್ಜಿಸಲು ಹೇಳಲಿಲ್ಲ ಮತ್ತು ಬೌದ್ಧರಲ್ಲೂ ಬಲಿಯೇನೂ ಇಲ್ಲದೆ ಇಲ್ಲ.

'ವೇದವನೋದಿದವರ ಮುಂದೆ ಎಲೆ ಹೋತೇ ಅಳು ಕಂಡಾ' ಎಂಬಂಥ ಬಸವಣ್ಣನವರ ವಚನಗಳಲ್ಲೂ (12ನೇ ಶತಮಾನ) ಯಜ್ಞ ವಿರೋಧ ಹೇಳುವಾಗ ಮೇಲು ನೆಲೆಗೆ ಬಂದಿರುವುದು ಅದರಲ್ಲಿರುವ ಹಿಂಸೆಯೇ ಹೊರತು ಅದರ ವಧೆಯಿಂದ ಆಹಾರ ನಾಶವಾಯಿತೆಂಬ ಮಾತಿಲ್ಲ. ಇದು ಸಾಮಾನ್ಯವಾಗಿ ಹಲವಾರು ವರ್ಷಗಳಿಂದ ಒಪ್ಪಿಕೊಂಡುಬಂದಿರುವ ಒಂದು ಸಂಗತಿ. ಆದರೆ ಇತ್ತೀಚೆಗೆ ಅಭಿಪ್ರಾಯ ವ್ಯಕ್ತಪಡಿಸಿದವರೊಬ್ಬರು, 'ವೇದಗಳ ಕಾಲದಲ್ಲಿದ್ದ ಕೆಲ ಪದ್ಧತಿ, ಆಚರಣೆಗಳು ಜನರ ಪರವಾಗಿರಲಿಲ್ಲ. ಜನರು ಆಹಾರದ ಸಮಸ್ಯೆ ಎದುರಿಸುತ್ತಿರುವಾಗ ಯಾಗ ಹಾಗೂ ಯಜ್ಞದ ಹೆಸರಿನಲ್ಲಿ ಆಹಾರ ವ್ಯರ್ಥ ಮಾಡಲಾಗುತ್ತದೆ ಎಂಬ ಅಭಿಪ್ರಾಯ ಮೂಡಿದ್ದರಿಂದ ಹೊಸ ಧರ್ಮಗಳು ಉದಯವಾದುವು ಎಂಬ ಅಂಶ ಪಠ್ಯಕ್ರಮದಲ್ಲಿತ್ತು' ಎಂದು ಹೇಳಿದ್ದಾರೆ (ಪ್ರ.ವಾ., ಸೆ. 19). ಈ 'ಜನರ ಪರ', 'ಆಹಾರ ವ್ಯರ್ಥ' ಎಂಬುದು ಅತ್ಯಂತ ಪ್ರಗತಿಪರವೆಂದು ಅನಿಸುತ್ತದಾದರೂ ಅದು ವಸ್ತುಸಂಗತಿಯ ಮೇಲೆ ಹೇರಿದ ವ್ಯಾಖ್ಯಾನವೇ ಹೊರತು ವಸ್ತುಸಂಗತಿಯ ಕಥನವೆನಿಸುವುದಿಲ್ಲ.

ಇತಿಹಾಸವನ್ನು ಅದು ಇರುವಂತೆಯೇ ಬೋಧಿಸಿದರೆ ವಿವಾದಕ್ಕೆ ಎಡೆಯಿರುವುದಿಲ್ಲ. ಬ್ರಿಟಿಷರ ವಿರುದ್ಧ ಟಿಪ್ಪು ಸುಲ್ತಾನ್ ಮತ್ತು ಕಿತ್ತೂರು ಚನ್ನಮ್ಮ ಹೋರಾಡಿದರು ಎಂಬುದು ವಸ್ತುಸಂಗತಿ. ಅದಕ್ಕಾಗಿ ಟಿಪ್ಪು ತನ್ನ ಮಕ್ಕಳನ್ನೂ ಒತ್ತೆಯಾಗಿರಿಸಿದನೆಂಬುದು ಯಾರ ಕಣ್ಣನ್ನಾದರೂ ಒದ್ದೆ ಮಾಡುತ್ತದೆ. ಆದರೆ ಈ ಸಂಗತಿಯಿಂದ ಅವನೊಬ್ಬ ಮಹಾನ್ ದೇಶಭಕ್ತನೆಂದು ಬಿಂಬಿಸುವುದು ಹಾಗೆಯೇ ಚನ್ನಮ್ಮನನ್ನು ದೊಡ್ಡ ದೇಶಭಕ್ತಳೆಂದು ಬಿಂಬಿಸುವುದು ಅದಕ್ಕೆ ಮಾಡಿದ ಉದಾರ ವ್ಯಾಖ್ಯಾನವೇ ಸರಿ.

ಇಡೀ ಭಾರತ ಒಂದು ಆಳ್ವಿಕೆಯಲ್ಲಿಲ್ಲದೆ ಹಲವಾರು ರಾಜರು ತಮ್ಮ ತಮ್ಮ ಆಳ್ವಿಕೆಯ ಪ್ರದೇಶಗಳಲ್ಲಿ ಆಳುತ್ತಿದ್ದ ಸಂದರ್ಭದಲ್ಲಿ ಬ್ರಿಟಿಷರು ಮಾತ್ರವಲ್ಲದೆ ತನ್ನ ರಾಜ್ಯದ ಮೇಲೆ ಆಕ್ರಮಣ ಮಾಡಿದ ತನ್ನ ಪಕ್ಕದ ಪ್ರಾಂತ್ಯದವನೊಂದಿಗೂ ಅಷ್ಟೇ ವೀರಾವೇಶದಿಂದ ಟಿಪ್ಪು ಅಷ್ಟೇ ಏಕೆ ಆಗಿನ ಎಲ್ಲ ರಾಜರೂ ಹೋರಾಡುತ್ತಿದ್ದರು. ಟಿಪ್ಪುವನ್ನೂ ಒಳಗೊಂಡಂತೆ ಆಗಿನ ರಾಜರುಗಳಿಗೆ ಅಕ್ಕಪಕ್ಕದ ರಾಜರೆಲ್ಲರೂ ಬ್ರಿಟಿಷರಷ್ಟೇ ಶತ್ರುಗಳು ಮತ್ತು ವಿರೋಧಿಗಳು. ಸಾಂಸ್ಕೃತಿಕವಾಗಿ ಭಾರತ ಸಹಸ್ರಾರು ವರ್ಷಗಳಿಂದ ಒಂದು ಎಂಬ ಭಾವ ದೃಢವಾಗಿದ್ದರೂ ರಾಜಕೀಯವಾಗಿ ಅದು ಒಂದು ಎಂಬ ಭಾವ ಇರಲೇ ಇಲ್ಲ ಎಂಬುದೇ ವಸ್ತುಸತ್ಯ.

ರಾಷ್ಟ್ರೀಯತೆಯ ಭಾವ ಉದಿಸಿದ 19ನೇ ಶತಮಾನದ ನಂತರದಲ್ಲಿ ದೇಶಭಕ್ತಿಯ ಭಾವನೆಗಳಿಗೆ ಹೆಚ್ಚು ಉಕ್ಕಂದ ಬಂದದ್ದು ಎಂಬುದನ್ನು ಹೇಗೆ ತಾನೇ ಮರೆಯುವುದು? ಆದ್ದರಿಂದ ಪಠ್ಯಪುಸ್ತಕಗಳನ್ನು ರಚಿಸುವಾಗ ಯಾವುದೋ ಮಂಡಳಿ ಆಕ್ಷೇಪಿಸಿತೆಂಬ ಕಾರಣಕ್ಕೆ ಇನ್ನಾವುದೋ ಸಮುದಾಯಕ್ಕೆ ನೋವಾಗುತ್ತದೆಂಬ ಕಾರಣಕ್ಕೆ ತಿದ್ದುತ್ತಾ ಹೋಗುವುದು ಬೇಡ.

ವಾಚಕರ ವಾಣಿ

ಐಷಾರಾಮಿ ಕ್ಲಬ್: ತೆರಿಗೆ ಹಣದಿಂದ ಬೇಡ

ಶಾಸಕರ ಮೋಜು ಮಸ್ತಿಗಾಗಿ ಬೆಂಗಳೂರಿನಲ್ಲಿ ವಿಧಾನಸೌಧಕ್ಕೆ ಹತ್ತಿರ ಇರುವಂತೆ ಐಷಾರಾಮಿ ಕ್ಲಬ್ ನಿರ್ಮಿಸಲು ಸರ್ಕಾರ ಮುಂದಾಗಿದೆ. ಇದಕ್ಕೆ ಎಲ್ಲಾ ಶಾಸಕರು ಪಕ್ಷಭೇದ ಮರೆತು ಸಮ್ಮತಿಸಿದ್ದಾರೆ ಎಂದು ವರದಿಯಾಗಿದೆ. ಈಗಾಗಲೇ ಎರಡು ಬಾರಿ ಕೋವಿಡ್ ಅಪ್ಪಳಿಸಿ, ಮೂರನೇ ಅಲೆಯ ನಿರೀಕ್ಷೆಯಲ್ಲಿ ಆತಂಕದಿಂದ ಇರುವ ಜನತೆಗೆ ಇದು ಎಂತಹ ಸಂದೇಶ ನೀಡಬಹುದು ಎಂಬ ಅರಿವು ಸರ್ಕಾರಕ್ಕೆ ಇದ್ದಂತಿಲ್ಲ.

ತಾವು ಚೆನ್ನಾಗಿದ್ದರೆ ಇಡೀ ನಾಡೇ ಚೆನ್ನಾಗಿರುತ್ತದೆ ಎಂದು ಶಾಸಕರು ಅಂದುಕೊಂಡಂತಿದೆ. ಶಾಸಕರು ಮಾತ್ರವೇ ಈ ಕ್ಲಬ್ಬನ್ನು ಬಳಸಿಕೊಳ್ಳುತ್ತಾರಾ? ಈ ಕ್ಲಬ್ ಶಾಸಕರ, ಮಂತ್ರಿಗಳ ಹಿಂಬಾಲಕರ ಅಡ್ಡಾ ಆಗುವುದರಲ್ಲಿ ಸಂಶಯವೇ ಇಲ್ಲ. ಇದನ್ನು ಜನರ ತೆರಿಗೆ ಹಣದಿಂದ ನಿರ್ಮಿಸುವುದು ಬೇಡ. ಬೇಕಾದರೆ ಶಾಸಕರು ಸ್ವಂತ ಜೇಬಿನಿಂದ ಹಣ ಹಾಕಿ ಬೇರೊಂದು ಕಡೆ ಜಾಗ ಖರೀದಿಸಿ, ಕ್ಲಬ್ ನಿರ್ಮಿಸಿಕೊಳ್ಳಲಿ.

ವಿ.ತಿಪ್ಪೇಸ್ವಾಮಿ, ಹಿರಿಯೂರು

ಕಾನೂನು ಶಿಕ್ಷಣ: ಚರ್ಚೆ ನಡೆಯಲಿ

'ಕಾನೂನು ಶಿಕ್ಷಣಕ್ಕೆ ಕನ್ನಡ ಮಾಧ್ಯಮ ಬೇಡವೇ?' ಎಂಬ ನಿವೃತ್ತ ಜಿಲ್ಲಾ ನ್ಯಾಯಾಧೀಶ ಡಾ. ಜಿನದತ್ತ ದೇಸಾಯಿ ಅವರ ಅಭಿಪ್ರಾಯ (ಸಂಗತ, ಸೆ. 21) ಇಂದಿನ ತುರ್ತು ಅಗತ್ಯಗಳಲ್ಲಿ ಒಂದಾಗಿದೆ. ಕಕ್ಷಿದಾರ ಅರಿಯದ ಭಾಷೆಯಲ್ಲಿ ಕೋರ್ಟ್ ವ್ಯವಹಾರ ನಡೆಸುವುದು ಅನ್ಯಾಯ ಎಂಬುದು ಲೇಖನದಲ್ಲಿ ಎತ್ತಿದ ಗಂಭೀರ ಸಂಗತಿಯಾಗಿದೆ.

ಕಾನೂನು ಪದವಿ ಅಧ್ಯಯನವನ್ನು ಕನ್ನಡ ಮಾಧ್ಯಮದಲ್ಲಿ ಆರಂಭಿಸುವುದಕ್ಕೆ ಪೂರಕವಾಗಿ ಸರ್ಕಾರವು ತುರ್ತಾಗಿ ಮಸೂದೆಯನ್ನು ಮಂಡಿಸಿ, ಹಿರಿಯ ಕಾನೂನು ತಜ್ಞರು ಮತ್ತು ನ್ಯಾಯಾಧೀಶರ ಅಭಿಪ್ರಾಯಗಳನ್ನು ಸಂಗ್ರಹಿಸಬೇಕು. ರಾಜ್ಯದಲ್ಲಿರುವ ಕಾನೂನು ವಿಶ್ವವಿದ್ಯಾಲಯವೇ ಇದರ ನೇತೃತ್ವ ವಹಿಸಿಕೊಳ್ಳಬೇಕು. ಹೀಗಾದಾಗ ಮಾತ್ರ ಕಾನೂನು ಶಿಕ್ಷಣ ಮತ್ತು ನ್ಯಾಯಾಲಯಗಳು ಗ್ರಾಮೀಣ ಮಟ್ಟದವರೆಗೂ ನಿಲುಕುವಂತಾಗುತ್ತದೆ. ವಿದ್ವಾಂಸರ ವಲಯದಲ್ಲಿ ಈ ಕುರಿತು ಹೆಚ್ಚೆಚ್ಚು ಚರ್ಚೆ ನಡೆಯಲಿ.

ಡಾ. ಆನಂದಕುಮಾರ ಜಕ್ಕಣ್ಣವರ, ಕಾಗವಾಡ

ರೈತರಿಗೆ ಗೌರವ ಡಾಕ್ಟರೇಟ್: ಆತುರ ಸಲ್ಲದು

ಕೃಷಿ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆ ಮಾಡಿದ ರೈತರೊಬ್ಬರಿಗೆ ಮುಂದಿನ ವರ್ಷದಿಂದ ಗೌರವ ಡಾಕ್ಟರೇಟ್ ನೀಡುವ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆಶಯ ಮೆಚ್ಚುವಂಥದ್ದು (ಪ್ರ.ವಾ., ಸೆ. 21). ಆದರೆ, ಅಂಥ ರೈತರನ್ನು ಗುರುತಿಸಿ ಪ್ರೋತ್ಸಾಹಿಸಲು ಗೌರವ ಡಾಕ್ಟರೇಟ್ ಬೇಕೆ? ಪ್ರಗತಿಪರ ರೈತ ಎಂದು ಗುರುತಿಸಿ ವಿಶ್ವವಿದ್ಯಾಲಯ ಈಗಾಗಲೇ ಪ್ರಶಸ್ತಿ ನೀಡುತ್ತಿದೆ. ಗೌರವ ಡಾಕ್ಟರೇಟ್ ಎಂಬುದು ಪ್ರಸ್ತುತ ತನ್ನ ಮೌಲ್ಯವನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವು ಈ ಹೊಸ ಸಂಪ್ರದಾಯವನ್ನು ಸೇರಿಸುವ ಮುನ್ನ ಮತ್ತೊಮ್ಮೆ ಪರಿಶೀಲಿಸುವುದು ಸೂಕ್ತ.

ಗೌರವ ಡಾಕ್ಟರೇಟ್ ಪಡೆಯಲು ಅನೇಕರು ವಾಮಮಾರ್ಗಗಳನ್ನು ಅನುಸರಿಸುವ ವಿಚಾರ ಈಗಾಗಲೇ ಜಗಜ್ಜಾಹೀರಾಗಿದೆ. ನಾಲ್ಕೈದು ವರ್ಷಗಳ ಕಾಲ ಶ್ರಮಪಟ್ಟು ವಿಶ್ವವಿದ್ಯಾಲಯದ ನಿಯಮಗಳಡಿ 'ಡಾಕ್ಟರೇಟ್' ಪದವಿ ಗಳಿಸಿದವರಿರುತ್ತಾರೆ. ಆದರೆ ಘಟಿಕೋತ್ಸವದ ಆಹ್ವಾನ ಪತ್ರಿಕೆ ಮುದ್ರಣದ ಸಮಯದವರೆಗೂ ಗೌರವ ಡಾಕ್ಟರೇಟ್ ಅನ್ನು ಯಾರಿಗೆ ಕೊಡಬಹುದು ಎಂಬುದು ತಿಳಿಯುವುದಿಲ್ಲ. ಇಷ್ಟು ಕಡಿಮೆ ಅವಧಿಯಲ್ಲಿ ಸಾಧಕರನ್ನು ಗುರುತಿಸುವ ಕ್ರಮ ಒಪ್ಪುವಂಥದ್ದಲ್ಲ.

ಪ್ರತೀ ಬಾರಿ ವಿಶ್ವವಿದ್ಯಾಲಯಗಳು ತಮ್ಮ ಘಟಿಕೋತ್ಸವದಲ್ಲಿ ಇಂತಿಷ್ಟು ಜನರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡುವ ಸಂಪ್ರದಾಯ ನಿಧಾನವಾಗಿ ಶುರುವಾಗಿದೆ. ಆದ್ದರಿಂದ ಈ ಪದವಿಯ ಮೌಲ್ಯ ಹೆಚ್ಚಿಸಿದ ನಂತರವೇ ರೈತರು ಅಥವಾ ಉಳಿದ ಕ್ಷೇತ್ರಗಳ ಸಾಧಕರನ್ನು ಗುರುತಿಸುವ ಬಗ್ಗೆ ಚಿಂತನೆ ನಡೆಸಬೇಕು. ಇದಕ್ಕೆ ಇರುವ ಉಪಾಯವೆಂದರೆ, ಮುಂದಿನ ವರ್ಷದ ಅರ್ಹರನ್ನು ಈ ವರ್ಷವೇ 'ನಾಮಿನೇಟ್' ಮಾಡಿ ಅಂಥವರ ಸಾಧನೆಗಳನ್ನು ಜನಾಭಿಪ್ರಾಯಕ್ಕೆ ಬಿಡುವುದು. ಇದರಿಂದ ಪಾರದರ್ಶಕ ಮೌಲ್ಯಮಾಪನ ನಡೆಸಿದಂತೆ ಆಗುತ್ತದೆ. ಜೊತೆಗೆ, ಸಾಧಕರ ಸಾಧನೆಗಳ ಸಂಪೂರ್ಣ ಪರಿಚಯಕ್ಕೆ ಸಮಯ ಸಹ ಸಿಗುತ್ತದೆ. ಇಂಥ ಚಿಂತನೆಗಳು ಉಳಿದ ಪ್ರಶಸ್ತಿಗಳಿಗೂ ಅನ್ವಯವಾದರೆ ಪ್ರಶಸ್ತಿ ಮತ್ತು ಗೌರವಗಳ ಮೌಲ್ಯ ಹೆಚ್ಚುತ್ತದೆ.

ಡಾ. ಜಿ.ಬೈರೇಗೌಡ, ಬೆಂಗಳೂರು

ಈರುಳ್ಳಿ ಬೆಳೆ ಕೈಗೆ ಹತ್ತಬೇಕಾದರೆ...

'ಕೊಳೆರೋಗದಿಂದ ಈರುಳ್ಳಿ ಬೆಳೆ ಸಂಪೂರ್ಣ ನಾಶ'ವಾದ ವರದಿ (ಪ್ರ.ವಾ., ಸೆ. 18) ಓದಿ ತುಂಬಾ ದುಃಖವಾಯಿತು. ಕಳೆದ ಎರಡು ಹಂಗಾಮಿನಲ್ಲಿ ವಿಜಯಪುರ ಭಾಗದಲ್ಲಿ ಈರುಳ್ಳಿ ಬೆಳೆಗೆ ಕೊಳೆರೋಗ ಸತತವಾಗಿ ಕಾಡುತ್ತಿದೆ. ಈ ಪ್ರದೇಶದಲ್ಲಿ ರೈತರು ಸಾಮಾನ್ಯವಾಗಿ ಕಂಪನಿಗಳ ಹೈಬ್ರಿಡ್ ಬೀಜಗಳನ್ನು ತಂದು ಹಾಕುತ್ತಾರೆ. ರಸಗೊಬ್ಬರ ಕೀಟನಾಶಕಗಳ ಜೊತೆಗೆ ಅತಿಯಾಗಿ ಕಳೆನಾಶಕ ಬಳಸುತ್ತಾರೆ. ಈರುಳ್ಳಿಯೊಂದನ್ನೇ ಏಕಬೆಳೆಯಾಗಿ ಬೆಳೆಯುತ್ತಾರೆ. ಇವೆಲ್ಲಾ ಕೊಳೆ ರೋಗ ಹರಡಲು ಕಾರಣವಾಗುತ್ತವೆ. ಬಹುತೇಕ ಸಂದರ್ಭಗಳಲ್ಲಿ ಸಮಸ್ಯಾತ್ಮಕ ಬೀಜವೇ ಕೊಳೆರೋಗಕ್ಕೆ ಕಾರಣವಾಗುತ್ತದೆ.

ಹತ್ತು ವರ್ಷದ ಹಿಂದೆ ನಾವು ಕೂಡ ಇದೇ ರೀತಿ ಕೊಳೆರೋಗಕ್ಕೆ ತುತ್ತಾದ ಈರುಳ್ಳಿಯನ್ನು ತಿಪ್ಪೆಗೆ ಹಾಕುತ್ತಿದ್ದೆವು. ಈ ಹಂಗಾಮಿನಲ್ಲಿ ನಮ್ಮಲ್ಲಿ 300 ರೈತರು ಸ್ವಂತ ಬೀಜ ಬಳಸಿ ಸಾವಯವ ಮಿಶ್ರ ಬೆಳೆ ಪದ್ಧತಿಯಲ್ಲಿ ಈರುಳ್ಳಿ ಬೆಳೆದಿದ್ದು ಯಾರೊಬ್ಬರಿಗೂ ಕೊಳೆರೋಗ ಬಾಧಿಸಿಲ್ಲ. ಮಿಶ್ರ ಬೆಳೆಯಿಂದಾಗಿ, ಈರುಳ್ಳಿಯು ಹೊಲದಲ್ಲಿ ಇರುವವರೆಗೆ ಒಂದಲ್ಲಾ ಒಂದು ಬೆಳೆ ಕೈಗೆ ಸಿಗುವುದರಿಂದ ನಮಗೆ ಬಹಳಷ್ಟು ಆದಾಯ ಸಿಗುತ್ತದೆ. ಸ್ವಂತ ಬೀಜ, ಸ್ವಂತ ಸಾವಯವ ಗೊಬ್ಬರ ಬಳಸಿ, ಕೀಟ-ರೋಗ ಬಾಧೆಗೆ ಮುಂಜಾಗ್ರತಾ ಕ್ರಮಗಳನ್ನು ವಹಿಸುವುದರಿಂದ ಈರುಳ್ಳಿ ಬೆಳೆ ಯಾವ ರೋಗ ಬಾಧೆಗೂ ತುತ್ತಾಗುವುದಿಲ್ಲ. ಮಾರುಕಟ್ಟೆಯಲ್ಲಿ ಬೆಲೆ ವ್ಯತ್ಯಾಸವಾದಾಗಲೂ ಬೇರೆ ಬೆಳೆಗಳಿಂದ ಆದಾಯ ಪಡೆಯುತ್ತೇವೆ. ಈಗಲಾದರೂ ಸರ್ಕಾರ ಮತ್ತು ವಿಶ್ವವಿದ್ಯಾಲಯಗಳು ರೈತರಿಗೆ ಸಾವಯವ ಈರುಳ್ಳಿ ಬೇಸಾಯಕ್ಕೆ ಉತ್ತೇಜನ ಕೊಟ್ಟು ರೈತರ ಆದಾಯ ನೆಲಕಚ್ಚುವುದನ್ನು ತಡೆಯಲಿ.

ಎಸ್.ಶಿವಾನಂದಯ್ಯ, ಹ್ಯಾಳ್ಯಾ, ಕೊಟ್ಟೂರು, **ಡಿ.ಟಿ.ರಾಜಪ್ಪ,** ಬಸವನಹಾಳು, ಹರಪನಹಳ್ಳಿ, **ರೇಣುಕಮ್ಮ,** ಮಂಗನಹಳ್ಳಿ, ಕೊಟ್ಟೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವ್ಯಾಪ್ತಿ ವಿಸ್ತರಿಸಿದ ವಿಜ್ಞಾನ–ತಂತ್ರಜ್ಞಾನ

ಉನ್ನತ ಮಟ್ಟದಲ್ಲಿ ಸಂಶೋಧನೆ ಮತ್ತು ಶಿಕ್ಷಣದಲ್ಲಿ ತೊಡಗಿರುವ ಹಲವಾರು ಹೊಸ ಐಐಟಿ, ಐಐಎಸ್‌ಇಆರ್ ಇತ್ಯಾದಿ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದು, ಒಟ್ಟಾರೆ ಸಂಶೋಧಕರ ಸಂಖ್ಯೆ ಕನಿಷ್ಠ ನಾಲ್ಕು ಪಟ್ಟಾದರೂ ಹೆಚ್ಚಾಗಿದೆ. ಡಾಕ್ಟರೇಟ್ ಪದವೀಧರರ ಸಂಖ್ಯೆ 2018ರಲ್ಲಿ 24000 ಮೀರಿದ್ದು, ಕೇವಲ 7 ವರ್ಷಗಳ ಅವಧಿಯಲ್ಲಿ ಮೂರು ಪಟ್ಟು ಹೆಚ್ಚಿದೆ. ಕಳೆದ ಎರಡು ದಶಕಗಳಲ್ಲಿ ಭಾರತೀಯ ವಿಜ್ಞಾನಿಗಳು ಪ್ರಕಟಿಸಿರುವ ವೈಜ್ಞಾನಿಕ ವರದಿಗಳ ಸಂಖ್ಯೆ ಮೂರರಿಂದ ಎಂಟು ಪಟ್ಟು ಹೆಚ್ಚಿವೆ

• ಶ್ರೀಕಾಂತ ಶಾಸ್ತ್ರಿ

ಕಳೆದ ಮೂರು ದಶಕಗಳಲ್ಲಿ ದೇಶದ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳು ಬಹಳಷ್ಟು ಬದಲಾಗಿವೆ. ಈ ಬದಲಾವಣೆಗಳಲ್ಲಿ ಆರ್ಥಿಕ ಉದಾರೀಕರಣದ ನೇರ ಪರಿಣಾಮಗಳ ಜೊತೆಗೆ ಪ್ರಪಂಚದಾದ್ಯಂತ ಆಗಿರುವ ವ್ಯಾಪಕ ಬದಲಾವಣೆಗಳ ಪರಿಣಾಮಗಳೂ ಸೇರಿವೆ (ಉದಾಹರಣೆಗೆ, 1991 world wide web ನ ಪ್ರಾರಂಭ ವರ್ಷ ಕೂಡ. ಇಂಟರ್ನೆಟ್ ಸೃಷ್ಟಿಸಿರುವ ಅಂತರ ಸಂಪರ್ಕದ ತೀವ್ರತೆಯು, ಸಂಶೋಧನಾ ಕ್ಷೇತ್ರವನ್ನೂ ಆಳವಾಗಿ ಪ್ರಭಾವಿಸಿದೆ). ಈ ಎಳೆಗಳನ್ನು ಪ್ರತ್ಯೇಕಿಸಲು ಪ್ರಯತ್ನಿಸದೆ, ವೈಜ್ಞಾನಿಕ ಸಂಶೋಧನಾ ಕ್ಷೇತ್ರವನ್ನು ಮುಖ್ಯವಾಗಿ ಮನಸ್ಸಿನಲ್ಲಿಟ್ಟುಕೊಂಡು, ಅದರ ವಿಸ್ತಾರ, ರೂಪುರೇಷೆಗಳು, ಮೌಲ್ಯಗಳು ಮತ್ತು ಆದ್ಯತೆಗಳು ಕಳೆದ ಮೂರು ದಶಕಗಳಲ್ಲಿ ಹೇಗೆ ಬದಲಾಗಿವೆಯೆನ್ನುವುದರ ಚಿತ್ರಣ ಈ ಲೇಖನದ ಉದ್ದೇಶ.

ಉದಾರೀಕರಣದ ಹಿಂದಿನ ದಶಕಗಳಲ್ಲಿ ವೈಜ್ಞಾನಿಕ ಸಂಶೋಧನೆಗೆ ಕೊಡಲಾದ ಪೋಷಣೆಗೆ ಮುಖ್ಯ ಆಧಾರಗಳು ಎರಡು. ಒಂದು, ರಾಷ್ಟ್ರದ ಭದ್ರತೆ, ರಾಷ್ಟ್ರನಿರ್ಮಾಣ, ಮತ್ತು ಅಭಿವೃದ್ಧಿಗೆ ಅಗತ್ಯವಾದ ಜ್ಞಾನ ಮತ್ತು ಸಾಮರ್ಥ್ಯಗಳ ಗಳಿಕೆ. ಎರಡು, ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವಗಳು ಅಪೇಕ್ಷಣೀಯ ಸಾಮಾಜಿಕ ಮೌಲ್ಯಗಳೆಂಬ ನಿಲುವು.

ಉದಾರೀಕರಣದ ನಂತರದ ದಶಕಗಳಲ್ಲಿಯೂ ಈ ಆಲೋಚನೆಗಳು, ವಿಶೇಷವಾಗಿ ಮೊದಲನೆಯ ಗಣನೆ, ದೇಶದ ವಿಜ್ಞಾನ, ತಂತ್ರಜ್ಞಾನ ಸಂಬಂಧಿತ ನಿಲುವುಗಳನ್ನು ಪ್ರಭಾವಿಸಿವೆ. ಇಂದಿಗೂ, ದೇಶದ ವಿಜ್ಞಾನ ಮತ್ತು ತಂತ್ರಜ್ಞಾನ ಸಂಬಂಧಿತ ವೆಚ್ಚದಲ್ಲಿ ರಕ್ಷಣೆ, ಅಣುಶಕ್ತಿ, ಬಾಹ್ಯಾಕಾಶ ವಿಭಾಗಗಳ ಪಾಲು ಸರಿಸುಮಾರು ಶೇಕಡಾ 60ರಷ್ಟಿದೆ. ಕೃಷಿ ಸಂಶೋಧನೆಯ ಪಾಲು ಶೇಕಡಾ 10ರಷ್ಟು. ಈ ಅಂಶಗಳ ಜೊತೆಗೆ ಈಚೆಗೆ (ಕಳೆದ 15–20 ವರ್ಷಗಳಲ್ಲಿ) ಸೇರಿರುವ ಮುಖ್ಯ ಪರಿಗಣನೆ, ವೈಜ್ಞಾನಿಕ ಸಂಶೋಧನೆಯ ಉತ್ಪನ್ನಗಳು ಮಾರುಕಟ್ಟೆಯ ಮೂಲಕ ಸಮಾಜದ ಅವಶ್ಯಕತೆಗಳನ್ನು ನೇರವಾಗಿ ಪೂರೈಸಬೇಕೆನ್ನುವ ಮತ್ತು ಆದಾಯಕ್ಕೆ ಮೂಲವಾಗಬೇಕೆನ್ನುವ ನಿರೀಕ್ಷೆ. ಕಳೆದ 30 ವರ್ಷಗಳಲ್ಲಿ ಭಾರತದ ಒಟ್ಟು ದೇಶೀಯ ಉತ್ಪನ್ನ (ಜಿಡಿಪಿ) ಹತ್ತುಪಟ್ಟಾಗಿ ಬೆಳೆದಿದೆ. ಇದರ ನೇರ ಪರಿಣಾಮವಾಗಿ, 90ರ ದಶಕದ ಎರಡನೆಯ ಭಾಗದಿಂದ ಶುರುವಾಗಿ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಕ್ಕೂ ಅದೇ ಅಳತೆಯಲ್ಲಿ ಸಂಪನ್ಮೂಲಗಳು ಹೆಚ್ಚಿವೆ. ಇದರಿಂದ ಸಂಶೋಧನಾ ಕ್ಷೇತ್ರದಲ್ಲಿ ಹಲವು ಗುಣಾತ್ಮಕ ಬದಲಾವಣೆಗಳಾಗಿವೆ ಮತ್ತು ಅದರ ವಿಸ್ತಾರವೂ ಹೆಚ್ಚಿದೆ. ಹಿಂದಿನ ತಲೆಮಾರಿನಲ್ಲಿ ಸಾಮಾನ್ಯ ಅನುಭವವಾಗಿದ್ದ ಸಂಪನ್ಮೂಲಗಳ ಕೊರತೆ, ತಕ್ಕ ವೈಜ್ಞಾನಿಕ ಉಪಕರಣಗಳ ಅಭಾವ, ಇತ್ಯಾದಿ ಇತಿಮಿತಿಗಳು ದೇಶದ ಹಲವು ಸಂಶೋಧನಾ ಸಂಸ್ಥೆಗಳಲ್ಲಿ ಇಂದು ಇಲ್ಲ. ಇಂತಹ ಸಂಸ್ಥೆಗಳಲ್ಲಿನ ಸಂಶೋಧಕರು, ಸಾಮಾನ್ಯವಾಗಿ, ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಪ್ರಪಂಚದ ಯಾವುದೇ ಸಂಸ್ಥೆಗಳಲ್ಲಿ ನಿರೀಕ್ಷಿಸಬಹುದೋ ಅದೇ ಮಟ್ಟದ ಸೌಕರ್ಯಗಳು ಮತ್ತು ಉಪಕರಣಗಳನ್ನು ಇಂದು ನಿರೀಕ್ಷಿಸಬಹುದು.

ಈ ಮಾತು ಸಂಶೋಧನೆಯಲ್ಲಿ ತೊಡಗಿದ ಎಲ್ಲ ಸಂಸ್ಥೆಗಳಿಗೂ ಅನ್ವಯಿಸದಿದ್ದರೂ, ಇದು ಅನ್ವಯಿಸುವ ಮಟ್ಟದ ಸಂಸ್ಥೆಗಳ ಸಂಖ್ಯೆ ಮತ್ತು ಅವುಗಳ ಚಟುವಟಿಕೆಗಳ ಪ್ರಮಾಣ ಬೆಳೆದಿದೆ. ಈ ವಿಚಾರವನ್ನು ಹಲವಾರು ಅಂಕಿಅಂಶಗಳು ವಿಶದಗೊಳಿಸುತ್ತವೆ– ಉನ್ನತ ಮಟ್ಟದಲ್ಲಿ ಸಂಶೋಧನೆ ಮತ್ತು ಶಿಕ್ಷಣದಲ್ಲಿ ತೊಡಗಿರುವ ಹಲವಾರು ಹೊಸ ಐಐಟಿ, ಐಐಎಸ್‌ಇಆರ್ ಇತ್ಯಾದಿ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದು, ಒಟ್ಟಾರೆ ಸಂಶೋಧಕರ ಸಂಖ್ಯೆ ಕನಿಷ್ಠ ನಾಲ್ಕು ಪಟ್ಟಾದರೂ ಹೆಚ್ಚಾಗಿದೆ. ಡಾಕ್ಟರೇಟ್ ಪದವೀಧರರ ಸಂಖ್ಯೆ 2018ರಲ್ಲಿ 24000 ಮೀರಿದ್ದು, ಕೇವಲ 7 ವರ್ಷಗಳ ಅವಧಿಯಲ್ಲಿ ಮೂರು ಪಟ್ಟು ಹೆಚ್ಚಿದೆ. ಕಳೆದ ಎರಡು ದಶಕಗಳಲ್ಲಿ ಭಾರತೀಯ ವಿಜ್ಞಾನಿಗಳು ಪ್ರಕಟಿಸಿರುವ ವೈಜ್ಞಾನಿಕ ವರದಿಗಳ ಸಂಖ್ಯೆ (ಬೇರೆ ಬೇರೆ ಸಂಕಲನಗಳ ಆಧಾರವಾಗಿ) ಮೂರರಿಂದ ಎಂಟುಪಟ್ಟು ಹೆಚ್ಚಿವೆ. ಪ್ರಪಂಚಾದ್ಯಂತ ವೈಜ್ಞಾನಿಕ ವರದಿಗಳ ಸಂಖ್ಯೆ ಹೆಚ್ಚುತ್ತಾ ಬಂದಿದ್ದರೂ ಭಾರತದಲ್ಲಿ ಆಗಿರುವ ಹೆಚ್ಚಳ ಆ ಬೆಳವಣಿಗೆಯನ್ನು ಮೀರಿದ್ದು, ಪ್ರತಿಷ್ಠಿತ ಪ್ರಕಾಶನಗಳಲ್ಲೂ ಕೂಡ ಭಾರತದ ಪಾಲು ಹೆಚ್ಚುತ್ತಾ ಬಂದಿದೆ.

ಸಂಶೋಧನೆ ಮತ್ತು ಅಭಿವೃದ್ಧಿ (ಆರ್ ಎಂಡ್ ಡಿ) ಕ್ಷೇತ್ರಗಳಲ್ಲಿ ಒಟ್ಟು ಹೂಡಿಕೆ (ಸರ್ಕಾರ ಮತ್ತು ಖಾಸಗಿ ವಲಯಗಳು ಸೇರಿ) ಹೆಚ್ಚಾಗಿದ್ದರೂ, ಶೇಕಡಾವಾರು ಲೆಕ್ಕದಲ್ಲಿ ನೋಡಿದಾಗ ಕಾಣುವ ಚಿತ್ರ ಬೇರೆಯಾಗಿದೆ. 90ರ ದಶಕದಲ್ಲಿ ಜಿಡಿಪಿಯ ಶೇ 0.7ರಷ್ಟಿದ್ದ ಈ ಬಜೆಟ್ ನಡುವಿನ ವರ್ಷಗಳಲ್ಲಿ ಕ್ರಮೇಣ ಏರಿ, ಎಂಟು ವರ್ಷಗಳ ಹಿಂದೆ ಶೇ 0.91ರಷ್ಟಾಗಿದೆ. ಕಳೆದ 7 ವರ್ಷಗಳಲ್ಲಿ ಶೇ 0.7ರಲ್ಲಿ ಸ್ಥಗಿತವಾಗಿದೆ. ಇದರಲ್ಲಿ ಖಾಸಗಿ ವಲಯದ ಕಾಣಿಕೆ ಕಾಲುಭಾಗದಿಂದ ಸುಮಾರು ಮೂರರಲ್ಲೊಂದು ಭಾಗದವರೆಗೆ ಹೆಚ್ಚಿದೆ. ತಂತ್ರಜ್ಞಾನ ಆಧಾರಿತವಾದ, ಅಭಿವೃದ್ಧಿಶೀಲ ಸಮಾಜಗಳನ್ನು ಗಮನದಲ್ಲಿಟ್ಟುಕೊಂಡು ಈ ವಿಚಾರವನ್ನು ಪರಿಶೀಲಿಸಿರುವ ತಜ್ಞರ ಪ್ರಕಾರ, ಅಪೇಕ್ಷಣೀಯವಾದ ಹೂಡಿಕೆಯ ಮಟ್ಟ ಜಿಡಿಪಿಯ ಶೇ 3ರಷ್ಟು; ಅದರಲ್ಲಿ ಖಾಸಗಿ ವಲಯದ ಪಾಲು ಶೇ 65ರಷ್ಟು. ವಿಜ್ಞಾನ ವಲಯಕ್ಕೆ ನೀಡುವ ಅನುದಾನವು ಜಿಡಿಪಿಯ ಶೇ 2ರಷ್ಟು ಆದಷ್ಟು ಶೀಘ್ರವಾಗಿ ತಲುಪಬೇಕೆಂದು ತಜ್ಞರು ಒತ್ತಾಯಿಸಿದ್ದಾರೆ. ಈ ಗುರಿಗಳು ಸದ್ಯದಲ್ಲಿ ಬಹು ದೂರದಲ್ಲಿವೆ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಮುಖ್ಯ ವಿಚಾರ– ಸಂಶೋಧನಾ ವಿಷಯಗಳನ್ನು ಮೂಲಭೂತ ಮತ್ತು ಅನ್ವಯಿಕ ಸಂಶೋಧನೆಗಳೆಂದು ವಿಂಗಡಿಸಿದಾಗ, ಸರ್ಕಾರಗಳು ಮುಖ್ಯವಾಗಿ ಮೂಲಭೂತ ಸಂಶೋಧನೆಗೆ ಬೆಂಬಲ ಕೊಡಬೇಕೆನ್ನುವುದು ತಜ್ಞರ ಅಭಿಪ್ರಾಯ. ಇದರ ತರ್ಕ ಹೀಗೆ: ತಂತ್ರಜ್ಞಾನವನ್ನು ಅವಲಂಬಿಸಿದ ಆರ್ಥಿಕ ವ್ಯವಸ್ಥೆಗಳಲ್ಲಿ ಮೂಲಭೂತ ವಿಜ್ಞಾನದ ಲ್ಲಾಗುವ ಬೆಳವಣಿಗೆಗಳಿಗೆ ಸ್ಪಷ್ಟವಾದ ಪಾತ್ರವಿದೆಯೆಂಬುದು ಚಾರಿತ್ರಿಕ ಉದಾಹರಣೆಗಳ ಮೂಲಕವೂ, ಪರಿಣತರ ವಿಶ್ಲೇಷಣೆಗಳ ಮೂಲಕವೂ ಮುಟ್ಟಲಾಗಿರುವ ತೀರ್ಮಾನ. ಆದರೆ, ಮೂಲಭೂತ ಸಂಶೋಧನೆಗಳ ಆರ್ಥಿಕ ಫಲ ಹೊಮ್ಮುವ ದಾರಿ ಬಳಸು, ದೇಶ, ಕಾಲ ಸೀಮಿತವಲ್ಲದ್ದು. ಇದಕ್ಕೆ ಬೇಕಾದ ಬೆಂಬಲವನ್ನು, ಹೂಡಿಕೆಯ ಮೇಲಿನ ಪ್ರತಿಫಲವನ್ನು ಸದ್ಯದಲ್ಲೇ ನಿರೀಕ್ಷಿಸುವ, ಖಾಸಗಿ ವಲಯದಿಂದ ಬಯಸಲಾಗದು. ಮೂಲ ವಿಜ್ಞಾನಕ್ಕೆ ಬೇಕಾದ ಬೆಂಬಲವನ್ನು ಕೊಡುವ ಪಾತ್ರ ದೀರ್ಘಕಾಲಿಕ ದೃಷ್ಟಿಯುಳ್ಳ ಸರ್ಕಾರಗಳಿಗೆ ಸೇರಿದ್ದು. ವರ್ತಮಾನ ದೃಷ್ಟಿಯಿಂದ ನಿರೀಕ್ಷಿಸಬಹುದಾದದ್ದೇನೂ ಇಲ್ಲವೆಂದಲ್ಲ. ಆರ್ಥಿಕತೆಯ ಕಣ್ಣುಕಪ್ಪಡವನ್ನು ಒಂದು ಕ್ಷಣ ಕಳಚಿ ನೋಡಿದಲ್ಲಿ, ಮೂಲಭೂತ ವಿಜ್ಞಾನವನ್ನು ಒಂದು ಸಾಂಸ್ಕೃತಿಕ ಸಂಪತ್ತಾಗಿ ಕಾಣಬಹುದು. ಇದಕ್ಕಿಂತ ಪ್ರತ್ಯಕ್ಷವಾದ ಗಳಿಕೆ, ಆಧುನಿಕ ಸಂಶೋಧನಾ ವಿಧಾನಗಳು ಮತ್ತು ವಿಚಾರಗಳಲ್ಲಿ ಡಾಕ್ಟರೇಟ್ ವಿದ್ಯಾರ್ಥಿಗಳಿಗೆ ಒದಗುವ ತರಬೇತಿ. ಹೀಗೆ ತರಬೇತಿ ಪಡೆದ ಪದವೀಧರರು ಬೇರೆ ಬೇರೆ ಕ್ಷೇತ್ರಗಳಲ್ಲಿ ಸಕ್ರಿಯರಾಗಬಹುದು. ಮೂಲಭೂತ ವೈಜ್ಞಾನಿಕ ಪರಿಣತಿಯ ಸಾಮೀಪ್ಯವನ್ನು ಲಾಭಕರವಾಗಿ ಬಳಸುವ ಇತರ ಮಾರ್ಗಗಳೂ ಉಂಟು. ಆದರೆ, ಈ ದೃಷ್ಟಿಕೋನಕ್ಕೆ ಪ್ರಾಶಸ್ತ್ಯ ಈಚಿನ ವರ್ಷಗಳಲ್ಲಿ ಕಡಿಮೆಯಾಗುತ್ತಿದೆ.

ಇತ್ತೀಚಿನ ವರ್ಷಗಳಲ್ಲಿ, ಭಾರತದ ಆರ್ ಎಂಡ್ ಡಿ ಸಮುದಾಯವನ್ನು ಅನ್ವಯಿಕ ಸಂಶೋಧನೆಯಲ್ಲಿ, ತಾಂತ್ರಿಕ ಉತ್ಪನ್ನಗಳ ನಿರ್ಮಾಣದಲ್ಲಿ ತೊಡಗಲು ಹಲವು ರೀತಿಗಳಲ್ಲಿ ಉತ್ತೇಜಿಸಲಾಗುತ್ತಿದೆ. ಈ ಚಟುವಟಿಕೆಗಳು ಸರ್ಕಾರದ ಸಂಶೋಧನಾ ವಿಭಾಗಗಳಲ್ಲಿ (ಉದಾ. ಬಾಹ್ಯಾಕಾಶ), ಮತ್ತು ಖಾಸಗಿ ವಲಯದ ಆರ್ ಎಂಡ್ ಡಿ ವಿಭಾಗಗಳಲ್ಲಿ (ಉದಾ. ಔಷಧ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಾಹನ ಉದ್ಯಮ) ಗಣನೀಯ ಪ್ರಮಾಣದಲ್ಲಿ ನಡೆದುಬಂದಿದೆ (ಉದಾ. ಪ್ರಪಂಚದಾದ್ಯಂತ ಸುದ್ದಿ ಮಾಡಿದ ಮಂಗಳಯಾನ) ಮತ್ತು ಬೆಳೆದಿವೆ. ಆರ್ ಎಂಡ್ ಡಿ ವಿಭಾಗದ ಬಗ್ಗೆ ಚರ್ಚಿಸಬೇಕಾದ್ದು ಬಹಳಷ್ಟಿದ್ದರೂ, ಇಲ್ಲಿ ಸಂಶೋಧನಾ ಕೇಂದ್ರಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಆಗುತ್ತಿರುವ ಹೊಸ ಬದಲಾವಣೆಗಳನ್ನು ವಿವರಿಸಲಾಗುತ್ತಿದೆ. ಅನ್ವಯಿಕ ಸಂಶೋಧನೆಯ ದಿಕ್ಕಿನಲ್ಲಿ ಪೇಟೆಂಟ್ ಪಡೆಯುವಿಕೆ, ತಂತ್ರಜ್ಞಾನ ಅಭಿವೃದ್ಧಿ ಕೇಂದ್ರಗಳು (incubation centres) ಮತ್ತು ಇತ್ತೀಚೆಗೆ ನವೋದ್ಯಮಗಳ ಸ್ಥಾಪನೆ, ಇತ್ಯಾದಿ ಆಯಾಮಗಳು ಐಐಟಿ, ಸಿಎಸ್‌ಐಆರ್ ಮತ್ತಿತರ ಸಂಶೋಧನಾ ಕೇಂದ್ರಗಳ ಕಾರ್ಯ ವ್ಯಾಪ್ತಿಯಲ್ಲಿ ಸೇರಿ ಬರುತ್ತಿವೆ. ಪ್ರಸ್ತುತ ಕಡಿಮೆ ಮಟ್ಟದಲ್ಲಿ ನಡೆಯುತ್ತಿರುವ ಈ ಪ್ರಕ್ರಿಯೆಗಳ ಉತ್ತೇಜನ ಸೂಕ್ತ.

ಆದರೆ, ಈ ಸಂಸ್ಥೆಗಳ ಸಂಶೋಧನೆ, ಶೈಕ್ಷಣಿಕ, ಸಾಮಾಜಿಕ ಆಯಾಮಗಳು ಪರಸ್ಪರ ಪೂರಕವಾಗಲು ಬೇಕಾದ ಸಮತೋಲನವನ್ನು ಗಮನದಲ್ಲಿಟ್ಟುಕೊಳ್ಳುವುದು ಮುಖ್ಯ. ಅನ್ವಯಿಕ ಸಂಶೋಧನೆಯ ಬೆಳವಣಿಗೆ ಮೂಲಭೂತ ಸಂಶೋಧನೆಗೆ ಅಡಚಣೆಯಾಗಿ ಬೆಳೆಯಬಾರದೆಂಬುದೊಂದು ಕಾಳಜಿ. ಅನ್ವಯಿಕ ಸಂಶೋಧನೆಗೆ ಬೇಕಾದ ಸಂಪನ್ಮೂಲಗಳು ಸರ್ಕಾರ ಮತ್ತು ಖಾಸಗಿ ವಲಯಗಳ ಹೆಚ್ಚುವರಿ ಹೂಡಿಕೆಗಳಿಂದ ಬರುವುದು ಅಪೇಕ್ಷಣೀಯ. ಈ ದಿಕ್ಕಿನಲ್ಲಿ ಉದ್ಯಮ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಮೂಲಕ ಸಂಶೋಧನೆಗೆ ಬೆಂಬಲ ಕೊಡಬಹುದೆಂಬ ಇತ್ತೀಚಿನ ಬೆಳವಣಿಗೆ ಸ್ವಾಗತಾರ್ಹ.

ಗಮನಾರ್ಹವಾದ ಇತರ ಕೆಲವು ಅಂಶಗಳು ಹೀಗಿವೆ: ವಿಜ್ಞಾನ ಸಂಶೋಧನೆ ಮತ್ತು ಸಂಬಂಧಿತ ಚಟುವಟಿಕೆಗಳಿಗೆ ರಾಜ್ಯ ಸರ್ಕಾರಗಳು ನೀಡುವ ಬೆಂಬಲ ಕೂಡ ಹೆಚ್ಚುವುದು ಅಪೇಕ್ಷಣೀಯ. ವಿಜ್ಞಾನ ವೇದಿಕೆ, ಬೆಂಗಳೂರು, ಅನ್ನು ಸ್ಥಾಪಿಸುವಲ್ಲಿ ಕರ್ನಾಟಕ ಸರ್ಕಾರದ ಪಾಲುದಾರಿಕೆ ಈ ರೀತಿಯ ಬೆಂಬಲಕ್ಕೆ ಒಳ್ಳೆಯ ಉದಾಹರಣೆ.

ವೈಜ್ಞಾನಿಕ ಸಂಶೋಧನೆಯನ್ನು ಉನ್ನತ ಮಟ್ಟದಲ್ಲಿ ಸಾಧಿಸುವುದರ ಜೊತೆಗೆ, ಸಮಾಜಕ್ಕೆ ಅದರ ಆಸಕ್ತಿಕರ ಆಗುಹೋಗುಗಳನ್ನು ತಿಳಿಸುವುದೂ ಬಹು ಮುಖ್ಯ. ಈ ಸಂವಹನದಲ್ಲಿ ಮಾಧ್ಯಮ, ಸರ್ಕಾರ, ವಿಜ್ಞಾನ ಸಂಸ್ಥೆಗಳ ಆಸಕ್ತಿ ಹೆಚ್ಚಾಗುತ್ತಾ ಬಂದಿರುವುದು ಸಂತೋಷದಾಯಕ. ದೇಶದ ಒಟ್ಟಾರೆ ಸಂಶೋಧನಾ ಪ್ರಕ್ರಿಯೆಯ ವಿಸ್ತಾರ ಬೆಳೆದಿದ್ದರೂ, ಇದರಲ್ಲಿ ವಿಶ್ವವಿದ್ಯಾಲಯಗಳ ಭಾಗವಹಿಸುವಿಕೆ ಕಾಳಜಿಗೆ ಮೂಲವಾಗಿದೆ. ಇದಕ್ಕೆ ಪರಿಹಾರವಾಗಿ, ಹೊಸ ಶಿಕ್ಷಣ ನೀತಿಯ ಶಿಫಾರಸಿನಂತೆ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನೆಯನ್ನು ಇನ್ನಷ್ಟು ಪ್ರೋತ್ಸಾಹಿಸಲು ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನ ಸ್ಥಾಪನೆಯ ಬಗ್ಗೆ ಸಮಾಲೋಚನೆ ನಡೆಯುತ್ತಿದೆ.

ಡಾಕ್ಟರೇಟ್ ಮತ್ತಿತರ ಪದವೀಧರರ ಸಂಖ್ಯೆ ಬೆಳೆದಂತೆ ಸೂಕ್ತ ಉದ್ಯೋಗಾವಕಾಶಗಳ ಕೊರತೆಯ ಬಗ್ಗೆ ಕಾಳಜಿಯೂ ಬೆಳೆದಿದೆ. ಖಾಸಗಿ ವಲಯದಲ್ಲಿ ಸಂಶೋಧನೆ ಮಟ್ಟದ ಉದ್ಯೋಗಾವಕಾಶಗಳು ಹೆಚ್ಚುವುದು, ಶೈಕ್ಷಣಿಕ ಕ್ಷೇತ್ರದಲ್ಲಿ ಬದಲಾವಣೆಗಳು ಇದಕ್ಕೆ ಪರಿಹಾರಗಳಾಗಬಹುದು. ಒಟ್ಟಾರೆ, ವಿಜ್ಞಾನ ಮತ್ತು ತಂತ್ರಜ್ಞಾನ ವಲಯವು ಕಳೆದ ಮೂರು ದಶಕಗಳಲ್ಲಿ ಹಲವು ಪಟ್ಟು ಬೆಳೆದು, ಹೊಸ ಆಯಾಮಗಳಲ್ಲಿ ಹರಡಿದೆ. ಈ ಬೆಳವಣಿಗೆಯಲ್ಲಿ ತೃಪ್ತಿದಾಯಕವಾದ ಹಲವು ಅಂಶಗಳಿದ್ದರೂ, ಮುಂದೆ ಎದುರಿಸಬೇಕಾದ ಗಂಭೀರ ಪ್ರಶ್ನೆಗಳೂ, ಸವಾಲುಗಳೂ ಇವೆ.

ಲೇಖಕ: ಪ್ರಾಧ್ಯಾಪಕ, ಜವಾಹರಲಾಲ್ ನೆಹರೂ ಸೆಂಟರ್ ಫಾರ್ ಅಡ್ವಾನ್ಸ್ಡ್ ಸೈಂಟಿಫಿಕ್ ರಿಸರ್ಚ್

ಅಮಿತ್ ಶಾ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ

ಸಹಕಾರ ನಾಯಕರ ಮೊದಲ ಸಭೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಸಹಕಾರ ಕ್ಷೇತ್ರದ ಪ್ರತಿನಿಧಿಗಳನ್ನು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರು ಶನಿವಾರ ಭೇಟಿಯಾಗಲಿದ್ದಾರೆ. ಕೇಂದ್ರದಲ್ಲಿ ಹೊಸದಾಗಿ ಸಹಕಾರ ಸಚಿವಾಲಯ ಸೃಷ್ಟಿಯಾದ ಬಳಿಕ ನಡೆಯುತ್ತಿರುವ ಮಹತ್ವದ ಕಾರ್ಯಕ್ರಮ ಇದು. ಸಹಕಾರ ಕ್ಷೇತ್ರಕ್ಕೆ ಹೊಸ ಸಚಿವಾಲಯ ರಚನೆಯ ಬಗ್ಗೆ ಈ ಕ್ಷೇತ್ರದ ಧುರೀಣರು ಮತ್ತು ರಾಜಕೀಯ ಪಕ್ಷಗಳಲ್ಲಿ ಆತಂಕ ಮತ್ತು ಕಳವಳಗಳು ಇವೆ. ಅದನ್ನು ಹೋಗಲಾಡಿಸುವುದು ಈ ಸಭೆಯ ಉದ್ದೇಶ ಎಂದು ಹೇಳಲಾಗಿದೆ.

ಕೇಂದ್ರದಲ್ಲಿ ಸಹಕಾರ ಸಚಿವಾಲಯವನ್ನು ಇದೇ ಜುಲೈನಲ್ಲಿ ಆರಂಭಿಸಲಾಗಿದೆ. ಗೃಹ ಸಚಿವ ಅಮಿತ್ ಶಾ ಅವರಿಗೆ ಈ ಸಚಿವಾಲಯದ ಹೊಣೆಯನ್ನೂ ವಹಿಸಲಾಗಿದೆ. ಸಹಕಾರ ಸಂಘಗಳ ಪ್ರತಿನಿಧಿಗಳು ಮತ್ತು ಮುಖಂಡರನ್ನು ಶಾ ಅವರು ಪ್ರತ್ಯೇಕವಾಗಿ ಭೇಟಿಯಾಗಿದ್ದಾರೆ. ಆದರೆ, ಶನಿವಾರ ನಡೆಯುವ ಕಾರ್ಯಕ್ರಮದಲ್ಲಿ ದೇಶದ ವಿವಿಧ ಭಾಗಗಳ ವೈವಿಧ್ಯಮಯ ಹಿನ್ನೆಲೆಯ ಸಹಕಾರಿ ನಾಯಕರು ಭಾಗಿಯಾಗಲಿದ್ದಾರೆ.

ಹೊಸ ಸಚಿವಾಲಯಕ್ಕೆ ಸಂಬಂಧಿಸಿ ತಮ್ಮ ಯೋಜನೆ ಏನು, ಕ್ಷೇತ್ರಕ್ಕಾಗಿ ತಮ್ಮ ಮುನ್ನೋಟ ಏನು ಎಂಬುದನ್ನು ಶಾ ಅವರು ಸಭೆಯಲ್ಲಿ ಬಿಚ್ಚಿಡುವ ಸಾಧ್ಯತೆ ಇದೆ. ಸಹಕಾರ ಕ್ಷೇತ್ರದಿಂದ ರಾಜಕೀಯ ಶಕ್ತಿ ಪಡೆದುಕೊಂಡ ಹಲವು ನಾಯಕರು ದೇಶದಲ್ಲಿ ಇದ್ದಾರೆ. ಈ ಕ್ಷೇತ್ರವನ್ನು ಬಿಜೆಪಿ ಹಿಡಿತಕ್ಕೆ ತೆಗೆದುಕೊಳ್ಳುವುದಕ್ಕಾಗಿಯೇ ಹೊಸ ಸಚಿವಾಲಯ ಸೃಷ್ಟಿಸಲಾಗಿದೆ ಎಂಬ ಅನುಮಾನ ಈ ನಾಯಕರಲ್ಲಿ ಮೂಡಿದೆ. ಹೊಸ ಸಚಿವಾಲಯ ಸ್ಥಾಪನೆಯನ್ನು ಮುಕ್ತವಾಗಿ ಯಾರೂ ಸ್ವಾಗತಿಸದಿರಲು ಇದು ಕಾರಣವಾಗಿದೆ.

‘ಸಹಕಾರ ಕ್ಷೇತ್ರದ ಎಲ್ಲ ವಿಭಾಗಗಳ ಪ್ರತಿನಿಧಿಗಳೂ ಸಮಾವೇಶದಲ್ಲಿ ಭಾಗಿಯಾಗಲಿದ್ದಾರೆ. ಮೀನುಗಾರಿಕೆ, ಹೈನುಗಾರಿಕೆ, ನೇಕಾರಿಕೆ, ಸಕ್ಕರೆ, ನಗರ ಸಹಕಾರ ಬ್ಯಾಂಕುಗಳು, ರಸಗೊಬ್ಬರ ಸಹಕಾರ ಸಂಘಗಳು ಎಲ್ಲದರ ಪ್ರತಿನಿಧಿಗಳೂ ಹಾಜರಾಗಲಿದ್ದಾರೆ’ ಎಂದು ಭಾರತ ರಾಷ್ಟ್ರೀಯ ಸಹಕಾರ ಒಕ್ಕೂಟದ ಅಧ್ಯಕ್ಷ ದಿಲೀಪ್ ಸಂಘಾನಿ ಹೇಳಿದ್ದಾರೆ.

‘ನೂತನ ಸಚಿವಾಲಯದ ಬಗ್ಗೆ ಆಕ್ಷೇಪ ಇರುವವರು, ಮುಂದೆಯೂ ಆ ಬಗ್ಗೆ ಆಕ್ಷೇಪ ವ್ಯಕ್ತಪಡಿಸುತ್ತಾರೆ. ಆದರೆ ಸಚಿವಾಲಯವು ಈ ಬಗ್ಗೆ ಇರುವ ಸಂದೇಹಗಳನ್ನು ಪರಿಹರಿಸುತ್ತದೆ ಮತ್ತು ಸಹಕಾರ ಕ್ಷೇತ್ರಕ್ಕೆ ಸಕಾರಾತ್ಮಕವಾದ ಸಂದೇಶವನ್ನು ರವಾನಿಸುತ್ತದೆ’ ಎಂದು ಸಂಘಾನಿ ಹೇಳಿದ್ದಾರೆ. ನೂತನ ಸಚಿವಾಲಯದ ಬಗ್ಗೆ ವ್ಯಕ್ತವಾಗುತ್ತಿರುವ ಕಳವಳದ ಬಗ್ಗೆ ಕೇಳಲಾದ ಪ್ರಶ್ನೆಗೆ ಅವರು ಈ ರೀತಿ ಉತ್ತರಿಸಿದ್ದಾರೆ.

ಈ ಸಮಾವೇಶದ ವಿಷಯ ‘ಸಹಕಾರದಿಂದ ಸಮೃದ್ಧಿ’. ದೇಶದಲ್ಲಿ ಸಹಕಾರ ಚಳವಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಗ್ರಾಮ ಮಟ್ಟದಿಂದ, ರಾಷ್ಟ್ರ ಮಟ್ಟದವರೆಗಿನ ಸಹಕಾರ ಸಂಘಗಳ ನಾಯಕರು ಮತ್ತು ಪ್ರತಿನಿಧಿಗಳನ್ನು ಒಂದೆಡೆ ಸೇರಿಸಲಾಗುತ್ತಿದೆ. ಸಹಕಾರ ಕ್ಷೇತ್ರವನ್ನು ಬಲಪಡಿಸುವ ಮತ್ತು ಆ ಕ್ಷೇತ್ರದಲ್ಲಿ ಉದ್ಯೋಗ ಸೃಷ್ಟಿಸುವ ಸಂಬಂಧ ತೆಗೆದುಕೊಳ್ಳಲಾಗುವ ಕ್ರಮಗಳ ಬಗ್ಗೆ ಸಚಿವರು ಈ ವಿಚಾರ ಸಂಕಿರಣದಲ್ಲಿ ಮಾಹಿತಿ ನೀಡಬಹುದು ಎಂದು ನಿರೀಕ್ಷಿಸಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಸಹಕಾರ ಕ್ಷೇತ್ರವನ್ನು ಬಲಪಡಿಸುವ ಉದ್ದೇಶದಿಂದ ಸಚಿವಾಲಯವು ಪ್ರತ್ಯೇಕ ಆಡಳಿತ ವರ್ಗ, ಕಾನೂನು ಮತ್ತು ನೀತಿಯನ್ನು ರೂಪಿಸಲಿದೆ. ಬಹುರಾಜ್ಯ ಸಹಕಾರ ಸೊಸೈಟಿಗಳ ಅಭಿವೃದ್ಧಿಗೆ ಮತ್ತು ಅವುಗಳ ವ್ಯವಹಾರವನ್ನು ಸುಗಮಗೊಳಿಸುವ ಸಂಬಂಧ ಸಚಿವಾಲಯವು ಕ್ರಮ ತೆಗೆದುಕೊಳ್ಳಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಅಮಿತ್ ಶಾ

ಕಾರ್ಯಕ್ರಮ ವಿವರ

- ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಕಾರ್ಯಕ್ರಮ
- ಸಹಕಾರ ಕ್ಷೇತ್ರದ ನಾಯಕರ ಒಂದು ದಿನದ ಸಮಾವೇಶ
- 2,200 ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆ
- ಗ್ರಾಮ, ತಾಲ್ಲೂಕು, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಪ್ರತಿನಿಧಿಗಳಿಗೆ ಅವಕಾಶ
- ವರ್ಚುವಲ್ ಮಾಧ್ಯಮದಲ್ಲಿ ಲಕ್ಷಾಂತರ ಮಂದಿ ಕಾರ್ಯಕ್ರಮದಲ್ಲಿ ಭಾಗಿಯಾಗುವ ನಿರೀಕ್ಷೆ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

‘ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಧಲವೀರ್ ಭಂಡಾರಿ ಅವರು ಅಂತರರಾಷ್ಟ್ರೀಯ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿ ಆಯ್ಕೆಯಾಗಿದ್ದಾರೆ’ ಎಂದು ಉತ್ತರ ಪ್ರದೇಶ ಬಿಜೆಪಿ ಸಂಘಟನಾ ಕಾರ್ಯದರ್ಶಿ ನಾಗೇಂದ್ರನಾಥ ತ್ರಿಪಾಠಿ ಟ್ವೀಟ್ ಮಾಡಿದ್ದಾರೆ. ಇದಕ್ಕೆ ಕಾರಣಕರ್ತರಾದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಅಭಿನಂದಿಸಿದ್ದಾರೆ. ಫೇಸ್‌ಬುಕ್‌ನಲ್ಲಿ ಹಲವರು ಇದನ್ನು ಷೇರ್ ಮಾಡಿದ್ದಾರೆ.

ಭಂಡಾರಿ ಅವರು ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಮೂರ್ತಿಯಾಗಿ 2017ರಲ್ಲಿ ಮರು ಆಯ್ಕೆಯಾಗಿದ್ದರು ಎಂದು ಹಲವು ಸುದ್ದಿಸಂಸ್ಥೆಗಳ ವರದಿಗಳು ಮಾಹಿತಿ ನೀಡಿವೆ. ಆದರೆ ಮುಖ್ಯನ್ಯಾಯಮೂರ್ತಿಯಾಗಿ ಆಯ್ಕೆಯಾಗಿರುವ ಬಗ್ಗೆ ಯಾವ ಸುದ್ದಿಸಂಸ್ಥೆಯೂ ಉಲ್ಲೇಖಿಸಿಲ್ಲ. ಐಸಿಜೆಯಲ್ಲಿ ಮುಖ್ಯನ್ಯಾಯಮೂರ್ತಿ ಹುದ್ದೆ ಇಲ್ಲ. 15 ಸದಸ್ಯರಲ್ಲಿ ಒಬ್ಬರು ಅಧ್ಯಕ್ಷ ಮತ್ತು ಮತ್ತೊಬ್ಬರು ಉಪಾಧ್ಯಕ್ಷ ಹುದ್ದೆಯಲ್ಲಿದ್ದಾರೆ ಎಂದು ಆಲ್ಟ್ ನ್ಯೂಸ್ ವರದಿ ಮಾಡಿದೆ.

ಗುಂಡಣ್ಣ

ದಿನ ಭವಿಷ್ಯ

ಗುರುವಾರ ಸೆಪ್ಟೆಂಬರ್ 23, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಉತ್ತರ ಫಲ್ಗುಣಿ ತೃತೀಯಾ ಗಂ. 60-00 (ದಿನಪೂರ್ತಿ) ಗುರುವಾರ ನಿತ್ಯ ನಕ್ಷತ್ರ ರೇವತಿ ಗಂ. 0-45 (ಬೆ. 6-33) ಧ್ರುವ ನಾಮ ಯೋಗ ಗಂ. 21-11 ವಣಿಜ ಕರಣ ಗಂ. 29-38 ವಿಷ ಗಂ. 54-44 ಅಮೃತ ಗಂ 46-6 : ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 : ಸೂರ್ಯೋದಯ: 6-12 ಸೂರ್ಯಾಸ್ತ: 6-16 ಅದೃಷ್ಟ ಸಂಖ್ಯೆ 1 7

ಮೇಷ: ಸಂಗೀತವೇ ಮೊದಲಾದ ಲಲಿತಕಲೆಗಳಲ್ಲಿ ಪರಿಣತರಿಗೆ ಪ್ರದರ್ಶನದ ಅವಕಾಶಗಳೊಂದಿಗೆ ಸಾರ್ವಜನಿಕ ಮನ್ನಣೆ ಪ್ರಾಪ್ತವಾಗುವ ಅವಕಾಶ. ಮಕ್ಕಳಿಗೆ ವಿದೇಶಕ್ಕೆ ತೆರಳುವ ಅವಕಾಶ.

ವೃಷಭ: ಸಂಪತ್ತಿನಲ್ಲಿ ವೃದ್ಧಿಯನ್ನು ಕಂಡುಕೊಳ್ಳುವಿರಿ. ಜಲ ಸಂಬಂಧಿ ಉದ್ಯೋಗದಲ್ಲಿರುವವರಿಗೆ ಬಡ್ತಿ. ರಾಜಕೀಯ ವ್ಯಕ್ತಿಗಳಿಂದ ಕಿರಿ ಕಿರಿ ಉಂಟಾಗುವ ಸಾಧ್ಯತೆ. ಹೊಸ ವ್ಯಕ್ತಿಯೊಬ್ಬರ ಪರಿಚಯದಿಂದ ಸಂತಸ.

ಮಿಥುನ: ಜಮೀನು ಆಸ್ತಿಗಳಿಗೆ ಸಂಬಂಧಿಸಿದ ನೋಂದಣಿ ಕಾರ್ಯಗಳು ಪೂರ್ಣಗೊಳ್ಳಲಿವೆ. ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಭಾಗವಹಿಸುವ ಸದವಕಾಶ ದೊರಕಲಿದೆ. ಯೋಧರಿಗೆ, ಕ್ರೀಡಾಪಟುಗಳಿಗೆ ಸರ್ಕಾರದ ಗೌರವ.

ಕರ್ಕಾಟಕ: ಬರಬೇಕಾದ ಹಣ ಹಿಂದಿರುಗಿ ಬರಲಿದೆ. ಸರಕಾರಿ ಅಧಿಕಾರಿಗಳಿಂದ ಬೆದರಿಕೆಯನ್ನು ಅನುಭವಿಸಬೇಕಾದೀತು. ಎಣ್ಣೆ, ಜೇನುತುಪ್ಪ, ಹಾಲು ಇತ್ಯಾದಿ ದ್ರವ ವ್ಯಾಪಾರದಲ್ಲಿ ಲಾಭ.

ಸಿಂಹ: ಮನಸ್ಸಿಗೆ ಉಲ್ಲಾಸ ತರುವ ಸುದ್ದಿಯನ್ನು ಕೇಳಲಿದ್ದೀರಿ. ವ್ಯಾಪಾರದಲ್ಲಿ ಉತ್ತಮ ಪ್ರತಿಫಲ ನಿರೀಕ್ಷೆ. ಉದ್ಯಮಿಗಳಿಗೆ ವಿಶೇಷ ಅನುಕೂಲತೆಗಳು ಕೂಡಿಬರಲಿವೆ. ಆರಕ್ಷಕ ಅಧಿಕಾರಿಗಳಿಗೆ ವಿಶೇಷ ಅಧಿಕಾರ ಪ್ರಾಪ್ತಿ.

ಕನ್ಯಾ: ಸಾಂಸಾರಿಕ ಜೀವನ ಸುಖಾನುಭವವನ್ನು ನೀಡಲಿದೆ. ವಿದ್ಯಾರ್ಥಿಗಳಿಗೆ ಪರೀಕ್ಷಾ ತಯಾರಿಯಲ್ಲಿ ಸ್ವಲ್ಪ ಮಟ್ಟದ ಹಿನ್ನಡೆ ಉಂಟಾದೀತು. ಮಹಿಳಾ ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ಭಾಗ್ಯ ಲಭಿಸುವ ಸಾಧ್ಯತೆ.

ತುಲಾ: ಮನಸ್ಸಿಗೆ ಸ್ವಲ್ಪ ಮಟ್ಟದ ವ್ಯಥೆ ಉಂಟಾದೀತು. ಮಕ್ಕಳ ವಿಷಯದಲ್ಲಿ ಗಮನ ಅಗತ್ಯ. ಸ್ತ್ರೀಯರಿಗೆ ದೈಹಿಕ ಶ್ರಮ ಅಧಿಕವಾದೀತು. ಸ್ನೇಹಿತರೊಂದಿಗೆ ಆರ್ಥಿಕ ವಿಷಯಕ್ಕೆ ಸಂಬಂಧಿಸಿದಂತೆ ವಿರಸ.

ವೃಶ್ಚಿಕ: ಸಗಟು ವ್ಯಾಪಾರದಲ್ಲಿ ತೊಡಗಿರುವವರಿಗೆ ಧನಲಾಭ. ಬಂಧುಗಳ ಸಹಕಾರದಿಂದ ಸಹೋದರರಿಂದ ಎದುರಾಗಬಹುದಾದ ವಿರೋಧಗಳು ಶಮನಗೊಳ್ಳಲಿವೆ.

ಧನು: ಗೃಹ ನಿರ್ಮಾಣ ಅಥವಾ ನವೀಕರಣ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಿದ್ದೀರಿ. ಗಣ್ಯ ವ್ಯಕ್ತಿಗಳ ಸಹಕಾರದಿಂದ ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಉತ್ಸಾಹ ದೊರಕಲಿದೆ. ಸರ್ಕಾರಿ ಉದ್ಯೋಗದಲ್ಲಿರುವವರಿಗೆ ಬಡ್ತಿ.

ಮಕರ: ವ್ಯವಸಾಯದಲ್ಲಿನ ಅಭಿವೃದ್ಧಿಯಿಂದ ಆದಾಯದಲ್ಲಿ ಹೆಚ್ಚಳ. ಔಷಧ ವಿತರಕರುಗಳಿಗೆ ಅನುಕೂಲಕರ ವ್ಯವಹಾರ. ಚಿನ್ನ ಬೆಳ್ಳಿ ಆಭರಣ ವ್ಯವಹಾರಸ್ಥರಿಗೆ ವ್ಯವಹಾರದಲ್ಲಿ ಚೇತರಿಕೆ ಉಂಟಾಗಿ ಲಾಭ.

ಕುಂಭ: ವೈದ್ಯಕೀಯ ಕ್ಷೇತ್ರದಲ್ಲಿರುವವರಿಗೆ ಸಂಶೋಧಕರಿಗೆ ಔಷಧ ವಿತರಕರಿಗೆ ವೃತ್ತಿಯಲ್ಲಿ ಹೆಚ್ಚಿನ ಬದಲಾವಣೆಯನ್ನು ನಿರೀಕ್ಷಿಸಬಹುದು. ಲೇವಾದೇವಿ ವ್ಯವಹಾರ ನಡೆಸುವವರಿಗೆ ಹೆಚ್ಚಿನ ಲಾಭ ದೊರಕಲಿದೆ.

ಮೀನ: ರಾಜಕೀಯ ಕ್ಷೇತ್ರದಲ್ಲಿ ವ್ಯವಹರಿಸುವವರಿಗೆ ಉತ್ತಮ ಸ್ಥಾನ ಲಭ್ಯವಾಗಲಿದೆ. ಆಸ್ತಿ ಖರೀದಿಯ ಸಾಧ್ಯತೆ ಕಂಡುಬರುವುದು. ಕೋರ್ಟು ಕಚೇರಿ ವ್ಯವಹಾರಗಳಲ್ಲಿ ನಿರೀಕ್ಷಿತ ಯಶ. ಉದ್ಯೋಗದಲ್ಲಿ ಪ್ರಗತಿ.

ನಿಮ್ಮ ಜನ್ಮದಿನ 23-ಸೆಪ್ಟೆಂಬರ್: ಇಂದು ಅತ್ಯಂತ ಶುಭದಾಯಕವಾಗಿದ್ದು, ಸಾಮಾನ್ಯ ವ್ಯಕ್ತಿತ್ವ ಕಂಡುಬಂದರೂ ಪ್ರತಿಭೆಗೆ ಕೊರತೆ ಇರದು. ನಿಮ್ಮ ವಿಶೇಷ ಪ್ರತಿಭೆಯು ಬೆಳಕಿಗೆ ಬರಲಿದೆ. ಸಹವರ್ತಿಗಳೊಂದಿಗಿನ ಬಾಂಧವ್ಯ ಹೆಚ್ಚುವುದರೊಂದಿಗೆ ಕಾರ್ಯಾನುಕೂಲವಾಗಲಿದೆ. ಉದ್ಯೋಗದಲ್ಲಿ ಪ್ರಗತಿಯನ್ನು ಕಾಣಬಹುದು.

ಬೆರಗಿನ ಬೆಳಕು
ಗುರುರಾಜ ಕರಜಗಿ

ಬೋಧಿಸತ್ವನ ಪಟ್ಟಾಭಿಷೇಕ

ನಾಗರಿಕರ ಮಾತನ್ನು ಕೇಳಿದ ವೆಸ್ಸಂತರ, ‘ನೀವೇ ಜನಪದದವರು ಮತ್ತು ನಿಗಮದವರು ಧರ್ಮಾನುಸಾರ ರಾಜ್ಯಭಾರ ಮಾಡುತ್ತಿದ್ದ ನನ್ನನ್ನು ದೇಶದಿಂದ ಹೊರಗೆ ಹಾಕುವಂತೆ ಮಹಾರಾಜರ ಮೇಲೆ ಒತ್ತಡ ತಂದಿರಿ. ನಾನು ದೇಶಭ್ರಷ್ಟನಾಗುವಂತೆ ಮಾಡಿದಿರಿ. ಮತ್ತೆ ನನ್ನನ್ನು ಯಾಕೆ ಕರೆಯುತ್ತೀರಿ?’ ಎಂದು ಕೇಳಿದ. ನಾಗರಿಕರು ಉತ್ತರ ನೀಡುವ ಮೊದಲೇ ಮಹಾರಾಜ ಸಂಜಯ ಕಣ್ಣೀರು ಸುರಿಸುತ್ತ, ‘ಮಗೂ ವೆಸ್ಸಂತರ, ಅದು ನಾನು ಮಾಡಿದ ದುಷ್ಕೃತ್ಯ. ಅವರು ಹೇಳಿದ್ದನ್ನು ನಂಬಿ, ಬಂಗಾರದಂಥ ಮಗನನ್ನು ದೇಶದಿಂದ ಹೊರಗೆ ಹಾಕಿ ಭ್ರೂಣಹತ್ಯೆಗೆ ಸಮನಾದ ಪಾಪವನ್ನು ಮಾಡಿದೆ. ಸಿವಿಗಳ ಮಾತು ಕೇಳಿ ನಿರ್ದೋಷಿಯನ್ನು ದೋಷಿಯೆಂದು ತೀರ್ಮಾನಿಸಿ ದೇಶದಿಂದ ಹೊರಗೆ ಕಳುಹಿಸಿದೆ’, ಎಂದ. ಆಗ ಜಾಲಿಕುಮಾರ, ಹೇಗಾದರೂ ಮಾಡಿ, ತನ್ನ ಪ್ರಾಣಕೊಟ್ಟಾದರೂ ಸರಿಯೆ, ತಂದೆಯ, ತಾಯಿಯ, ತಂಗಿಯ ದುಃಖವನ್ನು ದೂರಮಾಡಲೇಬೇಕೆಂದು ತೀರ್ಮಾನಿಸಿ, ಮಹಾರಾಜ ಸಂಜಯನ ಕೈ ಹಿಡಿದು, ಕಿವಿಯಲ್ಲಿ ಏನೋ ಹೇಳಿದ. ಆಗ ಮುಖದ ಮೇಲೆ ಮುಗುಳ್ನಗೆಯನ್ನು ತಂದುಕೊಂಡ ರಾಜ, ‘ಮಗೂ ವೆಸ್ಸಂತರ, ನನಗೆ ವಯಸ್ಸಾಗಿದೆ. ಇದು ನಾನು ಮೊಮ್ಮಕ್ಕಳೊಂದಿಗೆ ಆಟವಾಡುತ್ತ ಕಳೆಯುವ ಕಾಲ. ರಾಜ್ಯಭಾರ ನನಗೆ ಇನ್ನು ನೀಗದು. ನೀನು ಬಂದು ರಾಜ್ಯಗ್ರಹಣ ಮಾಡಬೇಕು’ ಎಂದು ಕೇಳಿಕೊಂಡ. ಅವರ ಮಾತಿಗೆ ‘ಆಗಲಿ’ ಎಂದು ಬೋಧಿಸತ್ವ ಒಪ್ಪಿಕೊಂಡ. ಅವನೊಂದಿಗೇ ಹುಟ್ಟಿದ ಮತ್ತು ಈಗ ಅಮಾತ್ಯರಾದ ಅರವತ್ತು ಸಾವಿರ ಜನರು, ‘ಮಹಾರಾಜಾ, ಈಗ ಸ್ನಾನದ ಸಮಯವಾಗಿದೆ. ಸ್ನಾನ ಮಾಡಿ ಸನ್ಯಾಸ ತ್ಯಾಗ ಮಾಡಿ’ ಎಂದು ಪ್ರಾರ್ಥಿಸಿದರು.

‘ಸ್ವಲ್ಪ ಸಮಯ ತಡೆದುಕೊಳ್ಳಿ’ ಎಂದು ಅವರಿಗೆ ಹೇಳಿ ವೆಸ್ಸಂತರ, ಪರ್ಣಶಾಲೆಯನ್ನು ಪ್ರವೇಶಮಾಡಿದ. ತನ್ನ ಋಷಿ ವೇಷವನ್ನು ಕಳಚಿ, ಅದನ್ನು ಜೋಪಾನವಾಗಿ ಮಡಿಚಿಟ್ಟ. ಪರ್ಣಕುಟಿಯಿಂದ ಹೊರಗೆ ಬಂದು ಅದಕ್ಕೆ ಮೂರುಬಾರಿ ಪ್ರದಕ್ಷಿಣೆ ಹಾಕಿದ. ‘ಇಲ್ಲಿದ್ದು ನಾನು ಒಂಭತ್ತೂವರೆ ತಿಂಗಳುಗಳ ಕಾಲ ಶ್ರಮಣಧರ್ಮಪಾಲನೆ ಮಾಡಿದ್ದೇನೆ. ಪಾರಮಿತವನ್ನು ಪೂರ್ಣಗೊಳಿಸುವ ಬಯಕೆಯಿಂದ ಮಕ್ಕಳನ್ನು ಮತ್ತು ಹೆಂಡತಿಯನ್ನು ದಾನಮಾಡಿ ಭೂಮಿಯನ್ನು ನಡುಗಿಸಿದ್ದೇನೆ. ನಿನಗೆ ನನ್ನ ಕೃತಜ್ಞತೆಯ ಪ್ರಣಾಮಗಳು’ ಎಂದು ಹೇಳಿ ದೀರ್ಘದಂಡ ಪ್ರಣಾಮ ಮಾಡಿ ತನ್ನ ಗೌರವವನ್ನು ತೋರಿಸಿದ. ಅವನು ಹೊರಗೆ ಬಂದ ಮೇಲೆ ನಾಯಿಂದರು ಬಂದು ಕ್ಷೌರ ಕಾರ್ಯಗಳನ್ನು ಮುಗಿಸಿದರು. ನಂತರ ಸುಗಂಧ ತೈಲಗಳಿಂದ ಮೈಯನ್ನು ಉಜ್ಜಿಸಿಕೊಂಡು ಸ್ನಾನ ಮಾಡಿ, ದೇವರಾಜನಂತೆ ಸರ್ವಾಲಂಕಾರ ಭೂಷಿತನಾಗಿ ಹೊರಬಂದ ವೆಸ್ಸಂತರ ಬೋಧಿಸತ್ವ. ಅವನನ್ನು ಅಲ್ಲಿಯೇ ಪುಷ್ಕರಿಣಿ ತೀರದಲ್ಲಿ ವಿಶೇಷ ಆಸನದ ಮೇಲೆ ಕೂಡ್ರಿಸಿ ಪುರೋಹಿತರು ರಾಜ್ಯಾಭಿಷೇಕವನ್ನು ಮಾಡಿದರು. ಆಗ ದೇವತೆಗಳು ಅವನಿಗೆ ಮಹೈಶ್ವರ್ಯವನ್ನು ದಯಪಾಲಿಸಿದರು. ಎಲ್ಲೆಲ್ಲೂ ಸಂತೋಷದಿಂದ ಭೂಮಿ ಕೂಡ ಕಂಪಿಸಿತು. ವಾರಂಗನೆಯರು ಮಂಗಲಘೋಷ ಮಾಡಿದರು. ಎಲ್ಲ ವಾದ್ಯಗಳು ಮೊಳಗಿದವು. ಮಹಾಸಮುದ್ರದ ಗರ್ಭದಲ್ಲಿ ಗುಡುಗಿದಂತೆ ಶಬ್ದವಾಯಿತು. ❖

ಪದಬಂಧ 4727
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸರಳ ಸ್ವಭಾವದ ಹೆಂಗಸು (2)
2.ಬಸವಣ್ಣನವರು ಕೈಲಾಸವೆಂದಿರುವ ಕೆಲಸವಿದು (3)
4.ಕಣದಲ್ಲಿರುವ ಹತೋಟಿ (4)
6.ವೀರಶೈವರ ಶ್ಮಶಾನ (4)
8.ವೀರಾರಾಜಮಾನವಾಗಿರುವ ದೊರೆ! (2)
9.ಈತ ತಿಳಿದವನು (2)
10.ಮಂಜ ನಡುವಿದ್ದರೆ ಇದೇ ಸೂಕ್ತ! (4)
12.ಮರದೊಳಗೆ ಕಾಣುತ್ತಿರುವ ದುಂಬಿ (4)
14.ಮನಸ್ಸಿನ ಅಸ್ವಾಸ್ಥತೆ (3)
15.ಖನಿಜಗಳ ನೆಲೆ (2)

ಮೇಲಿಂದ ಕೆಳಕ್ಕೆ
1.ದುಮುಗುಟ್ಟುತ್ತಿರುವ ಅಜ್ಜ! (3)
2.ವಿನಾಕಾರಣದಲ್ಲೇ ಉದ್ದೇಶವಿದೆಯಲ್ಲಾ? (3)
3.ಕರು ಖರೀದಿಸಲು ಹಾಕಿದ ಷರತ್ತು! (3)
5. ವಂದರಿಯಿಲ್ಲಿ ತಿರುವು ಮುರುವಾಗಿದೆ (3)
7.ಬಂಗಾರವನ್ನು ಹೀಗೂ ಹೇಳುವರು (3)
8.ರಾಯರಿಂದ ಬಂದಿರುವ ನಿರೂಪ (3)
9.ನೆನಪು ಹೀಗೆ ಬಂದಿದೆ (3)
11.ಸತಿ ಹತ್ತಿರದಲ್ಲೇ ಉಪಪತ್ನಿ ಇದ್ದಾಳೆ! (3)
12.ಭವ್ಯವಾದ ಸೌಧ (3)
13.ಮಣಿ ಧರಿಸಿದ ಚಲುವೆ (3)



4726ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1.ಚಕ್ಷುಃಪ್ರೀತಿ 3.ಲವಾಜಮೆ
5.ವಿಧುರ 6.ತಕಾವಿ 7.ದನುಜ
9.ದಮನ 11.ಗಯ್ಯಾಳಿ
12.ಅಪಾತ್ರ 13.ಅನಿರುದ್ಧ
15.ಬಹಿರಂಗ

ಮೇಲಿಂದ ಕೆಳಕ್ಕೆ
1.ಚಮ್ಮಾರ 2.ತಿಲ
4.ವಾಕ್ಕೋವಿದ 5.ವಿಷಾದ
8.ಜಗದ್ಗುರು 10.ನಕ್ಷತ್ರ
12.ಅನಂಗ 14.ಧ್ವಬ

ಸುಡೊಕು 5113

		6		4		3		
	3		5					
	9	2		3		7		1
2	1		9		3	6		
				1			5	3
3	8			5			7	
9		8						7
				9			3	
		3			1	2		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5112 ಸುಡೊಕು

2	4	8	1	6	3	5	9	7
7	5	6	4	9	8	2	3	1
1	3	9	2	5	7	4	8	6
6	1	5	9	7	4	8	2	3
3	9	7	8	1	2	6	5	4
8	2	4	6	3	5	7	1	9
5	6	3	7	2	1	9	4	8
9	8	2	3	4	6	1	7	5
4	7	1	5	8	9	3	6	2

ಮುಂಬೈ ಧಾರಣೆ

ಶೇಂಗಾ

22-9-2021

ಜಾವಾ 70/80(ಹೊಸ)	10950-11000
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	10750-10850
ದಪ್ಪ ಗುಜರಾತ್(ಹೊಸ)	9550-9650

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1580 (1595)
ಒಂದು ವಾರದ ಡೆಲಿವರಿ	1575 (1590)
ಸೋಯಾ ಕಚ್ಚಾ	1280 (1285)
ಪಾಮ್ ವಾರದ ಡೆಲಿವರಿ	1203 (1195)
ಸೂರ್ಯಕಾಂತಿ ಎಣ್ಣೆ ಕಚ್ಚಾ	1300 (1310)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
46,650 (46,550)
ಬೆಳ್ಳಿ ಕೆ.ಜಿ 60,800 (60,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	395
ಅಡಿಕೆ	
ಬಂಟ್ವಾಳ	
ಕೋಕ	10000-25000
ಹೊಸತು	25000-50000
ಹಳತು	42500-51500
ಕುಮಟ	
ಚಿಪ್ಪು	37869-42809
ಕೋಕ	22869-38019
ಫ್ಯಾಕ್ಟರಿ	16019-22811
ಹೊಸಚಾಲಿ	46119-49510
ಹಳೆಚಾಲಿ	47309-47399
ಪುತ್ತೂರು	
ಕೋಕ	10500-26000
ಹೊಸತು	35500-50000
ಸಿದ್ದಾಪುರ	
ಬಿಳಿಗೋಟು	37699-42799
ಚಾಲಿ	46208-49009
ಕೋಕ	32009-39600
ಕೆಂಪುಗೋಟು	30099-39099
ರಾಶಿ	49949-51399
ತಟ್ಟಿಬೆಟ್ಟೆ	38379-49099
ಶಿರಸಿ	
ಬೆಟ್ಟೆ	29629-50589
ಬಿಳಿಗೋಟು	24011-43899
ಚಾಲಿ	43621-49699
ರಾಶಿ	47669-52189
ರಾಮನಗರ ರೇಷ್ಮೆ	
ಮಿಶ್ರ ತಳಿ	291-478
ದ್ವಿತಳಿ	314-555

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	13000	12950	183.35ಸೆಂಟ್ಸ್
ಎಸಿ	---	4800	5125	
ಆರ್‌ಪಿ	---	6100	6300	ಲಂಡನ್
ಆರ್‌ಸಿ	---	3500	3675	2160 ಡಾಲರ್ಸ್

ಷೇರುಪೇಟೆ ವಹಿವಾಟು

78



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,562
ಇಂದಿನ ಅಂತ್ಯ	17,547
	15
ದಿನದ ಕನಿಷ್ಠ	17,524

ವಿನಿಮಯ ದರ

$ ಡಾಲರ್	73.87
£ ಪೌಂಡ್	100.73
€ ಯುರೊ	86.65
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹450
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹450

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1570 (1590)
ಸೋಯಾ (ರಿಫೈನ್ಡ್)	₹1320 (1316)
ಸೂರ್ಯಕಾಂತಿ(ರಿಫೈನ್ಡ್)	₹1360(1370)
ಪಾಮೋಲಿನ್	₹1205 (1197)

ಬೆಂಗಳೂರು ಈರುಳ್ಳಿ ಧಾರಣೆ

ಕ್ವಿಂಟಲ್‌ಗೆ

ದೊಡ್ಡ	₹1200-1500
ಮಧ್ಯಮ	₹800-1200
ಸಣ್ಣ	₹200-800

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಶೇ 20ರಷ್ಟು ವಿದೇಶಿ ಬಂಡವಾಳ ಹೂಡಿಕೆಗೆ ಅವಕಾಶ ಸಾಧ್ಯತೆ

ಎಲ್‌ಐಸಿಯಲ್ಲಿ ಚೀನಾ ಹೂಡಿಕೆ ತಡೆಯಲು ಕೇಂದ್ರ ಯತ್ನ?

ನವದೆಹಲಿ (ರಾಯಿಟರ್ಸ್): ಚೀನಾದ ಹೂಡಿಕೆದಾರರು ಭಾರತೀಯ ಜೀವ ವಿಮಾ ನಿಗಮದಲ್ಲಿ (ಎಲ್‌ಐಸಿ) ಹೂಡಿಕೆ ಮಾಡುವುದನ್ನು ಕೇಂದ್ರ ಸರ್ಕಾರವು ತಡೆಯುವ ಸಾಧ್ಯತೆ ಇದೆ. ಎಲ್‌ಐಸಿ ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಮೂಲಕ ತನ್ನ ಷೇರುಗಳನ್ನು ಶೀಘ್ರದಲ್ಲಿಯೇ ಖರೀದಿಗೆ ಮುಕ್ತವಾಗಿಸಲಿದೆ.

ಪ್ರಾತಿನಿಧಿಕ ಚಿತ್ರ

ಮುಖ್ಯಾಂಶಗಳು

- ಶೀಘ್ರವೇ ನಡೆಯಲಿದೆ ಎಲ್‌ಐಸಿ ಐಪಿಒ
- 'ಎಲ್‌ಐಸಿಯಲ್ಲಿ ಚೀನೀ ಹೂಡಿಕೆ ಅಪಾಯಕಾರಿ ಆಗಬಹುದು'

ಕೇಂದ್ರ ಸರ್ಕಾರದ ಒಡೆತನದಲ್ಲಿ ಇರುವ ಎಲ್‌ಐಸಿಯು ದೇಶದ ಮಹತ್ವದ ಆಸ್ತಿಗಳಲ್ಲಿ ಒಂದು ಎಂದು ಪರಿಗಣಿತವಾಗಿದೆ. ದೇಶದ ಜೀವ ವಿಮೆ ಮಾರುಕಟ್ಟೆಯಲ್ಲಿ ಶೇಕಡ 60ಕ್ಕಿಂತ ಹೆಚ್ಚಿನ ಪಾಲನ್ನು ಎಲ್‌ಐಸಿ ಹೊಂದಿದೆ. ಎಲ್‌ಐಸಿ ಹೊಂದಿರುವ ಆಸ್ತಿಯ ಮೌಲ್ಯವು ₹ 36 ಲಕ್ಷ ಕೋಟಿ ಎಂಬ ಅಂದಾಜು ಇದೆ.

ಎಲ್‌ಐಸಿ ಐಪಿಒ ದೇಶದಲ್ಲಿ ಇದು ವರೆಗಿನ ಐಪಿಒಗಳ ಪೈಕಿ ಅತಿದೊಡ್ಡದು ಎಂಬ ನಿರೀಕ್ಷೆ ಇದೆ. ಎಲ್‌ಐಸಿಯ ಷೇರು ಖರೀದಿಸಲು ವಿದೇಶಿ ಹೂಡಿಕೆದಾರರಿಗೆ ಅವಕಾಶ ಕಲ್ಪಿಸುವ ಉದ್ದೇಶ ಕೇಂದ್ರಕ್ಕೆ ಇದೆ. ಆದರೆ, ಚೀನಾದ ಹೂಡಿಕೆದಾರರ ವಿಚಾರದಲ್ಲಿ ಕೇಂದ್ರವು ಎಚ್ಚರಿಕೆಯ ಹೆಜ್ಜೆ ಇರಿಸುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗಾಲ್ವನ್ ಕಣಿವೆಯಲ್ಲಿ ಭಾರತ ಮತ್ತು ಚೀನಾದ ಸೈನಿಕರ ನಡುವೆ ಘರ್ಷಣೆ ನಡೆದ ಬಳಿಕ, ಕೇಂದ್ರ ಸರ್ಕಾರವು ದೇಶದ ಸೂಕ್ಷ್ಮ ವಲಯದ ಕಂಪನಿಗಳಲ್ಲಿ ಚೀನಾದ ಹೂಡಿಕೆಗೆ ಮಿತಿ ಹೇರಲು ಯತ್ನಿಸಿದೆ. ಚೀನಾ ಮೂಲದ ಹಲವು ಆ್ಯಪ್‌ಗಳನ್ನು ನಿಷೇಧಿಸಿದೆ, ಚೀನಾದಿಂದ ಆಮದು ಆಗುವ ಉತ್ಪನ್ನಗಳನ್ನು ಹೆಚ್ಚಿನ ಪರಿಶೀಲನೆಗೆ ಒಳಪಡಿಸುತ್ತಿದೆ.

'ಗಡಿಯಲ್ಲಿ ಸಂಘರ್ಷ ನಡೆದ ನಂತರ ಚೀನಾದ ಜೊತೆಗಿನ ವ್ಯವಹಾರಗಳು ಎಂದಿನಂತೆ ಇರಲು ಸಾಧ್ಯವಿಲ್ಲ. ನಂಬಿಕೆಯ ಕೊರತೆಯು ಗಣನೀಯವಾಗಿ ಹೆಚ್ಚಾಗಿದೆ' ಎಂದು ಕೇಂದ್ರ ಸರ್ಕಾರದ ಅಧಿಕಾರಿಯೊಬ್ಬರು ಹೇಳಿದರು. ಎಲ್‌ಐಸಿಯಂತಹ ಕಂಪನಿಗಳಲ್ಲಿ ಚೀನಾದವರು ಹೂಡಿಕೆ ಮಾಡುವುದು ಅಪಾಯ ತಂದೊಡ್ಡಬಹುದು ಎಂದೂ ವಿವರಿಸಿದರು.

ಚೀನಾದ ಹೂಡಿಕೆದಾರರು ಎಲ್‌ಐಸಿ ಷೇರುಗಳನ್ನು ಖರೀದಿಸದಂತೆ ಮಾಡುವುದು ಹೇಗೆ ಎಂಬ ಚರ್ಚೆಗಳು ಮುಂದುವರಿದಿವೆ, ಅಂತಿಮ ತೀರ್ಮಾನ ಆಗಿಲ್ಲ ಎಂದು ಮೂಲಗಳು ವಿವರಿಸಿವೆ. ಈ ವಿಚಾರವಾಗಿ ಕೇಂದ್ರ ಹಣಕಾಸು ಸಚಿವಾಲಯ ಹಾಗೂ ಎಲ್‌ಐಸಿ ಪ್ರತಿಕ್ರಿಯೆ ನೀಡಿಲ್ಲ. ಚೀನಾದ ವಿದೇಶಾಂಗ ಸಚಿವಾಲಯ ಹಾಗೂ ವಾಣಿಜ್ಯ ಸಚಿವಾಲಯದಿಂದ ಕೂಡ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ಎಲ್‌ಐಸಿಯಲ್ಲಿ ತಾನು ಹೊಂದಿರುವ ಷೇರುಗಳ ಪೈಕಿ ಶೇಕಡ 5 ಅಥವಾ ಶೇ 10ರಷ್ಟನ್ನು ಮಾರಾಟ ಮಾಡಿ, ₹ 90 ಸಾವಿರ ಕೋಟಿ ಸಂಗ್ರಹಿಸುವ ಗುರಿಯನ್ನು ಕೇಂದ್ರ ಹೊಂದಿದೆ. ಮಾರ್ಚ್‌ಗೂ ಮೊದಲೇ ಎಲ್‌ಐಸಿ ಐಪಿಒ ನಡೆಯುವ ಸಾಧ್ಯತೆ ಇದೆ.

ಈಗಿರುವ ನಿಯಮಗಳ ಅನ್ವಯ ಎಲ್‌ಐಸಿಯಲ್ಲಿ ವಿದೇಶಿ ಹೂಡಿಕೆದಾರರಿಗೆ ಹಣ ಹೂಡಿಕೆ ಮಾಡಲು ಅವಕಾಶ ಇಲ್ಲ. ಆದರೆ, ನಿಯಮಗಳಲ್ಲಿ ಬದಲಾವಣೆ ತಂದು ಎಲ್‌ಐಸಿಯು ಮಾರಾಟ ಮಾಡುವ ಷೇರುಗಳ ಪೈಕಿ ಶೇ 20ರಷ್ಟನ್ನು ಖರೀದಿಸಲು ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಗೆ ಅವಕಾಶ ಕಲ್ಪಿಸುವ ಉದ್ದೇಶ ಕೇಂದ್ರಕ್ಕೆ ಇದೆ.

ವಿದೇಶಿ ನೇರ ಬಂಡವಾಳ ಹೂಡಿಕೆಗೆ ಸಂಬಂಧಿಸಿದ ನಿಯಮಗಳಲ್ಲಿ ತಿದ್ದುಪಡಿ ತರುವ ಮೂಲಕ ಚೀನಾದ ಹೂಡಿಕೆದಾರರು ಎಲ್‌ಐಸಿ ಷೇರು ಖರೀದಿಸದಂತೆ ಮಾಡುವ ಅವಕಾಶ ಇದೆ ಎಂದು ಅಧಿಕಾರಿಯೊಬ್ಬರು ಹೇಳಿದರು. ಚೀನಾದಿಂದ ಹೂಡಿಕೆಯು ನೇರವಾಗಿ ಬಾರದೆ ಇರಬಹುದು, ಅದು ಪರೋಕ್ಷವಾಗಿಯೂ ಬರಬಹುದು ಎಂಬ ಅರಿವು ಸರ್ಕಾರಕ್ಕೆ ಇದೆ ಎಂದು ಅವರು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಬಂಡವಾಳ ಸಂಗ್ರಹಕ್ಕೆ ವಿಐಎಲ್ ಸಿದ್ಧತೆ

ನವದೆಹಲಿ (ಪಿಟಿಐ): ವೊಡಾಫೋನ್ ಐಡಿಯಾ ಕಂಪನಿಯು ಬಂಡವಾಳ ಸಂಗ್ರಹಿಸಲು ಹೊಸದಾಗಿ ಆಡಳಿತ ಮಂಡಳಿಯ ಒಪ್ಪಿಗೆ ಕೇಳಲಿದ್ದು, ಪ್ರವರ್ತಕರು ಬಂಡವಾಳ ಸಂಗ್ರಹದಲ್ಲಿ ಭಾಗವಹಿಸುವ ಅವಕಾಶ ಪಡೆಯಲಿದ್ದಾರೆ ಎಂದು ಕಂಪನಿಯ ಸಿಇಒ ರವೀಂದರ್ ಟಕ್ಕರ್ ಹೇಳಿದ್ದಾರೆ.

ದೂರಸಂಪರ್ಕ ವಲಯದ ಸುಧಾರಣೆ ಕುರಿತು ಕೇಂದ್ರ ಸರ್ಕಾರವು ವಿವರವಾದ ಮಾರ್ಗಸೂಚಿ ನೀಡಿದ ಬಳಿಕ ಕಂಪನಿಯು ಈ ಕ್ರಮಕ್ಕೆ ಮುಂದಾಗಲಿದೆ.

ಈ ಮೊದಲು ₹ 25 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ಕಂಪನಿಯು ಆಡಳಿತ ಮಂಡಳಿಯ ಒಪ್ಪಿಗೆ ಪಡೆದಿತ್ತು. ಆದರೆ, ಯಾವುದೇ ಹೂಡಿಕೆದಾರರನ್ನು ಅಂತಿಮಗೊಳಿಸಲು ಸಾಧ್ಯವಾಗಿಲ್ಲ.

ಔಡಿ: ವಿದ್ಯುತ್ ಚಾಲಿತ ಸೂಪರ್ ಕಾರು ಬಿಡುಗಡೆ

ಬೆಂಗಳೂರು: ಐಷಾರಾಮಿ ಕಾರು ತಯಾರಿಸುವ ಜರ್ಮನಿಯ ಔಡಿ ಕಂಪನಿಯು ನಾಲ್ಕು ಬಾಗಿಲುಗಳ, ಸಂಪೂರ್ಣ ವಿದ್ಯುತ್ ಚಾಲಿತ ಸೂಪರ್‌ಕಾರ್ ಇ-ಟ್ರಾನ್ ಜಿಟಿ ಮತ್ತು ಆರ್ ಇ-ಟ್ರಾನ್ ಜಿಟಿ ಬಿಡುಗಡೆ ಮಾಡಿದೆ. ಇವುಗಳ ಎಕ್ಸ್ ಷೋರೂಂ ಬೆಲೆ ಕ್ರಮವಾಗಿ ₹ 1.79 ಕೋಟಿ ಮತ್ತು ₹ 2.04 ಕೋಟಿ ಇದೆ.

ಇ-ಟ್ರಾನ್ ಜಿಟಿ ಕಾರನ್ನು ಒಂದು ಬಾರಿ ಚಾರ್ಜ್ ಮಾಡಿದರೆ 401-481 ಕಿ.ಮೀ ದೂರ ಕ್ರಮಿಸಬಹುದು, ಆರ್‌ಎಸ್ ಇ-ಟ್ರಾನ್ ಜಿಟಿ 388-500 ಕಿ.ಮೀ ಸಾಗಬಲ್ಲದು. ಇವುಗಳ ಬ್ಯಾಟರಿ ಶೇಕಡ 5ರಷ್ಟು ಇದ್ದಾಗ ಚಾರ್ಜ್‌ಗೆ ಹಾಕಿದರೆ 22 ನಿಮಿಷಗಳಲ್ಲಿ ಶೇ 80ರಷ್ಟು ಚಾರ್ಜ್ ಆಗುತ್ತದೆ ಎಂದು ಕಂಪನಿ ತಿಳಿಸಿದೆ.

'ಭಾರತದಲ್ಲಿ ಮೊದಲ ವಿದ್ಯುತ್ ಚಾಲಿತ ಸೂಪರ್‌ಕಾರುಗಳನ್ನು ಬಿಡುಗಡೆ ಮಾಡುತ್ತಿರುವ ನಮಗೆ ಈ ದಿನವು ಒಂದು ಮೈಲಿಗಲ್ಲು' ಎಂದು ಔಡಿ ಇಂಡಿಯಾದ ಮುಖ್ಯಸ್ಥ ಬಲ್ಬೀರ್ ಸಿಂಗ್ ಧಿಲ್ಲೋನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಗ್ರರೊಂದಿಗೆ ನಂಟು: 6 ಸರ್ಕಾರಿ ನೌಕರರ ವಜಾ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದಲ್ಲಿ ಉಗ್ರರ ಜೊತೆ ನಂಟು ಹೊಂದಿರುವ ಆರೋಪದಲ್ಲಿ ಇಬ್ಬರು ಪೊಲೀಸ್ ಕಾನ್‌ಸ್ಟೆಬಲ್‌ಗಳು ಸೇರಿದಂತೆ ಆರು ಮಂದಿ ಸರ್ಕಾರಿ ನೌಕರರನ್ನು ಬುಧವಾರ ಸೇವೆಯಿಂದ ವಜಾಗೊಳಿಸಲಾಗಿದೆ.

ಈ ಮೂಲಕ ಕಳೆದ 6 ತಿಂಗಳಲ್ಲಿ ಸೇವೆಯಿಂದ ವಜಾಗೊಳಿಸಿರುವ ಒಟ್ಟು ನೌಕರರ ಸಂಖ್ಯೆ 25ಕ್ಕೇರಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉದ್ಯಮಿಗಳಿಗೆ ಏಕಗವಾಕ್ಷಿ ವ್ಯವಸ್ಥೆ: ಗೋಯಲ್ ಚಾಲನೆ

ನವದೆಹಲಿ (ಪಿಟಿಐ): ವಾಣಿಜ್ಯೋದ್ಯಮಿಗಳಿಗೆ ನೆರವಾಗುವ ಉದ್ದೇಶದ ರಾಷ್ಟ್ರೀಯ ಏಕಗವಾಕ್ಷಿ ವ್ಯವಸ್ಥೆಗೆ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆ ಸಚಿವ ಪೀಯೂಷ್ ಗೋಯಲ್ ಬುಧವಾರ ಪ್ರಾಯೋಗಿಕ ಚಾಲನೆ ನೀಡಿದರು. ಅನುಮೋದನೆ ಹಾಗೂ ನೋಂದಣಿಗಳಿಗೆ ಸರ್ಕಾರಿ ಕಚೇರಿಗಳಿಗೆ ಅಲೆಯುವ ಸಮಸ್ಯೆಯು ಈ ಪೋರ್ಟಲ್‌ನಿಂದಾಗಿ ನಿವಾರಣೆ ಆಗುತ್ತದೆ ಎಂದು ಹೇಳಿದರು.

ಕೇಂದ್ರದ 18 ಇಲಾಖೆಗಳು ಹಾಗೂ ರಾಜ್ಯಗಳ 9 ಇಲಾಖೆಗಳ ಅನುಮೋದನೆಗಳನ್ನು ಈ ಪೋರ್ಟಲ್ ಮೂಲಕ ಪಡೆಯಬಹುದು. ಕೇಂದ್ರದ 14 ಇಲಾಖೆಗಳು ಹಾಗೂ ರಾಜ್ಯಗಳ 5 ಇಲಾಖೆಗಳನ್ನು ಪೋರ್ಟಲ್‌ಗೆ ಡಿಸೆಂಬರ್ ಕೊನೆಯೊಳಗೆ ಸೇರ್ಪಡೆ ಮಾಡಲಾಗುವುದು ಎಂದು ತಿಳಿಸಿದರು. 'ಇದು ಅಧಿಕಾರಶಾಹಿಯಿಂದ ಸ್ವಾತಂತ್ರ್ಯ. ವಾಣಿಜ್ಯ ವಹಿವಾಟನ್ನು ಸುಲಲಿತಗೊಳಿಸುವ ಪ್ರಕ್ರಿಯೆಯಲ್ಲಿ ದೊಡ್ಡ ಹೆಜ್ಜೆ ಇದು' ಎಂದರು.

ಈ ಪೋರ್ಟಲ್‌ನಿಂದಾಗಿ ವ್ಯವಸ್ಥೆಯಲ್ಲಿ ಪಾರದರ್ಶಕತೆ, ಉತ್ತರದಾಯಿತ್ವ ಹಾಗೂ ಸ್ಪಂದನಶೀಲತೆ ಬರಲಿದೆ. ಅಗತ್ಯ ಮಾಹಿತಿಗಳೆಲ್ಲ ಒಂದೇ ಕಡೆ ಸಿಗುವಂತೆ ಆಗಲಿದೆ ಎಂದು ತಿಳಿಸಿದರು. ಸದ್ಯಕ್ಕೆ ಈ ಪೋರ್ಟಲ್‌ನ ಬೀಟಾ ಆವೃತ್ತಿಯು ಸಾರ್ವಜನಿಕರಿಗೆ ಲಭ್ಯವಿದೆ.

ಜೀ, ಸೋನಿ ವಿಲೀನ

ನವದೆಹಲಿ (ಪಿಟಿಐ): ಜೀ ಎಂಟರ್‌ಟೈನ್‌ಮೆಂಟ್ ಮತ್ತು ಸೋನಿ ಪಿಕ್ಚರ್ಸ್ ಪರಸ್ಪರ ವಿಲೀನಗೊಳ್ಳಲಿವೆ. ವಿಲೀನಕ್ಕೆ ತಾತ್ವಿಕ ಒಪ್ಪಿಗೆ ದೊರೆತಿದೆ ಎಂದು ಎರಡೂ ಕಂಪನಿಗಳು ತಿಳಿಸಿವೆ.

ಜೀ ಎಂಟರ್‌ಟೇನ್‌ಮೆಂಟ್ ಎಂಟರ್‌ಪ್ರೈಸಸ್ ಲಿ. ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಪುನೀತ್ ಗೋಯಂಕಾ ಅವರು ವಿಲೀನದ ನಂತರದ ಸಂಸ್ಥೆಯನ್ನು ಮುನ್ನಡೆಸಲಿದ್ದಾರೆ.

ಸೋನಿ ಪಿಕ್ಚರ್ಸ್ ನೆಟ್‌ವರ್ಕ್ಸ್ ಇಂಡಿಯಾ (ಎಸ್‌ಪಿಎನ್‌ಐ) ಷೇರುದಾರರು ಎರಡೂ ಕಂಪನಿಗಳ ವಿಲೀನದ ನಂತರದ ಕಂಪನಿಯಲ್ಲಿ ಬಹುಪಾಲು ಷೇರು ಹೊಂದಿರಲಿದ್ದಾರೆ.

ವಿಲೀನದ ಸುದ್ದಿ ಬಹಿರಂಗವಾದ ನಂತರ ಜೀ ಎಂಟರ್‌ಟೈನ್‌ಮೆಂಟ್ ಎಂಟರ್‌ಪ್ರೈಸಸ್ ಲಿ.ನ ಷೇರು ಮೌಲ್ಯ ಶೇಕಡ 25ರಷ್ಟು ಹೆಚ್ಚಳ ಆಗಿದೆ.

ನವೋದ್ಯಮ: ಬೆಂಗಳೂರಿಗೆ 23ನೇ ಸ್ಥಾನ



ಲಂಡನ್ (ಪಿಟಿಐ): ಜಾಗತಿಕವಾಗಿ ಯಶಸ್ಸು ಕಾಣುವ ನವೋದ್ಯಮ ಕಟ್ಟಲು ಪೂರಕವಾದ ವ್ಯವಸ್ಥೆ ಇರುವ ನಗರಗಳ ಪಟ್ಟಿಯಲ್ಲಿ ಬೆಂಗಳೂರು 23ನೆಯ ಸ್ಥಾನ ಪಡೆದಿದೆ. ಅಮೆರಿಕದ ಸಿಲಿಕಾನ್ ವ್ಯಾಲಿ ಮೊದಲ ಸ್ಥಾನದಲ್ಲಿದೆ.

ದೆಹಲಿಯು 36ನೆಯ ಸ್ಥಾನದಲ್ಲಿದೆ ಎಂದು 'ಜಾಗತಿಕ ನವೋದ್ಯಮ ವ್ಯವಸ್ಥೆ ವರದಿ – 2021' ಹೇಳಿದೆ. ಪ್ರವರ್ಧಮಾನಕ್ಕೆ ಬರುತ್ತಿರುವ ವ್ಯವಸ್ಥೆಗಳ ಪಟ್ಟಿಯಲ್ಲಿ ಮುಂಬೈ ಮೊದಲ ಸ್ಥಾನದಲ್ಲಿದೆ. ನವೋದ್ಯಮಗಳು ಜಾಗತಿಕ ಮಟ್ಟದಲ್ಲಿ ಯಶಸ್ಸು ಕಾಣಲು ಅಗತ್ಯವಿರುವ ವ್ಯವಸ್ಥೆಗಳು ಯಾವ ನಗರಗಳಲ್ಲಿ ಇವೆ ಎಂಬುದನ್ನು ವಿಶ್ಲೇಷಿಸಿ ಸ್ಟಾರ್ಟ್‌ಅಪ್ ಜಿನೋಮ್ ಸಂಸ್ಥೆ ಈ ವರದಿ ಸಿದ್ಧಪಡಿಸುತ್ತದೆ.

'ಬಂಡವಾಳ ಸಂಗ್ರಹ, ಮಾಹಿತಿ ಹಾಗೂ ಇತರ ಪ್ರದೇಶಗಳ ಜೊತೆಗಿನ ಸಂಪರ್ಕದ ವಿಚಾರದಲ್ಲಿ ಸುಧಾರಣೆ ಕಂಡಿರುವ ಬೆಂಗಳೂರು 23ನೆಯ ಸ್ಥಾನ ಪಡೆದಿದೆ' ಎಂದು ವರದಿ ಹೇಳಿದೆ.

ಟಿಟಿಡಿಗೆ ನೇಮಕ: ಜಗನ್ ಆದೇಶಕ್ಕೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತಿರುಮಲ ತಿರುಪತಿ ದೇವಸ್ಥಾನ ಮಂಡಳಿಗೆ 52 ವಿಶೇಷ ಆಹ್ವಾನಿತ ಸದಸ್ಯರ ನೇಮಕ ಸೇರಿದಂತೆ ವೈಎಸ್‌ಆರ್‌ಸಿಪಿ ಸರ್ಕಾರದ ಎರಡು ವಿವಾದಾತ್ಮಕ ನೇಮಕಾತಿಯ ಆದೇಶಗಳಿಗೆ ಬುಧವಾರ ಆಂಧ್ರಪ್ರದೇಶ ಹೈಕೋರ್ಟ್ ತಡೆಯಾಜ್ಞೆ ನೀಡಿದೆ.

ಪ್ರಸಿದ್ಧ ವೆಂಕಟೇಶ್ವರ ದೇವಸ್ಥಾನದ ನಿರ್ವಹಣೆಗಾಗಿ ಅಧ್ಯಕ್ಷ, 52 ವಿಶೇಷ ಆಹ್ವಾನಿತರು ಸೇರಿದಂತೆ ಒಟ್ಟು 81 ಸದಸ್ಯರ ನೇಮಕಕ್ಕೆ ಪ್ರತಿಪಕ್ಷಗಳಾದ ಬಿಜೆಪಿ ಮತ್ತು ಟಿಡಿಪಿ ವಿರೋಧ ವ್ಯಕ್ತಪಡಿಸಿವೆ.

'ಆಂಧ್ರಪ್ರದೇಶ ಚಾರಿಟೇಬಲ್ ಮತ್ತು ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ದತ್ತಿ ಕಾಯ್ದೆ 1987ರ ನಿಯಮ ಉಲ್ಲಂಘಿಸಿ, ಜಗನ್‌ಮೋಹನ್ ರೆಡ್ಡಿ ನೇತೃತ್ವದ ಸರ್ಕಾರವು ನೇಮಕಾತಿ ನಡೆಸಿದೆ' ಎಂದು ಆರೋಪಿಸಿ ಬಿಜೆಪಿ, ಟಿಡಿಪಿ ನಾಯಕರು ಸೇರಿದಂತೆ ಹಲವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿದ್ದಾರೆ.

ಜಗನ್

ಅರ್ಜಿಯ ವಿಚಾರಣೆ ನಡೆಸಿದ ಆಂಧ್ರಪ್ರದೇಶ ಹೈಕೋರ್ಟ್‌ನ ವಿಭಾಗೀಯ ನ್ಯಾಯಪೀಠವು, ಕಳೆದ ವಾರ ಸರ್ಕಾರ ಹೊರಡಿಸಿದ್ದ ಆದೇಶದ ಅನುಷ್ಠಾನಕ್ಕೆ ತಡೆಯೊಡ್ಡಿ ಮಧ್ಯಂತರ ಆದೇಶ ನೀಡಿದೆ. ಈ ಸಂಬಂಧ ರಾಜ್ಯ ಸರ್ಕಾರ ಮತ್ತು ಟಿಟಿಡಿಗೆ ನೋಟಿಸ್ ನೀಡಿದೆ.

10, 12ನೇ ತರಗತಿ ಪರೀಕ್ಷಾ ಫಲಿತಾಂಶಗಳ ದಾಖಲಾತಿಗಳಿಗೆ ಬ್ಲಾಕ್‌ಚೈನ್ ತಂತ್ರಜ್ಞಾನ

ನವದೆಹಲಿ (ಪಿಟಿಐ): ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) ನಕಲಿ ಅಂಕಪಟ್ಟಿ ಮತ್ತು ನಕಲಿ ಶೈಕ್ಷಣಿಕ ದಾಖಲಾತಿಗಳ ಸೃಷ್ಟಿಗೆ ಅವಕಾಶವಾಗದಂತೆ 10, 12ನೇ ತರಗತಿಯ ಪರೀಕ್ಷಾ ಫಲಿತಾಂಶಗಳ ದಾಖಲಾತಿಗಳಿಗಾಗಿ ಬ್ಲಾಕ್‌ಚೈನ್ ತಂತ್ರಜ್ಞಾನವನ್ನು ಬಳಸಲಿದೆ.

ಸಿಬಿಎಸ್‌ಇ ಅಧಿಕಾರಿಗಳ ಪ್ರಕಾರ, ಈ ಪ್ರಮಾಣ ಪತ್ರಗಳನ್ನು ಯಾವುದೇ ರೀತಿಯಲ್ಲೂ ನಕಲು ಮಾಡಲು ಸಾಧ್ಯವಿಲ್ಲ. ಬ್ಲಾಕ್‌ಚೈನ್ ತಂತ್ರಜ್ಞಾನವು ಶೈಕ್ಷಣಿಕ ದಾಖಲೆಗಳನ್ನು ಸುರಕ್ಷಿತ ಮತ್ತು ನಕಲು ಮಾಡಲು ಆಗದ ರೀತಿಯಲ್ಲಿ ದಾಖಲಿಸುವುದನ್ನು ಖಾತ್ರಿಪಡಿಸುತ್ತದೆ. ಈ ದಾಖಲಾತಿಗಳು ಆನ್‌ಲೈನ್‌ನಲ್ಲಿ ವಿಶ್ವಾಸಾರ್ಹ ಮತ್ತು ಪರಿಶೀಲಿಸಬಹುದಾದ ರೀತಿಯಲ್ಲಿ ಲಭ್ಯವಿರಲಿವೆ.

ಸಿಬಿಎಸ್‌ಇಯ ಶೈಕ್ಷಣಿಕ (ಬ್ಲಾಕ್‌ಚೈನ್) ದಾಖಲೆಗಳನ್ನು ಮತ್ತು ಪ್ರಮಾಣಪತ್ರಗಳನ್ನು ಬ್ಲಾಕ್‌ಚೈನ್ ತಂತ್ರಜ್ಞಾನ ಬಳಸಿ ಲಿಂಕ್ ಮಾಡಿದ ಚೈನ್ ರಚನೆಯಲ್ಲಿ ದಾಖಲಿಸಲಾಗುತ್ತದೆ. 2019-2021ನೇ ಸಾಲಿನ 10 ಮತ್ತು 12ನೇ ತರಗತಿಯ ಫಲಿತಾಂಶದ ಡಿಜಿಟಲ್ ಸಹಿ ಮಾಡಿದ ಪ್ರಮಾಣಪತ್ರಗಳನ್ನು ಲಭ್ಯವಾಗುವಂತೆ ಸಿಬಿಎಸ್‌ಇಯು ಮಾಡಿದೆ. ಮುಂಬರುವ ತಿಂಗಳುಗಳಲ್ಲಿ ಹಿಂದಿನ ವರ್ಷಗಳ ಪ್ರಮಾಣಪತ್ರಗಳೂ ಲಭ್ಯವಾಗಲಿವೆ ಎಂದು ಸಿಬಿಎಸ್‌ಇ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

'ಸಿಬಿಎಸ್‌ಇ ಹೊಸ ಪ್ರಮಾಣಪತ್ರಗಳನ್ನು ನೀಡಿದ ನಂತರ, ಡಿಜಿಟಲ್ ಸಹಿ ಮಾಡಿದ ಪ್ರಮಾಣಪತ್ರಗಳನ್ನು ಹೆಚ್ಚುವರಿ ಸುರಕ್ಷಿತ ಲಿಂಕ್ ರಚಿಸುವ ಬ್ಲಾಕ್‌ಚೈನ್ ಆಧಾರಿತ ವ್ಯವಸ್ಥೆಗೆ ರವಾನಿಸುತ್ತದೆ. ಬ್ಲಾಕ್‌ಚೈನ್ ಲಿಂಕ್ ನೆಟ್‌ವರ್ಕ್ ಅನ್ನು ಬೆಂಗಳೂರು, ಪುಣೆ ಮತ್ತು ಜೈಪುರದ ಕೇಂದ್ರಗಳಲ್ಲಿ ಸ್ಥಾಪಿಸಲಾಗಿದೆ. ಪ್ರಸ್ತುತ, ಪ್ರಮಾಣಪತ್ರದ ಸರಪಳಿಯನ್ನು ಎನ್‌ಐಸಿ ತನ್ನ ಡೇಟಾ ಕೇಂದ್ರಗಳಲ್ಲಿ ನಿರ್ವಹಿಸುತ್ತಿದೆ ಎಂದು ತಿಳಿಸಿದ್ದಾರೆ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಆರನೇ ವರ್ಷದ ಪುಣ್ಯಸ್ಮರಣೆ

ದಿ|| ಶ್ರೀಮತಿ ಹೆಚ್.ಎಂ. ಕಮಲಮ್ಮ
ಜನನ: 26-03-1950, ನಿಧನ : 23-09-2015
ನೀವು ಹಚ್ಚಿದೊಂದು ಹಣತೆ ಇನ್ನೂ ಬೆಳಗಿದೆ, ಮನಕೆ ಮಬ್ಬು ಕವಿಯದಂತೆ ಸದಾ ಕಾದಿದೆ.
ಇಂದಿಗೆ ನೀವು ನಮ್ಮನ್ನು ಅಗಲಿ ಆರು ವರ್ಷವಾದರು, ನಿಮ್ಮ ಧ್ಯೇಯ, ಧೈರ್ಯದ ನುಡಿಗಳು, ಇಂದಿಗೂ ನೀವು ನಮ್ಮೊಂದಿಗಿರುವಂತೆ ಮಾಡಿವೆ.
ಸದಾ ನಿಮ್ಮ ಸ್ಮರಣೆಯಲ್ಲೇ ಇರುವ
ಶ್ರೀ ಎಂ.ವಿ. ಭೀಮರಾಜು (ಪತಿ),
ಶ್ರೀ ಭೀ. ಪದ್ಮನಾಭ, ಶ್ರೀಮತಿ ಎಂ.ಸಿ. ಲತಾ,
ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು
7829155592/9986811974

LOOKING TO BUILD, BUY OR SELL A PROPERTY
Please refer Classifieds on Sunday

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Engg/ Production Technical

WANTED TESTING Engineer minimum 3years experience in testing & repairing at board level for ONLINE UPS systems upto 40 kVA. Max Systems Pvt Ltd., Vidyaranyapura Bangalore 9811507700, thriveni@maxxups.com

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕ ಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 7618763886, 7618760283

ಕರ್ನಾಟಕದಾದ್ಯಂತ ಹೆಸರಾಂತ 450ಕಂಪನಿಗಳಿಗೆ, ಕಂಪನಿ ಹಾಗೂ ಆಫೀಸ್ ವರ್ಕ್ ಗೆ, ಯುವಕ, ಯುವತಿಯರು ಬೇಕಾಗಿದ್ದಾರೆ.ನೇರನೇಮಕಾತಿ 16,200-65,000/-ಊಟ, ವಸತಿಯೊಂದಿಗೆ 7022366461, 8904049301.

Multiple Vacancy

HIRING RECRUITERS and Delivery boys Two wheeler & DL is Mandatory Call Bangalore-9980411233, 9739411233, 9739611233, 9742811233, 9148317736 Mysore/Manglore 9980211233/ 8296331417/ 9591004487

Part-Time Jobs

WORK FROM Home No Qualification Housewifes, Employes, Students, Visit our Office Near SP Circle, Bellary -8123012124, 7022121569

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

★ಮನೆಯಿಂದಲೇ ಮೇಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ.ತರಬೇತಿಗಾಗಿ: ಬೆಂಗಳೂರು.9060472077, ಶಿವಮೊಗ್ಗ.9008012895

Teachers/ Professors

B.E.T COMPOSITE P.U COLLEGE Bismillahangar, Bangalore-29, Partially aided, minority institution is in need of PHYSICAL EDUCATION TEACHER, QR: Master degree with BPEd. Preference Lady candidate as it's a girls' college. Apply: bimillah.secretary@gmail.com

ವ್ಯಾಪಾರ

Business Offers

Distributors

ಮಣಿವಿಲಾಸ್ ಫುಡ್ ಪ್ರಾಡಕ್ಟ್ ಅಂಡ್ ಕಂಪನಿಯ 'ಚಿಕ್ಕಿ' 'ಮೈಸೂರು ಪಾಕ್' ಉತ್ಪನ್ನಗಳ ಮಾರಾಟಕ್ಕೆ ಕರ್ನಾಟಕದಾದ್ಯಂತ ಡಿಸ್ಟ್ರಿಬ್ಯೂಟರ್ಸ್ ಮತ್ತು ಸೇಲ್ಸ್ ಪಾರ್ಟನರ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ:9986444464/ 9611110050

ಭವಿಷ್ಯ

Astrology

★||ಶ್ರೀಶಿರಡಿ ಸಾಯಿಬಾಬಾ||★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀ ಪುರುಷ ವಶೀಕರಣ, ದಾಂಪತ್ಯ ಕಿರಿಕಿರಿ, ಕಂಕಣಬಾಗ್ಯ, ಸಾಲದಬಾದೆ ಇನ್ನೂಯಾವುದೇ ಕಠಿಣ ಗುಪ್ತ ಸಮಸ್ಯೆಗಳಿಗೆ 11 ಗಂಟೆಗಳಲ್ಲಿ ಶಾಶ್ವತ ಪರಿಹಾರ. ಪಂಡಿತ್.ವಿಕ್ರಮ್ ಭಟ್ 9972654095

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

★||ಶ್ರೀಚಾಮುಂಡೇಶ್ವರಿದೇವಿ ಜ್ಯೋತಿಷ್ಯರು||★ ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ ಇನ್ನೂ ಯಾವುದೇ ಸಮಸ್ಯೆಗಳಿಗೆ 15 ನಿಮಿಷಗಳಲ್ಲಿ ಪರಿಹಾರ. ರಾಘವೇಂದ್ರ ಗುರೂಜಿ. 8050061378

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ,ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಕೊಡಲಾಗುತ್ತದೆ Rs.999 ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007, 8892501007

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ಕೇರಳ ಮತ್ತು ಕೊಳ್ಳೇಗಾಲದ ಪ್ರಚಂಡ ಅಮಾನುಷ ಮಾಂತ್ರಿಕ ವಿದ್ಯೆಯಿಂದ ಪ್ರೀತಿಯಲ್ಲಿ ನಂಬಿ ಮೋಸ ಇಷ್ಟಪಟ್ಟವರು ನಿಮ್ಮಂತಾಗಲುಸ್ತ್ರೀ/ ಪುರುಷ ವಶೀಕರಣ, ಇನ್ನೂ ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿದ್ದರೂ ಕೇವಲ 2 ದಿನಗಳಲ್ಲಿ 100% ಪರಿಹಾರ ಮಾಡುತ್ತಾರೆ. 9945530666.

★||ವಶೀಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ ಮಾತನಾಡುವ ಮೂಲಕ ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9900511008"

ಶ್ರೀಚಕ್ರ ಜ್ಯೋತಿಷ್ಯ ಪೀಠಂ ಕಠಿಣ ನಿಗೂಢ ಗುಪ್ತ ಸಮಸ್ಯೆಗಳಿಗೆ ಸಲಹೆ ಪಡೆಯಿರಿ. ಯಾವುದೇ ವಶೀಕರಣಗಳಿಗೆ 2865/-. 50 ವರ್ಷದ ಅನುಭವ 9845899127.

"ವಶೀಕರಣ ಯಂತ್ರ" ಜನವಶೀಕರಣ, ಲಕ್ಷ್ಮಿವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರು ವಶೀಕರಣ, ಕೇವಲ 2001 ರೂಪಾಯಿ. ಗುರೂಜಿ ಮಹೇಶ್ 9686999517

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

★||ಮೋಡಿ ಮಾಂತ್ರಿಕರು||★ ನಂಬರ್.1 ವಶೀಕರಣ ಸಪೆಷಲಿಸ್ಟ್, ಪ್ರೀತಿಪ್ರೇಮ, ಸಾಲದಬಾದೆ, ಗಂಡಹೆಂಡತಿ ವಿಚಾರ ಇನ್ನೂಯಾವುದೆ ಗುಪ್ತ ಸಮಸ್ಯೆಗಳಿಗೆ ಪೋನಿನ ಮೂಲಕ ಶಾಶ್ವತ ಪರಿಹಾರ. 9591588881

ಪ್ರವಾಸ

Travel

ಶ್ರೇಯಸ್ ಟೂರ್ಸ್★ 10.10.2021 10ದಿನಗಳು 40,000(ವಿಮಾನದಲ್ಲಿ) ಮುಕ್ತಿನಾಥ ಸಹಿತ ನೇಪಾಳ ರಾಷ್ಟ್ರ ಪ್ರವಾಸ ಕಠ್ಮಂಡು,ಪೋಕ್ರಾ, ಲುಂಬಿನಿ,ಚಿತಾವಾನ್,ಜನಕಪುರಿ, ಮನೋಕಾಮನದೇವಿ,. 16.10.2021 10ದಿನಗಳು ನೈಮಿಷ್ಯಾರಣ್ಯ,ಚಿತ್ರಕೂಟ, ಅಲಹಾಬಾದ್,ಕಾಶಿ,ಗಯಾ, ವಿಂದ್ಯಾವಾಸಿನಿ,ರಾಜ್‌ಗಿರ್, ದೇವಘರ್,.6.11.2021 10ದಿನಗಳು 1.ಅಖಂಡ ರಾಜಸ್ಥಾನ್ ರಾಜ್ಯಪ್ರವಾಸ, 2.ಅಖಂಡ ಗುಜರಾತ್ ರಾಜ್ಯ ಪ್ರವಾಸ. 8073824856/ 9206979202/ 9902050065

ವಿಮಾನದಲ್ಲಿ 15.10.2021 ರಿಂದ 12 ದಿನಗಳು ನಿಷ್ಕಳಂಕಮಾಹದೇವ, ಸೋಮನಾಥ್, ದ್ವಾರಕಾ, ಬೇಟ್ ದ್ವಾರಕ, ನಾಗೇಶಂ, ಮಾತೃಗಯಾ, ಅಹಮದಾಬಾದ್,ಡಾಕೂರ್, ಓಂಕಾರೇಶ್ವರ್, ಕಾರ್ತಿವೀರಾರ್ಜುನ, ಮಹಾಕಾಳೇಶ್ವರ, ಪಟೇಲ್ ಪ್ರತಿಮೆ, ಇತ್ಯಾದಿ. ರೂ.30000 ವಿಮಾನದರ ಪ್ರತ್ಯೇಕ.ಸಂಪರ್ಕಿಸಿ ವಿಷ್ಣನ್ ಟ್ರಾವಲ್ ಸ್ಟೈ 8277467677, 7676009620

16-10-2021 ಮಧ್ಯಪ್ರದೇಶ, ಗುಜರಾತ್, 17-10-2021 ಬದ್ರಿನಾಥ್, ಕೇದಾರ್‌ನಾಥ್, ಗಂಗೋತ್ರಿ, ಯಮುನೋತ್ರಿ, ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತ್ ನಗರ) 9845035349, 9482435755

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION SPECIAL
We are coming out with special offer for Admission Notice, Education Success Congratulation Ads
DH Classifieds More value, more impact
For details contact:
Jerry : 9731810277
Vishal : 9845114560
Tanveer: 9886213331
E-mail: dhclassifieds@deccanherald.co.in

ಬೈಡನ್ ಜೊತೆ ಮೊದಲ ಮುಖತಃ ಮಾತುಕತೆ; ವಿಶ್ವಸಂಸ್ಥೆಯಲ್ಲಿ ಪ್ರಧಾನಿ ಭಾಷಣ

ಕ್ವಾಡ್ ಸಭೆ: ಅಮೆರಿಕಕ್ಕೆ ತೆರಳಿದ ಮೋದಿ

ನವದೆಹಲಿ (ಪಿಟಿಐ): ಭಾರತ-ಅಮೆರಿಕ ನಡುವಿನ ಸಮಗ್ರ ಪಾಲುದಾರಿಕೆ ಬಲಪಡಿಸಲು ಮತ್ತು ಜಪಾನ್, ಆಸ್ಟ್ರೇಲಿಯಾದೊಂದಿಗಿನ ಬಾಂಧವ್ಯವನ್ನು ಬಲಪಡಿಸಲು ತಮ್ಮ ಅಮೆರಿಕ ಭೇಟಿ ಒಂದು ಸುಸಂದರ್ಭ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಹೇಳಿದ್ದಾರೆ.

ಅಮೆರಿಕಕ್ಕೆ ಪ್ರಯಾಣಿಸುವ ಮುನ್ನ ಪ್ರಧಾನಿ ಅವರ ಹೇಳಿಕೆ ಬಿಡುಗಡೆಮಾಡಲಾಯಿತು. ಅವರು ಅಲ್ಲಿಂದ ವಾಪಸಾಗುವ ಮುನ್ನ ವಿಶ್ವಸಂಸ್ಥೆಯ ಮಹಾ ಅಧಿವೇಶನದಲ್ಲಿ ಭಾಷಣ ಮಾಡಲಿದ್ದಾರೆ. ಕೋವಿಡ್ ಸಾಂಕ್ರಾಮಿಕ, ಭಯೋತ್ಪಾದನೆ ಹಾಗೂ ಹವಾಮಾನ ವೈಪರೀತ್ಯದಂತಹ ವಿಷಯಗಳು ಒಡ್ಡಿರುವ ಜಾಗತಿಕ ಸವಾಲುಗಳ ಬಗ್ಗೆ ಮಾತನಾಡಲಿದ್ದಾರೆ.

ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರ ಆಹ್ವಾನದ ಮೇರೆಗೆ ತಾವು ಅಮೆರಿಕಕ್ಕೆ ಮೂರು ದಿನಗಳ ಭೇಟಿ ನೀಡಲಿದ್ದು, ವಿಸ್ತೃತ ಹಂತದ ಮಾತುಕತೆಯಲ್ಲಿ ತೊಡಗುವುದಾಗಿ ಹೇಳಿದ್ದಾರೆ. ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರನ್ನೂ ಭೇಟಿ ಮಾಡಲಿದ್ದು, ಮುಖ್ಯವಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಉಭಯ ದೇಶಗಳ ಸಹಕಾರದ ಬಗ್ಗೆ ಚರ್ಚಿಸಲಿದ್ದಾರೆ.

ಜೋ ಬೈಡನ್, ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್ ಮತ್ತು ಜಪಾನ್ ಪ್ರಧಾನಿ ಯೋಶಿಹಿದಾ ಸುಗಾ ಅವರೊಂದಿಗೆ ಕ್ವಾಡ್ ನಾಯಕರ ಮೊದಲ ಶೃಂಗಸಭೆಯಲ್ಲಿ ಭಾಗವಹಿಸುವುದಾಗಿ ಮೋದಿ ಹೇಳಿದ್ದಾರೆ.

ಈ ವರ್ಷದ ಮಾರ್ಚ್‌ನಲ್ಲಿ ನಡೆದಿದ್ದ ಕ್ವಾಡ್ ನಾಯಕರ ವರ್ಚುವಲ್ ಶೃಂಗಸಭೆಯ ಫಲಿತಾಂಶಗಳ ಬಗ್ಗೆ ಚರ್ಚಿಸಲು ಹಾಗೂ ಹಿಂದೂ ಮಹಾ-ಸಾಗರ-ಪೆಸಿಫಿಕ್ ಪ್ರದೇಶದಲ್ಲಿ ಭವಿಷ್ಯದ ಆದ್ಯತೆಗಳನ್ನು ಗುರುತಿಸಲು ಈ ಶೃಂಗಸಭೆ ಅವಕಾಶವನ್ನು ಒದಗಿಸುತ್ತದೆ ಎಂದು ಅವರು ಹೇಳಿದ್ದಾರೆ.

ಭಾರತದ ಪ್ರಧಾನಿ ನರೇಂದ್ರ ಮೋದಿಯವರನ್ನು ಸ್ವಾಗತಿಸಲು ಹೆಮ್ಮೆಯೆನಿಸುತ್ತಿದೆ ಎಂದು ಅಮೆರಿಕದ ಪ್ರಭಾವಿ ಸೆನೆಟ್ ಸದಸ್ಯ ಅರ್ಲ್ ಬುಡ್ಡಿ ಕಾರ್ಟರ್ ಅವರು ಸದನದಲ್ಲಿ ಹೇಳಿದ್ದಾರೆ. ಭಾರತ ಮತ್ತು ಅಮೆರಿಕ ನಡುವಿನ ಸಂಬಂಧವು ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯ ನೆಲೆಯಲ್ಲಿ ಆಳದಲ್ಲಿ ಬೇರೂರಿದೆ ಎಂದು ಅವರು ಒತ್ತಿ ಹೇಳಿದ್ದಾರೆ.

‘ಹಲವು ವರ್ಷಗಳಿಂದ ಎರಡೂ ದೇಶಗಳು ತಮ್ಮ ವ್ಯಾಪಾರ, ಸಹಯೋಗವನ್ನು ಹೆಚ್ಚಿಸಿವೆ. ಇದು ಪಾಲುದಾರಿಕೆಯ ಪ್ರಮುಖ ಅಂಶವಾಗಿದೆ’ ಎಂದು ಅವರು ಹೇಳಿದರು. 2019ರಲ್ಲಿ ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ, ಸರಕು ಮತ್ತು ಸೇವೆಗಳ ಮೊತ್ತವು ₹11.16 ಲಕ್ಷ ಕೋಟಿಗೆ ತಲುಪಿದೆ’ ಎಂದಿದ್ದಾರೆ.

ಅಮೆರಿಕಕ್ಕೆ ತೆರಳಲು ವಿಮಾನ ಏರಿದ ಪ್ರಧಾನಿ ನರೇಂದ್ರ ಮೋದಿ –ಪಿಟಿಐ ಚಿತ್ರ

ಏನೇನು ಕಾರ್ಯಕ್ರಮ

ಪ್ರಧಾನಿ ಮೋದಿ ಮತ್ತು ಅಧ್ಯಕ್ಷ ಬೈಡನ್ ನಡುವೆ ಮೊದಲ ಮುಖತಃ ಸಭೆ ಶುಕ್ರವಾರ (ಸೆ. 24) ನಡೆಯಲಿದೆ. ‘ಅಫ್ಗನ್ ಬಿಕ್ಕಟ್ಟು ಮತ್ತು ಅದರ ಪರಿಣಾಮಗಳು, ಚೀನಾದ ಪ್ರತಿರೋಧ, ಗಡಿಯಾಚೆಗಿನ ಭಯೋತ್ಪಾದನೆಯನ್ನು ತಡೆಯುವ ಮಾರ್ಗಗಳು ಮತ್ತು ಭಾರತ-ಅಮೆರಿಕ ನಡುವಿನ ಜಾಗತಿಕ ಪಾಲುದಾರಿಕೆಯನ್ನು ಮತ್ತಷ್ಟು ವಿಸ್ತರಿಸುವ ವಿಚಾರಗಳು ಸಭೆಯ ಕೇಂದ್ರ ಬಿಂದುಗಳಾಗಲಿವೆ.

ಈ ಬಗ್ಗೆ ಮಾಧ್ಯಮ ಸಭೆಯಲ್ಲಿ ಮಂಗಳವಾರ ವಿದೇಶಾಂಗ ಕಾರ್ಯದರ್ಶಿ ಹರ್ಷವರ್ಧನ್ ಶೃಂಗ್ಲಾ ಅವರು ಮಾತನಾಡಿದ್ದರು.

ಬೈಡನ್ ಆಯೋಜಿಸಿರುವ ಕೋವಿಡ್–19 ಜಾಗತಿಕ ಶೃಂಗಸಭೆಯಲ್ಲಿಯೂ ಪ್ರಧಾನಿ ಭಾಗಿಯಾಗಲಿದ್ದಾರೆ. ವಾಷಿಂಗ್ಟನ್‌ನಲ್ಲಿ ತಮ್ಮ ಕಾರ್ಯಕ್ರಮಗಳನ್ನು ಮುಗಿಸಿದ ನಂತರ ಮೋದಿ ಅವರು ಶುಕ್ರವಾರ ಸಂಜೆ ನ್ಯೂಯಾರ್ಕ್‌ಗೆ ಪ್ರಯಾಣಿಸಲಿದ್ದು, ಮರುದಿನ ನಡೆಯುವ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ 76ನೇ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಅಮೆರಿಕದ ಪ್ರಮುಖ ಕಂಪನಿಗಳ ಹಲವಾರು ಉನ್ನತ ಅಧಿಕಾರಿಗಳನ್ನು ಭೇಟಿ ಮಾಡುವ ಕಾರ್ಯಕ್ರಮವೂ ಇದೆ.

ರಾಜತಾಂತ್ರಿಕತೆಯ ಹೊಸ ಯುಗ: ಬೈಡನ್

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯನ್ನು ಉದ್ದೇಶಿಸಿ ತಮ್ಮ ಮೊದಲ ಭಾಷಣ ಮಾಡಿದ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು, ಕೋವಿಡ್-19 ಸಾಂಕ್ರಾಮಿಕ, ಹವಾಮಾನ ಬದಲಾವಣೆ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಯಂತಹ ಜಾಗತಿಕ ಸಮಸ್ಯೆಗಳನ್ನು ಪರಿಹರಿಸಲು ವಿಶ್ವದ ರಾಷ್ಟ್ರಗಳಿಗೆ ಕರೆ ನೀಡಿದರು.

ಚೀನಾದೊಂದಿಗೆ ಅಮೆರಿಕವು ಹೊಸ ಶೀತಲ ಸಮರವನ್ನು ಬಯಸುತ್ತಿಲ್ಲ ಎಂದು ಅವರು ಹೇಳಿದರು.

ಅಫ್ಗನ್‌ನಿಂದ ಸೇನಾ ವಾಪಸಾತಿ ಹಾಗೂ ಫ್ರಾನ್ಸ್ ಜೊತೆ ಹದಗೆಟ್ಟಿರುವ ರಾಜತಾಂತ್ರಿಕ ಸಂಬಂಧ ಕುರಿತಾದ

ಟೀಕೆಗಳಿಗೆ ಅವರು ಉತ್ತರಿಸಲು ಹೋಗಲಿಲ್ಲ.

‘ನಾವು ರಾಜತಾಂತ್ರಿಕತೆಯ ಹೊಸ ಯುಗವನ್ನು ತೆರೆಯುತ್ತಿದ್ದೇವೆ. ಅಫ್ಗಾನಿಸ್ತಾನದಲ್ಲಿ ಸೇನಾ ಕಾರ್ಯಾಚರಣೆ ಅಂತ್ಯದೊಂದಿಗೆ ಒಂದು ಮಹತ್ವದ ಘಟ್ಟವನ್ನು ತಲುಪಿದ್ದೇವೆ’ ಎಂದರು.

‘ಇಂದು ನಮ್ಮ ಹೆಚ್ಚಿನ ಸಮಸ್ಯೆಗಳನ್ನು ಶಸ್ತ್ರಾಸ್ತ್ರ ಬಲದಿಂದ ಪರಿಹರಿಸಲಾಗುವುದಿಲ್ಲ. ಕೋವಿಡ್ ಅಥವಾ ಅದರ ರೂಪಾಂತರಗಳಿಂದ ಬಾಂಬ್‌ಗಳು ಮತ್ತು ಗುಂಡುಗಳು ರಕ್ಷಣೆ ಕೊಡಲು ಸಾಧ್ಯವಿಲ್ಲ’ ಎಂದರು.

ಪ್ರಶಸ್ತಿ ಗೆದ್ದ ಮಾಡರ್ನ್ ಗರ್ಲ್ಸ್ ಎಫ್‌ಸಿ ತಂಡ. ನಿಂತವರು (ಎಡದಿಂದ): ಸಿಮ್ರಾನ್ ಭಾರ್ಗವ, ಮೈತ್ರೇಯಿ, ಮೋನೇಶ್ (ಮ್ಯಾನೇಜರ್), ಮಹೇಶ್ವರನ್ ಬಾಲು (ಅಧ್ಯಕ್ಷ), ಸುಧಾಕರ್ (ಕೋಚ್), ಶ್ರೇಯಾ ಮೆನೋನ್, ಲಿಪಿಕಾ ಗುಪ್ತಾ, ಮೃಣ್ಮಯಿ ಕರ್ಮೇಕರ್; ಕೆಳಗಿನ ಸಾಲು: ದೇವಯಾನಿ ನಂಬಿಯಾರ್, ಜೆಯಾ ವೋರಾ, ರಿವ್ಕಾ ರಾಮ್‌ಜಿ, ಸಾರಾ ಮೆಹ್ತಾ, ಆದಿರ ಘೋಷ್, ಮೇಧಾ ಗುಪ್ತಾ, ಆರುಷಿ ಎಸ್, ಭೂಮಿಕಾ ರೈ, ಅರುಣಿ ಸಿಂಗ್ –ಪ್ರಜಾವಾಣಿ ಚಿತ್ರ

ಫುಟ್‌ಬಾಲ್: ರೂಟ್ಸ್ ರನ್ನರ್ ಅಪ್; ಆರುಷಿ ಹ್ಯಾಟ್ರಿಕ್

ಮಾಡರ್ನ್ ಗರ್ಲ್ಸ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರುಷಿ ಗಳಿಸಿದ ಹ್ಯಾಟ್ರಿಕ್ ಗೋಲುಗಳು ಮಾಡರ್ನ್ ಗರ್ಲ್ಸ್ ಎಫ್‌ಸಿ ತಂಡಕ್ಕೆ ಚಾಂಪಿಯನ್ ಪಟ್ಟ ತಂದುಕೊಟ್ಟವು. ರಾಜ್ಯ ಫುಟ್‌ಬಾಲ್ ಸಂಸ್ಥೆ ಆಯೋಜಿಸಿದ್ದ ಪ್ಲಾನೆಟ್ ಟ್ರೋಫಿ ಮಹಿಳಾ ‘ಎ’ ಡಿವಿಷನ್ ಲೀಗ್‌ನ ಫೈನಲ್‌ನಲ್ಲಿ ರೂಟ್ಸ್ ಫುಟ್‌ಬಾಲ್ ಸ್ಕೂಲ್ ತಂಡವನ್ನು 3–1ರಲ್ಲಿ ಮಾಡರ್ನ್ ಗರ್ಲ್ಸ್ ಮಣಿಸಿತು.

ಏಳನೇ ನಿಮಿಷದಲ್ಲಿ ಚೆಂಡನ್ನು ಗುರಿ ಮುಟ್ಟಿಸಿದ ಆರುಷಿ, ಮಾಡರ್ನ್ ಗರ್ಲ್ಸ್ ಬಳಗದಲ್ಲಿ ಭರವಸೆ ಮೂಡಿಸಿದ್ದರು. 10ನೇ ನಿಮಿಷದಲ್ಲಿ ಶ್ರವ್ಯ ಗಳಿಸಿದ ಗೋಲಿನ ಮೂಲಕ ರೂಟ್ಸ್ ತಿರುಗೇಟು ನೀಡಿತು. ನಂತರದ 30 ನಿಮಿಷಗಳಲ್ಲಿ ಎರಡೂ ತಂಡಗಳು ಪ್ರಬಲ ಪೈಪೋಟಿ ನಡೆಸಿದವು.

40ನೇ ನಿಮಿಷದಲ್ಲಿ ಮಾಡರ್ನ್ ಗರ್ಲ್ಸ್ ಯಶಸ್ಸು ಕಂಡಿತು. ಆರುಷಿ ಎರಡನೇ ಗೋಲು ಗಳಿಸಿ ಮಿಂಚಿದರು. 48ನೇ ನಿಮಿಷದಲ್ಲಿ ಮತ್ತೊಂದು ಗೋಲು ಗಳಿಸಿದ ಅವರು ಹ್ಯಾಟ್ರಿಕ್ ಪೂರೈಸುವುದರೊಂದಿಗೆ ತಂಡದ ಜಯವನ್ನೂ ಖಾತರಿ ಮಾಡಿಕೊಂಡರು.

ಪಂದ್ಯದ ಶ್ರೇಷ್ಠ ಆಟಗಾರ್ತಿ ಪ್ರಶಸ್ತಿ ಆರುಷಿ ಪಾಲಾಯಿತು. ರೂಟ್ಸ್ ಎಫ್‌ಸಿಯ ಕೃತಿಕಾ ಉತ್ತಮ ಗೋಲ್‌ಕೀಪರ್ ಪ್ರಶಸ್ತಿ ಗಳಿಸಿದರೆ ಮಾಡರ್ನ್ ಗರ್ಲ್ಸ್ ಎಫ್‌ಸಿಯ ಸಿಮ್ರಾನ್ ಭಾರ್ಗವ ಉತ್ತಮ ಡಿಫೆಂಡರ್ ಎನಿಸಿಕೊಂಡರು. ಇದೇ ತಂಡದ ಮೈತ್ರೇಯಿ ಉತ್ತಮ ಮಿಡ್‌ಫೀಲ್ಡರ್ ಪ್ರಶಸ್ತಿಗೆ ಭಾಜನರಾದರು. ಉತ್ತಮ ಫಾರ್ವರ್ಡ್ ಪ್ರಶಸ್ತಿ ಶ್ರವ್ಯ ಗಳಿಸಿದರು.

ವಿವಿಧ ವಿಭಾಗಗಳಲ್ಲಿ ಪ್ರಶಸ್ತಿ ಗೆದ್ದ ರಕ್ಷಿತ್ ಬಾರಿಗಿಡದ, ಶ್ರೀಕಾಂತ್ ಕಶ್ಯಪ್, ಗೌರವ್, ಅನರ್ಘ್ಯ ಮತ್ತು ಮರಿಯಾ ರೋನಿ

ಟೇಬಲ್ ಟೆನಿಸ್: ರಕ್ಷಿತ್, ಮರಿಯಾಗೆ ಪ್ರಶಸ್ತಿ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕೊಲೆಡ್ಸ್ ಕ್ಲಬ್‌ನ ರಕ್ಷಿತ್ ಬಾರಿಗಿಡದ ಮತ್ತು ಕೆನರಾ ಬ್ಯಾಂಕ್‌ನ ಮರಿಯಾ ರೋನಿ ಅವರು ರಾಜ್ಯ ಟೇಬಲ್ ಟೆನಿಸ್ ಸಂಸ್ಥೆ ಆಯೋಜಿಸಿದ್ದ ಸಿ.ವಿ.ಎಲ್ ಶಾಸ್ತ್ರಿ ಸ್ಮಾರಕ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ಮಲ್ಲೇಶ್ವರ ಅಸೋಸಿಯೇಷನ್‌ನಲ್ಲಿ ನಡೆದ ಟೂರ್ನಿಯ ಪುರುಷರ ವಿಭಾಗದ ಫೈನಲ್‌ನಲ್ಲಿ ರಕ್ಷಿತ್ ನೈರುತ್ಯ ರೈಲ್ವೆಯ ಕಲ್ಯಾಣ್ಣನ್ ವಿರುದ್ಧ 11-7, 12-10, 11-5, 11-8ರಲ್ಲಿ ಜಯ ಗಳಿಸಿದರು. ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಜೈನ್ ಕಾಲೇಜಿನ ಅನರ್ಘ್ಯ ಮಂಜುನಾಥ್ ಅವರನ್ನು ಮರಿಯಾ 8-11, 12-10, 11-9, 11-6, 11-8ರಲ್ಲಿ ಮಣಿಸಿದರು.

ಆದರೆ ಜೂನಿಯರ್ ಬಾಲಕಿಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡು ಅನರ್ಘ್ಯ ಮಂಜುನಾಥ್ ಸಂಭ್ರಮಿಸಿದರು. ಫೈನಲ್‌ನಲ್ಲಿ ಅವರು ಅದಿತಿ ಜೋಶಿ ವಿರುದ್ಧ 11-5, 11-7, 11-4, 16-18, 11-5ರಲ್ಲಿ ಜಯ ಸಾಧಿಸಿದರು. ಬಾಲಕರ ವಿಭಾಗದ ಫೈನಲ್‌ನಲ್ಲಿ ಸ್ಕೈಸ್‌ನ ಶ್ರೀಕಾಂತ್ ಕಶ್ಯಪ್ 9-11, 6-11, 11-8, 11-7, 12-10, 11-8ರಲ್ಲಿ ಆಕಾಶ್ ವಿರುದ್ಧ ಗೆದ್ದರು.

ನಾನ್ ಮೆಡಲಿಸ್ಟ್ ಸಿಂಗಲ್ಸ್‌ನ ಬಾಲಕರ ವಿಭಾಗದಲ್ಲಿ ಎಂಎಸ್‌ಎಸ್‌ಟಿಟಿಎಯ ಗೌರವ್ 11-8, 11-6, 11-9ರಲ್ಲಿ ಸಿದ್ಧಾಂತ್ ಎದುರು ಗೆದ್ದು ಪ್ರಶಸ್ತಿ ಗಳಿಸಿದರು.

ನೆಟ್‌ಬಾಲ್: ಶಿವಲೀಲಾ ನಾಯಕಿ

ಬೆಂಗಳೂರು: ಎಸ್. ಶಿವಲೀಲಾ ಕರ್ನಾಟಕ ರಾಜ್ಯ ನೆಟ್‌ಬಾಲ್ ಮಹಿಳೆಯರ ತಂಡದ ನಾಯಕಿಯಾಗಿ ನೇಮಕವಾಗಿದ್ದಾರೆ. ಫೆಡರೇಷನ್ ಕಪ್ ರಾಷ್ಟ್ರೀಯ ನೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಈ ತಂಡವು ಸ್ಪರ್ಧಿಸಲಿದೆ.

ಕರ್ನಾಟಕ ಅಮೆಚೂರ್ ನೆಟ್‌ಬಾಲ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಸಿ. ಗಿರೀಶ ಪ್ರಕಟಿಸಿರುವ ತಂಡ: ಎಸ್. ಶಿವಲೀಲಾ (ನಾಯಕಿ), ಕವನಾ ಎಂ ಗೌಡ (ಉಪನಾಯಕಿ), ಕೆ. ಶಾಲಿನಿ, ಕೆ.ಎಸ್. ಗಗನಾ, ಎ. ಗಗನಾ, ದಿಶಾ ಎ ಗೌಡ, ಬಿ.ಆರ್. ಸುರಭಿ, ರಂಜನಾ, ಎಚ್. ಮನಸ್ವಿ, ಎಂ. ಶ್ರೇಯಾ, ಕೆ.ಆರ್. ಖುಷಿ, ಎ. ಡೆಲ್ಸಿಯಾ ಶೆರ್ಲಿ. ಎಚ್.ಡಿ. ಪುರುಷೋತ್ತಮ (ಕೋಚ್), ಕೆ.ಎಸ್. ತೇಜಸ್ವಿನಿ (ಮ್ಯಾನೇಜರ್).

ಜಂಪ್ ರೋಪ್: ಚಿನ್ನದ ಪದಕ

ಹೊಸಪೇಟೆ (ವಿಜಯನಗರ): ರಾಜಸ್ಥಾನದಲ್ಲಿ ನಡೆದ ರಾಷ್ಟ್ರೀಯ ಜಂಪ್ ರೋಪ್ ಸ್ಪರ್ಧೆಯಲ್ಲಿ ನಗರದ ಶಶಾಂಕ್ ಚಿನ್ನದ ಪದಕ ಗಳಿಸಿ ದ್ದಾರೆ.

18ರಿಂದ21 ವರ್ಷದೊಳಗಿನ ಸೀನಿಯರ್ಸ್ ಡಬಲ್ಸ್ ಜಂಪ್ ರೋಪ್‌ನಲ್ಲಿ ಶಶಾಂಕ್ ಈ ಸಾಧನೆ ಮಾಡಿದ್ದಾರೆ. ಶಶಾಂಕ್ ನಗರದ ವಿಜಯನಗರ ಕಾಲೇಜಿನಲ್ಲಿ ಪ್ರಥಮ ಪಿಯುಸಿ ವಿಜ್ಞಾನದಲ್ಲಿ ಓದುತ್ತಿದ್ದಾರೆ.

ಟೆನಿಸ್: ಸೆಮಿಫೈನಲ್‌ಗೆ ಜೈನಾ, ಶೌರ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗ್ರ ಶ್ರೇಯಾಂಕಿತೆ ಜೈನಾ ಅಂಬರ್ ಮತ್ತು ನಾಲ್ಕನೇ ಶ್ರೇಯಾಂಕಿತ ಬಿ.ಶೌರ್ಯ, ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಆಶ್ರಯದ ಎಐಟಿಎ 14 ವರ್ಷದೊಳಗಿನವರ ಸಿಎಸ್–7 ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಬಾಲಕಿಯರ ಮತ್ತು ಬಾಲಕರ ವಿಭಾಗದ ಸೆಮಿಫೈನಲ್ ಪ್ರವೇಶಿಸಿದರು.

ಬಾಲಕಿಯರ ವಿಭಾಗದ ಎಂಟರ ಘಟ್ಟದಲ್ಲಿ ದಿಶಾ ಸಂತೋಷ್ ವಿರುದ್ಧ 4-6, 7-5, 6-3ರಲ್ಲಿ ಜೈನಾ ಗೆದ್ದರು. ಬಾಲಕರ ವಿಭಾಗದಲ್ಲಿ ಶೌರ್ಯ ಪ್ರಬಲ ಪೈಪೋಟಿಯಲ್ಲಿ ಐದನೇ ಶ್ರೇಯಾಂಕದ ಕೆ.ಲತೀಶ್ ಎದುರು 7-6 (8), 6-3ರಲ್ಲಿ ಜಯ ಗಳಿಸಿದರು. ಅಗ್ರ ಶ್ರೇಯಾಂಕಿತ, ಮಣಿಪುರದ ಅಶ್ವಜೀತ್ 6-1, 7-5ರಲ್ಲಿ ಸಂಚಿತ್ ರಾವ್ ವಿರುದ್ಧ ಗೆಲುವು ಸಾಧಿಸಿದರೆ ಎರಡನೇ ಶ್ರೇಯಾಂಕದ ಡಿ.ಆರಾಧ್ಯ 6-0, 6-0ಯಿಂದ ಸಫೂರ್ ಮೊಯ್ದೀನ್ ವಿರುದ್ಧ, ಮೂರನೇ ಶ್ರೇಯಾಂಕದ ಕ್ಷಿತಿಜ್ ಆರಾಧ್ಯ 6-3, 2-6, 6-0ರಲ್ಲಿ ಬಾಬು ಕ್ರಿಸ್ಟೊ ವಿರುದ್ಧ ಗೆದ್ದರು.

ಬಾಲಕಿಯರ ವಿಭಾಗದಲ್ಲಿ ತಮಿಳುನಾಡಿನ ಸಮೃದ್ಧಿ ಎದುರು ಸುಶ್ಮಿತಾ 6-0, 6-2ರಲ್ಲಿ ಗೆಲುವು ಸಾಧಿಸಿದರು. ತಮಿಳುನಾಡಿನ ದಿವ್ಯಾ ರಮೇಶ್ 6-2, 6-2ರಲ್ಲಿ ಧನ್ಯತಾ ಧರಣಿ ಎದುರು ಜಯಿಸಿದರು. ಅಣ್ವೆ ಪುನಗಂಟಿ 6-3, 6-2ರಲ್ಲಿ ವಾರುಣ್ಯ ಎದುರು ಗೆದ್ದರು.

ಪದ್ಮನಾಭಸ್ವಾಮಿ ದೇಗುಲದ ಮನವಿ ತಿರಸ್ಕಾರ

ಕಳೆದ 25 ವರ್ಷಗಳ ಲೆಕ್ಕಪರಿಶೋಧನೆ ನಡೆಸುವುದರಿಂದ ವಿನಾಯಿತಿ ನೀಡಬೇಕು ಎಂಬ ತಿರುವನಂತಪುರದ ಪದ್ಮನಾಭಸ್ವಾಮಿ ದೇವಸ್ಥಾನದ ಮನವಿ.

ಲೆಕ್ಕಪರಿಶೋಧನೆಯಿಂದ ವಿನಾಯಿತಿ ಇಲ್ಲ: ‘ಸುಪ್ರೀಂ’

ನವದೆಹಲಿ (ಪಿಟಿಐ): ದೇಗುಲಕ್ಕೆ ಸಂಬಂಧಿಸಿ ಕಳೆದ 25 ವರ್ಷಗಳ ಲೆಕ್ಕಪರಿಶೋಧನೆ ನಡೆಸುವುದರಿಂದ ವಿನಾಯಿತಿ ನೀಡಬೇಕು ಎಂಬ ತಿರುವನಂತಪುರದ ಪದ್ಮನಾಭಸ್ವಾಮಿ ದೇವಸ್ಥಾನದ ಮನವಿಯನ್ನು ಸುಪ್ರೀಂಕೋರ್ಟ್ ಬುಧವಾರ ತಿರಸ್ಕರಿಸಿತು.

‘ಲೆಕ್ಕಪರಿಶೋಧನೆ ಕಾರ್ಯವನ್ನು ಮೂರು ತಿಂಗಳ ಒಳಗಾಗಿ ಪೂರ್ಣಗೊಳಿಸಬೇಕು’ ಎಂದು ಸುಪ್ರೀಂಕೋರ್ಟ್ ಸೂಚಿಸಿತು.

ದೇವಸ್ಥಾನದ ಆಡಳಿತ ಸಮಿತಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಯು.ಯು.ಲಲಿತ್, ಎಸ್. ರವೀಂದ್ರ ಭಟ್ ಹಾಗೂ ಬೇಲಾ ಎಂ.ತ್ರಿವೇದಿ ಅವರಿರುವ ನ್ಯಾಯಪೀಠ ನಡೆಸಿತು.



‘ಲೆಕ್ಕಪರಿಶೋಧನೆ ಕೇವಲ ದೇವಸ್ಥಾನಕ್ಕೆ ಸಂಬಂಧಿಸಿದ್ದಲ್ಲ. ದೇವಸ್ಥಾನದ ಆಡಳಿತಕ್ಕೆ ಸಂಬಂಧಿಸಿದ ಟ್ರಸ್ಟ್‌ಗೂ ಇದು ಸಂಬಂಧಿಸಿದ್ದು, 2015ರಲ್ಲಿ ಅಮಿಕಸ್ ಕ್ಯೂರಿ ಅವರು ಸಲ್ಲಿಸಿದ್ದ ವರದಿಯ ಆಧಾರದ ಮೇಲೆ ಲೆಕ್ಕಪರಿಶೋಧನೆ ನಡೆಸಲು ಆದೇಶಿಸಲಾಗಿದೆ’ ಎಂದು ನ್ಯಾಯಪೀಠ ಹೇಳಿತು. ಕೋವಿಡ್ ಪಿಡುಗು ಹಾಗೂ ಲಾಕ್‌ಡೌನ್‌ನಿಂದಾಗಿ ದೇವಸ್ಥಾನದ ಆದಾಯ ಕುಸಿದಿದೆ. ದೇವಸ್ಥಾನ ಆರ್ಥಿಕ ಸಂಕಷ್ಟ ಎದುರಿಸುತ್ತಿರುವುದರಿಂದ ನಿತ್ಯದ ವೆಚ್ಚ ಸರಿದೂಗಿಸಲು ಸಹ ಆಗುತ್ತಿಲ್ಲ ಎಂದು ದೇವಸ್ಥಾನ ಆಡಳಿತ ಸಮಿತಿ ಸೆ.17ರಂದು ಸುಪ್ರೀಂಕೋರ್ಟ್‌ಗೆ ತಿಳಿಸಿತ್ತು.

ಈ ಕಾರಣಕ್ಕೆ, ತಿರುವಾಂಕೂರು ರಾಜ ಮನೆತನ ಮುನ್ನಡೆಸುತ್ತಿರುವ ದೇವಸ್ಥಾನಕ್ಕೆ ಸಂಬಂಧಿಸಿದ ಟ್ರಸ್ಟ್‌ನ ಲೆಕ್ಕಪರಿಶೋಧನೆ ನಡೆಸದಂತೆ ಸೂಚಿಸಬೇಕು ಎಂದು ಕೋರಿತ್ತು.

ಸಿಧು ವಿರುದ್ಧ ಪ್ರಬಲ ಅಭ್ಯರ್ಥಿ ಕಣಕ್ಕೆ: ಕಾಂಗ್ರೆಸ್‌ಗೆ ಎಚ್ಚರಿಕೆ

‘ರಾಹುಲ್, ಪ್ರಿಯಾಂಕಾ ಅನನುಭವಿಗಳು’

ಚಂಡೀಗಡ (ಪಿಟಿಐ): ‘ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಅನನುಭವಿಗಳು’ ಎಂದಿರುವ ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅವರು, ವಿಧಾನಸಭಾ ಚುನಾವಣೆಯಲ್ಲಿ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಅವರ ವಿರುದ್ಧ ಪ್ರಬಲ ಅಭ್ಯರ್ಥಿಯನ್ನು ಕಣಕ್ಕಿಳಿಸುವುದಾಗಿ ಹೇಳಿದ್ದಾರೆ.

ಅಮರಿಂದರ್ ಸಿಂಗ್

ಇತ್ತೀಚೆಗಷ್ಟೇ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಅಮರಿಂದರ್ ಸರಣಿ ಸಂದರ್ಶನಗಳಲ್ಲಿ, ‘ಪ್ರಿಯಾಂಕಾ ಮತ್ತು ರಾಹುಲ್ ನನ್ನ ಮಕ್ಕಳಿದ್ದಂತೆ. ಇದು ಹೀಗೆ ಮುಕ್ತಾಯವಾಗಬಾರದಿತ್ತು. ಆದರೆ, ನನಗೆ ನೋವಾಗಿದೆ. ನಾನು ಶಾಸಕರನ್ನು ಗೋವಾ ಅಥವಾ ಇತರೆಡೆ ವಿಮಾನದಲ್ಲಿ ಕರೆದೊಯ್ದಿಲ್ಲ. ಈ ರೀತಿ ನಾನು ಮಾಡುವುದೂ ಇಲ್ಲ. ನನಗೆ ಗಿಮಿಕ್ಸ್ ಗೊತ್ತಿಲ್ಲ. ಇದು ನನ್ನ ದಾರಿ ಅಲ್ಲವೆಂದು ಪ್ರಿಯಾಂಕಾ, ರಾಹುಲ್‌ಗೂ ಗೊತ್ತು. ಆದರೆ, ಅವರಿಬ್ಬರು ಇನ್ನೂ ಅನನುಭವಿಗಳು. ಅವರ ಸಲಹೆಗಾರರು ಸ್ಪಷ್ಟವಾಗಿ ಅವರಿಬ್ಬರ ದಾರಿ ತಪ್ಪಿಸುತ್ತಿದ್ದಾರೆ’ ಎಂದು ದೂರಿದ್ದಾರೆ.

ಚರ್ಚಿಸಿ ಮುಂದಿನ ನಿರ್ಧಾರ: ‘ನಾನು ಮುಖ್ಯಮಂತ್ರಿ ಹುದ್ದೆಯನ್ನು ಮತ್ತೊಬ್ಬರಿಗೆ ಬಿಟ್ಟು ಕೊಡುವುದಾಗಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ತಿಳಿಸಿದ್ದೆ. ಆದರೆ, ಹಾಗೆ ಆಗಲಿಲ್ಲ. ರಹಸ್ಯವಾಗಿ ಕಾಂಗ್ರೆಸ್ ಶಾಸಕರ ಸಭೆ ಕರೆಯಲಾಯಿತು. ನನಗೆ ಅವಮಾನ ಮಾಡಲಾಯಿತು. ನನ್ನ ರಾಜಕೀಯ ಆಯ್ಕೆಯನ್ನು ಮುಕ್ತವಾಗಿರಿಸಿಕೊಂಡಿದ್ದೇನೆ. ನನ್ನ ಮುಂದಿನ ಭವಿಷ್ಯವನ್ನು ನಿರ್ಧರಿಸುವ ಮುನ್ನ ಸ್ನೇಹಿತರೊಂದಿಗೆ ಮಾತನಾಡುವೆ’ ಎಂದೂ ಅಮರಿಂದರ್ ಸಂದರ್ಶನದಲ್ಲಿ ಹೇಳಿಕೊಂಡಿದ್ದಾರೆ.

‘40 ವರ್ಷವಾಗಿರಬಹುದು ಅಥವಾ 80 ವರ್ಷವಾಗಿರಬಹುದು. ನನಗೆ ವಯಸ್ಸು ಎಂದಿಗೂ ಅಡಚಣೆಯಾಗಿಲ್ಲ’ ಎಂದು ಅವರು ತಿಳಿಸಿದ್ದಾರೆ.

ಕಾಂಗ್ರೆಸ್ ತೊರೆಯುವ ಸೂಚನೆ?

‘ಮುಖ್ಯಮಂತ್ರಿ ಸ್ಥಾನಕ್ಕಾಗಿ ಹಾತೊರೆಯುತ್ತಿರುವ ನವಜೋತ್ ಸಿಧು ವಿರುದ್ಧ ನಾನು ಶಕ್ತಿಮೀರಿ ಹೋರಾಡುವೆ. ಅವರಂಥ ಅಪಾಯಕಾರಿ ವ್ಯಕ್ತಿಯಿಂದ ದೇಶವನ್ನು ರಕ್ಷಿಸುವ ಸಲುವಾಗಿ ನಾನು ಎಂಥ ತ್ಯಾಗಕ್ಕೂ ಸಿದ್ಧ. 2022ರ ವಿಧಾನಸಭಾ ಚುನಾವಣೆಯಲ್ಲಿ ಸಿಧು ವಿರುದ್ಧ ಪ್ರಬಲ ಅಭ್ಯರ್ಥಿಯನ್ನು ಕಣಕ್ಕಿಳಿಸುವೆ’ ಎನ್ನುವ ಮೂಲಕ ಅಮರಿಂದರ್ ಕಾಂಗ್ರೆಸ್‌ಗೆ ಎಚ್ಚರಿಕೆ ನೀಡಿದ್ದಾರೆ. ಅಮರಿಂದರ್ ಅವರ ಈ ನಿಲುವು ಪಕ್ಷವನ್ನು ತೊರೆಯುವ ಸೂಚನೆಯೂ ಆಗಿರಬಹುದು ಎಂದೂ ವಿಶ್ಲೇಷಿಸಲಾಗುತ್ತಿದೆ.

ಸಂಕ್ಷಿಪ್ತ ಸುದ್ದಿ

ಅಶ್ಲೀಲ ಚಿತ್ರ: ನಟಿ ಗೆಹನಾಗೆ ನಿರೀಕ್ಷಣಾ ಜಾಮೀನು

ನವದೆಹಲಿ: ಬಾಲಿವುಡ್ ನಟಿ ಶಿಲ್ಪಾಶೆಟ್ಟಿ ಪತಿ ರಾಜ್ ಕುಂದ್ರಾ ಸೇರಿದಂತೆ ಹಲವರು ಬಂಧನಕ್ಕೊಳಗಾಗಿದ್ದ ಅಶ್ಲೀಲ ಚಿತ್ರ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ಗೆಹನಾ ವಸಿಷ್ಠ್ ಅವರಿಗೆ ಸುಪ್ರೀಂ ಕೋರ್ಟ್ ಬುಧವಾರ ನಿರೀಕ್ಷಣಾ ಜಾಮೀನು ನೀಡಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಬಿ.ಆರ್. ಗವಾಯಿ ಅವರನ್ನೊಳಗೊಂಡ ನ್ಯಾಯಪೀಠವು, ಅಶ್ಲೀಲ ಚಿತ್ರ ಪ್ರಕರಣಕ್ಕೆ ಸಂಬಂಧಿಸಿದಂತೆ ನಟಿಯ ನಿರೀಕ್ಷಣಾ ಜಾಮೀನಿನ ಅರ್ಜಿಯನ್ನು ವಜಾಗೊಳಿಸಿದ್ದ ಬಾಂಬೆ ಹೈಕೋರ್ಟ್ ತೀರ್ಪನ್ನು ವಜಾಗೊಳಿಸಿತು.

ಭಾಷೆ ಸುಧಾರಿಸಿಕೊಳ್ಳುವೆ: ಉಮಾಭಾರತಿ

ಭೋಪಾಲ್ (ಪಿಟಿಐ): ‘ಸರ್ಕಾರಿ ಅಧಿಕಾರಿಗಳು ನಮ್ಮ(ನಾಯಕರ) ಚಪ್ಪಲಿ ಎತ್ತಲಿಕಷ್ಟೇ ಇರೋದು‘ ಎಂಬ ವಿವಾದಾತ್ಮಕ ಹೇಳಿಕೆ ನೀಡಿದ್ದ ಬಿಜೆಪಿಯ ಹಿರಿಯ ನಾಯಕಿ ಉಮಾಭಾರತಿ, ‘ನನ್ನ ಮಾತುಗಳಿಂದ ನನಗೆ ನೋವಾಗಿದೆ. ನನ್ನ ಭಾಷೆಯನ್ನು ಸುಧಾರಿಸಿಕೊಳ್ಳುತ್ತೇನೆ’ ಎಂದು ಹೇಳಿದ್ದಾರೆ.

ಸರ್ಕಾರಿ ಅಧಿಕಾರಿಗಳ ವಿರುದ್ಧ ಉಮಾಭಾರತಿ ಅವರು ಈಚೆಗೆ ನೀಡಿದ್ದ ವಿವಾದಾತ್ಮಕ ಹೇಳಿಕೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಕಾಂಗ್ರೆಸ್ ನಾಯಕ ದಿಗ್ವಿಜಯ್ ಸಿಂಗ್ ಈ ವಿಷಯವಾಗಿ ಉಮಾಭಾರತಿ ವಿರುದ್ಧ ಹರಿಹಾಯ್ದಿದ್ದರು.

ಜಾವೇದ್ ಅಖ್ತರ್‌ಗೆ ನೋಟಿಸ್

ಮುಂಬೈ (ಪಿಟಿಐ): ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ವಿರುದ್ಧ ‘ಸುಳ್ಳು ಹಾಗೂ ಮಾನಹಾನಿಕರ’ ಟೀಕೆ ಮಾಡಿದ ಆರೋಪದ ಮೇಲೆ ನಗರದ ವಕೀಲರೊಬ್ಬರು ಗೀತ ರಚನೆಕಾರ ಜಾವೇದ್ ಅಖ್ತರ್ ಅವರಿಗೆ ಬುಧವಾರ ನೋಟಿಸ್‌ವೊಂದನ್ನು ಕಳುಹಿಸಿದ್ದಾರೆ.

ಇತ್ತೀಚಿನ ಸಂದರ್ಶನವೊಂದರಲ್ಲಿ ಜಾವೇದ್ ಅವರು ಆರ್‌ಎಸ್‌ಎಸ್ ಅನ್ನು ಟೀಕಿಸಿದ್ದರು. ಬಳಿಕ ಈ ಬಗ್ಗೆ ಕ್ಷಮೆಯಾಚಿಸಿದ್ದರು.

ಪಠ್ಯಕ್ರಮ ಸಮಿತಿಗೆ ಕಸ್ತೂರಿರಂಗನ್ ನೇತೃತ್ವ: ಕೇಂದ್ರ ಶಿಕ್ಷಣ ಸಚಿವಾಲಯ

ಬೆಂಗಳೂರು (ಪಿಟಿಐ): ಇಸ್ರೊ ಮಾಜಿ ಅಧ್ಯಕ್ಷ ಕೆ. ಕಸ್ತೂರಿ ರಂಗನ್ ಅವರ ನೇತೃತ್ವದಲ್ಲಿ 12 ಸದಸ್ಯರ ಪಠ್ಯಕ್ರಮ ರಚನಾ ಸಮಿತಿಯನ್ನು ರಚಿಸಿ ಕೇಂದ್ರ ಶಿಕ್ಷಣ ಸಚಿವಾಲಯ ಆದೇಶ ಹೊರಡಿಸಿದೆ. ಇವರಲ್ಲದೆ, ಸಮಿತಿಯಲ್ಲಿ ಮತ್ತಿಬ್ಬರು ಕನ್ನಡಿಗರಿಗೆ ಸ್ಥಾನ ನೀಡಲಾಗಿದೆ. ಟಿ.ವಿ. ಕಟ್ಟೀಮನಿ ಹಾಗೂ ಎಂ.ಕೆ. ಶ್ರೀಧರ್ ಅವರು ಈ ತಂಡದಲ್ಲಿದ್ದಾರೆ.

ಸಮಿತಿಯು ನಾಲ್ಕು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟುಗಳನ್ನು (ಎನ್‌ಸಿಎಫ್) ಅಭಿವೃದ್ಧಿಪಡಿಸುವ ಕೆಲಸ ನಿರ್ವಹಿಸಲಿದೆ. ಈ ಮುನ್ನ ಕಸ್ತೂರಿ ರಂಗನ್ ಅವರು ರಾಷ್ಟ್ರೀಯ ಶಿಕ್ಷಣ ನೀತಿ 2020ರ ಕರಡು ಸಮಿತಿಯ ನೇತೃತ್ವ ವಹಿಸಿದ್ದರು.

ಮಹೇಶ್ ಚಂದ್ರ ಪಂತ್, ಗೋವಿಂದ ಪ್ರಸಾದ್ ಶರ್ಮಾ, ನಜ್ಮಾ ಅಖ್ತರ್, ಮಿಲಿಂದ್ ಕಾಂಬ್ಳೆ, ಮೈಕೆಲ್ ಡಾನಿನೊ, ಜಗಬೀರ್ ಸಿಂಗ್, ಮಂಜುಳ್ ಭಾರ್ಗವ, ಧೀರ್ ಜಿಂಗ್ರಾನ್, ಶಂಕರ್ ಮರುವಾಡ ಅವರು ಸಮಿತಿಯ ಇತರ ಸದಸ್ಯರು.

ಕಸ್ತೂರಿರಂಗನ್

ಶಾಲಾ ಶಿಕ್ಷಣ, ಎಳೆ ಮಕ್ಕಳ ಆರೈಕೆ ಮತ್ತು ಶಿಕ್ಷಣ, ಶಿಕ್ಷಕರ ಶಿಕ್ಷಣ ಮತ್ತು ವಯಸ್ಕರ ಶಿಕ್ಷಣ – ಈ ನಾಲ್ಕು ವಿಭಾಗಗಳಲ್ಲಿ 2020ರ ರಾಷ್ಟ್ರೀಯ ಶಿಕ್ಷಣ ನೀತಿಯ ಶಿಫಾರಸುಗಳ ಅನ್ವಯ ಪಠ್ಯಕ್ರಮದಲ್ಲಿ ಸುಧಾರಣೆಗಳನ್ನು ಶಿಫಾರಸು ಮಾಡಲು ಸಮಿತಿಗೆ ಸೂಚಿಸಲಾಗಿದೆ.

ಆಸ್ಟ್ರಾಜೆನೆಕಾ: ಲಸಿಕೆ ನಡುವಣ ಅಂತರ ಕಡಿಮೆ?

ನವದೆಹಲಿ: ನ್ಯಾಯಾಲಯದ ಆದೇಶಕ್ಕೆ ಅನುಗುಣವಾಗಿ ಖಾಸಗಿ ಆಸ್ಪತ್ರೆಗಳಲ್ಲಿ ಹಾಕಲಾಗುತ್ತಿರುವ ಆಸ್ಟ್ರಾಜೆನೆಕಾ ಕೋವಿಡ್–19 ಲಸಿಕೆ ಡೋಸ್‌ಗಳ ನಡುವಿನ ಅಂತರವನ್ನು ಕಡಿಮೆಗೊಳಿಸಲು ಸರ್ಕಾರ ಅನುಮತಿ ನೀಡುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

‘ಖಾಸಗಿ ಆಸ್ಪತ್ರೆಗಳು ಮತ್ತು ಚಿಕಿತ್ಸಾಲಯಗಳಲ್ಲಿ ಹಣ ಪಾವತಿಸಿ ಆಸ್ಟ್ರಾಜೆನೆಕಾ ಕೋವಿಡ್ ಲಸಿಕೆ ಪಡೆಯುವ ರೋಗಿಗಳಿಗೆ ಲಸಿಕೆಯ ಎರಡನೇ ಡೋಸ್ ಅನ್ನು 4 ವಾರಗಳ ನಂತರ ಪಡೆಯುವ ಆಯ್ಕೆಯನ್ನು ನೀಡುವ ಸಾಧ್ಯತೆ ಇದೆ. ಪ್ರಸ್ತುತ ಮೊದಲ ಮತ್ತು ಎರಡನೇ ಡೋಸ್ ನಡುವೆ 12ರಿಂದ 16 ವಾರಗಳ ಕಾಲ ಅಂತರವಿದೆ’ ಎಂದೂ ಮೂಲಗಳು ಹೇಳಿವೆ.

ಡೋಸ್‌ಗಳ ನಡುವಿನ ಅಂತರ ಕಡಿಮೆಗೊಳಿಸುವ ಕುರಿತು ಸೆಪ್ಟೆಂಬರ್ ಆರಂಭದಲ್ಲಿ ಕೇರಳದ ಹೈಕೋರ್ಟ್ ಆದೇಶ ನೀಡಿತ್ತು. ವಿದೇಶಕ್ಕೆ ತೆರಳುವವರು ಆರೋಗ್ಯ ಸಚಿವಾಲಯದ ಲಸಿಕಾ ಪೋರ್ಟಲ್‌ನಲ್ಲಿ ಬುಕ್ ಮಾಡಿದಲ್ಲಿ ಈ ಆಯ್ಕೆಯನ್ನು ನೀಡಲಾಗುತ್ತಿದೆ.

‘ಹೈಕೋರ್ಟ್ ನೀಡಿರುವ ಆದೇಶವನ್ನು ಪಾಲನೆ ಮಾಡಬೇಕಾಗುತ್ತದೆ. ಆದರೆ, ಸರ್ಕಾರದ ಲಸಿಕಾ ಕಾರ್ಯಕ್ರಮಗಳಲ್ಲಿ 12 ವಾರಗಳ ಅಂತರ ಹಾಗೇ ಮುಂದುವರಿಯಲಿದೆ’ ಎಂದೂ ಮೂಲಗಳು ತಿಳಿಸಿವೆ.

ಆಸ್ಟ್ರಾಜೆನೆಕಾ ಕಂಪನಿಯು ತನ್ನ ಕೋವಿಡ್ -19 ಲಸಿಕೆಯ ಎರಡನೇ ಡೋಸ್ ಅನ್ನು 4 ವಾರಗಳ ನಂತರ ತೆಗೆದುಕೊಳ್ಳಲು ಶಿಫಾರಸು ಮಾಡುತ್ತದೆ. ಆದರೆ, ಮೊದಲ ಮತ್ತು ಎರಡನೇ ಡೋಸ್‌ನ ನಡುವೆ 12 ವಾರಗಳ ಅಂತರವಿರಬೇಕು ಎಂದು ವಿಶ್ವ ಆರೋಗ್ಯ ಸಂಸ್ಥೆಯು ಶಿಫಾರಸು ಮಾಡಿದೆ.

ಭಾರತೀಯರಿಗೆ ಮುಕ್ತ ಪ್ರವೇಶ ಇಲ್ಲ

ಒಂದನೇ ಪುಟದಿಂದ

ಇದರ ಬೆನ್ನಲ್ಲೇ ಬ್ರಿಟನ್ ತನ್ನ ಅಂತರರಾಷ್ಟ್ರೀಯ ಪ್ರಯಾಣ ಮಾರ್ಗಸೂಚಿಯನ್ನು ಬದಲಿಸಿದೆ. ‘ಆಸ್ಟ್ರಾಜೆನೆಕಾ ಕಂಪನಿಯ ಕೋವಿಶೀಲ್ಡ್, ಆಸ್ಟ್ರಾಜೆನೆಕಾದ ವ್ಯಾಕ್ಸೆವ್ರಿಯಾ ಮತ್ತು ಮೊಡೆರ್ನಾ ಕಂಪನಿಯ ಟಕೇಡಾ ಕೋವಿಡ್ ಲಸಿಕೆಯ ಪೂರ್ಣ ಡೋಸ್‌ಗಳನ್ನು ಹಾಕಿಸಿಕೊಂಡವರು ಬ್ರಿಟನ್‌ಗೆ ಮುಕ್ತವಾಗಿ ಪ್ರವೇಶಿಸಬಹುದು. ಲಸಿಕೆಯ ಕೊನೆಯ ಡೋಸ್ ಹಾಕಿಸಿಕೊಂಡು 14 ದಿನ ಕಳೆದ ನಂತರ, ಮುಕ್ತ ಪ್ರವೇಶಕ್ಕೆ ಈ ನಿಯಮ ಅವಕಾಶ ಕೊಡುತ್ತದೆ.

ಆಸ್ಟ್ರೇಲಿಯಾ, ಜಪಾನ್, ಸಿಂಗಪುರ ಮತ್ತು ಮಲೇಷ್ಯಾ ಸೇರಿ 17 ದೇಶಗಳ ಜನರಿಗೆ ಈ ನಿಯಮ ಅನ್ವಯವಾಗಲಿದೆ’ ಎಂದು ಬ್ರಿಟನ್‌ನ ಆರೋಗ್ಯ ಇಲಾಖೆ ಹೇಳಿದೆ.

ಬ್ರಿಟನ್‌ನ ಈ ಗೊಂದಲಕಾರಿ ನಿಯಮಕ್ಕೆ ಭಾರತದ ವಿದೇಶಾಂಗ ಸಚಿವಾಲಯವು ಮತ್ತು ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

‘ಬ್ರಿಟನ್‌ನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಮತ್ತು ಆಸ್ಟ್ರಾಜೆನೆಕಾ ಕಂಪನಿ ಜಂಟಿಯಾಗಿ ಅಭಿವೃದ್ಧಿಪಡಿಸಿರುವ ಕೋವಿಶೀಲ್ಡ್ ಲಸಿಕೆಯನ್ನು ಭಾರತದಲ್ಲಿ ತಯಾರಿಸಲಾಗುತ್ತದೆ. ಈ ಲಸಿಕೆಯನ್ನು ಬ್ರಿಟನ್ ಸರ್ಕಾರದ ಮನವಿಯ ಮೇರೆಗೆ, ಅಲ್ಲಿಯ ಜನರಿಗೆ ನೀಡಲಾಗಿದೆ. ಕೋವಿಶೀಲ್ಡ್ ಲಸಿಕೆ ಹಾಕಿಸಿಕೊಂಡ ಬೇರೆ ದೇಶಗಳ ಜನರು, ಬ್ರಿಟನ್‌ಗೆ ಮುಕ್ತವಾಗಿ ಪ್ರವೇಶಿಸಬಹುದು. ಆದರೆ, ಅದೇ ಲಸಿಕೆ ಹಾಕಿಸಿಕೊಂಡಿರುವ ಭಾರತೀಯರು, ಬ್ರಿಟನ್ ಅನ್ನು ಕ್ವಾರಂಟೈನ್ ಇಲ್ಲದೆ ಪ್ರವೇಶಿಸುವಂತಿಲ್ಲ. ಬ್ರಿಟನ್‌ನ ಇಂತಹ ತಾರತಮ್ಯದ ನೀತಿಯನ್ನು ಖಂಡಿಸುತ್ತೇವೆ. ಈ ನೀತಿಯನ್ನು ಸರಿಪಡಿಸದೇ ಇದ್ದರೆ, ತಕ್ಕ ಕ್ರಮವನ್ನು ನಾವೂ ತೆಗೆದುಕೊಳ್ಳಬೇಕಾಗುತ್ತದೆ’ ಎಂದು ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ ಹರ್ಷವರ್ಧನ ಶೃಂಗ್ಲಾ ಹೇಳಿದ್ದಾರೆ.

ಈಗ ಕ್ವಾರಂಟೈನ್ ಕಡ್ಡಾಯ

ಕೋವಿಶೀಲ್ಡ್‌ನ ಎರಡೂ ಡೋಸ್‌ಗಳನ್ನು ಹಾಕಿಸಿಕೊಂಡಿರುವ ಭಾರತೀಯರು, ಬ್ರಿಟನ್ ಪ್ರವೇಶದ ನಂತರ 10 ದಿನಗಳ ಸ್ವಯಂ ಕ್ವಾರಂಟೈನ್‌ಗೆ ಒಳಗಾಗಬೇಕು. ಬ್ರಿಟನ್ ಪ್ರವಾಸಕ್ಕೂ ಮೂರು ದಿನ ಮೊದಲು ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಪಟ್ಟಿರಬೇಕು.

ಬ್ರಿಟನ್ ಪ್ರವೇಶದ ನಂತರ ತಾವು ಎಲ್ಲಿ ಕ್ವಾರಂಟೈನ್‌ಗೆ ಒಳಗಾಗುತ್ತೇವೆ ಎಂಬುದರ ಮಾಹಿತಿಯನ್ನು ನೀಡಬೇಕು. ಬ್ರಿಟನ್ ಪ್ರವೇಶದ ನಂತರ ಎರಡು ಬಾರಿ ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಗಾಗಬೇಕು. ಪರೀಕ್ಷೆಯನ್ನು ಮುಂಗಡವಾಗಿಯೇ ಕಾಯ್ದಿರಿಸಬೇಕು. ಎರಡೂ ಆರ್‌ಟಿಪಿಸಿಆರ್ ಪರೀಕ್ಷೆಗಳಲ್ಲಿ ನೆಗೆಟಿವ್ ವರದಿ ಬಂದರೆ ಕ್ವಾರಂಟೈನ್ ಅನ್ನು 5 ದಿನಗಳಿಗೇ ಕೊನೆಗೊಳಿಸಬಹುದು.

ಆದರೆ ಕೋವಿಶೀಲ್ಡ್ ಲಸಿಕೆ ಹಾಕಿಸಿಕೊಂಡಿರುವ ಬೇರೆ ದೇಶಗಳ ಪ್ರಯಾಣಿಕರಿಗೆ ಈ ನಿಯಮಗಳು ಅನ್ವಯವಾಗುವುದಿಲ್ಲ. ಬ್ರಿಟನ್‌ನ ಕೋವಿಡ್ ಅಂತರರಾಷ್ಟ್ರೀಯ ಪ್ರಯಾಣ ಮಾರ್ಗಸೂಚಿಯಲ್ಲಿ ಭಾರತದ ಹೆಸರನ್ನೂ ಸೇರಿಸಿದರೆ, ಭಾರತೀಯರಿಗೂ ಈ ನಿಯಮಗಳು ಅನ್ವಯವಾಗುವುದಿಲ್ಲ.

ಪ್ರಮಾಣಪತ್ರದಲ್ಲಿ ತೊಂದರೆ: ಬ್ರಿಟನ್

‘ಕೋವಿಶೀಲ್ಡ್ ಲಸಿಕೆಯಲ್ಲಿ ಯಾವುದೇ ತೊಂದರೆಯಿಲ್ಲ. ಆದರೆ, ಭಾರತದಲ್ಲಿ ಕೋವಿಶೀಲ್ಡ್ ಲಸಿಕೆ ಹಾಕಿಸಿಕೊಂಡವರಿಗೆ ನೀಡಲಾದ ಲಸಿಕೆ ಪ್ರಮಾಣಪತ್ರವನ್ನು ಪರಿಗಣಿಸುವಲ್ಲಿ ಸಮಸ್ಯೆ ಇದೆ’ ಎಂದು ಬ್ರಿಟನ್ ಹೇಳಿದೆ.

ಬ್ರಿಟನ್ ತೆಗೆದುಕೊಂಡ ಕ್ರಮಕ್ಕೆ ಪ್ರತಿಯಾಗಿ, ತಾವೂ ತಕ್ಕುದಾದ ಕ್ರಮ ತೆಗೆದುಕೊಳ್ಳಬಹುದು ಎಂದು ಭಾರತದ ವಿದೇಶಾಂಗ ಸಚಿವಾಲಯವು ಎಚ್ಚರಿಕೆ ನೀಡಿದ ಬೆನ್ನಲ್ಲೇ ಬ್ರಿಟನ್ ಈ ಸ್ಪಷ್ಟನೆ ನೀಡಿದೆ.

ಭಾರತದಲ್ಲಿ ನೀಡಲಾಗುತ್ತಿರುವ ಕೋವಿಡ್ ಲಸಿಕೆ ಪ್ರಮಾಣಪತ್ರದಲ್ಲಿ ಯಾವ ಸಮಸ್ಯೆ ಇದೆ ಎಂಬುದನ್ನು ಬ್ರಿಟನ್ ಸ್ಪಷ್ಟಪಡಿಸಿಲ್ಲ. ಬದಲಿಗೆ, ಈ ಪ್ರಮಾಣಪತ್ರವನ್ನು ಮಾನ್ಯ ಮಾಡುವುದು ಹೇಗೆ ಎಂಬುದನ್ನು ಪರಿಶೀಲಿಸುತ್ತಿದ್ದೇವೆ. ಇದಕ್ಕಾಗಿ ಭಾರತ ಸರ್ಕಾರದ ಜತೆಗೆ ಚರ್ಚಿಸುತ್ತೇವೆ ಎಂದು ಬ್ರಿಟನ್ ಹೇಳಿದೆ.

> **ಬ್ರಿಟನ್‌ನ ಈ ಗೊಂದಲಕಾರಿ ನೀತಿಯಿಂದ ಭಾರತದ ಸಾವಿರಾರು ವಿದ್ಯಾರ್ಥಿಗಳಿಗೆ ಮತ್ತು ನಾಗರಿಕರಿಗೆ ತೊಂದರೆಯಾಗಲಿದೆ. ಇದನ್ನು ನಾವು ಖಂಡಿಸುತ್ತೇವೆ**
> **ಹರ್ಷವರ್ಧನ್ ಶೃಂಗ್ಲಾ,** ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ

ರಬಾಡ, ಶಿಖರ್ ಆಟಕ್ಕೆ ಸನ್‌ರೈಸರ್ಸ್ ಕಂಗಾಲು

ದುಬೈ (ಪಿಟಿಐ): ಮೊದಲ ಹಂತದಲ್ಲಿ ಕಳಪೆ ಪ್ರದರ್ಶನ ನೀಡಿ ಪಾಯಿಂಟ್ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿದ್ದ ಸನ್‌ರೈಸರ್ಸ್ ಹೈದರಾಬಾದ್ ಎರಡನೇ ಹಂತದಲ್ಲೂ ನಿರಾಸೆಯ ಆರಂಭ ಕಂಡಿದೆ.

ಬುಧವಾರ ನಡೆದ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಎದುರು ಕೇನ್ ವಿಲಿಯಮ್ಸನ್ ಬಳಗ ಎಂಟು ವಿಕೆಟ್‌ಗಳಿಂದ ಸೋಲೊಪ್ಪಿಕೊಂಡಿತು. ಹೀಗಾಗಿ ಪಾಯಿಂಟ್ ಪಟ್ಟಿಯಲ್ಲಿ ಮೇಲೇಳಲು ತಂಡಕ್ಕೆ ಸಾಧ್ಯವಾಗಲಿಲ್ಲ.

ಆಲ್‌ರೌಂಡ್ ಆಟ ಪ್ರದರ್ಶಿಸಿದ ಡೆಲ್ಲಿ ತಂಡ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಹಿಂದಿಕ್ಕಿ ಪಟ್ಟಿಯಲ್ಲಿ ಅಗ್ರ ಸ್ಥಾನಕ್ಕೇರಿತು.

135 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಡೆಲ್ಲಿ ಕ್ಯಾಪಿಟಲ್ಸ್ ಪೃಥ್ವಿ ಶಾ ಅವರನ್ನು ಬೇಗನೇ ಕಳೆದುಕೊಂಡಿತು. ಆದರೆ ಶಿಖರ್ ಧವನ್, ಶ್ರೇಯಸ್ ಅಯ್ಯರ್ ಮತ್ತು ನಾಯಕ ರಿಷಭ್ ಪಂತ್ ಅವರು ಮೋಹಕ ಬ್ಯಾಟಿಂಗ್ ಮೂಲಕ ತಂಡಕ್ಕೆ ಸುಲಭ ಗೆಲುವು ತಂದುಕೊಟ್ಟರು.

ಎರಡನೇ ವಿಕೆಟ್‌ಗೆ ಶಿಖರ್ ಮತ್ತು ಶ್ರೇಯಸ್ ಅಯ್ಯರ್ 52 ರನ್‌ಗಳ ಜೊತೆಯಾಟವಾಡಿದರು. ಶಿಖರ್ ಔಟಾದ ನಂತರ ಶ್ರೇಯಸ್ ಮತ್ತು ರಿಷಭ್ 67 ರನ್‌ಗಳ ಜೊತೆಯಾಟದ ಮೂಲಕ ಎದುರಾಳಿ ತಂಡದ ಬೌಲರ್‌ಗಳನ್ನು ಕಂಗೆಡಿಸಿದರು.

ರಬಾಡ, ನಾರ್ಕಿಯಾ ಮಿಂಚು: ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಸನ್‌ರೈಸರ್ಸ್ ಪರ ಕ್ರೀಸ್‌ನಲ್ಲಿ ಗಟ್ಟಿಯಾಗಿ ನೆಲೆಯೂರಲು ಯಾರಿಗೂ ಸಾಧ್ಯವಾಗಲಿಲ್ಲ.

ವೇಗದ ಬೌಲರ್‌ಗಳಾದ ಕಗಿಸೊ ರಬಾಡ (37ಕ್ಕೆ3) ದಾಳಿಯ ಮುಂದೆ ಸನ್‌ರೈಸರ್ಸ್ ಹೈದರಾಬಾದ್ ತಂಡದ ಬ್ಯಾಟಿಂಗ್ ಬಳಗ ಬಸವಳಿಯಿತು. ಹೀಗಾಗಿ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 134 ರನ್‌ಗಳ ಸಾಧಾರಣ ಮೊತ್ತ ಗಳಿಸಲಷ್ಟೇ ಆ ತಂಡಕ್ಕೆ ಸಾಧ್ಯವಾಯಿತು.

ಕಗಿಸೊ ರಬಾಡ ಅವರೊಂದಿಗೆ ಎನ್ರಿಚ್ ನಾರ್ಕಿಯಾ (12ಕ್ಕೆ2) ಮತ್ತು ಸ್ಪಿನ್ನರ್ ಅಕ್ಷರ್ ಪಟೇಲ್ (21ಕ್ಕೆ2) ಕೂಡ ಉತ್ತಮ ಬೌಲಿಂಗ್ ಮೂಲಕ ಸನ್‌ರೈಸರ್ಸ್‌ಗೆ ಪೆಟ್ಟುಕೊಟ್ಟರು.

ಈ ಪಂದ್ಯದಲ್ಲಿ ಇನಿಂಗ್ಸ್ ಆರಂಭಿಸಿದ ಡೇವಿಡ್ ವಾರ್ನರ್ ಮೊದಲ ಓವರ್‌ನಲ್ಲಿಯೇ ಸೊನ್ನೆ ಸುತ್ತಲು ಎನ್ರಿಚ್ ಕಾರಣರಾದರು.

ವೃದ್ಧಿಮಾನ್ ಸಹಾ (18), ಮನೀಷ್ ಪಾಂಡೆ (17) ಮತ್ತು ಅಬ್ದುಲ್ ಸಮದ್ (28) ಅವರ ವಿಕೆಟ್‌ಗಳನ್ನು ರಬಾಡ ತಮ್ಮ ಬುಟ್ಟಿಗೆ ಹಾಕಿಕೊಂಡರು. ಆ ಮೂಲಕ ಮಧ್ಯಮ ಕ್ರಮಾಂಕಕ್ಕೆ ಪೆಟ್ಟುಕೊಟ್ಟರು.

ಕ್ಯಾಪ್ಟನ್ ಕೂಲ್ ಕೇನ್ ವಿಲಿಯಮ್ಸನ್ (18) ಅಕ್ಷರ್ ಪಟೇಲ್ ಸ್ಪಿನ್ ಮೋಡಿಗೆ ಚಿತ್ ಆದರು. ಅನುಭವಿ ಕೇದಾರ್ ಜಾಧವ್ ಅವರಿಗೂ ಬೌಲರ್‌ಗಳಿಗೆ ಉತ್ತರ ನಿಡಲು ಆಗಲಿಲ್ಲ. ಅವರನ್ನು ಎನ್ರಿಚ್ ವಾಪಸ್ ಕಳುಹಿಸಿದರು.

ಇದ್ದುದರಲ್ಲಿ ಕಾಶ್ಮೀರಿ ಹುಡುಗ ಸಮದ್ ಮತ್ತು ಅಫ್ಗನ್ ಆಟಗಾರ ರಶೀದ್ ಖಾನ್ (22) ತಂಡಕ್ಕೆ ಬಲ ತುಂಬುವ ಪ್ರಯತ್ನ ಮಾಡಿದರು. ರಶೀದ್ 19 ಎಸೆತಗಳಲ್ಲಿ ಎರಡು ಬೌಂಡರಿ ಮತ್ತು ಒಂದು ಸಿಕ್ಸರ್ ಕೂಡ ಸಿಡಿಸಿದರು. ಬದಲೀ ಫೀಲ್ಡರ್ ಸ್ಟೀವನ್ ಸ್ಮಿತ್ ಅವರ ಚುರುಕಿನ ಫೀಲ್ಡಿಂಗ್ ಮತ್ತು ಥ್ರೋನಿಂದಾಗಿ ರಶೀದ್ ರನ್‌ಔಟ್ ಆದರು.

ಕಗಿಸೊ ರಬಾಡ ಅವರನ್ನು ಎನ್ರಿಚ್ ನಾರ್ಕಿಯಾ ಅಭಿನಂದಿಸಿದರು –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಸನ್‌ರೈಸರ್ಸ್ ಹೈದರಾಬಾದ್ 9ಕ್ಕೆ 134 (20 ಓವರ್)

ವಾರ್ನರ್ ಸಿ ಪಟೇಲ್ ಬಿ ನಾರ್ಕಿಯಾ 0 (3 ಎ), ವೃದ್ಧಿಮಾನ್ ಸಿ ಧವನ್ ಬಿ ರಬಾಡ 18 (17 ಎ, 4x2, 6x1), ವಿಲಿಯಮ್ಸನ್ ಸಿ ಹೆಟ್ಮೆಯರ್ ಬಿ ಪಟೇಲ್ 18 (26 ಎ, 4x1), ಮನೀಷ್ ಸಿ ಮತ್ತು ಬಿ ರಬಾಡ 17 (16 ಎ, 4x1), ಕೇದಾರ್ ಎಲ್‌ಬಿಡಬ್ಲ್ಯು ನಾಕಿಯ 3 (8 ಎ), ಸಮದ್ ಸಿ ಪಂತ್ ಬಿ ರಬಾಡ 28 (21 ಎ, 4x2, 6x1), ಹೋಲ್ಡರ್ ಸಿ ಶಾ ಬಿ ಪಟೇಲ್ 10 (9 ಎ, 6x1), ರಶೀದ್ ರನೌಟ್ ಸ್ಮಿತ್ (ಬದಲಿ)/ ಪಂತ್ 22 (19 ಎ, 4x2, 6x1), ಭುವನೇಶ್ವರ್ ಔಟಾಗದೆ 5 (3 ಎ, 4x1), ಸಂದೀಪ್ ರನೌಟ್ (ಪಂತ್) 0 (1 ಎ)

ಇತರೆ (ಬೈ 1, ಲೆಗ್‌ಬೈ 6, ನೋಬಾಲ್ 3, ವೈಡ್ 3) 13

ವಿಕೆಟ್ ಪತನ: 1-0 (ಡೇವಿಡ್ ವಾರ್ನರ್, 0.3), 2-29 (ವೃದ್ಧಿಮಾನ್ ಸಹಾ, 4.6), 3-60 (ಕೇನ್ ವಿಲಿಯಮ್ಸನ್, 9.5), 4-61 (ಮನೀಷ್ ಪಾಂಡೆ, 10.1), 5-74 (ಕೇದಾರ್ ಜಾಧವ್, 12.6), 6-90 (ಜೇಸನ್ ಹೋಲ್ಡರ್, 15.1), 7-115 (ಅಬ್ದುಲ್ ಸಮದ್, 18.2), 8-133 (ರಶೀದ್ ಖಾನ್, 19.4), 9-134 (ಸಂದೀಪ್ ಶರ್ಮಾ, 19.6)

ಬೌಲಿಂಗ್: ಆನ್ರಿಚ್ ನಾಕಿಯ 4–0–12–2, ಆವೇಶ್ ಖಾನ್ 4–0–27–0, ಅಕ್ಷರ್ ಪಟೇಲ್ 4–0–21–2, ಕಗಿಸೊ ರಬಾಡ 4–0–37–3, ಮಾರ್ಕಸ್ ಸ್ಟೊಯಿನಿಸ್ 1.1–0–8–0, ರವಿಚಂದ್ರನ್ ಅಶ್ವಿನ್ 2.5–0–22–0

ಡೆಲ್ಲಿ ಕ್ಯಾಪಿಟಲ್ಸ್ 2 ವಿಕೆಟ್‌ಗಳಿಗೆ 139 (17.5 ಓವರ್)

ಪೃಥ್ವಿ ಸಿ ವಿಲಿಯಮ್ಸ್ ಬಿ ಅಹಮ್ಮದ್ 11 (8 ಎ, 4x2), ಶಿಖರ್ ಸಿ ಸಮದ್ ಬಿ ರಶೀದ್ 42 (37 ಎ, 4x6, 6x1), ಶ್ರೇಯಸ್ ಔಟಾಗದೆ 47 (41 ಎ, 4x2, 6x2), ಪಂತ್ ಔಟಾಗದೆ 35 (21 ಎ, 4x3, 6x2)

ಇತರೆ (ವೈಡ್ 4) 4

ವಿಕೆಟ್ ಪತನ: 1-20 (ಪೃಥ್ವಿ ಶಾ, 2.5), 2-72 (ಶಿಖರ್ ಧವನ್, 10.5)

ಬೌಲಿಂಗ್: ಖಲೀಲ್ ಅಹಮ್ಮದ್ 4–0–33–1, ಭುವನೇಶ್ವರ್ ಕುಮಾರ್ 3–0–21–0, ಜೇಸನ್ ಹೋಲ್ಡರ್ 3.5–0–33–0, ರಶೀದ್ ಖಾನ್ 4–0–26–1, ಸಂದೀಪ್ ಶರ್ಮಾ 3–0–26–0

ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್‌ಗೆ 8 ವಿಕೆಟ್‌ಗಳ ಜಯ

ನಟರಾಜನ್‌ಗೆ ಕೋವಿಡ್: ಐಸೊಲೇಷನ್‌ನಲ್ಲಿ ಆರು ಆಟಗಾರರು

ದುಬೈ (ಪಿಟಿಐ): ಸನ್‌ರೈಸರ್ಸ್ ಹೈದರಾಬಾದ್ ತಂಡದ ಮಧ್ಯಮವೇಗಿ ಟಿ. ನಟರಾಜನ್ ಅವರಿಗೆ ಕೋವಿಡ್ ಇರುವುದು ಬುಧವಾರ ಖಚಿತವಾಗಿದೆ.

ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಪಂದ್ಯದ ದಿನವೇ ಅವರಲ್ಲಿ ಸೋಂಕು ಪತ್ತೆಯಾಗಿದ್ದು ಅತಂಕಕ್ಕೆ ಕಾರಣವಾಯಿತು. ಪಂದ್ಯವನ್ನು ಮುಂದೂಡುವ ಅಥವಾ ರದ್ದು ಮಾಡುವ ಕುರಿತ ಸಂದೇಶಗಳು ಹರಿದಾಡಿದವು. ಇದರಿಂದಾಗಿ ತಂಡದ ಆಟಗಾರರನ್ನು ಆರ್‌ಟಿ–ಪಿಸಿಆರ್ ಟೆಸ್ಟ್‌ಗೆ ಒಳಪಡಿಸಲಾಯಿತು. ವರದಿ ನೆಗೆಟಿವ್ ಬಂದ ಕಾರಣ ಪಂದ್ಯ ನಡೆಸುವುದು ಖಚಿತವಾಯಿತು. ನಟರಾಜನ್ ಮತ್ತು ಅವರೊಂದಿಗೆ ನಿಕಟ ಸಂಪರ್ಕದಲ್ಲಿದ್ದ ಆಲ್‌ರೌಂಡರ್ ವಿಜಯಶಂಕರ್ ಅವರನ್ನು ಪ್ರತ್ಯೇಕವಾಸಕ್ಕೆ ಕಳಿಸಲಾಗಿದೆ. ಅವರಲ್ಲದೇ ಇನ್ನೂ ಆರು ಆಟಗಾರರನ್ನು ಪ್ರತ್ಯೇಕವಾಸಕ್ಕೆ ಕಳಿಸಲಾಗಿದೆ ಎಂದು ತಂಡದ ಮೂಲಗಳು ತಿಳಿಸಿವೆ. ‘11 ದಿನಗಳ ಹಿಂದೆ ನಟರಾಜನ್ ಇಲ್ಲಿಗೆ ಬಂದಿದ್ದಾರೆ. ಅವರಲ್ಲಿ ಲಕ್ಷಣರಹಿತ ಸೋಂಕು ಪತ್ತೆಯಾಗಿದೆ’ ಎಂದು ತಂಡದ ಮೂಲಗಳು ತಿಳಿಸಿವೆ.

ಬ್ಯಾಟ್ಸ್‌ಮನ್ ಅಲ್ಲ; ಬ್ಯಾಟರ್

ಮುಂಬೈ (ರಾಯಿಟರ್ಸ್): ಕ್ರಿಕೆಟ್‌ನಲ್ಲಿ ಬ್ಯಾಟ್ಸ್‌ಮನ್ ಪದದ ಬದಲಿಗೆ ಲಿಂಗ ಸಮಾನತೆ ಸೂಚಿಸುವ ‘ಬ್ಯಾಟರ್’ ಪದ ಇನ್ನು ಮುಂದೆ ಬಳಕೆಗೆ ಬರಲಿದೆ. ಇದಕ್ಕೆ ಸಂಬಂಧಿಸಿ ನಿಯಮ ರೂಪಿಸಲಾಗಿದ್ದು ಬದಲಾವಣೆ ತಕ್ಷಣದಿಂದ ಜಾರಿಯಾಗಿದೆ ಎಂದು ಮೆರಿಲ್‌ಬಾರ್ನ್ ಕ್ರಿಕೆಟ್ ಕ್ಲಬ್ (ಎಂಸಿಸಿ) ಬುಧವಾರ ತಿಳಿಸಿದೆ.

2017ರಲ್ಲಿ ನಡೆದ ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಭಾರತ ಮತ್ತು ಇಂಗ್ಲೆಂಡ್ ನಡುವಿನ ಪಂದ್ಯ ವೀಕ್ಷಿಸಲು ಲಾರ್ಡ್ಸ್ ಅಂಗಣದಲ್ಲಿ ಪ್ರೇಕ್ಷಕರು ಕಿಕ್ಕಿರಿದು ತುಂಬಿದ್ದರು. ಮೆಲ್ಬರ್ನ್‌ನಲ್ಲಿ ಕಳೆದ ವರ್ಷದ ನಡೆದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ಫೈನಲ್ ಪಂದ್ಯವನ್ನು 80 ಸಾವಿರ ಮಂದಿ ವೀಕ್ಷಿಸಿದ್ದರು. ಇದು, ಮಹಿಳಾ ಕ್ರಿಕೆಟ್ ಹೆಸರು ಗಳಿಸಿರುವುದಕ್ಕೆ ಸಾಕ್ಷಿಯಾಗಿತ್ತು.

1787ರಲ್ಲಿ ಸ್ಥಾಪನೆಯಾದ ಎಂಸಿಸಿ ಕ್ರಿಕೆಟ್‌ಗೆ ಸಂಬಂಧಿಸಿದ ನಿಯಮ ರೂಪಿಸುವ ಏಕೈಕ ಸಂಸ್ಥೆಯಾಗಿದೆ.

‘ಕ್ರಿಕೆಟ್ ಸಂಬಂಧಿಸಿದ ಅನೇಕ ಸಂಸ್ಥೆಗಳು ಆಟದ ಸಂದರ್ಭದಲ್ಲಿ ಮತ್ತು ಮಾಧ್ಯಮಗಳು ವರದಿ ಮಾಡುವ ಸಂದರ್ಭದಲ್ಲಿ ಈಗಾಗಲೇ ‘ಬ್ಯಾಟರ್’ ಪದ ಬಳಸುತ್ತಿವೆ. ಇದನ್ನು ಎಲ್ಲರೂ ಬಳಸುವಂತಾಗಬೇಕು ಎಂಬುದು ನಮ್ಮ ಆಶಯ ಎಂದು ಎಂಸಿಸಿ ಅಭಿಪ್ರಾಯಪಟ್ಟಿದೆ.

ಚಾಂಪಿಯನ್ನರಿಗೆ ಕೋಲ್ಕತ್ತ ಸವಾಲು

ಅಬುಧಾಬಿ (ಪಿಟಿಐ): ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ಮತ್ತು ಏಯಾನ್ ಮಾರ್ಗನ್ ನಾಯಕತ್ವದ ಕೋಲ್ಕತ್ತ ನೈಟ್ ರೈಡರ್ಸ್ ತಂಡಗಳು ಗುರುವಾರ ಮುಖಾಮುಖಿಯಾಗಲಿವೆ.

ಐಪಿಎಲ್ ಟೂರ್ನಿಯ ಈ ಆವೃತ್ತಿಯ ಮೊದಲ ಹಂತದಲ್ಲಿ ಕೋಲ್ಕತ್ತ ಎದುರು ಮುಂಬೈ ಜಯಿಸಿತ್ತು. ಆದರೆ ಎರಡನೇ ಹಂತದ ಮೊದಲ ಪಂದ್ಯದಲ್ಲಿ ಮುಂಬೈ ಚೆನ್ನೈ ಸೂಪರ್ ಕಿಂಗ್ಸ್ ಎದುರು ಮುಗ್ಗರಿಸಿತ್ತು. ಆದರೆ ಕೋಲ್ಕತ್ತ ತಂಡವು ರಾಯಲ್ ಚಾಲೆಂಜರ್ಸ್ ತಂಡವನ್ನು ಹಣಿದ ಸಂತಸದಲ್ಲಿದೆ.

ಇದರಿಂದಾಗಿ ಭರ್ತಿ ಆತ್ಮವಿಶ್ವಾಸದಲ್ಲಿರುವ ಕೋಲ್ಕತ್ತ ತಂಡವು ಮುಂಬೈಗೆ ತೀವ್ರ ಪೈಪೋಟಿಯೊಡ್ಡುವ ನಿರೀಕ್ಷೆ ಇದೆ. ಆದರೆ ಚೆನ್ನೈ ಎದುರಿನ ಪಂದ್ಯದಲ್ಲಿ ರೋಹಿತ್ ಶರ್ಮಾ ಮತ್ತು ಹಾರ್ದಿಕ್ ಪಾಂಡ್ಯ ಕಣಕ್ಕಿಳಿದಿರಲಿಲ್ಲ. ಅದರಿಂದಾಗಿ ಮುಂಬೈ ತಂಡದ ಬ್ಯಾಟಿಂಗ್ ವಿಭಾಗ ತುಸು ಮಂಕಾಗಿತ್ತು. ಆದರೆ ಇವರಿಬ್ಬರೂ ಈಗ ಫಿಟ್ ಆಗಿದ್ದು ಕೆಕೆಆರ್ ಎದುರು ಆಡಲು ಸಿದ್ಧರಾಗಿದ್ದಾರೆ.

ಮುಂಬೈ ತಂಡದ ಆ್ಯಡಂ ಮಿಲ್ನೆ ಮತ್ತು ಸಹ ಆಟಗಾರರು

‘ಕೆಕೆಆರ್ ಎದುರಿನ ಪಂದ್ಯಕ್ಕೆ ರೋಹಿತ್ ಲಭ್ಯರಾಗುವುದು ಬಹುತೇಕ ಖಚಿತ’ ಎಂದು ತಂಡದ ಕೋಚ್ ಮಹೇಲಾ ಜಯವರ್ಧನೆ ಹೇಳಿದ್ದಾರೆ.

ಮೊದಲ ಪಂದ್ಯದಲ್ಲಿ ಸೌರಭ್ ತಿವಾರಿ ಉತ್ತಮವಾಗಿ ಆಡಿದ್ದರು. ಆದರೂ ಸಾಧಾರಣ ಗುರಿಯನ್ನು ಸಾಧಿಸುವಲ್ಲಿ ಮುಂಬೈ ಎಡವಿತ್ತು. ಆದರೆ ಕೆಕೆಆರ್ ತನಗೆ ಸಿಕ್ಕ ಅವಕಾಶವನ್ನು ಬಿಡಲಿಲ್ಲ.

ವರುಣ್ ಚಕ್ರವರ್ತಿಯ ‘ನಿಗೂಢ ಸ್ಪಿನ್’ ತಂತ್ರಗಾರಿಕೆಯನ್ನು ಸಮರ್ಥವಾಗಿ ಬಳಸಿಕೊಂಡು ವಿರಾಟ್ ಕೊಹ್ಲಿ ಬಳಗಕ್ಕೆ ಹೀನಾಯ ಸೋಲಿನ ಕಹಿ ಉಣಿಸಿತು.

ಪಾಯಿಂಟ್ ಪಟ್ಟಿಯಲ್ಲಿ ಆರನೇ ಸ್ಥಾನದಲ್ಲಿರುವ ಕೆಕೆಆರ್‌ಗೆ ಗೆಲುವು ಈಗ ಅತ್ಯಗತ್ಯ. ಆದ್ದರಿಂದ ತನ್ನೆಲ್ಲ ಸಾಮರ್ಥ್ಯವನ್ನು ಪಣಕ್ಕೊಡ್ಡಲು ಸಿದ್ಧವಾಗಿದೆ. ತಂಡದ ನೂತನ ಓಪನಿಂಗ್ ಬ್ಯಾಟರ್ ವೆಂಕಟೇಶ್ ಅಯ್ಯರ್ ಮೊದಲ ಪಂದ್ಯದಲ್ಲಿಯೇ ಗಮನ ಸೆಳೆದಿದ್ದಾರೆ. ಯುವ ಬ್ಯಾಟ್ಸ್‌ಮನ್ ಶುಭಮನ್ ಗಿಲ್ ಕೂಡ ಉತ್ತಮ ಲಯದಲ್ಲಿದ್ದಾರೆ. ಆದ್ದರಿಂದ ರೋಚಕ ಹಣಾಹಣಿಯ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ.

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಶಿಖರ್ ಧವನ್	ಡೆಲ್ಲಿ	422
ಕೆ.ಎಲ್.ರಾಹುಲ್	ಪಂಜಾಬ್	380
ಮಯಂಕ್	ಪಂಜಾಬ್	327

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಆರ್‌ಸಿಬಿ	17
ಆವೇಶ್ ಖಾನ್	ಡೆಲ್ಲಿ	14
ಕ್ರಿಸ್ ಮೊರಿಸ್	ರಾಜಸ್ತಾನ್	14

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಡೆಲ್ಲಿ ಕ್ಯಾಪಿಟಲ್ಸ್	9	7	2	00	00	14
ಚೆನ್ನೈ ಸೂಪರ್ ಕಿಂಗ್ಸ್	8	6	2	00	00	12
ಬೆಂಗಳೂರು	8	5	3	00	00	10
ಮುಂಬೈ ಇಂಡಿಯನ್ಸ್	8	4	4	00	00	8
ರಾಜಸ್ಥಾನ್ ರಾಯಲ್ಸ್	8	4	4	00	00	8
ಕೋಲ್ಕತ್ತ ನೈಟ್ ರೈಡರ್ಸ್	8	3	5	00	00	6
ಪಂಜಾಬ್	9	3	6	00	00	6
ಹೈದರಾಬಾದ್	8	1	7	00	00	2

* ಬುಧವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಮುಖಾಮುಖಿ

ಪಂದ್ಯ	28
ಮುಂಬೈ ಜಯ	22
ಕೋಲ್ಕತ್ತ ಜಯ	6

ALVA'S EDUCATION FOUNDATION (R.)
Vidyagiri-Moodubidire - 574 227
ADMISSIONS OPEN
LONG TERM NEET 2022
REPEATERS' BATCH
NEET RANK ENHANCEMENT PROGRAM
Special concession will be based on SSLC and NEET marks
• Experienced Faculty • Weekly NEET mock tests.
• Cumulative testing • Affordable fees
• Individual attention • Everyday Doubt solving Sessions
• Daily guided study hours • Extensive chapterwise study material • Separate Hostel for Boys & Girls within Campus
• More than 200 NTA-NEET model papers with solution.
6366377827, 6366933727
6366377824, 6366377823
We have no other Branches except Moodubidire www.alvaspucollege.org

ಬೆದರಿಕೆ ಇಮೇಲ್ ಬಂದದ್ದು ಭಾರತದಿಂದ: ಪಾಕಿಸ್ತಾನ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದಲ್ಲಿದ್ದ ನ್ಯೂಜಿಲೆಂಡ್ ತಂಡಕ್ಕೆ ಬೆದರಿಕೆಯ ಇಮೇಲ್ ಭಾರತದಿಂದ ಬಂದಿತ್ತು. ಅದರಿಂದಾಗಿಯೇ ನ್ಯೂಜಿಲೆಂಡ್ ತಂಡವು ಸರಣಿ ಮೊಟಕುಗೊಳಿಸಿ ಮರಳಿತ್ತು ಎಂದು ಪಾಕಿಸ್ತಾನದ ವಾರ್ತಾ ಸಚಿವ ಫವಾದ್ ಚೌಧರಿ ಆರೋಪಿಸಿದ್ದಾರೆ.

ಹೋದ ಶುಕ್ರವಾರ ನ್ಯೂಜಿಲೆಂಡ್ ತಂಡವು ತನ್ನ ಸರಣಿಯನ್ನು ರದ್ದುಗೊಳಿಸಿ ಸ್ವದೇಶಕ್ಕೆ ಮರಳಿತ್ತು. ಸೋಮವಾರ ಇಂಗ್ಲೆಂಡ್ ಕೂಡ ಮುಂದಿನ ತಿಂಗಳು ಪಾಕ್‌ನಲ್ಲಿ ಆಡಬೇಕಿದ್ದ ಸರಣಿಯನ್ನು ರದ್ದುಗೊಳಿಸಿತ್ತು.

ಅಭ್ಯಾಸ ಪಂದ್ಯಗಳು ಹೆಚ್ಚಾಗಲಿ: ನೂಶಿನ್ ಅಭಿಪ್ರಾಯ

ಬೆಂಗಳೂರು: ವಿದೇಶದಲ್ಲಿ ಸರಣಿಗಳನ್ನು ಆಡಲು ಹೋಗುವ ಭಾರತ ತಂಡಕ್ಕೆ ಹೆಚ್ಚು ಅಭ್ಯಾಸ ಪಂದ್ಯಗಳಲ್ಲಿ ಆಡುವ ಅವಕಾಶ ಸಿಗಬೇಕು. ಆದರೆ, ಕೊರೊನಾ ಕಾಲಘಟ್ಟದಲ್ಲಿ ಇದು ಸವಾಲಿನ ಕೆಲಸ. ಆದ್ದರಿಂದ ಆಟಗಾರ್ತಿಯರು ವಿದೇಶದ ವಾತಾವರಣದಲ್ಲಿ ಹೊಂದಿಕೊಳ್ಳಲು ಕಷ್ಟವಾಗುತ್ತಿದೆ ಎಂದು ಭಾರತ ಮಹಿಳಾ ಕ್ರಿಕೆಟ್ ತಂಡದ ಮಾಜಿ ಆಟಗಾರ್ತಿ ನೂಶಿನ್ ಅಲ್ ಖಾದೀರ್ ಹೇಳಿದರು.

ನೂಶಿನ್ ಅಲ್ ಖಾದೀರ್

ಬುಧವಾರ ಸೋನಿ ಸಿಕ್ಸ್ ವಾಹಿನಿ ಏರ್ಪಡಿಸಿದ್ದ ವರ್ಚುವಲ್ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, ‘ಬೇರೆ ದೇಶಗಳಲ್ಲಿ ಆಡಲು ತೆರಳಿದಾಗ ಅಭ್ಯಾಸ ಪಂದ್ಯಗಳಲ್ಲಿ ಆಡಿದಾಗ ಅಲ್ಲಿಯ ವಾತಾವರಣ, ಪಿಚ್‌ಗಳು ಮತ್ತು ಅಲ್ಲಿಯ ಆಟಗಾರ್ತಿಯರ ಕೌಶಲಗಳನ್ನು ಅರಿಯಲು ಅನುಕೂಲವಾಗುತ್ತದೆ’ ಎಂದರು.

‘ಭಾರತ–ಆಸ್ಟ್ರೇಲಿಯಾ ನಡುವಣ ಸರಣಿಯ ಮೊದಲ ಪಂದ್ಯದಲ್ಲಿ ಶಫಾಲಿ ವರ್ಮಾ ಅವರಿಗೆ ಬೌಲರ್‌ಗಳು ಶಾರ್ಟ್ ಪಿಚ್ ಎಸೆತಗಳನ್ನು ಹೆಚ್ಚು ಪ್ರಯೋಗಿಸಿದರು. ಅವುಗಳನ್ನು ಎದುರಿಸಲು ಅವರಿಗೆ ಸ್ವಲ್ಪ ಪ್ರಯಾಸವಾಯಿತು. ಶಫಾಲಿ ಅವರು ತಮ್ಮ ಬ್ಯಾಕ್‌ಫುಟ್ ಕೌಶಲವನ್ನು ವೃದ್ಧಿಸಿಕೊಂಡರೆ ಮುಂದಿನ ಪಂದ್ಯಗಳಲ್ಲಿ ಈ ಸವಾಲನ್ನು ಮೆಟ್ಟಿ ನಿಲ್ಲಬಲ್ಲರು. ಅವರಿಗೆ ಆ ಸಾಮರ್ಥ್ಯ ಮತ್ತು ಪ್ರತಿಭೆಗಳಿವೆ’ ಎಂದು ಮಾಜಿ ಆಫ್‌ಸ್ಪಿನ್ನರ್ ಮತ್ತು ಬ್ಯಾಟರ್ ನೂಶಿನ್ ಹೇಳಿದರು.

‘ಮಿಥಾಲಿ ರಾಜ್ ಅವರ ಸ್ಟ್ರೈಕ್ ರೇಟ್ ಕಡಿಮೆ ಇದೆ ಎಂದು ಟೀಕಿಸುವುದು ಬಹಳ ಸುಲಭ. ಅದರೆ, ಪಂದ್ಯದ ಅಗತ್ಯಕ್ಕೆ ತಕ್ಕಂತೆ ಆಡುವುದು ಮುಖ್ಯ. ಅವರು ಬ್ಯಾಟಿಂಗ್ ಮಾಡಲು ಹೋದ ಸಂದರ್ಭದಲ್ಲಿ ವಿಕೆಟ್ ಪತನ ತಡೆದು ತಂಡದ ರನ್ ಗಳಿಕೆಯು ನಿರಂತರವಾಗಿರುವಂತೆ ನೋಡಿಕೊಳ್ಳುವ ಅಗತ್ಯವೂ ಇತ್ತು. ಅದನ್ನು ಗಮನಿಸಬೇಕು. ಮಿಥಾಲಿ ವಿಶ್ವದ ಅಗ್ರಮಾನ್ಯ ಬ್ಯಾಟರ್’ ಎಂದು 40 ವರ್ಷದ ನೂಶಿನ್ ಹೇಳಿದರು.

ಕ್ರೀಡಾಂಗಣ ಆಧುನೀಕರಣಕ್ಕೆ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕ್ರೀಡಾ ವಸತಿ ನಿಲಯಗಳು ಮತ್ತು ಜಿಲ್ಲಾ ಕ್ರೀಡಾಂಗಣಗಳನ್ನು ಅಂತರರಾಷ್ಟ್ರೀಯ ದರ್ಜೆಗೆ ಆಧುನೀಕರಣಗೊಳಿಸುವ ಸಂಬಂಧ ವರದಿ ಪಡೆಯಲು ಕ್ರೀಡಾ ತಜ್ಞರ ಸಮಿತಿ ರಚಿಸಿ ಆದೇಶ ಹೊರಡಿಸಲಾಗಿದೆ.

ಈ ಸಮಿತಿಯಲ್ಲಿ ಭಾರತ ಹಾಕಿ ತಂಡದ ಮಾಜಿ ನಾಯಕ ವಿ.ಆರ್. ರಘುನಾಥ್, ಕಬ್ಬಡ್ಡಿ ಆಟಗಾರ ಹೊನ್ನಪ್ಪ ಗೌಡ, ಕರ್ನಾಟಕ ರಣಜಿ ತಂಡದ ಬೌಲಿಂಗ್ ಕೋಚ್ ಎಸ್.ಅರವಿಂದ್, ಮಾಜಿ ಅಥ್ಲೀಟ್ ಬಿ.ಜಿ.ನಾಗರಾಜು ಮತ್ತು ಕ್ರೀಡಾ ಇಲಾಖೆ ಉಪನಿರ್ದೇಶಕ ಡಾ.ಜಿತೇಂದ್ರ ಶೆಟ್ಟಿ ಇದ್ದಾರೆ.